ESTD : 1971

# ಶ್ರೀ ಸುಬ್ರಮಣ್ಯೇಶ್ವರ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

# SREE SUBRAMANYESWARA CO-OPERATIVE BANK LIMITED

**SUBCO BANK - EVERYONE'S BANK**


ಆಡಳಿತ ಕಛೇರಿ : 'ರಜತ ಭವನ', ನಂ. 106, ಆರ್.ವಿ. ರಸ್ತೆ
ವಿಶ್ವೇಶ್ವರಪುರಂ, ಬೆಂಗಳೂರು-560 004


## 2021-2022ನೇ ಸಾಲಿಗೆ ನಡೆದ
## 52ನೇ ವಾರ್ಷಿಕ ಮಹಾಸಭೆಯ ನಡವಳಿಕೆಗಳು
## ಮತ್ತು
## 2022-2023ನೇ ಸಾಲಿನ
## ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳ
## ಲೆಕ್ಕ ಪರಿಶೋಧನಾ ವರದಿ


"Rajatha Bhavana", No. 106, R.V. Road, Visveswarapuram
BENGALURU - 560 004

# ಶ್ರೀ ಸುಬ್ರಮಣ್ಯೇಶ್ವರ ಕೋ ಆಪರೇಟಿವ್ ಬ್ಯಾಂಕ್ ಲಿ.,

ನಂ.106, ರಜತ ಭವನ, ಆರ್.ವಿ.ರಸ್ತೆ, ವಿ.ವಿ.ಪುರಂ. ಬೆಂಗಳೂರು-560 004.


ESTD : 1971

## ದಿನಾಂಕ 23.09.2022 ನೇ ಶುಕ್ರವಾರದಂದು ಬೆಳಿಗ್ಗೆ 10.00 ಗಂಟೆಗೆ ಬ್ಯಾಂಕಿನ ಆಡಳಿತ ಕಛೇರಿಯಿಂದ ವಿಡಿಯೋ ಕಾನ್ಫರೆನ್ಸ್ / ವರ್ಚುಯೆಲ್ ಮೀಟಿಂಗ್ ಮೂಲಕ ನಡೆದ ಬ್ಯಾಂಕಿನ 2021-2022ನೇ ಸಾಲಿನ 52ನೇ ವಾರ್ಷಿಕ (ವರ್ಚುಯೆಲ್) ಮಹಾಸಭೆಯ ನಡವಳಿಕೆಗಳು

ಲಾಗಿನ್ ಮೂಲಕ ಹಾಜರಾದ ಸದಸ್ಯರ ಸಂಖ್ಯೆ : 2922

ಪ್ರಭಾರ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಕೆ.ಎನ್. ಕೃಷ್ಣಯ್ಯ ಶೆಟ್ಟಿ ಯವರು ಮಾತನಾಡಿ, ಬ್ಯಾಂಕಿನ 52ನೇ ವಾರ್ಷಿಕ ಮಹಾಸಭೆಯನ್ನು ಕಳೆದೆರಡು ಸಾಲಿನಂತೆ ಈ ವರ್ಷವೂ ಸಹ ವಿಡಿಯೋ ಕಾನ್ಫರೆನ್ಸ್ / ವರ್ಚುಯೆಲ್ ಮೀಟಿಂಗ್ ಮೂಲಕ 10-00 ಗಂಟೆಗೆ ಸರಿಯಾಗಿ ಪ್ರಾರಂಭ ಮಾಡಬೇಕಾಗಿರುವುದರಿಂದ ಎಲ್ಲಾ ಸದಸ್ಯರು ಲಾಗಿನ್ ಆಗಬೇಕೆಂದು ವಿನಂತಿಸಿ, ಲಾಗಿನ್ ಆಗಿರುವ ಸನ್ಮಾನ್ಯ ಸದಸ್ಯರುಗಳಿಗೆ ಮತ್ತು ಸಭೆಯಲ್ಲಿ ಆನ್‌ಲೈನ್ ಮೂಲಕ ಮುಖಾಮುಖಿ ಚರ್ಚಿಸಿ ಮಾತನಾಡಲು ಅವಕಾಶದ ಲಿಂಕ್ ಪಡೆದು, ವಿಶೇಷ ಲಾಗಿನ್ ಆಗಿರುವ ಮಾನ್ಯ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿ, 52ನೇ ವಾರ್ಷಿಕ ವರ್ಚುಯೆಲ್ ಮಹಾಸಭೆಗೆ ಅಗತ್ಯವಿರುವಷ್ಟು ಕೋರಂ ಸಂಖ್ಯೆಯಲ್ಲಿ ಸದಸ್ಯರು ಲಾಗಿನ್ ಆಗಿರುವುದರಿಂದ ವರ್ಚುಯೆಲ್ ಮಹಾಸಭೆಯನ್ನು ಪ್ರಾರಂಭಿಸುತ್ತಿರುವುದಾಗಿ ತಿಳಿಸಿ, ಎಲ್ಲರನ್ನೂ ಸಭೆಗೆ ಸ್ವಾಗತಿಸಿ, ಬ್ಯಾಂಕಿನ ಸಂಸ್ಥಾಪಕರು ಹಾಗೂ ಅಧ್ಯಕ್ಷರಾದ ಡಾ॥ ಕೆ.ಎಂ. ರಂಗಧಾಮ ಶೆಟ್ಟಿ ಯವರು ಇಂದಿನ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡುವಂತೆ ಕೋರಿದ ಮೇರೆಗೆ ಅವರ ಅಧ್ಯಕ್ಷತೆಯಲ್ಲಿ ಸಭೆಯು ಪ್ರಾರಂಭವಾಯಿತು.

**1. ಪ್ರಾರ್ಥನೆ:**

ಮೊದಲಿಗೆ ಆಡಳಿತ ಮಂಡಲಿಯವರಿಂದ ಬ್ಯಾಂಕಿನ ಆರಾಧ್ಯ ದೈವ ಶ್ರೀ ಸುಬ್ರಮಣ್ಯೇಶ್ವರ ಸ್ವಾಮಿಗೆ ಜ್ಯೋತಿ ಬೆಳಗಿಸಲಾಯಿತು. ಸಿಬ್ಬಂದಿಯವರು ಶ್ರೀ ಗಣೇಶ ಪಂಚರತ್ನ ಸ್ತೋತ್ರವನ್ನು ಸುಶ್ರಾವ್ಯವಾಗಿ ಪಠಿಸಿದ ನಂತರ ಬ್ಯಾಂಕಿನ ಸ್ಥಾಪನೆ, ಹಿನ್ನಲೆ, ಧ್ಯೇಯ ಹಾಗೂ ಸಾಧನೆಗಳನ್ನೊಳಗೊಂಡ ಸಮೂಹ ಗಾನವನ್ನು ಹಾಡಿದ ನಂತರ, ಮಹಾಸಭೆಯ ಕಾರ್ಯಕಲಾಪಗಳನ್ನು ಆರಂಭಿಸಲಾಯಿತು.

**2. ಸ್ವಾಗತ ಭಾಷಣ:**

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಡಾ॥ ಕೆ.ಎಂ. ರಂಗಧಾಮ ಶೆಟ್ಟಿಯವರು ಗೌರವಾನ್ವಿತ ಸದಸ್ಯ ಬಂಧುಗಳನ್ನು, ಉಪಾಧ್ಯಕ್ಷರಾದ ಶ್ರೀ ಡಿ.ಆರ್. ವಿಜಯಸಾರಥಿಯವರನ್ನು, ಆಡಳಿತ ಮಂಡಲಿಯ ಸಹ ನಿರ್ದೇಶಕರುಗಳನ್ನು, ಪ್ರಭಾರ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಕೆ.ಎನ್. ಕೃಷ್ಣಯ್ಯ ಶೆಟ್ಟಿ ಯವರನ್ನು, ನಿವೃತ್ತ ಪ್ರಭಾರ ಪ್ರಧಾನ ವ್ಯವಸ್ಥಾಪಕರು ಹಾಗೂ ಹಾಲಿ ಬ್ಯಾಂಕಿನಲ್ಲಿ ಪೂರ್ಣ ಸಮಯದ ಸಲಹೆಗಾರರಾಗಿರುವ ಶ್ರೀ ಬಿ.ಆರ್. ನಾಗರಾಜ ರವರನ್ನು ಇಂದಿನ ಬ್ಯಾಂಕಿನ 2021-2022ನೇ ಸಾಲಿನ 52ನೇ ವರ್ಷದ ವಾರ್ಷಿಕ ಮಹಾಸಭೆಗೆ ಆಡಳಿತ ಮಂಡಲಿಯ ಪರವಾಗಿ ಮತ್ತು ವೈಯಕ್ತಿಕವಾಗಿ ಎಲ್ಲರಿಗೂ ಹೃತ್ಪೂರ್ವಕವಾದ ಸ್ವಾಗತವನ್ನು ಕೋರಿದರು.

ಬ್ಯಾಂಕು ತಮ್ಮೆಲ್ಲರ ಸಹಾಯ, ಸಹಕಾರ, ಉತ್ತೇಜನ ಹಾಗೂ ಪ್ರೋತ್ಸಾಹದಿಂದ 2021-2022ನೇ ಸಾಲಿನಲ್ಲಿ ಸಹ ವ್ಯವಹಾರಗಳನ್ನು ಪೂರ್ಣಗೊಳಿಸಿದ್ದು, ಇಂದು ಸದರಿ ಸಾಲಿನ ವಾರ್ಷಿಕ ಮಹಾಸಭೆಯನ್ನು

ನಡೆಸುತ್ತಿದ್ದೇವೆ. ಇದುವರೆಗೆ ಬ್ಯಾಂಕಿನ ವಾರ್ಷಿಕ ಮಹಾಸಭೆಯನ್ನು ಸುಮಾರು 49 ವರ್ಷಗಳ ಕಾಲ ಪ್ರತಿಷ್ಠಿತ ಕಲ್ಯಾಣ ಮಂಟಪದಲ್ಲಿ ಬಹಳ ಅದ್ದೂರಿಯಾಗಿ ನಡೆಸಿಕೊಂಡು ಬಂದಿರುವುದು ತಮಗೆಲ್ಲಾ ತಿಳಿದಿರುವ ವಿಷಯವಾಗಿದೆ. ಆದರೆ ಕೋವಿಡ್–19 ರಿಂದಾಗಿ ಕಳೆದೆರಡು ವರ್ಷಗಳಿಂದ ವಾರ್ಷಿಕ ಮಹಾಸಭೆಯನ್ನು ಸರ್ಕಾರವು ಅನುಮತಿಸಿರುವಂತೆ ವಿಡಿಯೋ ಕಾನ್ಫರೆನ್ಸ್ / ವರ್ಚುಯೆಲ್ ಮೀಟಿಂಗ್ ಮೂಲಕ ನಡೆಸಲಾಗಿದೆ. ಇಂದಿನ ವಾರ್ಷಿಕ ಮಹಾಸಭೆಯನ್ನು ಭೌತಿಕವಾಗಿ ನಡೆಸುವ ಉದ್ದೇಶದಿಂದ ಚಾಮರಾಜು ಕಲ್ಯಾಣ ಮಂಟಪದಲ್ಲಿ ನಡೆಸಲು ಆಡಳಿತ ಮಂಡಲಿಯು ತೀರ್ಮಾನಿಸಿ, ಬಾಡಿಗೆಯ ಮುಂಗಡವಾಗಿ ಸುಮಾರು ರೂ.1.00 ಲಕ್ಷ ಹಣವನ್ನು ಸಹ ಪಾವತಿ ಮಾಡಲಾಗಿದ್ದು ಆದರೆ ದಿನಾಂಕ 25.08.2022ರ ಸರ್ಕಾರಿ ಆದೇಶ ಸಂಖ್ಯೆ ಸಇ 69 ಸಿಎಲ್ಎಮ್ 2022 (ಇ) ರಲ್ಲಿ ಒಂದು ಸಾವಿರ ಸದಸ್ಯರಿರುವ ಸಂಘ–ಸಂಸ್ಥೆಗಳು ಭೌತಿಕವಾಗಿಯೂ, ಒಂದು ಸಾವಿರಕ್ಕೂ ಹೆಚ್ಚು ಸದಸ್ಯರಿರುವ ಸಂಘ ಸಂಸ್ಥೆಗಳು ಆನ್‌ಲೈನ್ ಮೂಲಕ ಮಹಾಸಭೆಯನ್ನು ನಡೆಸುವಂತೆ ತಿಳಿಸಿದ್ದು, ರಾಜ್ಯದಲ್ಲಿ ಇನ್ನೂ ಕೋವಿಡ್–19ರ ಪ್ರಕರಣಗಳು ಕಂಡುಬರುತ್ತಿರುವುದರಿಂದ ಸನ್ಮಾನ್ಯ ಸದಸ್ಯರುಗಳ ಆರೋಗ್ಯದ ಹಿತದೃಷ್ಟಿ ಮತ್ತು ಕಳಕಳಿಯನ್ನು ಮನಗೊಂಡು ಹಾಗೂ ಬ್ಯಾಂಕಿನ ಇಂದಿನ ಆರ್ಥಿಕ ಪರಿಸ್ಥಿತಿಯಲ್ಲಿ ಖರ್ಚುಗಳನ್ನು ಸಹ ಕಡಿಮೆ ಮಾಡುವ ಸದುದ್ದೇಶದಿಂದ ಆಡಳಿತ ಮಂಡಲಿಯು 52ನೇ ವಾರ್ಷಿಕ ಮಹಾಸಭೆಯನ್ನು ಭೌತಿಕವಾಗಿ ನಡೆಸುವ ಬದಲು ವಿಡಿಯೋ ಕಾನ್ಫರೆನ್ಸ್ / ವರ್ಚುಯೆಲ್ ಮೀಟಿಂಗ್ ಮೂಲಕ ನಡೆಸಲು ತೀರ್ಮಾನಿಸಲಾಗಿದೆಯೆಂದು ತಿಳಿಸಬಯಸಿದರು.

ಕೋವಿಡ್–19ರ ಅಲೆಗಳಿಂದಾಗಿ ನಮ್ಮ ಬ್ಯಾಂಕಿನ ಹಲವಾರು ಸದಸ್ಯರು, ಗ್ರಾಹಕರುಗಳೂ ಸಹ ಕೋವಿಡ್ ಹೆಮ್ಮಾರಿಗೆ ನಿಧನರಾಗಿದ್ದು ಅವರೆಲ್ಲರಿಗೂ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ. ಕೋವಿಡ್–19ರ ವೈರಾಣುವಿನ ದುಷ್ಪರಿಣಾಮವು 2019–2020ನೇ ಸಾಲಿನಲ್ಲಿ ಒಂಡೆರಡು ತಿಂಗಳು ಭಾದಿಸಿದ್ದರೆ, 2020–2021ನೇ ಸಾಲಿನಲ್ಲಿ ವರ್ಷಪೂರ್ತಿ 1ನೇ ಅಲೆ, 2ನೇ ಅಲೆಯ ಮೂಲಕ ವ್ಯಾಪಕವಾಗಿ ಹರಡಿದಾಗ ವೈರಾಣು ಸೋಂಕು ಉಲ್ಬಣಗೊಳ್ಳುವುದನ್ನು ಅದರಲ್ಲೂ ಪ್ರಮುಖವಾಗಿ 'ಓಮಿಕ್ರೋನ್' ಮುಂತಾದ ಹಲವಾರು ವಿಭಿನ್ನ ತಳಿಗಳ ವೈರಾಣು ಸೋಂಕಿನ ಹರಡುವಿಕೆಯನ್ನು ನಿಯಂತ್ರಿಸಲು ಸರ್ಕಾರವು ಲಾಕ್‌ಡೌನ್ ಜೊತೆಗೆ ಹಲವಾರು ಮಾರ್ಗಸೂಚಿಗಳ ಮೂಲಕ ಕಾರ್ಯತಂತ್ರಗಳನ್ನು ಘೋಷಿಸಿದ ಪರಿಣಾಮ ಜನತೆಯ ದೈನಂದಿನ ಜೀವನದ ಮೇಲೆ, ಮಾರುಕಟ್ಟೆಯ ವ್ಯಾಪಾರ ವಹಿವಾಟಿನ ಮೇಲೆ ಹಾಗೂ ಬ್ಯಾಂಕಿಂಗ್ ಕ್ಷೇತ್ರದ ಮೇಲೆ ಪರಿಣಾಮ ಬೀರಿದ ಕಾರಣ ಇಡೀ ಅರ್ಥವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಿದ ಕಾರಣದಿಂದ ಆರ್ಥಿಕ ಚಟುವಟಿಕೆಗಳು ಕುಂಠಿತವಾಗಿ ಬ್ಯಾಂಕಿಂಗ್ ವಲಯದಲ್ಲಿ ಬೆಳವಣಿಗೆಗೆ ಹಿನ್ನಡೆಯಾಗಿದೆ. ಕೊರೋನಾ ಮಹಾಮಾರಿಯ ನಡುವೆ ತನ್ನ ಉಳಿವು, ಅಳಿವಿನ ಹೋರಾಟದಲ್ಲಿ ಸಹಕಾರ ಕ್ಷೇತ್ರವೂ ಹೊರತಾಗಿಲ್ಲ. ಆದ ಕಾರಣ ಕೇಂದ್ರ ಸರ್ಕಾರವು ಹಲವು ವಿಶೇಷ ಪ್ಯಾಕೇಜ್‌ಗಳನ್ನು ಘೋಷಿಸಿ ಹಲವಾರು ಸೂಕ್ತ ಕ್ರಮಗಳನ್ನು ಕೈಗೊಂಡ ಪರಿಣಾಮವಾಗಿ, ಆರ್ಥಿಕತೆಯು ಇತ್ತೀಚೆಗೆ ಚೇತರಿಕೆಯ ಹಾದಿಯಲ್ಲಿ ಮಂದಗತಿಯಲ್ಲಿ ಸಾಗುತ್ತಿದೆಯೆಂದರು.

**ಶ್ರೀಮತಿ ಲಖಿಮಿ ಬರುವಾ** ಅವರು ಅಸ್ಸಾಂನ ಜೋರ್ಹತ್‌ನಲ್ಲಿ **ಕೊನೊಕ್ಲೋಟಾ ಮಹಿಳಾ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್** ಅನ್ನು ಸ್ಥಾಪಿಸಿ ಹಿಂದುಳಿದ ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸಲು ಮಾಡಿರುವ ಪ್ರಯತ್ನಗಳನ್ನು ಗುರುತಿಸಿ ಕಳೆದ ವರ್ಷ (ಡಿಸೆಂಬರ್–2021) ಅವರಿಗೆ **"ಪದ್ಮಶ್ರೀ"** ಪ್ರಶಸ್ತಿಯನ್ನು ನೀಡಿ ಗೌರವಿಸಿರುವುದನ್ನು ಗಮನಿಸಿದಾಗ ದೇಶದ ಆರ್ಥಿಕ ಪ್ರಗತಿಗೆ ಸಹಕಾರಿ ಕ್ಷೇತ್ರವು ಸಲ್ಲಿಸುತ್ತಿರುವ ಸೇವೆಯ ಔಚಿತ್ಯವನ್ನು ಮನಗಾಣಬಹುದು.

ಅದೇ ರೀತಿ ಬಾಂಗ್ಲಾ ದೇಶದ ಪ್ರಜೆ "Muhammad Yunus" ರವರು ತಮ್ಮ ದೇಶದ ಬಡ ಜನತೆಗೆ **"ಮೈಕ್ರೋ ಕ್ರೆಡಿಟ್"** ಮತ್ತು **"ಮೈಕ್ರೋ ಫೈನಾನ್ಸ್"** ಮೂಲಕ ಕೇವಲ 10 ವರ್ಷದ ಅವಧಿಯಲ್ಲಿ ದೇಶದ ಶೇಕಡ 30 ರಷ್ಟು ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಿದ ಕಾರ್ಯವಿಧಾನವನ್ನು ಸವಿವರವಾಗಿ ಸಭೆಗೆ ವಿವರಿಸಿ, ಅವರ ಈ ಸಾಧನೆಗಾಗಿ ಪ್ರತಿಷ್ಠಿತ ಶಾಂತಿ **"ನೋಬೆಲ್ ಪ್ರಶಸ್ತಿ"** ನೀಡಿರುವುದು ಸಹಕಾರಿ ರಂಗಕ್ಕೆ ಸಂದ ಗೌರವವಾಗಿದೆಯೆಂದರು.

ಬ್ಯಾಂಕು ಕಳೆದ 52 ವರ್ಷಗಳಿಂದ ಪ್ರಗತಿಪಥದಲ್ಲಿ ನಡೆಯುತ್ತಿದ್ದು, ಆರಂಭದಿಂದ ಇಲ್ಲಿಯವರೆವಿಗೂ ಲಾಭದಾಯಕವಾಗಿ ಮುನ್ನಡೆದು, ಸಹಕಾರಿ ಬ್ಯಾಂಕುಗಳಲ್ಲಿ ಅತಿ ಹೆಚ್ಚು ಅಂದರೆ ಶೇ. 25ರ ಡಿವಿಡೆಂಡ್ ನೀಡಿದ ಹೆಗ್ಗಳಿಕೆ ನಮ್ಮ ಬ್ಯಾಂಕಿಗೆ ಸಲ್ಲುತ್ತದೆ. ನಂತರ ಭಾರತೀಯ ರಿಸರ್ವ್ ಬ್ಯಾಂಕು, ಬ್ಯಾಂಕಿನ ನಿಧಿಗಳನ್ನು ಹೆಚ್ಚಿಸಿಕೊಳ್ಳುವಂತೆ ಸಲಹೆ ನೀಡಿ, ವಿವೇಕಯುತ ಬ್ಯಾಂಕ್ ಆಗಿ ವರ್ತಿಸುವಂತೆ ಸೂಚಿಸಿದ ಮೇರೆಗೆ ನಂತರದ ವರ್ಷಗಳಲ್ಲಿ ಡಿವಿಡೆಂಡ್ ಪ್ರಮಾಣವನ್ನು ಇಳಿಸಲಾಯಿತು. ಆದರೆ ಕಳೆದ 2019–2020ನೇ ಸಾಲಿನಲ್ಲಿ ಕೆಲವು ಸಹಕಾರಿ ಬ್ಯಾಂಕುಗಳ ಆರ್ಥಿಕತೆಯಲ್ಲಿ ಉಂಟಾದ ವ್ಯತ್ಯಯಗಳಿಂದಾಗಿ, ಭಾರತೀಯ ರಿಸರ್ವ್ ಬ್ಯಾಂಕು ನಿರ್ಬಂಧ ಹೇರಿದ್ದರಿಂದ ಹಾಗೂ 2020–2021ನೇ ಸಾಲಿನಲ್ಲಿ ಬ್ಯಾಂಕಿನಲ್ಲಿ ನಿವ್ವಳ ಎನ್.ಪಿ.ಎ. ಪ್ರಮಾಣವು ಶೇಕಡ 10 ಕ್ಕಿಂತ ಹೆಚ್ಚಿಗೆ ಇದ್ದು, ಬ್ಯಾಂಕಿನ ಮೇಲೆ ಮೇಲುಸ್ತುವಾರಿ (SAF-Supervisory Action Framework) ಕ್ರಮವನ್ನು ಜಾರಿಗೊಳಿಸುವ ಮೂಲಕ ಸದರಿ ಸಾಲಿಗೆ ಡಿವಿಡೆಂಡ್ ಘೋಷಣೆ / ಪಾವತಿ ಮಾಡದಂತೆ ಸೂಚಿಸಿರುವುದರಿಂದ ಈ ಎರಡೂ ಸಾಲುಗಳಲ್ಲಿ ಸದಸ್ಯರಿಗೆ ಡಿವಿಡೆಂಡ್ ನೀಡಲು ಸಾಧ್ಯವಾಗಿಲ್ಲವೆಂದರು.

ವರದಿ ಸಾಲಿನಲ್ಲಿ ಕೋವಿಡ್–19 ರಿಂದಾಗಿ ಸಾಲ ವಸೂಲಾತಿ ನಿರೀಕ್ಷಿಸಿದಷ್ಟು ಪ್ರಮಾಣದಲ್ಲಿ ವಸೂಲಾಗಿರುವುದಿಲ್ಲ. ಆದರೂ ಕೆ.ಸಿ.ಎಸ್. ಕಾಯಿದೆ ಮತ್ತು ಸರ್ಫೇಸಿ ಕಾಯಿದೆ ಅಡಿಯಲ್ಲಿ ಸಾಲ ವಸೂಲಾತಿ ಕಾನೂನು ಕ್ರಮಗಳನ್ನು ಜರುಗಿಸಿದ ಮೇರೆಗೆ ಎನ್.ಪಿ.ಎ. ಮೊತ್ತವು ರೂ. 77.42 ಕೋಟಿಗಳಿಂದ ರೂ. 69.81 ಕೋಟಿಗಳಿಗೆ ಇಳಿಕೆಯಾಗಿದ್ದು, ಬ್ಯಾಂಕಿನ ವ್ಯವಹಾರಿಕ ಲಾಭ ರೂ. 1.42 ಕೋಟಿಗಳಿದ್ದು, ಹಿಂದಿನ ಸಾಲಿನಲ್ಲಿ ಡಿ2 ವರ್ಗೀಕರಣಗೊಂಡಿದ್ದ ಎನ್.ಪಿ.ಎ. ಖಾತೆಗಳಿಗೆ ಶೇಕಡ 30 ರಷ್ಟು ಕಾದಿರಿಸಲಾಗಿತ್ತು ಆದರೆ ವರದಿ ಸಾಲಿಗೆ ಸದರಿ ಎನ್.ಪಿ.ಎ. ಖಾತೆಗಳು ಡಿ3ಗೆ ವರ್ಗೀಕರಣಗೊಂಡ ಕಾರಣ ಆರ್.ಬಿ.ಐ. ನಿರ್ದೇಶನದಂತೆ ಶೇಕಡ 100 ರಷ್ಟು ಕಾದಿರಿಸಬೇಕಾಗಿದ್ದು, ಸುಮಾರು ರೂ. 7.00 ಕೋಟಿಗಳಷ್ಟು ಎನ್.ಪಿ.ಎ. ಮೊತ್ತವನ್ನು ಕಾದಿರಿಸಲಾಗಿದೆ. ಇದರ ಜೊತೆಗೆ ನಾವು ರೂ. 10.00 ಕೋಟಿಗಳ ಠೇವಣಿ ಮಾಡಿದ್ದ ಪಿ.ಎಂ.ಸಿ. ಬ್ಯಾಂಕ್ (Punjab & Maharashtra Co-op Bank) ತೊಂದರೆಗೆ ಒಳಗಾದ ಕಾರಣ ಅದನ್ನು ಅನುತ್ಪಾದಿತ ಹೂಡಿಕೆಯೆಂದು ಪರಿಗಣಿಸುವಂತೆ ಆರ್.ಬಿ.ಐ. ಸೂಚಿಸಿದ ಮೇರೆಗೆ ವಾರ್ಷಿಕವಾಗಿ ಅದಕ್ಕೂ ಸಹ ರೂ. 2.00 ಕೋಟಿಗಳನ್ನು ಕಾದಿರಿಸಬೇಕಾಯಿತು ಹಾಗೂ ಬರಬೇಕಾದ ರೂ. 1.00 ಕೋಟಿಗಳ ಬಡ್ಡಿ ಸಹ ಬಂದಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದಾಗಿ ಸಾಲ ವಸೂಲಿ ಮಾಡಿದರೂ ಸಹ ಅನುತ್ಪಾದಿತ ಸಾಲಗಳಿಗೆ ಮತ್ತು ಅನುತ್ಪಾದಿತ ಹೂಡಿಕೆಗಳಿಗೆ ಕಾಯ್ದಿರಿಸಿದ ಮೊತ್ತ ಹೆಚ್ಚಾದ ಕಾರಣ ಬ್ಯಾಂಕು ಮೊದಲ ಬಾರಿಗೆ ರೂ. 7.89 ಕೋಟಿಗಳ ನಿವ್ವಳ ನಷ್ಟವನ್ನು ಅನುಭವಿಸಬೇಕಾಯಿತು. ಇದು ಆಡಳಿತ ಮಂಡಲಿಗೆ ತುಂಬಾ ನೋವುಂಟುಮಾಡಿದೆ. ಮುಂದಿನ ಸಾಲಿನಲ್ಲಿ ಖಂಡಿತವಾಗಿಯೂ ಡಿವಿಡೆಂಡ್ ನೀಡಲೇಬೇಕೆಂಬ ಭರವಸೆಯೊಂದಿಗೆ ಕಾರ್ಯ ನಿರ್ವಹಿಸಲಾಗುತ್ತಿದೆ. ಬ್ಯಾಂಕಿನಲ್ಲಿ ಸದಸ್ಯರಿಗೆ ಹೆಚ್ಚಿನ ಅನುಕೂಲ ಕಲ್ಪಿಸುವ ಮತ್ತು ಬ್ಯಾಂಕಿನ ಗುರಿಯನ್ನು ತಲುಪುವ ಸಲುವಾಗಿ ದಿನಾಂಕ 15.06.2022 ರಿಂದ 31.8.2022 ರವರೆಗೆ ಶೂನ್ಯ ಸಂಸ್ಕರಣ ಶುಲ್ಕದೊಂದಿಗೆ **"ಸಾಲ ಮೇಳ"**ವನ್ನು

ಹಮ್ಮಿಕೊಳ್ಳಲಾಗಿತ್ತು, ಸನ್ಮಾನ್ಯ ಸದಸ್ಯರು ದಯಮಾಡಿ ಬ್ಯಾಂಕಿನಲ್ಲಿ ಸಾಲ ಸೌಲಭ್ಯಗಳನ್ನು ಪಡೆಯುವುದರ ಜೊತೆಗೆ ತಾವು ಪಡೆದ ಸಾಲಗಳನ್ನು ಅವಧಿಯೊಳಗೆ ಸರಿಯಾಗಿ ಪಾವತಿಸಿದ್ದಲ್ಲಿ ಅದು ಬ್ಯಾಂಕಿನ ಅಭಿವೃದ್ಧಿಗೆ ಮತ್ತು ಸದಸ್ಯರಿಗೆ ಡಿವಿಡೆಂಡ್ ನೀಡಲು ಹೆಚ್ಚಿನ ಸಹಕಾರಿಯಾಗುತ್ತದೆ ಹಾಗೂ ಎಲ್ಲಾ ಸದಸ್ಯರು ಬ್ಯಾಂಕಿನಲ್ಲಿ ದೊರೆಯುವ ಸೌಲಭ್ಯಗಳನ್ನು ಪಡೆಯುವ ಮೂಲಕ ಬ್ಯಾಂಕಿಂಗ್ ವ್ಯವಹಾರಗಳಲ್ಲಿ ಭಾಗವಹಿಸುವ ಮೂಲಕ ಬ್ಯಾಂಕಿನ ಪ್ರಗತಿಗೆ ಸಹಕಾರ ನೀಡಬೇಕೆಂದು ಕೋರುತ್ತೇನೆ.

ಬ್ಯಾಂಕಿನ 50 ವರ್ಷಗಳ ಸಂಭ್ರಮವನ್ನು **"ಸುವರ್ಣ ಮಹೋತ್ಸವ"**ವಾಗಿ ಹಿಂದಿನ ವರ್ಷಕ್ಕೆ ಆಚರಿಸಬೇಕಾಗಿದ್ದು, ಕೋವಿಡ್-19ರ ಕಾರಣದಿಂದ ಮುಂದೂಡಲಾಯಿತು. ಈಗ ಎಲ್ಲವೂ ಸರಿ ಹೋಗುತ್ತಿರುವುದರಿಂದ, 2022-2023ನೇ ಆರ್ಥಿಕ ಸಾಲಿನೊಳಗೆ ಬ್ಯಾಂಕಿನ **"ಸುವರ್ಣ ಮಹೋತ್ಸವ"** ವನ್ನು ಅತ್ಯುತ್ತಮ ಜಾಗದಲ್ಲಿ ಆಚರಿಸುವ ಆಲೋಚನೆಯಿದ್ದು, **"ಸುವರ್ಣ ಮಹೋತ್ಸವ"**ದ ಅಂಗವಾಗಿ ಸನ್ಮಾನ್ಯ ಸದಸ್ಯರಿಗೆ ಕಾನೂನಿನ ಇತಿಮಿತಿಯೊಳಗೆ ಉತ್ತಮ ಉಡುಗೊರೆಯನ್ನು ಸಹ ನೀಡುವ ಉದ್ದೇಶ ಹೊಂದಲಾಗಿದೆ.

ಬ್ಯಾಂಕಿನ ಆರ್ಥಿಕ ವ್ಯವಹಾರಗಳಲ್ಲಿ ಡಿಜಿಟಲೀಕರಣವು ಪ್ರಮುಖ ಪಾತ್ರ ವಹಿಸುತ್ತಿದ್ದು, ನಮ್ಮ ಬ್ಯಾಂಕು ಸಹ ಇದಕ್ಕೆ ಒತ್ತು ನೀಡಿ, ಬ್ಯಾಂಕಿನಲ್ಲಿ ಸದಸ್ಯರಿಗೆ / ಗ್ರಾಹಕರಿಗೆ ಉತ್ತಮವಾದ ಮತ್ತು ಗುಣಮಟ್ಟದ ಸೇವೆಯನ್ನು ಶೀಘ್ರವಾಗಿ ಒದಗಿಸುವ ದೃಷ್ಟಿಯಿಂದ ಸಂಪೂರ್ಣ ಗಣಕೀಕೃತಗೊಳಿಸಿ, ಕೋರ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಮೆ॥ ಇಫ್ತಾಸ್ ಸಂಸ್ಥೆಯವರೊಂದಿಗೆ ಒಡಂಬಡಿಕೆ ಮಾಡಿಕೊಂಡು ಸೇವೆ ಸಲ್ಲಿಸಲಾಗುತ್ತಿತ್ತು, ಆದರೆ ಸದರಿ ಸಾಫ್ಟ್‌ವೇರ್ ಸಂಸ್ಥೆಯವರು ಸಂಸ್ಥೆಯನ್ನು ಮುಚ್ಚಲಾಗುತ್ತಿದ್ದು ಸೇವೆಯನ್ನು ನಿಲ್ಲಿಸುವುದಾಗಿ ತಿಳಿಸಿದರ ಮೇರೆಗೆ ಮೆ॥ ಸರಸ್ವತ್ ಇನ್ಫೋಟೆಕ್ ಪ್ರೈ ಲಿ. ರವರ ಸ್ವಿಫ್ಟ್ ಕೋರ್ ಸಾಫ್ಟ್‌ವೇರ್ ಅನ್ನು ದಿನಾಂಕ 29.08.2022 ರಿಂದ ಬ್ಯಾಂಕಿನಲ್ಲಿ ಅಳವಡಿಸಿದ್ದು, ಕಾರ್ಯ ನಿರ್ವಹಿಸಲಾಗುತ್ತಿದೆ. ದೈನಂದಿನ ಕೆಲವು ವ್ಯವಹಾರಗಳಲ್ಲಿ ಕೆಲವೊಂದು ನ್ಯೂನತೆಗಳು ಕಂಡುಬಂದಿದ್ದು, ಅವುಗಳನ್ನು ಶೀಘ್ರವಾಗಿ ಪರಿಹರಿಸಿಕೊಂಡು ಪೂರ್ಣ ಪ್ರಮಾಣದಲ್ಲಿ ಅಳವಡಿಸಿಕೊಳ್ಳುವ ಮೂಲಕ ಸದಸ್ಯರಿಗೆ / ಗ್ರಾಹಕರಿಗೆ ಉತ್ತಮ ಸೇವೆಯನ್ನು ಒದಗಿಸಲಾಗುವುದು.

ಬ್ಯಾಂಕಿನ ಎಂಟು ಶಾಖೆಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ವಾರ್ಷಿಕ ಬಾಡಿಗೆ ಮೊತ್ತವೇ ಸುಮಾರು ರೂ. 80.00 ಲಕ್ಷ ವ್ಯಯಿಸಲಾಗುತ್ತಿದೆ. ಬ್ಯಾಂಕಿನ ಶಾಖೆಗಳು ಗಣಕೀಕೃತಗೊಂಡಿರುವುದರಿಂದ ಶಾಖೆಗಳನ್ನು ಕಡಿಮೆ ವಿಸ್ತೀರ್ಣವುಳ್ಳ ಮತ್ತು ಕಡಿಮೆ ಬಾಡಿಗೆಯ ಕಟ್ಟಡಗಳಿಗೆ ಸ್ಥಳಾಂತರಿಸಲು ಉದ್ದೇಶಿಸಿದ್ದು, ಈಗಾಗಲೇ ಕಾಚರಕನಹಳ್ಳಿ ಶಾಖೆಯನ್ನು ಸುಮಾರು 2000 ಚದರ ಅಡಿಗಳ, ರೂ. 59,800-00 ಬಾಡಿಗೆ ಕಟ್ಟಡದಿಂದ ಸುಮಾರು 1000 ಚದರ ಅಡಿಗಳ ರೂ. 35,000-00 ಗಳ ಬಾಡಿಗೆ ಕಟ್ಟಡಕ್ಕೆ ಸ್ಥಳಾಂತರಿಸಲಾಗುತ್ತಿದೆ. ಇದರ ಜೊತೆಗೆ ಬ್ಯಾಂಕಿನ ಕೇಂದ್ರ ಕಛೇರಿಯ ಮುಂಭಾಗದಲ್ಲಿರುವ ಹಳೆ ಕಲ್ಲು ಕಟ್ಟಡವನ್ನು ಸಹ ಬಹಿರಂಗ ಹರಾಜಿನ ಮೂಲಕ ಮಾರಾಟ ಮಾಡಿ ಬರುವ ಹಣದ ಜೊತೆಗೆ ಬ್ಯಾಂಕಿನ ಕಟ್ಟಡ ನಿಧಿಯಲ್ಲಿರುವ ಹಣವನ್ನು ಹೊಂದಿಸಿಕೊಂಡು ಎರಡು-ಮೂರು ಶಾಖೆಗಳಿಗೆ ಸ್ವಂತ ಕಟ್ಟಡವನ್ನು ಹೊಂದುವುದರ ಮೂಲಕ ಬಾಡಿಗೆ ಖರ್ಚುಗಳನ್ನು ತಗ್ಗಿಸಲು ಉದ್ದೇಶಿಸಲಾಗಿದೆ.

ಬ್ಯಾಂಕಿನ ಅಭಿವೃದ್ಧಿಯನ್ನೇ ತನ್ನ ಗುರಿಯಾಗಿಸಿಕೊಂಡು ಮೂಲಮಂತ್ರವಾಗಿಸಿಕೊಂಡಿರುವ ಆಡಳಿತ ಮಂಡಲಿಯು, ಇಂದಿನ ಈ ಮಹಾಸಭೆಯಲ್ಲಿ ಬ್ಯಾಂಕಿನ ಆರ್ಥಿಕ ಅಂಕಿ ಅಂಶಗಳೊಂದಿಗೆ 2021-

2022ನೇ ಸಾಲಿನ ಆಡಳಿತ ಮಂಡಲಿಯ ವಾರ್ಷಿಕ ವರದಿಯನ್ನು ಮತ್ತು ಶಾಸನಬದ್ಧ ಲೆಕ್ಕ ಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳನ್ನು ಹಾಗೂ ಆಡಳಿತಾತ್ಮಕವಾದ ಹಲವಾರು ವಿಷಯಗಳನ್ನು ತಮ್ಮ ಮುಂದೆ ಮಂಡಿಸುತ್ತಿದ್ದೇವೆ, ದಯವಿಟ್ಟು ಈ ಎಲ್ಲಾ ವಿಷಯಗಳನ್ನು ಚರ್ಚಿಸಿ, ಮಂಜೂರಾತಿಯನ್ನು ನೀಡಬೇಕಾಗಿ ಪ್ರಾರ್ಥಿಸಿ, ತಮ್ಮ ಅತ್ಯುತ್ತಮವಾದ ಸಲಹೆ ಸೂಚನೆಗಳನ್ನು ನೀಡುವ ಮೂಲಕ ಬ್ಯಾಂಕು ಇನ್ನು ಹೆಚ್ಚಿನ ರೀತಿ ಮುನ್ನಡೆಯಲ್ಲಿ ಸಾಗಲು ಸಹಕರಿಸುವಂತೆ ಕೋರಿ, 52ನೇ ವರ್ಚುಯೆಲ್ ಮಹಾಸಭೆಗೆ ಮತ್ತೊಮ್ಮೆ ಎಲ್ಲರನ್ನೂ ಸ್ವಾಗತಿಸಿದರು.

3. **ದೈವಾಧೀನರಾದ ಬ್ಯಾಂಕಿನ ಸದಸ್ಯರುಗಳಿಗೆ ಶ್ರದ್ಧಾಂಜಲಿ ಸೂಚಿಸುವುದು.**

ಬ್ಯಾಂಕಿನ ನಿರ್ದೇಶಕರಾದ ಶ್ರೀ ಪಿ. ರುದ್ರಮೂರ್ತಿಯವರು ವಿಷಯವನ್ನು ಮಂಡಿಸುತ್ತಾ, ಬ್ಯಾಂಕಿನ ವರದಿ ಪುಸ್ತಕದಲ್ಲಿನ ಪುಟ ಸಂಖ್ಯೆ 63 ಮತ್ತು 64 ರಲ್ಲಿ ಮುದ್ರಿತವಾಗಿರುವ ಒಟ್ಟು 195 ಸದಸ್ಯರುಗಳು ದಿನಾಂಕ 01.09.2021 ರಿಂದ ದಿನಾಂಕ 31.08.2022 ರವರೆಗಿನ ಅವಧಿಯಲ್ಲಿ ದೈವಾಧೀನರಾಗಿದ್ದು ಇವರೆಲ್ಲರೂ ಹಲವಾರು ವರ್ಷಗಳಿಂದ ನಮ್ಮ ಜೊತೆಯಲ್ಲಿ ಸದಸ್ಯರುಗಳಾಗಿ ಬ್ಯಾಂಕಿನ ಅಭಿವೃದ್ಧಿಗೆ ಸಹಕರಿಸಿರುವುದಾಗಿ ತಿಳಿಸಿ, ದೈವಾಧೀನರಾದ ಸದಸ್ಯರ ಹೆಸರುಗಳನ್ನು ಓದಲು ಮುಂದಾದಾಗ, ಸದಸ್ಯರಾದ ಶ್ರೀ ತಿಮ್ಮೇಗೌಡ ಟಿ. ಸದಸ್ಯತ್ವ ಸಂಖ್ಯೆ 13336 ಮತ್ತು ಶ್ರೀ ಲೋಹಿತ್ ಸದಸ್ಯತ್ವ ಸಂಖ್ಯೆ 120870 ರವರು ದೈವಾಧೀನರಾಗಿರುವ ಸದಸ್ಯರ ಹೆಸರುಗಳು ಈಗಾಗಲೇ ಮುದ್ರಿತವಾಗಿರುವುದರಿಂದ ಮತ್ತೆ ಓದುವುದು ಬೇಡವೆಂದು ತಿಳಿಸಿ ನೇರ ಚರ್ಚೆಗೆ ಹೋಗೋಣವೆಂದು ಸಲಹೆ ನೀಡಿದರು. ನಂತರ ಸಭೆಯಲ್ಲಿ ಸೇರಿರುವ ಎಲ್ಲರೂ ಮೃತ ಸದಸ್ಯರುಗಳ ಆತ್ಮಕ್ಕೆ ಶ್ರದ್ಧಾಂಜಲಿ ಕೋರಿದರು.

ಸದಸ್ಯರಾದ ಶ್ರೀ ತಿಮ್ಮೇಗೌಡ ಟಿ. ಸದಸ್ಯತ್ವ ಸಂಖ್ಯೆ 13336 ರವರು ಮಾತನಾಡಿ, ವಿಶೇಷ ಸೂಚನೆಯಲ್ಲಿ ಸದಸ್ಯರ ಮರಣೋತ್ತರ ಸಹಾಯಧನ ರೂ. 10,000–00 ಗಳನ್ನು ಒಂದು ವರ್ಷದ ಅವಧಿಯೊಳಗೆ ಪಡೆಯಬೇಕೆಂದು ಸೂಚಿಸಿರುವ ಬಗ್ಗೆ ಪ್ರಸ್ತಾಪಿಸಿ, ಮೃತ ಸದಸ್ಯ ಕುಟುಂಬದವರು ಬಂದು ಕೇಳುವ ಬದಲು, ಬ್ಯಾಂಕು ನೇರವಾಗಿ ಮೃತ ಕುಟುಂಬದವರನ್ನು ಭೇಟಿ ಮಾಡಿ ಸಹಾಯಧನವನ್ನು ನೀಡಿ, ಸಂತಾಪ ಸೂಚಿಸುವ ಮೂಲಕ ಗೌರವ ಸಲ್ಲಿಸುವುದು ಸೂಕ್ತವೆಂದು ಸಲಹೆ ನೀಡಿದರು.

ಉಪಾಧ್ಯಕ್ಷರಾದ ಶ್ರೀ ಡಿ.ಆರ್. ವಿಜಯಸಾರಥಿಯವರು ಮಾತನಾಡಿ, ತಮ್ಮ ಸಲಹೆ ಉತ್ತಮವಾಗಿದ್ದು, ಈಗಾಗಲೇ ಬ್ಯಾಂಕಿನಲ್ಲಿ ಇದು ಆಚರಣೆಯಲ್ಲಿದೆ. ಯಾವುದಾದರೂ ಸದಸ್ಯರು ನಿಧನರಾದ ವಿಷಯವು ಅದೇ ದಿನದಲ್ಲಿ ಶಾಖೆಯವರಿಗೆ ತಿಳಿದರೆ ಕೂಡಲೇ ಶಾಖಾ ವ್ಯವಸ್ಥಾಪಕರು ಮೃತರ ಕುಟುಂಬಕ್ಕೆ ಭೇಟಿ ನೀಡಿ ಮಾಲಾರ್ಪಣೆಯೊಂದಿಗೆ ಬ್ಯಾಂಕಿನ ಪರವಾಗಿ ಸಂತಾಪ ಸೂಚಿಸಿ, ಗೌರವ ನೀಡುವುದರ ಜೊತೆಗೆ ಸದಸ್ಯರ ಮರಣೋತ್ತರ ಸಹಾಯಧನ ರೂ.10,000–00 ಗಳನ್ನು ನೀಡುವ ಪರಿಪಾಠವಿದೆಯೆಂದು ವಿವರಿಸಿದರು.

ಮುಂದುವರಿದು, 2021–2022ನೇ ಸಾಲಿನ ಎಲ್ಲಾ ಅಂಕಿ ಅಂಶಗಳ ಬಗ್ಗೆ ಹಾಲಿ ಪ್ರಭಾರ ಪ್ರಧಾನ ವ್ಯವಸ್ಥಾಪಕರಿಗಿಂತ ನಿಕಟಪೂರ್ವ ಪ್ರಭಾರ ಪ್ರಧಾನ ವ್ಯವಸ್ಥಾಪಕರು ಮತ್ತು ಹಾಲಿ ಬ್ಯಾಂಕಿನಲ್ಲಿ ಪೂರ್ಣಸಮಯದ ಸಲಹೆಗಾರರಾಗಿರುವ ಶ್ರೀ ಬಿ.ಆರ್. ನಾಗರಾಜ ರವರು ಸದರಿ ಅವಧಿಯಲ್ಲಿ ಕಾರ್ಯ ನಿರ್ವಹಿಸಿರುವುದರಿಂದ ಅವರಿಗೆ ಎಲ್ಲಾ ವಿಷಯಗಳ ಬಗ್ಗೆ ಹೆಚ್ಚು ತಿಳಿದಿರುವುದರಿಂದ, ಸದಸ್ಯರು ಮಹಾಸಭೆಯಲ್ಲಿ ಮುಂದೆ ಕೇಳಲಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಲು ಮತ್ತು ಮಹಾಸಭೆಯ ಕಾರ್ಯಕಲಾಪಗಳನ್ನು ಮುನ್ನಡೆಸಲು ಸಭಾಧ್ಯಕ್ಷರು ಅವರಿಗೆ ಅಧಿಕಾರ ನೀಡುವಂತೆ ಉಪಾಧ್ಯಕ್ಷರು

ಕೋರಿದ ಮೇರೆಗೆ, ಮಹಾಸಭೆಯಲ್ಲಿ ಸದಸ್ಯರು ಕೇಳಲಿರುವ ಪ್ರಶ್ನೆಗಳಿಗೆ ಉತ್ತರಿಸಲು ಹಾಗೂ ಮಹಾಸಭೆಯ ಕಾರ್ಯಕಲಾಪಗಳನ್ನು ಮುನ್ನಡೆಸಲು ಶ್ರೀ ಬಿ.ಆರ್. ನಾಗರಾಜರವರಿಗೆ ಮಹಾಸಭೆಯ ಸಭಾಧ್ಯಕ್ಷರು ಅಧಿಕಾರ ನೀಡಿದರು.

4. **ಮಹಾಸಭೆಯ ಆಹ್ವಾನ ಪತ್ರಿಕೆಯಲ್ಲಿನ ಕಾರ್ಯಕಲಾಪಗಳ ಪಟ್ಟಿಯನ್ನು ಓದಿ ಅಂಗೀಕರಿಸುವುದು.**

ನಿರ್ದೇಶಕರಾದ ಶ್ರೀ ನಂಜೇಗೌಡರವರು ವಿಷಯವನ್ನು ಮಂಡಿಸುತ್ತಾ, ಆಹ್ವಾನ ಪತ್ರಿಕೆಯ ಕಾರ್ಯಕಲಾಪಗಳನ್ನು ಅಂಚೆಯ ಮೂಲಕ ಕಳಿಸಿರುವ 52ನೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯ ಪುಟ ಸಂಖ್ಯೆ 2 ಮತ್ತು 3 ರಲ್ಲಿ ಹಾಗೂ ವಾರ್ಷಿಕ ವರದಿ ಪುಸ್ತಕದ ಪುಟ ಸಂಖ್ಯೆ 2 ರಲ್ಲಿ ಮತ್ತು ಕಾರ್ಯಕಲಾಪಗಳಿಗೆ ಅನುಕ್ರಮವಾಗಿ ಆಡಳಿತ ಮಂಡಲಿಯು ಟಿಪ್ಪಣೆಗಳನ್ನು ಪುಟ 5 ರಿಂದ 7 ರವರೆಗೆ ಮುದ್ರಿಸಿ, ಸದಸ್ಯರಿಗೆ ನೀಡಲಾಗಿದೆ. ಕಾರ್ಯಕಲಾಪದ ಪಟ್ಟಿಯಲ್ಲಿ, ಹಿಂದಿನ ಮಹಾಸಭೆಯ ನಡವಳಿಕೆ, ವಾರ್ಷಿಕ ವರದಿಯೊಂದಿಗೆ ಮುಂದಿನ ವರ್ಷದ ಕಾರ್ಯಯೋಜನೆಗೆ ಅನುಮೋದನೆ, 2021–2022ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಮತ್ತು ಇದಕ್ಕೆ ಆಡಳಿತ ಮಂಡಲಿಯ ಅನುಪಾಲನಾ ವರದಿ, 2022–2023ನೇ ಸಾಲಿಗೆ ಲೆಕ್ಕ ಪರಿಶೋಧಕರ ನೇಮಕ, 2021–2022ನೇ ಸಾಲಿನ ವ್ಯಯದ ಪಟ್ಟಿ ಪರಿಶೀಲನೆ, 2022–2023ನೇ ಸಾಲಿಗೆ ಮುಂಗಡ ಪತ್ರ ಮತ್ತು 2023–2024ನೇ ಸಾಲಿಗೆ ತಾತ್ಕಾಲಿಕ ಮುಂಗಡಪತ್ರ ಮಂಜೂರು ಮಾಡುವುದು, 2021–2022ನೇ ಸಾಲಿನ ನಿವ್ವಳ ನಫೆ ವಿಲೇವಾರಿ ಬಗ್ಗೆ, ಸದಸ್ಯರ ಸೇರ್ಪಡೆ ಮತ್ತು ಸಮಾಪನೆ, ನಿರ್ದೇಶಕ ಮಂಡಲಿ ಮತ್ತು ಪದಾಧಿಕಾರಿಗಳಿಗೆ 2021–2022ನೇ ಸಾಲಿನಲ್ಲಿ ನೀಡಿರುವ ಸಂಭಾವನೆ, ಪ್ರಯಾಣ ಭತ್ಯೆ ಮತ್ತು ದಿನಭತ್ಯೆ ಇತ್ಯಾದಿಗಳ ವಿಮರ್ಶೆ, ಇವುಗಳನ್ನು ಮಹಾಸಭೆಯಲ್ಲಿನ ಕಾರ್ಯಕ್ರಮ ಪಟ್ಟಿಯಲ್ಲಿ ಸೂಚಿಸಿರುವಂತೆ ಬೇರೆ ಬೇರೆ ವಿಷಯಗಳಾಗಿ ಚರ್ಚಿಸಬೇಕಾಗಿದೆ, ಆಡಳಿತ ಮಂಡಲಿಯು ಸಹ ಇದಕ್ಕೆ ವಿವರಣೆಯನ್ನು ನೀಡಿದೆಯೆಂದು ತಿಳಿಸಿ, ಮಹಾಸಭೆಯ ಕಾರ್ಯಕಲಾಪಗಳ ಪಟ್ಟಿಯನ್ನು ಪೂರ್ಣವಾಗಿ ಓದಿ, ಆಯಾಯ ವಿಷಯಗಳು ಬಂದಾಗ ಸನ್ಮಾನ್ಯ ಸದಸ್ಯರುಗಳು ಪರಿಶೀಲಿಸಿ ಅಂಗೀಕರಿಸಬೇಕೆಂದು ಕೋರಿದರು.

ಸದಸ್ಯರಾದ ಶ್ರೀ ತಿಮ್ಮೇಗೌಡ ಟಿ. ಸದಸ್ಯತ್ವ ಸಂಖ್ಯೆ 13336 ರವರು ಮಾತನಾಡಿ, 52ನೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯಲ್ಲಿನ ಕಾರ್ಯಕಲಾಪಗಳ ಪಟ್ಟಿಯು ಕಾನೂನು ಬದ್ಧವಾಗಿ ಸರಿಯಾಗಿರುವುದರಿಂದ ಒಪ್ಪಿಗೆಯನ್ನು ಸೂಚಿಸಿದರು. ಇದನ್ನು ಮತ್ತೊಬ್ಬ ಸದಸ್ಯರಾದ ಶ್ರೀಮತಿ ಭಾರತಿ. ಎನ್. ಸದಸ್ಯತ್ವ ಸಂಖ್ಯೆ 121245 ರವರು ಅನುಮೋದಿಸಿದ ಮೇರೆಗೆ ಸಭೆಯು ಸರ್ವಾನುಮತದಿಂದ ಆಹ್ವಾನ ಪತ್ರಿಕೆ ಮತ್ತು ಕಾರ್ಯಕಲಾಪಗಳ ಪಟ್ಟಿಯನ್ನು ಅಂಗೀಕರಿಸಿತು.

5. **2020–2021ನೇ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಕೆಗಳನ್ನು ಓದಿ ಅಂಗೀಕರಿಸುವುದು.**

ಬ್ಯಾಂಕಿನ ನಿರ್ದೇಶಕರಾದ ಶ್ರೀ ರವೀಂದ್ರ ಪಿ.ಕೆ. ರವರು ವಿಷಯವನ್ನು ಮಂಡಿಸುತ್ತಾ, 2020–2021ನೇ ಸಾಲಿನ ಮಹಾಸಭೆಯ ನಡವಳಿಕೆಗಳನ್ನು ಬಿಳಿಹೊದಿಕೆ ಪುಸ್ತಕ ಪುಟ ಸಂಖ್ಯೆ 2 ರಿಂದ 35 ರವರೆಗೆ ಮುದ್ರಿತವಾಗಿರುವುದನ್ನು ತಿಳಿಸಿ, ನಡವಳಿಕೆಗಳನ್ನು ಓದಲು ಮುಂದಾದಾಗ ವರ್ಚುಯೆಲ್ ಮಹಾಸಭೆಯ ಆನ್‌ಲೈನ್‌ನಲ್ಲಿದ್ದ ಸದಸ್ಯರಾದ ಶ್ರೀಮತಿ ಲಕ್ಷ್ಮೀ, ಸದಸ್ಯತ್ವ ಸಂಖ್ಯೆ 120871 ರವರು ಮಾತನಾಡಿ, ಈಗಾಗಲೇ ಮುದ್ರಿತ ನಡವಳಿಕೆ ಇರುವುದರಿಂದ ನಾವುಗಳೇ ಓದಿಕೊಳ್ಳುತ್ತೇವೆ, ಮತ್ತೆ ಓದುವ ಅಗತ್ಯವಿಲ್ಲವೆಂದು ತಿಳಿಸಿದರು.

ಸದಸ್ಯರಾದ ಶ್ರೀ ತಿಮ್ಮೇಗೌಡ ಟಿ. ಸದಸ್ಯತ್ವ ಸಂಖ್ಯೆ 13336 ರವರು ಮಾತನಾಡಿ, ಕಳೆದ ಮಹಾಸಭೆಯಲ್ಲಿ ಡಿವಿಡೆಂಡ್ ಹಂಚಿಕೆ, ಎನ್.ಪಿ.ಎ. ಮುಂತಾದ ಹಲವಾರು ಅಂಶಗಳನ್ನು ವಿಷಯವಾರು ಚರ್ಚಿಸಿದ್ದು,

ಡಿವಿಡೆಂಡ್ ನೀಡುವ ಬಗ್ಗೆ ರಿಸರ್ವ್ ಬ್ಯಾಂಕಿನವರೊಂದಿಗೆ ಪತ್ರವ್ಯವಹಾರ ನಡೆಸಿ ಅವರ ಮನವೊಲಿಸುವ ಮೂಲಕ ಸದಸ್ಯರಿಗೆ ಡಿವಿಡೆಂಡ್ ನೀಡಲು ಸಾಲ ವಸೂಲಿಗೆ ಬ್ಯಾಂಕು ಕೈಗೊಂಡಿರುವ ಕ್ರಮಗಳನ್ನು ಸಂಕ್ಷಿಪ್ತವಾಗಿ ವಿವರಿಸುವಂತೆ ಸೂಚಿಸಿದಾಗ, ಸಲಹೆಗಾರರಾದ ಶ್ರೀ ಬಿ.ಆರ್. ನಾಗರಾಜ ರವರು ಮಾತನಾಡಿ, ಮುಂದೆ ಎಲ್ಲಾ ಅಂಶಗಳ ಬಗ್ಗೆ ವಿಷಯವಾರು ಚರ್ಚಿಸಲು ಅವಕಾಶವಿದೆಯೆಂದು ತಿಳಿಸಿದರು.

2020–2021ನೇ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಕೆಗಳಲ್ಲಿನ ಎಲ್ಲಾ ವಿಷಯಗಳನ್ನು ಅಂಗೀಕರಿಸಬಹುದುದೆಂದು ಸದಸ್ಯರಾದ ಶ್ರೀಮತಿ ಲಕ್ಷ್ಮಿ ಜಿ. ಸದಸ್ಯತ್ವ ಸಂಖ್ಯೆ 120871 ರವರು ಒಪ್ಪಿಗೆ ಸೂಚಿಸಿ, ಸದಸ್ಯರಾದ ಶ್ರೀ ತಿಮ್ಮೇಗೌಡ ಟಿ. ಸದಸ್ಯತ್ವ ಸಂಖ್ಯೆ 13336 ರವರು ಅನುಮೋದಿಸಿದ ಮೇರೆಗೆ ಸಭೆಯು 2020–2021ನೇ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಕೆಗಳನ್ನು ಸರ್ವಾನುಮತದಿಂದ ಅಂಗೀಕರಿಸಿತು.

**6. 2021–2022ನೇ ಸಾಲಿನ ಆಡಳಿತ ಮಂಡಲಿಯ ವಾರ್ಷಿಕ ವರದಿಯನ್ನು ಓದಿ ಅಂಗೀಕರಿಸುವುದು ಮತ್ತು ಮುಂದಿನ ವರ್ಷದ ಕಾರ್ಯ ಯೋಜನೆಗೆ ಅನುಮೋದನೆ ನೀಡುವುದು.**

ಉಪಾಧ್ಯಕ್ಷರಾದ ಶ್ರೀ ಡಿ.ಆರ್. ವಿಜಯಸಾರಥಿ ಯವರು ವಿಷಯವನ್ನು ಮಂಡಿಸುತ್ತಾ, 2021–2022ನೇ ಸಾಲಿನ ಆಡಳಿತ ಮಂಡಲಿಯ ವಾರ್ಷಿಕ ವರದಿಯನ್ನು ಮತ್ತು ಮುಂದೆ ಕೈಗೊಳ್ಳುವ ಕಾರ್ಯ ಯೋಜನೆಗಳನ್ನು ವಾರ್ಷಿಕ ವರದಿ ಪುಸ್ತಕದ ಪುಟ ಸಂಖ್ಯೆ 8 ರಿಂದ 28 ರವರೆಗೆ ಮುದ್ರಿಸಲಾಗಿದ್ದು, ಇದರಲ್ಲಿ ಬ್ಯಾಂಕಿನ ಪ್ರಗತಿ, ಸದಸ್ಯತ್ವ, ಷೇರು ಬಂಡವಾಳ, ನಿಧಿಗಳು, ಠೇವಣಿ, ಸಾಲ ಮತ್ತು ಮುಂಡಗಳು, ಹೂಡಿಕೆಗಳು, ಶಾಸನಬದ್ಧ ಲೆಕ್ಕ ಪರಿಶೋಧನೆ, ಬ್ಯಾಂಕಿನ ಪರಿವೀಕ್ಷಣೆ, ಆಯ–ವ್ಯಯ, ನಿವ್ವಳ ನಫೆ ವಿಲೇವಾರಿ, ಆಡಳಿತ ಮಂಡಲಿ ಮತ್ತು ಉಪಸಮಿತಿಗಳು, ನಿರ್ದೇಶಕರ ಸಂಭಾವನೆ ಮತ್ತು ಅವರ ಸಾಲದ ವಿವರಗಳು, ಸಿಬ್ಬಂದಿಗಳ ನೇಮಕ ಮತ್ತು ಸೌಲಭ್ಯಗಳು ಹೀಗೆ ಅನೇಕ ಅಂಶಗಳ ಬಗ್ಗೆ ವರದಿ ನೀಡಲಾಗಿದೆ. ಹಾಗೆಯೇ ಆಡಳಿತ ಮಂಡಲಿಯು ಮುಂದಿನ ಕಾರ್ಯಯೋಜನೆಯನ್ನು ಸಹ ತಿಳಿಸಲಾಗಿದ್ದು, ಸನ್ಮಾನ್ಯ ಸದಸ್ಯರುಗಳು ಇವುಗಳನ್ನೆಲ್ಲಾ ಪರಿಶೀಲಿಸಿ ಅನುಮೋದನೆ ನೀಡಬೇಕೆಂದು ಕೋರುತ್ತಾ, ವಾರ್ಷಿಕ ವರದಿಯನ್ನು ಓದಲು ಮುಂದಾದಾಗ ಆನ್‌ಲೈನ್‌ನಲ್ಲಿದ್ದ ಕೆಲವು ಸದಸ್ಯರು ಮುದ್ರಿತ ವರದಿ ಎಲ್ಲರ ಬಳಿ ಇರುವುದರಿಂದ ಓದುವುದು ಬೇಡ, ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವಂತೆ ಸೂಚಿಸಿದರು.

ಸದಸ್ಯರಾದ ಶ್ರೀ ತಿಮ್ಮೇಗೌಡ ಟಿ. ಸದಸ್ಯತ್ವ ಸಂಖ್ಯೆ 13336 ಮತ್ತು ಸದಸ್ಯರಾದ ಶ್ರೀ ಶಂಕರಪ್ಪ ಟಿ.ವಿ. ಸದಸ್ಯತ್ವ ಸಂಖ್ಯೆ 121089 ರವರುಗಳು ಮಾತನಾಡಿ ವಾರ್ಷಿಕ ವರದಿಯನ್ನು ಓದುವುದು ಬೇಡ ನೇರವಾಗಿ ಚರ್ಚಿಸುವಂತೆ ಸಲಹೆ ನೀಡಿದರು.

ಸದಸ್ಯರಾದ ಶ್ರೀ ಶಂಕರಪ್ಪ, ಸದಸ್ಯತ್ವ ಸಂಖ್ಯೆ 121089 ರವರುಗಳು ಮಾತನಾಡಿ ವಾರ್ಷಿಕ ವರದಿಯ ಪುಟ ಸಂಖ್ಯೆ 21 ರಲ್ಲಿ 2022–2023ನೇ ಸಾಲಿಗೆ ಲೆಕ್ಕ ಪರಿಶೋಧಕರ ನೇಮಕಾತಿ ಬಗ್ಗೆ ತಿಳಿಸಿದ್ದು, ಆರ್.ಬಿ.ಐ. ಅನುಮತಿಗಾಗಿ ಪ್ರಸ್ತಾವನೆ ಸಲ್ಲಿಸಿರುವುದಾಗಿ ತಿಳಿಸಲಾಗಿದೆ. ಬ್ಯಾಂಕು ಸಲ್ಲಿಸಿರುವ ಪ್ರಸ್ತಾವನೆಗೆ ಆರ್.ಬಿ.ಐ. ಅನುಮತಿ ಸಿಕ್ಕಿದೆಯಾ? ಸಿಕ್ಕಿಲ್ಲವಾ? ತಿಳಿಸುವಂತೆ ಕೋರಿದರು.

ಸದಸ್ಯರಾದ ಶ್ರೀಮತಿ ಪ್ರಮೀಳ ಎ. ಸದಸ್ಯತ್ವ ಸಂಖ್ಯೆ 121072 ರವರು ಮಾತನಾಡಿ, ವಾರ್ಷಿಕ ವರದಿಯ ಪುಟ ಸಂಖ್ಯೆ 9 ರಲ್ಲಿ ಠೇವಣಿಗಳ ಮೊತ್ತ ಏರಿಕೆಯಾಗಿದ್ದು, ಸಾಲ ಮತ್ತು ಮುಂಗಡ ಕಡಿಮೆಯಾಗಿದೆ ಇದಕ್ಕೆ ಕಾರಣವೇನೆಂದು ಪ್ರಶ್ನಿಸಿದರು.

ಸದಸ್ಯರಾದ ಶ್ರೀ ತಿಮ್ಮೇಗೌಡ ಟಿ. ಸದಸ್ಯತ್ವ ಸಂಖ್ಯೆ 13336 ರವರು ಮಾತನಾಡಿ, ಪ್ರಪಂಚದಲ್ಲಿ ಆರ್ಥಿಕ ಪರಿಸ್ಥಿತಿ ಕುಸಿಯುತ್ತಿದೆ. ಬ್ಯಾಂಕಿನಲ್ಲಿ ದಿನಾಂಕ 31.3.2021 ಕ್ಕೆ ರೂ. 452.00 ಕೋಟಿ ಠೇವಣಿಗಳನ್ನು

ಪಡೆದು ರೂ. 242.00 ಕೋಟಿ ಮಾತ್ರ ಸಾಲ ನೀಡಲಾಗಿದೆ. ಅದೇ ರೀತಿ ದಿನಾಂಕ 31.3.2022ಕ್ಕೆ ರೂ. 468.00 ಕೋಟಿ ಠೇವಣಿಗಳನ್ನು ಪಡೆದು ರೂ. 206.00 ಕೋಟಿ ಮಾತ್ರ ಸಾಲ ನೀಡಲಾಗಿದೆ ಹೀಗೆ ಸುಮಾರು ಅರ್ಧದಷ್ಟು ಹಣ ನಿಮ್ಮಲ್ಲೇ ಉಳಿಸಿಕೊಂಡರೆ ಹೇಗೆ, ಅದಕ್ಕೆ ಬಡ್ಡಿ ನೀಡುವವರು ಯಾರೆಂದು ಪ್ರಶ್ನಿಸಿ, ಲೆಂಡ್ ಮಾಡಿದರೆ ತಾನೆ ಆದಾಯ ಗಳಿಸಲು ಸಾಧ್ಯ, ಆಡಿಟ್ ವರ್ಗೀಕರಣ 'ಎ' ರಿಂದ 'ಬಿ' ಗೆ ಬಂದಿದೆ, ಎನ್.ಪಿ.ಎ. ಪ್ರಮಾಣ ಸ್ವಲ್ಪ ಪ್ರಮಾಣದಲ್ಲಿ ಕಡಿಮೆಯಾಗಿದೆ, ಪುಟ ಸಂಖ್ಯೆ 11 ರಲ್ಲಿ ಬ್ಯಾಂಕಿನ ನಿವ್ವಳ ನಷ್ಟ ರೂ. 7.89 ಕೋಟಿಗಳಿದ್ದು ಇದಕ್ಕೆ ಹೊಣೆ ಯಾರು? ಇದಕ್ಕೆ ಕಾರಣವೇನು? ನಷ್ಟವನ್ನು ಹೇಗೆ ತುಂಬಿಸುತ್ತೀರೆಂದು ಪ್ರಶ್ನಿಸಿ, ಹೆಚ್ಚಾಗಿರುವ ಠೇವಣಿಗಳನ್ನು ಲೆಂಡ್ ಮಾಡಲು ಆಗದಿದ್ದರೆ ಠೇವಣಿದಾರರಿಗೆ ಕೂಡಲೇ ಠೇವಣಿಗಳನ್ನು ಹಿಂದಿರುಗಿಸುವಂತೆ ಸಲಹೆ ನೀಡಿದರು. ಬ್ಯಾಂಕು ಬಾಂಡ್‌ಗಳಲ್ಲಿ ಮತ್ತು ಮ್ಯೂಚುಯಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿರುವ ಮೊತ್ತವೆಷ್ಟು ? ಬಂದಿರುವ ಲಾಭವೆಷ್ಟು ? ಯಾವುದಾದರೂ ಹೂಡಿಕೆಗಳು ನಷ್ಟ ಹೊಂದಿದೆಯಾ ? ಎಂದು ಪ್ರಶ್ನಿಸಿ, ಬ್ಯಾಂಕಿಗೆ ಯಾವುದೇ ರೀತಿಯಲ್ಲಿ ಧಕ್ಕೆಯಾಗದಂತೆ ಸಾಲಗಳನ್ನು ನೀಡಬೇಕೆಂದು ಸಲಹೆ ನೀಡಿ, ಪುಟ ಸಂಖ್ಯೆ 18 ರಲ್ಲಿ ಹೆಚ್ಚಿನ ಶಾಖೆಗಳು ನಷ್ಟ ಹೊಂದಿವೆ, ಹಿಂದಿನ ಸಭೆಗಳಲ್ಲಿ ಶಾಖಾ ಕಟ್ಟಡಗಳ ವಿಸ್ತೀರ್ಣವನ್ನು ಮತ್ತು ಸಿಬ್ಬಂದಿಗಳನ್ನು ಕಡಿಮೆ ಮಾಡುವ ಮೂಲಕ ಖರ್ಚುಗಳನ್ನು ಉಳಿಸಿ, ಲಾಭದ ಕಡೆಗೆ ಹೋಗಬೇಕೆಂದು ಸಲಹೆ ನೀಡಿರುವುದನ್ನು ನೆನಪಿಸಿದರು.

ಶ್ರೀ ತಿಮ್ಮೇಗೌಡ ಟಿ. ರವರ ಮಾತುಗಳಿಗೆ ಉಪಾಧ್ಯಕ್ಷರಾದ ಶ್ರೀ ಡಿ.ಆರ್. ವಿಜಯ ಸಾರಥಿಯವರು ಪ್ರತಿಕ್ರಿಯಿಸಿ, ತಾವು ಕೇಳಿರುವ ಪ್ರಶ್ನೆಗಳ ಬಗ್ಗೆ ಆಡಳಿತ ಮಂಡಲಿಯವರೂ ಸಹ ಪ್ರತಿದಿನ ಯೋಚಿಸುತ್ತಿದ್ದೇವೆ, ಎನ್.ಪಿ.ಎ. ಮೊತ್ತವನ್ನು ರೂ. 110.00 ಕೋಟಿಗಳಿಂದ ರೂ. 70.00 ಕೋಟಿಗಳಿಗೆ ಇಳಿಸಲಾಗಿದೆ. ಸುಸ್ತಿ/ಅನುತ್ಪಾದಿತ ಸಾಲ ವಸೂಲಾತಿ ಕಾರ್ಯವನ್ನು ಶೀಘ್ರವಾಗಿ ಮತ್ತು ಕಾನೂನುಬದ್ಧವಾಗಿ ಕೈಗೊಳ್ಳಲಾಗುತ್ತಿದೆ. ಸಾಲ ಖಾತೆಗಳ ಮೇಲೆ ಪ್ರತಿ ದಿನ ನಿಗಾ ವಹಿಸಲಾಗುತ್ತಿದೆ. ಬ್ಯಾಂಕಿನಲ್ಲಿ ಸಾಲ ವಸೂಲಿಗಾಗಿ **'ಕೇಂದ್ರೀಕೃತ ಸಾಲ ವಸೂಲಾತಿ ತಂಡ'** ವನ್ನು (CRT-Centralised Recovery Team) ರಚಿಸಿದ್ದು, ಅದು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆಯೆಂದು ಪ್ರಶಂಶಿಸಿ, ಬ್ಯಾಂಕಿನ ಮೇಲೆ ನಂಬಿಕೆಯಿಟ್ಟು ಠೇವಣಿಗಳನ್ನು ಮಾಡಿದ ಠೇವಣಿದಾರರಿಗೆ ಠೇವಣಿಗಳು ಬೇಡವೆಂದು ತಿಳಿಸುವ ಪರಿಪಾಠವು ಬ್ಯಾಂಕಿನಲ್ಲಿ ಮೊದಲಿನಿಂದಲೂ ಇಲ್ಲವೆಂದು ತಿಳಿಸಿ, ಬ್ಯಾಂಕಿನಲ್ಲಿ ನೀಡಿರುವ ಸಾಲಗಳು ಸುಸ್ತಿ/ಅನುತ್ಪಾದಿತ ಸಾಲವಾಗಿಲ್ಲವೆಂದು ವಿವರಿಸಿ, ಹಿಂದಿನ ಸಾಲಗಳನ್ನು ಸಹ ಯೋಧರಂತೆ ವಸೂಲಿ ಮಾಡಲಾಗುತ್ತಿದ್ದು, ಕರೋನ ಬರದಿದ್ದರೆ ಕಳೆದ ಸಾಲಿನಲ್ಲಿಯೇ ಡಿವಿಡೆಂಡ್ ಘೋಷಣೆ ಮಾಡುವ ಉದ್ದೇಶ ಹೊಂದಲಾಗಿತ್ತು, ಆದರೆ, ಅದು ಸಾಧ್ಯವಾಗಲಿಲ್ಲ, ಸಲಹೆಗಾರರಾದ ಶ್ರೀ ಬಿ.ಆರ್. ನಾಗರಾಜ ಅವರು ತಿಳಿಸಿರುವಂತೆ ಹಾಗೂ ಮುಂದಿನ ಮಾರ್ಚ್ ಅಂತ್ಯಕ್ಕೆ ಬ್ಯಾಂಕಿನ ಯೋಜನೆಯಂತೆ ಎನ್.ಪಿ.ಎ. ಅನ್ನು ನಿಗದಿತ ಪ್ರಮಾಣಕ್ಕೆ ಕಡಿಮೆ ಮಾಡಿ, ಖಂಡಿತವಾಗಿ ಮಾನ್ಯ ಸದಸ್ಯರಿಗೆ ಡಿವಿಡೆಂಡ್ ಘೋಷಿಸಲಾಗುವುದೆಂದು ತಿಳಿಸಿ, ಶಾಖೆಗಳ ಕಟ್ಟಡಗಳ ಬಾಡಿಗೆಯನ್ನು ಕಡಿತಗೊಳಿಸುವ ಸದುದ್ದೇಶದಿಂದ ಈಗಾಗಲೇ ಕಾಚರಕನಹಳ್ಳಿ ಶಾಖೆಯ ಸ್ಥಳಾಂತರಕ್ಕೆ ಆರ್.ಬಿ.ಐ. ಇಂದ ಅನುಮತಿ ಪಡೆದಿದ್ದು, ಹಾಲಿ 2000 ಚದರ ಅಡಿ ವಿಸ್ತೀರ್ಣ, ಸುಮಾರು ರೂ. 60,000–00 ಬಾಡಿಗೆ ಕಟ್ಟಡದಿಂದ 1000 ಚದರ ಅಡಿ ವಿಸ್ತೀರ್ಣವುಳ್ಳ ರೂ. 35,000–00 ಗಳ ಬಾಡಿಗೆಯ ಕಟ್ಟಡಕ್ಕೆ ಸ್ಥಳಾಂತರಿಸುತ್ತಿದ್ದು, ಈ ತಿಂಗಳು ಅಥವಾ ಮುಂದಿನ ತಿಂಗಳು ಕಾರ್ಯಾರಂಭ ಮಾಡುವುದಾಗಿ ತಿಳಿಸಿದರು.

ಸದಸ್ಯರಾದ ಶ್ರೀಮತಿ ಸುಜಾತ ಶೆಟ್ಟಿ ಸದಸ್ಯತ್ವ ಸಂಖ್ಯೆ 121966 ರವರು ಮಾತನಾಡಿ, ವಾರ್ಷಿಕ ವರದಿಯ ಪುಟ ಸಂಖ್ಯೆ 10 ರಲ್ಲಿ ಸದಸ್ಯರ ವಾಪಸ್ಸಾತಿ ಕಳೆದ ವರ್ಷ 748 ಇದ್ದು, ವರದಿ ಸಾಲಿನಲ್ಲಿ 1097 ಕ್ಕೆ

ಹೆಚ್ಚಲು ಕಾರಣ ನೀಡುವಂತೆ ಕೋರಿದರು.

ಸದಸ್ಯರಾದ ಶ್ರೀಮತಿ ರಾಧ ಸದಸ್ಯತ್ವ ಸಂಖ್ಯೆ 121742 ರವರು ಮಾತನಾಡಿ, ವಾರ್ಷಿಕ ವರದಿಯ ಪುಟ ಸಂಖ್ಯೆ 9 ರಲ್ಲಿ ರಿಸರ್ವ್ ಫಂಡ್ ಗಣನೀಯವಾಗಿ ಇನ್‌ಕ್ರೀಸ್ ಆಗಿಲ್ಲ ಏಕೆಂದು ಪ್ರಶ್ನಿಸಿದರು.

ಸದಸ್ಯರಾದ ಶ್ರೀಮತಿ ಭಾರತಿ ಎನ್. ಸದಸ್ಯತ್ವ ಸಂಖ್ಯೆ 121245 ರವರು ಮಾತನಾಡಿ, ಪುಟ ಸಂಖ್ಯೆ 18 ರಲ್ಲಿ 9 ಶಾಖೆಗಳಲ್ಲಿ ಕೇವಲ 4 ಶಾಖೆಗಳು ಮಾತ್ರ ಅಲ್ಪ ಪ್ರಮಾಣದ ಲಾಭ ಗಳಿಸಿದ್ದು, ಉಳಿದವು ನಷ್ಟ ಹೊಂದಲು ಕಾರಣವೇನು ಹಾಗೂ ಪುಟ ಸಂಖ್ಯೆ 19 ರಲ್ಲಿ ಸಿಬಿಎಸ್ ಟೆಕ್ನಾಲಜಿಯ ಅಳವಡಿಕೆ ಬಗ್ಗೆ ತಿಳಿಸಲಾಗಿದೆ. ಇದು ಪೂರ್ಣ ಪ್ರಮಾಣವೇ ಅಥವಾ ಭಾಗಶಃ ಅಳವಡಿಕೆಯೇ ತಿಳಿಸಬೇಕೆಂದರು.

ಸದಸ್ಯರಾದ ಶ್ರೀಮತಿ ಸವಿತ ಸದಸ್ಯತ್ವ ಸಂಖ್ಯೆ 120866 ರವರು ಮಾತನಾಡಿ, ವಾರ್ಷಿಕ ವರದಿಯ ಪುಟ ಸಂಖ್ಯೆ 10 ರಲ್ಲಿ ಷೇರು ಬಂಡವಾಳ ಸುಮಾರು ರೂ. 1.00 ಕೋಟಿಗಳಷ್ಟು ಕಡಿಮೆಯಾಗಲು ಕಾರಣ ತಿಳಿಸುವಂತೆ ಕೇಳಿದರು.

ಸದಸ್ಯರಾದ ಶ್ರೀ ಪ್ರಮೋದ್ ಹೆಚ್. ಸದಸ್ಯತ್ವ ಸಂಖ್ಯೆ 19976 ರವರು ಮಾತನಾಡಿ, ವಾರ್ಷಿಕ ವರದಿ ಪುಟ ಸಂಖ್ಯೆ 24 ರಲ್ಲಿ ನಾಲ್ಕು ನಿರ್ದೇಶಕರುಗಳ ಸಾಲಗಳನ್ನು ಹಾಗೆ ಮುಂದುವರಿಸಿಕೊಂಡು ಬರಲಾಗುತ್ತಿದೆ. ಅವರು ಪಾವತಿಸಲು ಆಗುತ್ತಿಲ್ಲವೇ? ಎಂದು ಪ್ರಶ್ನಿಸಿ, ಹೆಚ್ಚಿನ ಶಾಖಾ ವ್ಯವಸ್ಥಾಪಕರುಗಳು ಇನ್ನೂ ಪ್ರಭಾರದಲ್ಲಿದ್ದು ಅವರುಗಳನ್ನು ಖಾಯಂಗೊಳಿಸುವುದು ಯಾವಾಗ? ಮತ್ತು ಎಲ್ಲಾ ಸದಸ್ಯರಿಗೆ ಡಿವಿಡೆಂಡ್ ನೀಡಲು ಅಗತ್ಯ ಕ್ರಮವಿಡುವಂತೆ ಸಲಹೆ ನೀಡಿದರು.

ಶ್ರೀ ಪ್ರಮೋದ್ ಹೆಚ್. ರವರ ಮಾತುಗಳಿಗೆ ಉಪಾಧ್ಯಕ್ಷರಾದ ಶ್ರೀ ಡಿ.ಆರ್. ವಿಜಯಸಾರಥಿಯವರು ಪ್ರತಿಕ್ರಿಯಿಸಿ, ಸದರಿ ನಿರ್ದೇಶಕರುಗಳು ಚುನಾವಣೆಗೆ ನಿಂತು ನಿರ್ದೇಶಕರಾಗುವ ಮೊದಲೇ ಸಾಲಗಳನ್ನು ಪಡೆದಿದ್ದು, ಯಾವುದೇ ಸುಸ್ತಿ ಇರುವುದಿಲ್ಲ, ಸದಸ್ಯರೊಬ್ಬರು ಹಿಂದಿನ ಮಹಾಸಭೆಯಲ್ಲಿ ನಿರ್ದೇಶಕರ ಸಾಲಗಳ ಬಗ್ಗೆ ಪ್ರಸ್ತಾಪಿಸಿದ ಮೇರೆಗೆ ನಿರ್ದೇಶಕರಾದ ಶ್ರೀಮತಿ ಅನ್ನಪೂರ್ಣಮ್ಮ ರವರು ಪಡೆದಿದ್ದ ರೂ. 45.00 ಲಕ್ಷಗಳ ಸಾಲದಲ್ಲಿ ಹೊರಬಾಕಿ ಇದ್ದ ರೂ. 40.00 ಲಕ್ಷಗಳನ್ನು ಪೂರ್ಣವಾಗಿ ಚುಕ್ತ ಮಾಡಿದ್ದರಿಂದ ಬ್ಯಾಂಕಿಗೆ ರೂ. 40.00 ಲಕ್ಷಗಳಿಗೆ ಬರುತ್ತಿದ್ದ ಬಡ್ಡಿ ಆದಾಯ ಕಡಿಮೆಯಾಯಿತೆಂದು ವಿವರಿಸಿ, ಹಾಲಿ ಎಲ್ಲ ನಿರ್ದೇಶಕರುಗಳ ಸಾಲದಲ್ಲಿ ಬಾಕಿ ಉಳಿದಿರುವುದು ಕೇವಲ ರೂ. 6.00 ಲಕ್ಷಗಳು ಮಾತ್ರವೆಂದು ತಿಳಿಸಿದರು. ವ್ಯವಸ್ಥಾಪಕರುಗಳನ್ನು ಖಾಯಂಗೊಳಿಸುವ ಬಗ್ಗೆ ಸಂಬಂಧಿಸಿದ ಪ್ರಸ್ತಾವನೆಯು ಇಲಾಖೆಯಲ್ಲಿ ಬಾಕಿ ಉಳಿದಿದ್ದು, ಅದು ಬಂದ ಕೂಡಲೇ ಈ ಬಗ್ಗೆ ಸೂಕ್ತ ಕ್ರಮವಿಡುವುದಾಗಿ ತಿಳಿಸಿ, ಸದಸ್ಯರಿಗೆ ಡಿವಿಡೆಂಡ್ ನೀಡಲೇಬೇಕೆಂಬುದು ನಮ್ಮೆಲ್ಲರ ಗುರಿಯಾಗಿದೆಯೆಂದರು.

ಸಲಹೆಗಾರರಾದ ಶ್ರೀ ಬಿ.ಆರ್. ನಾಗರಾಜರವರು ಇತರೆ ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸುತ್ತಾ, ಬ್ಯಾಂಕು ಪ್ರಸ್ತಾವನೆಯಲ್ಲಿ ಸಲ್ಲಿಸಿದ್ದ ಶಾಸನಬದ್ಧ ಲೆಕ್ಕ ಪರಿಶೋಧಕರಾದ ಮೆ॥ ಸಿ.ಎಸ್.ಎಂ.ಆರ್. ಅಂಡ್ ಅಸೋಸಿಯೇಟ್ ರವರನ್ನೇ ಬ್ಯಾಂಕಿನ 2022–2023ನೇ ಸಾಲಿಗೆ ಲೆಕ್ಕ ಪರಿಶೋಧಕರನ್ನಾಗಿ ನೇಮಿಸಿಕೊಳ್ಳಲು ಆರ್.ಬಿ.ಐ. ಅನುಮತಿ ನೀಡಿದ್ದು, ಅನುಮತಿ ಪತ್ರವು ದಿನಾಂಕ 20.09.2022 ರಂದು ಬಂದಿದೆಯೆಂದರು.

ಠೇವಣಿಗಳು ರೂ. 452.00 ಕೋಟಿಗಳಿಂದ ರೂ. 468.00 ಕೋಟಿಗಳಿಗೆ ಏರಿಕೆಯಾಗಿದೆ, ಬ್ಯಾಂಕು ಠೇವಣಿಗಳ ಮೇಲಿನ ಬಡ್ಡಿದರವನ್ನು ಹಲವು ಸಲ ಪರಾಮರ್ಶಿಸಿದ್ದರೂ ಸಹ ಸದಸ್ಯರು/ಗ್ರಾಹಕರು ಬ್ಯಾಂಕಿನ ಮೇಲೆ ನಂಬಿಕೆಯಿಟ್ಟು ಠೇವಣಿಗಳನ್ನು ಮಾಡುತ್ತಿದ್ದಾರೆ. ಒಂದು ವೇಳೆ ಠೇವಣಿಗಳನ್ನು ವಾಪಸ್ಸು ಪಡೆಯಲು ಸೂಚಿಸಿದರೆ ಅದು ಅನುಮಾನಕ್ಕೆ ಕಾರಣವಾಗಿ ಬ್ಯಾಂಕಿನ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ.

ಕೋವಿಡ್–19ರ ಪರಿಣಾಮವಾಗಿ ಜನತೆಗೆ ಬಾಡಿಗೆ ವರಮಾನಗಳಿಲ್ಲ, ಸಂಬಳಗಳು ಸರಿಯಾಗಿ ಇಲ್ಲದ ಕಾರಣ ಜನರೂ ಸಹ ಸಾಲಗಳನ್ನು ಪಡೆಯಲು ಹಿಂಜರಿಯುತ್ತಿದ್ದಾರೆ. ನಾವು ಸಹ ನೀಡುವ ಸಾಲಗಳು ಸುಸ್ತಿಯಾಗಿ ಅನುತ್ಪಾದಿತ ಸಾಲಗಳಾಗುವುದು ಬೇಡವೆಂಬ ಉದ್ದೇಶದಿಂದ ಅಗ್ರೆಸೀವ್ ಆಗಿ ಅಂದರೆ, ಆಕ್ರಮಣಕಾರಿ/ಉತ್ಸಾಹದಿಂದ ಸಾಲಗಳನ್ನು ನೀಡುತ್ತಿಲ್ಲವೆಂದು ವಿವರಿಸಿ, ಬ್ಯಾಂಕಿನಲ್ಲಿ ದಿನಾಂಕ 15.06.2022 ರಿಂದ 31.08.2022 ರವರೆಗೆ ಶೂನ್ಯ ಸಂಸ್ಕರಣಾ ಶುಲ್ಕದೊಂದಿಗೆ **'ಸಾಲಮೇಳ'** ವನ್ನು ಆಯೋಜಿಸಲಾಗಿದ್ದು, ಈ ಅವಧಿಯಲ್ಲಿ 75 ಜನರಿಂದ ಸುಮಾರು ರೂ. 44.00 ಕೋಟಿಗಳಷ್ಟು ಸಾಲಕ್ಕೆ ವಿಚಾರಣೆ ನಡೆಸಿದ್ದು, 51 ಜನರಿಗೆ ಅಂದಾಜು ರೂ. 23.00 ಕೋಟಿಗಳ ಸಾಲ ಮಂಜೂರು ಮಾಡಿದ್ದು, ಆರ್.ಬಿ.ಐ. ಸಹ ದೊಡ್ಡ ದೊಡ್ಡ ಸಾಲಗಳನ್ನು ನೀಡಬಾರದೆಂದು ಸೂಚಿಸಿದೆ ಹಾಗೂ SAF ಇರುವುದರಿಂದ ಪರ್ಸನಲ್ ಲೋನ್‌ಗಳನ್ನು ಸಹ ನೀಡುತ್ತಿಲ್ಲ ಈ ಎಲ್ಲಾ ಕಾರಣಗಳಿಂದಾಗಿ ಸಾಲ ಮತ್ತು ಮುಂಗಡಗಳ ಮೊತ್ತ ಕಡಿಮೆಯಾಗಿದೆ. ಮಾರುಕಟ್ಟೆ ಸಹ ಈಗ ಬೆಳವಣಿಗೆಯತ್ತ ಸಾಗುತ್ತಿದೆ. ತಮಗೆಲ್ಲಾ ತಿಳಿದಂತೆ ಒಂದೆರಡು ದಿನಗಳಲ್ಲಿ ಹಿಂದೆ ಅಮೇರಿಕಾದ ಬ್ಯಾಂಕ್ ಆಫ್ ಅಮೇರಿಕಾ ಬಡ್ಡಿ ದರವನ್ನು ಪರಿಷ್ಕರಣೆ ಮಾಡಿದ ಕೂಡಲೇ ಎಲ್ಲಾ ಬ್ಯಾಲೆನ್ಸ್‌ಶೀಟ್ ಗಳು ಬದಲಾವಣೆಯಾಗಿವೆ, ಡಾಲರ್ ಬೆಲೆ ಸುಮಾರು ರೂ. 80.00 ಕ್ಕೆ ಏರಿದೆ, ಆದ್ದರಿಂದ ಬ್ಯಾಂಕು ಸಾಲಗಳನ್ನು ಅಗ್ರೆಸೀವ್ ಆಗಿ ನೀಡದೆ ಅರ್ಹತೆಯಿದ್ದ ಪ್ರಸ್ತಾವನೆಗಳಿಗೆ ಮಾತ್ರ ಸಾಲಗಳನ್ನು ನೀಡಲಾಗುತ್ತಿದೆಯೆಂದು ವಿವರಿಸಿದರು.

ಬ್ಯಾಂಕಿನ ವ್ಯವಹಾರಿಕ ಲಾಭ ರೂ. 1.42 ಕೋಟಿಗಳಿದ್ದು, ಆರ್.ಬಿ.ಐ. ನಿರ್ದೇಶನದಂತೆ ಎನ್.ಪಿ.ಎ. ಖಾತೆಗಳಿಗೆ ಶೇ. 100 ರಷ್ಟು ಕಾದಿರಿಸಬೇಕಾದ ಕಾರಣದಿಂದಾಗಿನ ಸುಮಾರು ರೂ. 7.00 ಕೋಟಿಗಳಷ್ಟು ಕಾದಿರಿಸಲಾಯಿತು. ಜೊತೆಗೆ ನಮ್ಮ ಬ್ಯಾಂಕು ರೂ. 10.00 ಕೋಟಿಗಳ ನಿಶ್ಚಿತ ಠೇವಣಿಯನ್ನು ಹೂಡಿದ್ದ PMC ಬ್ಯಾಂಕು ತೊಂದರೆಗೊಳಗಾದ ಕಾರಣ ಇದಕ್ಕೂ ಸಹ ಆರ್.ಬಿ.ಐ. ಸೂಚನೆಯಂತೆ ಪ್ರತಿ ವರ್ಷ ಶೇ. 20 ರಷ್ಟು ಅಂದರೆ ರೂ. 2.00 ಕೋಟಿ ಕಾದಿರಿಸಿರುವುದರ ಜೊತೆಗೆ ಬರಬೇಕಾದ ಬಡ್ಡಿ ರೂ. 1.00 ಕೋಟಿ ಬಂದಿರುವುದಿಲ್ಲ ಹೀಗೆ ಒಟ್ಟು ರೂ. 10.00 ಕೋಟಿಗಳ ಲಾಭದಲ್ಲಿ, ನಿವ್ವಳ ರೂ. 8.00 ಕೋಟಿಗಳ ಲಾಭ ಗಳಿಸಬಹುದಾಗಿತ್ತಾದರೂ ಅನುತ್ಪಾದಿತ ಸಾಲಗಳು ಮತ್ತು ಅನುತ್ಪಾದಿತ ಹೂಡಿಕೆಗಳಿಗೆ ಆರ್.ಬಿ.ಐ. ನಿರ್ದೇಶನದಂತೆ ಹೆಚ್ಚಿನ ಮೊತ್ತವನ್ನು ಕಾದಿರಿಸಿದ ಕಾರಣ ಬ್ಯಾಂಕು ಮೊದಲ ಬಾರಿಗೆ ನಿವ್ವಳ ರೂ. 7.89 ಕೋಟಿಗಳ ನಷ್ಟವನ್ನು ಹೊಂದಿದ್ದು, ಇದು ಮುಂದಿನ ಸಾಲಿನಲ್ಲಿ ಮರುಕಳಿಸದೆ ಲಾಭ ಗಳಿಸುವ ಮೂಲಕ ಡಿವಿಡೆಂಡ್ ನೀಡಲಾಗುತ್ತದೆಯೆಂದು ತಿಳಿಸಿ, ಸಾಲ ವಸೂಲಾತಿಯ ಬಗ್ಗೆ ಪ್ರತಿ 15 ದಿನಗಳಿಗೊಮ್ಮೆ ಸಭೆಗಳನ್ನು ನಡೆಸಲಾಗುತ್ತಿದೆ. ಯಾವುದೇ ಒತ್ತಡಗಳಿಗೆ ಒಳಗಾಗದೆ, ಈ ತಿಂಗಳಿಲ್ಲಿಯೇ ಪ್ರಭಾವಿ ವ್ಯಕ್ತಿಗಳಿಗೆ ಸೇರಿದಂತೆ ಸುಮಾರು 9 ಸ್ಥಿರಾಸ್ತಿಗಳನ್ನು ನ್ಯಾಯಾಲಯದ ಆದೇಶದಂತೆ ಬ್ಯಾಂಕು ಭೌತಿಕವಾಗಿ ವಶಕ್ಕೆ ಪಡೆದು ಹರಾಜು ನಡೆಸಿದರೂ ಸಹ ಬಹಿರಂಗ ಹರಾಜಿನಲ್ಲಿ ಯಾವುದೇ ಬಿಡ್‌ದಾರರು ಭಾಗವಹಿಸುತ್ತಿಲ್ಲವೆಂದು ತಿಳಿಸಿ, ಬ್ಯಾಂಕು ಆರ್.ಬಿ.ಐ. ನಿರ್ದೇಶನದಂತೆಯೇ ಹೂಡಿಕೆಗಳನ್ನು ಮಾಡಬೇಕಾಗಿದ್ದು, ಅದೇ ರೀತಿ ಹೂಡಿಕೆಗಳನ್ನು ಮಾಡಲಾಗಿದೆ. ಈ ಹೂಡಿಕೆಗಳ ಮೇಲೆ ವಾರ್ಷಿಕವಾಗಿ ಸುಮಾರು ಶೇಕಡ 6.5 ರಿಂದ ಶೇಕಡ 7 ರವರೆಗೆ ಆದಾಯ ಗಳಿಸಲಾಗುತ್ತಿದ್ದು, ಸದರಿ ಸಾಲಿನಲ್ಲಿ ಹೂಡಿಕೆ ಮಾಡಿರುವ ಯಾವುದೇ ಹೂಡಿಕೆಗಳು ನಷ್ಟ ಹೊಂದಿಲ್ಲವೆಂದು ವಿವರಿಸಿ, ಸಾಲಗಳನ್ನು ನೀಡಿ ಹೆಚ್ಚು ಆದಾಯ ಗಳಿಸಬಹುದು, ಹೌಸಿಂಗ್ ಲೋನ್‌ಗೆ ಶೇ. 8.5 ಗೋಲ್ಡ್ ಲೋನ್‌ಗೆ ಶೇ. 8 ರಂತೆ 22 ಕ್ಯಾರೆಟ್‌ಗೆ ರೂ. 3200–00 ರಂತೆ ಸಾಲ ನೀಡಲಾಗುತ್ತಿದೆ. ಬ್ಯಾಂಕಿನಲ್ಲಿ ಅತಿ ಕಡಿಮೆ ಬಡ್ಡಿ ದರ ವಿಧಿಸುತ್ತಿದ್ದು, ಈ ಬಗ್ಗೆ ಪೇಪರ್ ಟಿ.ವಿ. ಗಳಲ್ಲಿ ಪ್ರಚಾರ ಮಾಡಲಾಗಿದ್ದು, ಬ್ಯಾಂಕಿನಲ್ಲಿ ಸುಮಾರು 37000 ಸದಸ್ಯರಿದ್ದರೂ ಸಹ ಸಾಲಸೌಲಭ್ಯಗಳನ್ನು ಪಡೆಯಲು ಯಾರೂ ಮುಂದೆ ಬರುತ್ತಿಲ್ಲ. ಆದ್ದರಿಂದ ಹೆಚ್ಚಿನ ಸದಸ್ಯರು ನಮ್ಮ ಬ್ಯಾಂಕಿನಲ್ಲಿಯೇ ಸಾಲ ಸೌಲಭ್ಯಗಳನ್ನು ಪಡೆಯುವ ಮೂಲಕ ಮತ್ತು ಅಗತ್ಯವಿರುವ

ಇತರೆ ಸದಸ್ಯರಿಗೂ ಸಾಲಗಳನ್ನು ಪಡೆಯುವಂತೆ ತಿಳಿಸುವ ಮೂಲಕ ಬ್ಯಾಂಕಿನ ಸಾಲ ಮತ್ತು ಮುಂಗಡಗಳನ್ನು ಹೆಚ್ಚಿಸುವಂತೆ ಕೋರಿದರು.

ಸದಸ್ಯತ್ವ ವಾಪಸ್ಸಾತಿಯಲ್ಲಿ ಹೆಚ್ಚಿನ ಸದಸ್ಯರು ಕೋವಿಡ್‌ನಿಂದ ಮೃತರಾಗಿರುತ್ತಾರೆ. ಬ್ಯಾಂಕಿನ ಗಮನಕ್ಕೆ ಬಂದಿರುವ 195 ಸದಸ್ಯರ ಪಟ್ಟಿಯನ್ನು ಮಾತ್ರ ಪಟ್ಟಿಯಲ್ಲಿ ನಮೂದಿಸಲಾಗಿದ್ದು, ಇತರೆ 70–80 ವರ್ಷ ವಯಸ್ಸಾಗಿರುವವರು ಸಹ ನಿಧನರಾಗಿರುತ್ತಾರೆ. ಜೊತೆಗೆ ಸಾಲ ಚುಕ್ತವಾದ ಸದಸ್ಯರುಗಳು ಸಹ ತಮ್ಮ ಸದಸ್ಯತ್ವವನ್ನು ರದ್ದುಪಡಿಸಿರುವ ಕಾರಣ ಸದಸ್ಯತ್ವ ಕಡಿಮೆಯಾಗಿದೆ. ಪುಟ ಸಂಖ್ಯೆ 9 ರಲ್ಲಿ ಸಾಲ ಮತ್ತು ಮುಂಗಡಗಳು ಸುಮಾರು ರೂ. 35.00 ಕೋಟಿಗಳಷ್ಟು ಕಡಿಮೆಯಾಗಿರುವುದರಿಂದ ಆ ಸಾಲಗಳನ್ನು ಪಡೆದಿರುವ ಸದಸ್ಯರು ಸದಸ್ಯತ್ವ ರದ್ದುಪಡಿಸಿರುವ ಕಾರಣ ವಾಪಸ್ಸಾತಿ ಹೆಚ್ಚಿದೆ ಮತ್ತು ಷೇರು ಬಂಡವಾಳವೂ ಸಹ ಕಡಿಮೆಯಾಗಲು ಕಾರಣವಾಗಿದೆಯೆಂದು ವಿವರಿಸಿದರು.

ಬ್ಯಾಂಕು ಗಳಿಸಿದ ಲಾಭದಲ್ಲಿ ಶೇಕಡ 25 ಕ್ಕೆ ಕಡಿಮೆ ಇಲ್ಲದಂತೆ ರಿಸರ್ವ್ ಫಂಡ್‌ಗೆ ವರ್ಗಾಯಿಸಲಾಗುತ್ತದೆ. 2020–2021ನೇ ಸಾಲಿನಲ್ಲಿ ಕೇವಲ ರೂ. 22.38 ಲಕ್ಷಗಳ ಲಾಭ ಗಳಿಸದ ಕಾರಣ ರಿಸರ್ವ್ ಫಂಡ್‌ಗೆ ರೂ. 5.60 ಲಕ್ಷ ತೆಗೆದಿರಿಸಲಾಗಿದ್ದು, ವರದಿ ಸಾಲಿನಲ್ಲಿ ಬ್ಯಾಂಕು ಲಾಭ ಗಳಿಸದಿರುವ ಕಾರಣ ಯಾವುದೇ ಮೊತ್ತವನ್ನು ರಿಸರ್ವ್ ಫಂಡ್‌ಗೆ ವರ್ಗಾಯಿಸದೇ ಇರುವ ಕಾರಣ ಇನ್ಕ್ರೀಸ್ ಆಗಿಲ್ಲವೆಂದರು.

ಬ್ಯಾಂಕಿನಲ್ಲಿ ಎನ್.ಪಿ.ಎ. ಪ್ರಮಾಣ ಹೆಚ್ಚಾಗಿ, ಆರ್.ಬಿ.ಐ. ನಿರ್ದೇಶನದಂತೆ ಕಾದಿರಿಸಬೇಕಾದ ಮೊತ್ತ ಶೇ.30 ರಿಂದ ಶೇ.100ಕ್ಕೆ ಏರಿಕೆಯಾದ ಕಾರಣ ಶಾಖೆಗಳು ನಷ್ಟ ಹೊಂದಲು ಮುಖ್ಯ ಕಾರಣವೆಂದು ತಿಳಿಸಿ,ಹಾಲಿ ಸಿ.ಬಿ.ಎಸ್. ವ್ಯವಸ್ಥೆಯನ್ನು ಆರ್.ಬಿ.ಐ. ಸಮ್ಮತಿಸಿದ್ದ IFTAS ಸಂಸ್ಥೆಯವರಿಂದ ಪಡೆದು ಕಾರ್ಯ ನಿರ್ವಹಿಸಲಾಗುತ್ತಿದೆ. ಆದರೆ ಸದರಿ IFTAS ಸಂಸ್ಥೆಯವರು ಸಂಸ್ಥೆಯನ್ನು ಮುಕ್ತಾಯ ಮಾಡುತ್ತಿರುವುದರಿಂದ ಅವರ ಸೇವೆಯನ್ನು ನಿಲ್ಲಿಸುವುದಾಗಿ ಸೂಚಿಸಿದ ಮೇರೆಗೆ, ಬ್ಯಾಂಕು ಹೊಸ ಸಾಫ್ಟ್‌ವೇರ್ ಅಳವಡಿಸುವ ಸಲುವಾಗಿ KTPP Act (Karnataka Transparency in Public Procurement Act) ಅನ್ವಯ ದಿನಪತ್ರಿಕೆಯಲ್ಲಿ ಟೆಂಡರ್ ಕರೆಯಲಾಗಿದ್ದು. ಟೆಂಡರ್‌ನಲ್ಲಿ 11 ಸಂಸ್ಥೆಗಳು ಭಾಗವಹಿಸಿದ್ದವು. ಅವುಗಳಲ್ಲಿ ಅರ್ಹರಿದ್ದ 8 ಸಂಸ್ಥೆಗಳ ಎಲ್ಲಾ ಅಂಶಗಳನ್ನು ಪರಿಶೀಲಿಸಿದ ನಂತರ ಅಂತಿಮವಾಗಿ ಬಾಂಬೆ ಮೂಲದ ಮೆ: ಸರಸ್ವತ್ ಇನ್‌ಫೋಟೆಕ್ ಪ್ರೈ ಲಿ., ರವರಿಂದ ಸ್ವಿಫ್ಟ್‌ಕೋರ್ ಸಾಫ್ಟ್‌ವೇರ್ ಕಳೆದ ತಿಂಗಳ 28ರಂದು (28–08–2022) ಮೈಗ್ರೇಷನ್ ಆಗಿ ಅನುಷ್ಠಾನಗೊಳಿಸಲಾಗಿದೆ. ಕೆಲವೊಂದು ಸಮಸ್ಯೆಗಳನ್ನು ಪರಿಹರಿಸಿಕೊಂಡು, RTGS/NEFT, ATM ಒಳಗೊಂಡಂತೆ ಪೂರ್ಣ ಪ್ರಮಾಣದ ಸೇವೆಗಳನ್ನು ನೀಡಲಾಗುವುದೆಂದು ವಿವರಿಸಿದರು.

ವರದಿ ಸಾಲಿನಲ್ಲಿ ಸುಮಾರು ರೂ.35.00 ಕೋಟಿಗಳಷ್ಟು ಸಾಲ ಚುಕ್ತವಾಗಿದ್ದು, ಶೇ.2ರಂತೆ ಅಂದರೂ ಸುಮಾರು ರೂ.70.00 ಲಕ್ಷ ಷೇರು ಹಣವನ್ನು ವಾಪಸ್ಸು ನೀಡಿರುವುದರ ಜೊತೆಗೆ ಹೆಚ್ಚಿನ ಪ್ರಮಾಣದಲ್ಲಿ ಸದಸ್ಯರು ನಿಧನ ಹೊಂದಿರುವುದರಿಂದ ಅವರ ಷೇರು ಹಣವನ್ನು ಸಹ ವಾಪಸ್ಸು ನೀಡಲಾಗಿದೆ ಜೊತೆಗೆ ಹೊಸ ಸಾಲ ಮತ್ತು ಮುಂಗಡಗಳನ್ನು ವಿತರಿಸದೆ ಇರುವುದು ಸಹ ಷೇರು ಬಂಡವಾಳವು ಕಡಿಮೆಯಾಗಲು ಕಾರಣವೆಂದು ತಿಳಿಸಿದರು.

ಸದಸ್ಯರುಗಳ ಪ್ರಶ್ನೆಗಳಿಗೆ ನಿವೃತ್ತ ಪ್ರಧಾನ ವ್ಯವಸ್ಥಾಪಕರು ಮತ್ತು ಹಾಲಿ ಬ್ಯಾಂಕಿನ ಸಲಹೆಗಾರರಾಗಿರುವ ಶ್ರೀ ಬಿ.ಆರ್.ನಾಗರಾಜ ರವರು ಸಮರ್ಪಕವಾಗಿ ಉತ್ತರಿಸಿದ್ದು, 2021–2022ನೇ ಸಾಲಿನ ಆಡಳಿತ ಮಂಡಲಿಯ ವಾರ್ಷಿಕ ವರದಿಯನ್ನು ಅಂಗೀಕರಿಸಬಹುದು ಮತ್ತು ಮುಂದಿನ ವರ್ಷದ ಕಾರ್ಯ ಯೋಜನೆಗೆ ಅನುಮೋದನೆ ನೀಡಬಹುದೆಂದು ಸದಸ್ಯರಾದ ಶ್ರೀ ಲೋಹಿತ್.ಜಿ. ಸದಸ್ಯತ್ವ ಸಂಖ್ಯೆ

120870 ರವರು ಸೂಚಿಸಿದಾಗ ಇದನ್ನು ಮತ್ತೊಬ್ಬ ಸದಸ್ಯರಾದ ಶ್ರೀಮತಿ ಸುಮ.ಪಿ. ಸದಸ್ಯತ್ವ ಸಂಖ್ಯೆ 120865 ರವರು ಅನುಮೋದಿಸಿದ ಮೇರೆಗೆ ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**7) 2021-2022ನೇ ಸಾಲಿನ ಪರಿಶೋಧಿಸಲ್ಪಟ್ಟ ಲೆಕ್ಕ ಪತ್ರಗಳನ್ನು ಮತ್ತು ಲೆಕ್ಕಪರಿಶೋಧಕರ ವರದಿಯನ್ನು ಆಡಳಿತ ಮಂಡಲಿಯ ಅನುಪಾಲನಾ ವರದಿಯೊಂದಿಗೆ ಪರಿಶೀಲಿಸಿ ಅಂಗೀಕರಿಸುವುದು:**

ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರು (ಪ್ರಭಾರ) ಸಭೆಯಲ್ಲಿ ವಿಷಯವನ್ನು ಮಂಡಿಸುತ್ತಾ, ವಾರ್ಷಿಕ ವರದಿ ಪುಸ್ತಕದ ಪುಟ ಸಂಖ್ಯೆ 29 ರಿಂದ 59 ರವರೆಗೆ ಪರಿಶೋಧಿಸಲ್ಪಟ್ಟ ಲೆಕ್ಕ ಪತ್ರಗಳನ್ನು ಮತ್ತು ಪ್ರತ್ಯೇಕವಾದ ಬಿಳಿ ಹೊದಿಕೆಯ ಪುಸ್ತಕದಲ್ಲಿ ಪುಟ ಸಂಖ್ಯೆ 39 ರಿಂದ 144 ರವರೆಗೆ ಲೆಕ್ಕ ಪರಿಶೋಧನಾ ವರದಿಯೊಂದಿಗೆ ಅನುಪಾಲನಾ ವರದಿಯನ್ನು ಮುದ್ರಿಸಲಾಗಿದ್ದು, ಸನ್ಮಾನ್ಯ ಸದಸ್ಯರುಗಳು ಇವುಗಳನ್ನು ಪರಿಶೀಲಿಸಿ ಅಂಗೀಕರಿಸಬೇಕಾಗಿ ಕೋರಿ ವರದಿಯನ್ನು ಓದಲು ಮುಂದಾದರು ಆಗ ಸದಸ್ಯರಾದ ಶ್ರೀಮತಿ ಭಾರತಿ.ಎನ್. ಸದಸ್ಯತ್ವ ಸಂಖ್ಯೆ 121245 ರವರು ಮಾತನಾಡಿ, ಮುದ್ರಿತ ಲೆಕ್ಕ ಪತ್ರಗಳು ಎಲ್ಲರ ಬಳಿ ಇರುವುದರಿಂದ ಓದುವುದು ಬೇಡ ಚರ್ಚೆಗೆ ತೆಗೆದುಕೊಳ್ಳುವಂತೆ ಸೂಚಿಸಿದರು.

ಶ್ರೀಮತಿ ಸುಮ.ಪಿ. ಸದಸ್ಯತ್ವ ಸಂಖ್ಯೆ 120865 ರವರು ಮಾತನಾಡಿ, ವಾರ್ಷಿಕ ವರದಿಯ ಪುಟ ಸಂಖ್ಯೆ 30 ರಿಂದ 33 ರವರೆಗೆ ನೀಡಿರುವ ಆಸ್ತಿ-ಜವಾಬ್ದಾರಿ ತ:ಖ್ತೆ ಮತ್ತು ಲಾಭ-ನಷ್ಟದ ತ:ಖ್ತೆಗಳ ನಮೂನೆಯಲ್ಲಿ ಬದಲಾವಣೆಯಾಗಿದೆ ಏಕೆಂದು ಪ್ರಶ್ನಿಸಿದರು.

ಸದಸ್ಯರುಗಳಾದ ಶ್ರೀ ತಿಮ್ಮೇಗೌಡ.ಟಿ ಸದಸ್ಯತ್ವ ಸಂಖ್ಯೆ 13336 ಮತ್ತು ಶ್ರೀ ಪ್ರಮೋದ್.ಹೆಚ್. ಸದಸ್ಯತ್ವ ಸಂಖ್ಯೆ 19976 ರವರುಗಳು ಮಾತನಾಡಿ, ಈಗಾಗಲೇ ಬ್ಯಾಂಕಿನ ಅಂಕಿಅಂಶಗಳನ್ನು ವಾರ್ಷಿಕ ವರದಿಯಲ್ಲಿಯೇ ಚರ್ಚಿಸಲಾಗಿರುವುದರಿಂದ ಮುಂದಿನ ವಿಷಯಕ್ಕೆ ಹೋಗಬಹುದೆಂದು ಸಲಹೆ ನೀಡಿದರು. ನಂತರ ಶ್ರೀ ತಿಮ್ಮೇಗೌಡ.ಟಿ ಸದಸ್ಯತ್ವ ಸಂಖ್ಯೆ 13336 ರವರು ಮಾತನ್ನು ಮುಂದುವರಿಸಿ ಪುಟ ಸಂಖ್ಯೆ 32 ರಲ್ಲಿರುವ ಲಾಭ-ನಷ್ಟ ತ:ಖ್ತೆಯಲ್ಲಿ ಮೈನಸ್ ಅಂಕಿಗಳು ಇದ್ದು, ಮುಂದೆ ಇದು ಬರಬಾರದೆಂಬುದು ನಮ್ಮೆಲ್ಲರ ಅಭಿಲಾಷೆಯಾಗಿದ್ದು, ಒಟ್ಟಾರೆ ಎನ್.ಪಿ.ಎ. ತಗ್ಗಿಸಬೇಕು, ಸದಸ್ಯರಿಗೆ ಡಿವಿಡೆಂಡ್ ನೀಡಬೇಕೆಂದು ಸಲಹೆ ನೀಡಿ, ಹಿಂದಿನ ಭೌತಿಕ ಮಹಾಸಭೆಯಲ್ಲಿ ಕೆಲವು ಸೆಲೆಕ್ಟೆಡ್ ಸದಸ್ಯರುಗಳನ್ನು ಆಡಳಿತ ಕಚೇರಿಗೆ ಕರೆದು ಬ್ಯಾಂಕಿನ ಆಗುಹೋಗುಗಳ ಬಗ್ಗೆ ಚರ್ಚಿಸುವುದಾಗಿ ತಿಳಿಸಿದ್ದಿರಿ ಆದರೆ ಅದು ಇನ್ನೂ ಕಾರ್ಯಗತವಾಗಿಲ್ಲವೆಂದು ಪ್ರಶ್ನಿಸಿದರು.

ಸದಸ್ಯರ ಪ್ರಶ್ನೆಗಳಿಗೆ ಶ್ರೀ ಬಿ.ಆರ್.ನಾಗರಾಜ ಅವರು ಉತ್ತರಿಸುತ್ತಾ, ಆಸ್ತಿ-ಜವಾಬ್ದಾರಿ ತ:ಖ್ತೆ ಮತ್ತು ಲಾಭ-ನಷ್ಟದ ತ:ಖ್ತೆಗಳನ್ನು ಹಿಂದಿನ ಸಾಲಿನವರೆವಿಗೂ ಸವಿಸ್ತಾರವಾಗಿ ಎಲ್ಲಾ ಅಂಕಿಅಂಶಗಳನ್ನು ಒಳಗೊಂಡಂತೆ ನೀಡಲಾಗುತ್ತಿದ್ದು, ಈಗ ಆರ್.ಬಿ.ಐ. ಸೂಚನೆಯಂತೆ ಫಾರಂ "ಎ" 3ನೇ ಷಡ್ಯೂಲ್ ನಂತೆಯೇ ನೀಡಬೇಕಾಗಿರುವುದರಿಂದ ಅದೇ ರೀತಿ ನೀಡಲಾಗಿದೆ ಹಾಗೂ ಇದಕ್ಕೆ ಸಂಬಂಧಿಸಿದ ಇತರೆ ಎಲ್ಲಾ ಅಂಕಿಅಂಶಗಳ ಮಾಹಿತಿಗಳನ್ನು ಮುಂದೆ ಅನುಬಂಧಗಳಲ್ಲಿ ನೀಡಲಾಗಿದೆಯೆಂದರು.

ಬ್ಯಾಂಕಿನ ಉದ್ದೇಶವೂ ಸಹ ಎನ್.ಪಿ.ಎ. ತಗ್ಗಿಸಿ, ಸದಸ್ಯರಿಗೆ ಡಿವಿಡೆಂಡ್ ನೀಡಬೇಕೆಂಬುದಾಗಿದ್ದು, ಮುಂದಿನ ವರ್ಷದಲ್ಲಿ ಮೈನಸ್ ಅಂಕಿಅಂಶಗಳು ಖಂಡಿತ ಬರುವುದಿಲ್ಲವೆಂದು ಆಶ್ವಾಸನೆ ನೀಡಿ ಬ್ಯಾಂಕಿನ ಆಗುಹೋಗುಗಳ ಬಗ್ಗೆ ಮುಂದಿನ ಭೌತಿಕ ಮಹಾಸಭೆಯಲ್ಲಿ ಚರ್ಚಿಸೋಣವೆಂದು ತಿಳಿಸಿದರು.

ಆಡಳಿತ ಮಂಡಲಿಯವರು ಸೂಕ್ತ ರೀತಿಯಲ್ಲಿ ಅನುಪಾಲನಾ ವರದಿಯನ್ನು ಮತ್ತು ಸಮಜಾಯಿಷಿಯನ್ನು

ನೀಡಿರುವುದರಿಂದ ಹಾಗೂ ಸದಸ್ಯರ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರಗಳನ್ನು ಒದಗಿಸಿರುವುದರಿಂದ 2021–2022ನೇ ಸಾಲಿನ ಪರಿಶೋಧಿಸಲ್ಪಟ್ಟ ಲೆಕ್ಕ ಪತ್ರಗಳನ್ನು ಮತ್ತು ಲೆಕ್ಕ ಪರಿಶೋಧನಾ ವರದಿಯನ್ನು, ಆಡಳಿತ ಮಂಡಲಿಯ ಅನುಪಾಲನಾ ವರದಿಯನ್ನು ಅಂಗೀಕರಿಸಬಹುದೆಂದು ಸದಸ್ಯರಾದ ಶ್ರೀ ಪ್ರಮೋದ್.ಹೆಚ್. ಸದಸ್ಯತ್ವ ಸಂಖ್ಯೆ 19976 ರವರು ಸೂಚಿಸಿದಾಗ ಇದನ್ನು ಮತ್ತೊಬ್ಬ ಸದಸ್ಯರಾದ ಶ್ರೀ ತಿಮ್ಮೇಗೌಡ.ಟಿ ಸದಸ್ಯತ್ವ ಸಂಖ್ಯೆ 13336ರವರು ಅನುಮೋದಿಸಿದ ಮೇರೆಗೆ ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**8) 2022–2023ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರನ್ನು ನೇಮಿಸಲು ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ ಪೂರ್ವಾನುಮತಿಗಾಗಿ ಭಾರತೀಯ ರಿಸರ್ವ್ ಬ್ಯಾಂಕಿಗೆ ಪ್ರಸ್ತಾವನೆ ಸಲ್ಲಿಸಿರುವುದು:**

ಬ್ಯಾಂಕಿನ ನಿರ್ದೇಶಕರಾದ ಶ್ರೀ ರವಿ.ಕೆ ರವರು ವಿಷಯವನ್ನು ಮಂಡಿಸುತ್ತಾ, ಕೇಂದ್ರ ಸರ್ಕಾರವು ಬ್ಯಾಂಕಿಂಗ್ ರೆಗ್ಯುಲೇಷನ್ ಕಾಯ್ದೆ ಕಲಂ 30ರಲ್ಲಿ ತಿದ್ದುಪಡಿ ತಂದಿರುವ ಪ್ರಕಾರ ಶಾಸನಬದ್ಧ ಲೆಕ್ಕಪರಿಶೋಧಕರ ನೇಮಕಕ್ಕೆ ಭಾರತೀಯ ರಿಸರ್ವ್ ಬ್ಯಾಂಕಿನ ಪೂರ್ವಾನುಮತಿ ಅವಶ್ಯಕತೆ ಇರುತ್ತದೆ. ಈ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ಸುತ್ತೋಲೆ ಸಂಖ್ಯೆ DOS.CO.ARG/SEC.01/ 08.91.001/2021–22, ದಿನಾಂಕ27–04–2021ರಲ್ಲಿ ಶಾಸನಬದ್ಧ ಲೆಕ್ಕಪರಿಶೋಧಕರ ನೇಮಕದ ಬಗ್ಗೆ ವಿವರವಾಗಿ ನಮೂದಿಸಿದ್ದು, ಅದರಂತೆ ದಿನಾಂಕ 16–07–2022ರಂದು ನಡೆದ ಆಡಳಿತ ಮಂಡಲಿ ಸಭೆಯಲ್ಲಿ ಮೆ: ಸಿ.ಎಸ್.ಎಂ.ಆರ್. ಅಂಡ್ ಅಸೋಸಿಯೇಟ್ಸ್, ಚಾರ್ಟರ್ಡ್ ಅಕೌಂಟೆಂಟ್ಸ್ ರವರನ್ನು 2022–2023ನೇ ಸಾಲಿನ ಶಾಸನಬದ್ಧ ಲೆಕ್ಕ ಪರಿಶೋಧಕರಾಗಿ ನೇಮಿಸಲು ಪೂರ್ವಾನುಮತಿಗಾಗಿ ಭಾರತೀಯ ರಿಸರ್ವ್ ಬ್ಯಾಂಕಿಗೆ ದಿನಾಂಕ 21–07–2022ರಂದು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಅವರು ಕೇಳಿದ ಹೆಚ್ಚಿನ ದಾಖಲೆಗಳನ್ನು ದಿನಾಂಕ 02–08–2022 ಸಲ್ಲಿಸಲಾಗಿದೆ. ಈ ಲೆಕ್ಕ ಪರಿಶೋಧಕರನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿಗೊಳಪಟ್ಟು ಈ ನೇಮಕವನ್ನು ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 63(1) ರನ್ವಯ ಮತ್ತು ಬ್ಯಾಂಕಿನ ಬೈಲಾ ಸಂಖ್ಯೆ 39(1)(xix) ಅನ್ವಯ ಸದರಿಯವರಿಗೆ ಲೆಕ್ಕಪರಿಶೋಧನಾ ಶುಲ್ಕ ಪಾವತಿಸಲು ಮಂಜೂರಾತಿ ನೀಡಬೇಕಾಗಿ ಕೋರಿದರು.

ಸಲಹೆಗಾರರಾದ ಶ್ರೀ ಬಿ.ಆರ್.ನಾಗರಾಜ ರವರು ಮಾತನಾಡಿ ವಾರ್ಷಿಕ ವರದಿ ಪುಟ ಸಂಖ್ಯೆ 21ರಲ್ಲಿ ಈ ಬಗ್ಗೆ ಮುದ್ರಿತವಾಗಿದ್ದು, ವರದಿ ಮುದ್ರಣವಾಗುವ ಸಮಯಕ್ಕೆ ಆರ್.ಬಿ.ಐ.ನಿಂದ ಅನುಮತಿ ಬಂದಿರಲಿಲ್ಲ. ಆದರೆ ದಿನಾಂಕ 20–09–2022ರ ಆರ್.ಬಿ.ಐ. ಪತ್ರ ಸಂಖ್ಯೆ BLR.DOS.RSS.No.S943/07.02.144/ 2022–23ರ ಮೂಲಕ ಬ್ಯಾಂಕಿನ 2022–2023ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರನ್ನಾಗಿ ಮೆ:ಸಿ.ಎಸ್.ಎಂ.ಆರ್ ಅಂಡ್ ಅಸೋಸಿಯೇಟ್ಸ್, ಚಾರ್ಟರ್ಡ್ ಅಕೌಂಟೆಂಟ್ಸ್ ರವರನ್ನು ನೇಮಿಸಿಕೊಳ್ಳಲು ಭಾರತೀಯ ರಿಸರ್ವ್ ಬ್ಯಾಂಕು ಅನುಮತಿ ನೀಡಿದೆಯೆಂದು ವಿವರಿಸಿ, ಅವರಿಗೆ ವೃತ್ತಿ ಶುಲ್ಕ ಪಾವತಿಸಲು ಅಥವಾ ಒಂದು ವೇಳೆ ಸದರಿ ಸಂಸ್ಥೆಯವರು ಲೆಕ್ಕ ಪರಿಶೋಧನೆಗೆ ಒಪ್ಪದಿದ್ದಲ್ಲಿ, ಭಾರತೀಯ ರಿಸರ್ವ್ ಬ್ಯಾಂಕಿನ ಪೂರ್ವಾನುಮತಿಯೊಂದಿಗೆ ಬೇರೆ ಶಾಸನಬದ್ಧ ಲೆಕ್ಕ ಪರಿಶೋಧಕರನ್ನು ನೇಮಿಸಿಕೊಳ್ಳಲು ಹಾಗೂ ಅವರಿಗೆ ವೃತ್ತಿ ಶುಲ್ಕವನ್ನು ಪಾವತಿಸಲು ಅಧಿಕಾರವನ್ನು ನೀಡಬೇಕೆಂದು ಕೋರಿದರು.

ಸದಸ್ಯರಾದ ಶ್ರೀ ತಿಮ್ಮೇಗೌಡ.ಟಿ. ಸದಸ್ಯತ್ವ ಸಂಖ್ಯೆ 13336 ರವರು ಮಾತನಾಡಿ ಈ ವಿಷಯವು ಕಾನೂನುಬದ್ಧ ಮತ್ತು ಕಡ್ಡಾಯವಾಗಿರುವುದರಿಂದ ಮತ್ತು ಈಗಾಗಲೇ ಆರ್.ಬಿ.ಐ.ನಿಂದ ಅನುಮತಿ ಬಂದಿರುವುದರಿಂದ ಚರ್ಚೆಯ ಅವಶ್ಯಕತೆ ಇರುವುದಿಲ್ಲ, ಅನುಮೋದಿಸಬಹುದೆಂದು ಸಲಹೆ ನೀಡಿದರು.

2022–2023ನೇ ಸಾಲಿನ ಲೆಕ್ಕ ಪರಿಶೋಧಕರನ್ನಾಗಿ ಮೆ: ಸಿ.ಎಸ್.ಎಂ.ಆರ್. ಅಂಡ್ ಅಸೋಸಿಯೇಟ್ಸ್, ಚಾರ್ಟರ್ಡ್ ಅಕೌಂಟೆಂಟ್ಸ್ ರವರನ್ನು ನೇಮಕ ಮಾಡಿಕೊಳ್ಳಲು ಈಗಾಗಲೇ ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿ ಬಂದಿರುವುದರಿಂದ ಅವರನ್ನು ನೇಮಿಸಿಕೊಳ್ಳಲು ಮತ್ತು ಸದರಿಯವರಿಗೆ ಲೆಕ್ಕ ಪರಿಶೋಧನಾ ಶುಲ್ಕವನ್ನು ಪಾವತಿಸಲು ಸೂಚಿಸಿರುವುದನ್ನು ಸದಸ್ಯರಾದ ಶ್ರೀ ಪ್ರಮೋದ್ .ಹೆಚ್ ಸದಸ್ಯತ್ವ ಸಂಖ್ಯೆ 19976 ರವರು ಸೂಚಿಸಿ,

ಶ್ರೀ ತಿಮ್ಮೇಗೌಡ.ಟಿ. ಸದಸ್ಯತ್ವ ಸಂಖ್ಯೆ 13336 ರವರು ಅನುಮೋದಿಸಿದ ಮೇರೆಗೆ ಸಭೆಯು ಸರ್ವಾನುಮತದಿಂದ 2022–2023ನೇ ಸಾಲಿಗೆ ಮೆ: ಸಿ.ಎಸ್.ಎಂ.ಆರ್. ಅಂಡ್ ಅಸೋಸಿಯೇಟ್ಸ್, ರವರನ್ನು ಶಾಸನಬದ್ಧ ಲೆಕ್ಕ ಪರಿಶೋಧಕರನ್ನಾಗಿ ನೇಮಕ ಮಾಡಲು ಮತ್ತು ಸದರಿಯವರಿಗೆ ಲೆಕ್ಕ ಪರಿಶೋಧನಾ ಶುಲ್ಕವನ್ನು ಪಾವತಿಸಲು ಅಥವಾ ಒಂದು ವೇಳೆ ಸದರಿ ಸಂಸ್ಥೆಯವರು ಲೆಕ್ಕ ಪರಿಶೋಧನೆ ಮಾಡಲು ಸಾಧ್ಯವಾಗಿಲ್ಲವೆಂದರೆ ಭಾರತೀಯ ರಿಸರ್ವ್ ಬ್ಯಾಂಕಿನ ಪೂರ್ವಾನುಮತಿಯೊಂದಿಗೆ ಬೇರೆ ಶಾಸನಬದ್ಧ ಲೆಕ್ಕ ಪರಿಶೋಧಕರನ್ನು ನೇಮಿಸಿಕೊಳ್ಳಲು ಹಾಗೂ ಅವರಿಗೆ ವೃತ್ತಿ ಶುಲ್ಕವನ್ನು ಪಾವತಿಸಲು ಆಡಳಿತ ಮಂಡಲಿಗೆ ಅಧಿಕಾರ ನೀಡಲಾಯಿತು.

**9) 2021–2022ನೇ ಸಾಲಿನ ವ್ಯಯದ ಪಟ್ಟಿಯನ್ನು ಪರಿಶೀಲಿಸುವುದು ಹಾಗೂ ವ್ಯಯದ ಪಟ್ಟಿಯಲ್ಲಿ ಮಂಜೂರಾತಿಗಿಂತ ಹೆಚ್ಚಿಗೆ ಖರ್ಚಾಗಿರುವ ಬಾಬ್ತುಗಳಿಗೆ ಅನುಮೋದನೆ ನೀಡುವುದು ಮತ್ತು 2022–2023ನೇ ಸಾಲಿಗೆ ಮುಂಗಡ ಪತ್ರ ಹಾಗೂ 2023–2024ನೇ ಸಾಲಿಗೆ ತಾತ್ಕಾಲಿಕ ಮುಂಗಡ ಪತ್ರವನ್ನು ಮಂಜೂರು ಮಾಡುವುದು:**

ಬ್ಯಾಂಕಿನ ನಿರ್ದೇಶಕರಾದ ಶ್ರೀ ಸತ್ಯಮೂರ್ತಿ ಯವರು ವಿಷಯವನ್ನು ಮಂಡಿಸುತ್ತಾ, ಆಡಳಿತ ಮಂಡಲಿಯ ವಾರ್ಷಿಕ ವರದಿ ಪುಸ್ತಕದ ಪುಟ ಸಂಖ್ಯೆ 21 ಮತ್ತು 22 ರಲ್ಲಿ ವಿಷಯವನ್ನು ಮತ್ತು ಪುಟ 61 ಮತ್ತು 62 ರಲ್ಲಿ ವಿವರವಾಗಿ ಮುದ್ರಿತವಾಗಿರುವ ಅಂಕಿ ಅಂಶಗಳನ್ನು ಸಭೆಯ ಮುಂದೆ ಮಂಡಿಸಿ, 2021–2022ನೇ ಸಾಲಿಗೆ ಮಂಜೂರು ಮಾಡಿದ ಆಯ–ವ್ಯಯ ಪಟ್ಟಿಯ ರೀತ್ಯಾ ಕಾನೂನು, ವೃತ್ತಿವೆಚ್ಚ ಮತ್ತು ದಾವಾ ಹಾಗೂ ಅಮಲ್ಜಾರಿ ವೆಚ್ಚ ಬಾಬ್ತಿನಲ್ಲಿ ಹೊರತುಪಡಿಸಿ ಉಳಿದ ಎಲ್ಲಾ ಬಾಬ್ತುಗಳಲ್ಲಿ ಮಂಜೂರಾತಿಯ ಮಿತಿಯಲ್ಲಿಯೇ ವೆಚ್ಚಗಳನ್ನು ನಿರ್ವಹಿಸಲಾಗಿದೆ. ಸದರಿ ಬಾಬ್ತಿಗೆ 2021–2022ನೇ ಸಾಲಿಗೆ ರೂ.28,00,000–00 ಮಂಜೂರಾಗಿದ್ದು, ಎನ್.ಪಿ.ಎ. ಮೊತ್ತವನ್ನು ರೂ.110.00 ಕೋಟಿಗಳಿಂದ ರೂ.70.00 ಕೋಟಗಳಿಗೆ ಇಳಿಸಿದ್ದು, ಈ ಸಂದರ್ಭದಲ್ಲಿ ತೆಗೆದುಕೊಂಡ ಸಾಲ ವಸೂಲಾತಿ ಕ್ರಮಗಳಿಗೆ ಸಾಲಿನಾಂತ್ಯಕ್ಕೆ ರೂ.32,16,125–00 ಗಳು ಖರ್ಚಾಗಿ, ರೂ.4,16,125–00 ಹೆಚ್ಚಿಗೆ ಖರ್ಚಾಗಿರುತ್ತದೆ. ಈ ವೆಚ್ಚವು ಅನಿವಾರ್ಯವಾಗಿರುವುದರಿಂದ ಮತ್ತು ಕ್ರಮಬದ್ಧವಾಗಿರುವುದರಿಂದ ಈ ಹೆಚ್ಚುವರಿ ವೆಚ್ಚಕ್ಕೆ ಮಾನ್ಯ ಸದಸ್ಯರು ಅನುಮೋದನೆಯನ್ನು, 2022–2023ನೇ ಸಾಲಿನ ಮುಂಗಡ ಪತ್ರಕ್ಕೆ ಮಂಜೂರಾತಿಯನ್ನು ಹಾಗೂ 2023–2024ನೇ ಸಾಲಿಗೆ ತಾತ್ಕಾಲಿಕ ಮುಂಗಡ ಪತ್ರಕ್ಕೂ ಮಂಜೂರಾತಿ ನೀಡಬೇಕಾಗಿ ವಿನಂತಿಸಿ, ಈ ಕೆಳಕಂಡಂತೆ ಓದಲು ಮುಂದಾದಾಗ ಸದಸ್ಯರಾದ ಶ್ರೀಮತಿ ಶೀತಲ್.ಎನ್. ಸದಸ್ಯತ್ವ ಸಂಖ್ಯೆ 121068 ರವರು ಮಾತನಾಡಿ, ನಮ್ಮಗಳ ಬಳಿ ವಾರ್ಷಿಕ ವರದಿ ಪುಸ್ತಕವು ಇರುವುದರಿಂದ ನಾವೇ ಓದಿಕೊಳ್ಳುತ್ತೇವೆ, ಓದುವುದು ಬೇಡವೆಂದು ತಿಳಿಸಿದರು.

(ರೂ. ಗಳಲ್ಲಿ)

2021-2022ನೇ ಸಾಲಿನ ಆಯ-ವ್ಯಯ

| ಕ್ರ. ಸಂ. | ವಿವರ | 2021-22ನೇ ಸಾಲಿಗೆ ಮಂಜೂರಾದದ್ದು | 2021-22ನೇ ಸಾಲಿಗೆ ಖರ್ಚಾದದ್ದು | ಹೆಚ್ಚಿಗೆ ಖರ್ಚಾದದ್ದು | 2022-2023ನೇ ಸಾಲಿಗೆ ವ್ಯಯದ ಪಟ್ಟಿ ಮಂಜೂರಾತಿಗಾಗಿ | 2023-2024ನೇ ಸಾಲಿಗೆ ತಾತ್ಕಾಲಿಕ ವ್ಯಯದ ಪಟ್ಟಿ ಮಂಜೂರಾತಿಗಾಗಿ |
|---|---|---|---|---|---|---|
| 1. | ಕಟ್ಟಡ ಖರೀದಿ ಹಾಗೂ ನಿರ್ಮಾಣ, ವಾಹನ, ಪೀಠೋಪಕರಣ ಹಾಗೂ ಗಣಕಯಂತ್ರಗಳು | 3,50,00,000-00 | 7,96,406-00 | - | 3,50,00,000-00 | 3,50,00,000-00 |
| 2. | ಸಂಬಳ ಮತ್ತು ಸಂಭಾವನೆಗಳು | 10,00,00,000-00 | 9,40,92,103-64 | - | 10,00,00,000-00 | 12,00,00,000-00 |
| 3. | ಬಾಡಿಗೆ, ತೆರಿಗೆ, ವಿದ್ಯುಚ್ಛಕ್ತಿ ಮತ್ತು ವಿಮಾ ಕಂತು | 1,87,00,000-00 | 1,58,84,208-48 | - | 1,89,00,000-00 | 1,85,00,000-00 |
| 4. | ಮುದ್ರಣ, ಲೇಖನ ಸಾಮಾಗ್ರಿಗಳು ಮತ್ತು ಪ್ರಚಾರ ವೆಚ್ಚಗಳು | 17,00,000-00 | 10,67,181-27 | - | 18,00,000-00 | 20,00,000-00 |
| 5. | ವಾರ್ಷಿಕ ಮಹಾಸಭೆ ಮತ್ತು ಇತರೆ ಸಭೆ ಖರ್ಚು | 32,00,000-00 | 25,85,135-14 | - | 45,00,000-00 | 45,00,000-00 |
| 6. | ಅಂಚೆ ಮತ್ತು ದೂರವಾಣಿ ವೆಚ್ಚಗಳು | 10,00,000-00 | 5,93,671-28 | - | 10,00,000-00 | 12,00,000-00 |
| 7. | ಸಾರಿಗೆ ಮತ್ತು ಪ್ರಯಾಣ ವೆಚ್ಚಗಳು | 23,00,000-00 | 20,95,635-00 | - | 30,00,000-00 | 31,00,000-00 |
| 8. | ವಾರ್ಷಿಕ ನಿರ್ವಹಣೆ, ಕಛೇರಿ ನಿರ್ವಹಣೆ ಹಾಗೂ ವಿಶೇಷ ಸಮಾರಂಭಗಳ ವೆಚ್ಚ | 1,20,00,000-00 | 73,47,111-61 | - | 1,50,00,000-00 | 1,50,00,000-00 |

| | | | | | | |
|---|---|---|---|---|---|---|
| 9. | ಸಾದಿಲ್ವಾರು | 14,00,000-00 | 11,06,285-01 | - | 13,00,000-00 | 20,00,000-00 |
| 10. | ಲೆಕ್ಕ ಪರಿಶೋಧನಾ ಶುಲ್ಕ, ಸವಕಳಿ ಇತ್ಯಾದಿ | | | | | |
| | ಅ) ಲೆಕ್ಕ ಪರಿಶೋಧನಾ ಶುಲ್ಕ | 12,00,000-00 | 9,68,385-00 | - | 15,00,000-00 | 15,00,000-00 |
| | ಆ) ಪೀಠೋಪಕರಣಗಳ ಮೇಲೆ ಸವಕಳಿ | 55,00,000-00 | 44,41,442-21 | - | 50,00,000-00 | 60,00,000-00 |
| | ಇ) ವಾರ್ಷಿಕ ವಂತಿಕೆಗಳು | 3,00,000-00 | 2,03,550-00 | - | 3,00,000-00 | 3,00,000-00 |
| | ಈ) ಸಾಲ ವಸೂಲಿ ಮತ್ತು ಬ್ಯಾಂಕ್ ಚಾರ್ಜ್ | 16,00,000-00 | 12,13,532-32 | - | 21,00,000-00 | 22,00,000-00 |
| | ಉ) ಕಾನೂನು, ವೃತ್ತಿ ವೆಚ್ಚ ಮತ್ತು ದಾವಾ ಹಾಗೂ ಅಮಲ್ಜಾರಿ ವೆಚ್ಚ | 28,00,000-00 | 32,16,125-00 | 4,16,125-00 | 58,00,000-00 | 60,00,000-00 |
| 11. | ಠೇವಣಿಗಳ ಮೇಲೆ ಕೊಡಬಹುದಾದ ಬಡ್ಡಿ/ ಕಮೀಷನ್ | 36,83,00,000-00 | 31,94,28,594-78 | - | 34,18,00,000-00 | 32,97,00,000-00 |
| | | 52,00,00,000-00 | 45,42,42,960-74 | 4,16,125-00 | 50,20,00,000-00 | 51,20,00,000-00 |
| 12. | ಆದಾಯ ತೆರಿಗೆ | 1,00,00,000-00 | - | - | 1,80,00,000-00 | 1,80,00,000-00 |
| | **ಒಟ್ಟು** | **53,00,00,000-00** | **45,42,42,960-74** | - | **52,00,00,000-00** | **53,00,00,000-00** |

**2022–2023ನೇ ಸಾಲಿನಲ್ಲಿ ಬರಬಹುದಾದ ನಿವ್ವಳ ಲಾಭ ಹಾಗೂ 2023–2024ನೇ ಸಾಲಿನ ತಾತ್ಕಾಲಿಕ ನಿವ್ವಳ ಲಾಭ**

(ರೂ.ಗಳಲ್ಲಿ)

| ಕ್ರ. ಸಂ. | | ವಿವರ | 2022–2023 ಮೊಬಲಗು | 2023–2024 ಮೊಬಲಗು |
|---|---|---|---|---|
| 1. | ಅ) | ಸಾಲಗಳ ಮೇಲೆ ಬರಬಹುದಾದ ಬಡ್ಡಿ | 34,80,00,000–00 | 32,00,00,000–00 |
| | | ಬಡ್ಡಿ ರಿಯಾಯಿತಿ | 80,00,000–00 | 1,00,00,000–00 |
| | | | 34,00,00,000–00 | 31,00,00,000–00 |
| | ಆ) | ಸಂಚಯಗಳ ಮೇಲೆ ಬರಬಹುದಾದ ಬಡ್ಡಿ | 19,00,00,000–00 | 22,00,00,000–00 |
| | ಇ) | ಇತರೆ ಮೂಲಗಳಿಂದ | 4,00,00,000–00 | 5,00,00,000–00 |
| | | ಒಟ್ಟು ಆದಾಯಗಳು | 57,00,00,000–00 | 58,00,00,000–00 |
| 2. | | ವ್ಯಯದ ಪಟ್ಟಿ ರೀತ್ಯಾ | 50,20,00,000–00 | 51,20,00,000–00 |
| 3. | | ಉಳಿಯಬಹುದಾದ ನಿವ್ವಳ ಲಾಭ (ತೆರಿಗೆ ಮೊದಲು) | 6,80,00,000–00 | 6,80,00,000–00 |
| 4. | | ತೆರಿಗೆ | 1,80,00,000–00 | 1,80,00,000–00 |
| 5. | | ತೆರಿಗೆ ನಂತರದ ನಿವ್ವಳ ಲಾಭ | 5,00,00,000–00 | 5,00,00,000–00 |

ಸದಸ್ಯರಾದ ಶ್ರೀಮತಿ ಲಕ್ಷ್ಮಿ.ಕೆ ಸದಸ್ಯತ್ವ ಸಂಖ್ಯೆ 120867 ಮತ್ತು ಶ್ರೀಮತಿ ಪ್ರಮೀಳ.ಎ. ಸದಸ್ಯತ್ವ ಸಂಖ್ಯೆ 121072 ರವರುಗಳು ಮಾತನಾಡಿ, ವಾರ್ಷಿಕ ವರದಿ ಪುಸ್ತಕದ ಪುಟ ಸಂಖ್ಯೆ 61 ಮತ್ತು 62ರಲ್ಲಿ 2021–2022ರ ಆಯವ್ಯಯ ಪಟ್ಟಿಯಲ್ಲಿ ಕಾನೂನು ವೆಚ್ಚ, ದಾವಾ ಅಮಲ್ಜಾರಿ ವೆಚ್ಚದಲ್ಲಿ ಜಾಸ್ತಿ ಖರ್ಚಾಗಿರುವುದಕ್ಕೆ ಕಾರಣವನ್ನು ಕೇಳಿದರು.

ಉಪಾಧ್ಯಕ್ಷರಾದ ಶ್ರೀ ಡಿ.ಆರ್.ವಿಜಯ ಸಾರಥಿಯವರು ಉತ್ತರಿಸುತ್ತ, ಸುಸ್ತಿ ಸಾಲಗಳ ವಸೂಲಿಗಾಗಿ ಎಲ್ಲಾ ಕಾನೂನು ಕ್ರಮಗಳನ್ನು ಜರುಗಿಸಿರುವ ಪರಿಣಾಮ ಕಾನೂನು ವೆಚ್ಚಗಳು ಜಾಸ್ತಿಯಾಗಿದೆ ಹಾಗೆಯೇ ಆಡಳಿತ ಕಛೇರಿಯಲ್ಲಿ **"ಕೇಂದ್ರೀಕೃತ ಸಾಲ ವಸೂಲಾತಿ ತಂಡ"** [Centralised Recovery Team] ವನ್ನು ರಚಿಸುವ ಮೂಲಕ ಸಾಲ ವಸೂಲಾತಿಗೆ ಶೀಘ್ರ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಇದರ ಪ್ರತಿಫಲವಾಗಿ ಎನ್.ಪಿ.ಎ, ಪ್ರಮಾಣ ರೂ.110.00 ಕೋಟಿಗಳಿಂದ ರೂ.70.00 ಕೋಟಿಗಳಿಗೆ ಇಳಿಕೆಯಾಗಲು ಕಾರಣವಾಗಿದೆಯೆಂದು ವಿವರಿಸಿ, ಸದರಿ ಖರ್ಚುಗಳನ್ನು ಈಗ ಬ್ಯಾಂಕು ಭರಿಸಿದ್ದರೂ ಸಹ ಮುಂದೆ ಸುಸ್ತಿದಾರರಿಂದ ವಸೂಲಿ ಮಾಡಲಾಗುವುದೆಂದು ತಿಳಿಸಿದರು.

ಸದಸ್ಯರಾದ ಶ್ರೀ ತಿಮ್ಮೇಗೌಡ.ಟಿ. ಸದಸ್ಯತ್ವ ಸಂಖ್ಯೆ 13336 ರವರು ಮಾತನಾಡಿ, ವೈಟ್ ಪುಸ್ತಕದ ಪುಟ ಸಂಖ್ಯೆ 22ರಲ್ಲಿ ವಾರ್ಷಿಕ ಮಹಾಸಭೆ ಖರ್ಚು ರೂ.32.00 ಲಕ್ಷ ತೋರಿಸಿರುವುದರ ಬಗ್ಗೆ ಪ್ರಸ್ತಾಪಿಸಿ, ಆದಷ್ಟು ಖರ್ಚು–ವೆಚ್ಚಗಳ ಮೇಲೆ ಹಿಡಿತವಿರಲೆಂದು ಸಲಹೆ ನೀಡಿದರು.

ಶ್ರೀ ಬಿ.ಆರ್.ನಾಗರಾಜ ರವರು ಉತ್ತರಿಸುತ್ತಾ, ಅದು ಕೇವಲ ವಾರ್ಷಿಕ ಮಹಾಸಭೆಯ ಖರ್ಚು ಮಾತ್ರವಲ್ಲದೆ ಜೊತೆಗೆ ಇತರೆ ಸಭೆಗಳ ಖರ್ಚುಗಳು ಸಹ ಒಳಗೊಂಡಿದೆ. ಅಂದರೆ ಆಡಳಿತ ಮಂಡಲಿ ಸಭೆಗಳು, ವಿವಿಧ ಉಪಸಮಿತಿ ಸಭೆಗಳು ಹೀಗೆ ಎಲ್ಲಾ ಸಭೆಗಳ ಖರ್ಚುಗಳು ಸೇರಿದೆಯೆಂದು ತಿಳಿಸುತ್ತಾ,

ಕೇವಲ ವಾರ್ಷಿಕ ಮಹಾಸಭೆಯ ಖರ್ಚಿನ ಬಗ್ಗೆ ವಿವರಿಸುತ್ತಾ, 2019–2020ನೇ ವಾರ್ಷಿಕ ವರ್ಚುಯೆಲ್ ಮಹಾಸಭೆಗೆ ರೂ.9.61 ಲಕ್ಷ ಖರ್ಚಾಗಿದ್ದರೆ,

2020–2021ನೇ ಸಾಲಿನ ಮಹಾಸಭೆಯನ್ನು ವರ್ಚುಯೆಲ್ ಆಗಿ ನಡೆಸಿದಾಗ ರೂ.17.97 ಲಕ್ಷ ವೆಚ್ಚವಾಗಿರುತ್ತದೆ. ಇದಕ್ಕೆ ಕಾರಣ ಆ ಸಾಲಿನಲ್ಲಿ ಸದಸ್ಯರಿಗೆ ಅಂಚೆ ಮೂಲಕ ಕಳುಹಿಸಿದ ಆಹ್ವಾನ ಪತ್ರಿಕೆಯು ಸುಮಾರು ನೂರಕ್ಕೂ ಹೆಚ್ಚಿನ ಪುಟಗಳಿದ್ದು, ಬೈಲಾ ತಿದ್ದುಪಡಿ ಮತ್ತು ಸಿಬ್ಬಂದಿಗಳ ಸೇವಾ ನಿಯಮಗಳನ್ನು ತಿದ್ದುಪಡಿ ಮಾಡಿ ಇಲಾಖಾ ಅನುಮತಿಗಾಗಿ ಕಳುಹಿಸುವ ಪ್ರಯುಕ್ತ ಆಹ್ವಾನ ಪತ್ರಿಕೆಯಲ್ಲಿ ಎಲ್ಲವನ್ನು ಮುದ್ರಿಸಿ ಕಳಿಸಿದ ಕಾರಣ ಮುದ್ರಣ ವೆಚ್ಚವೇ ರೂ.12.85 ಲಕ್ಷಗಳು ವೆಚ್ಚವಾಗಿದೆಯೆಂದು ವಿವರಿಸಿ, ಮಹಾಸಭೆಯನ್ನು ಭೌತಿಕವಾಗಿ ನಡೆಸಿದರೆ ಸುಮಾರು ರೂ.25.00 ಲಕ್ಷ ಖರ್ಚಾದರೆ, ವರ್ಚುಯೆಲ್ ಮಹಾಸಭೆ ನಡೆಸಿದರೆ ಅಂದಾಜು ರೂ.10.00 ಲಕ್ಷಗಳು ಖರ್ಚಾಗುತ್ತದೆ ಇದರಿಂದ ಸುಮಾರು ರೂ.15.00 ಲಕ್ಷ ಉಳಿತಾಯವಾಗುತ್ತದೆಂದು ತಿಳಿಸಿ, ನಾವುಗಳು ಸಹ ಬ್ಯಾಂಕಿನಲ್ಲಿ ಸಾಧ್ಯವಾದಷ್ಟು ಖರ್ಚು–ವೆಚ್ಚಗಳನ್ನು ಕಡಿಮೆ ಮಾಡಲು ಕ್ರಮವಿಟ್ಟಿರುವುದಾಗಿ ತಿಳಿಸಿದರು.

ಸದಸ್ಯರಾದ ಶ್ರೀಮತಿ ಸವಿತ ಸದಸ್ಯತ್ವ ಸಂಖ್ಯೆ 120866 ರವರು ಮಾತನಾಡಿ, ಕಾನೂನು, ವೃತ್ತಿವೆಚ್ಚ ಮತ್ತು ದಾವಾ ಹಾಗೂ ಅಮಲ್ಜಾರಿ ವೆಚ್ಚ ಬಾಬ್ತಿನಲ್ಲಿ 2021–2022ನೇ ಸಾಲಿಗೆ ರೂ.28,00,000–00 ಮಂಜೂರಾಗಿದ್ದು, ಸಾಲಿನಾಂತ್ಯಕ್ಕೆ ಸದರಿ ಬಾಬ್ತಿನಡಿ ರೂ.32,16,125–00ಗಳು ಖರ್ಚಾಗಿ ರೂ.4,16,125–00 ಗಳು ಹೆಚ್ಚಿಗೆ ಖರ್ಚಾಗಿರುತ್ತದೆ. ಈ ಹೆಚ್ಚಿನ ಖರ್ಚಿಗೆ ಆಡಳಿತ ಮಂಡಲಿಯವರು ನೀಡಿರುವ ಸಮಜಾಯಿಷಿಕೆ ಸರಿ ಇರುವುದರಿಂದ ಅನುಮೋದನೆ ನೀಡಬಹುದು ಮತ್ತು 2022–2023ನೇ ಸಾಲಿನ ಮುಂಗಡ ಪತ್ರಕ್ಕೆ ಹಾಗೂ 2023–2024ನೇ ಸಾಲಿನ ತಾತ್ಕಾಲಿಕ ಮುಂಗಡ ಪತ್ರಕ್ಕಾಗಿ ಮಂಡಿಸಿರುವ ಕಾರಣವನ್ನು ಸಮರ್ಪಕವಾಗಿ ತಿಳಿಸಿರುವುದರಿಂದ ಮಂಜೂರಾತಿ ನೀಡಬಹುದೆಂದು ಸೂಚಿಸಿದ ಮೇರೆಗೆ ಸದಸ್ಯರಾದ ಶ್ರೀಮತಿ ಸುಮ.ಪಿ. ಸದಸ್ಯತ್ವ ಸಂಖ್ಯೆ 120865 ರವರು ಅನುಮೋದಿಸಿದ ಮೇರೆಗೆ ಸಭೆಯು ಸರ್ವಾನುಮತದಿಂದ ಮಂಜೂರಾತಿ ನೀಡಿತು.

**10) 2021–2022ನೇ ಸಾಲಿನ ನಿವ್ವಳ ನಷ್ಟ ವಿಲೇವಾರಿ ಮಾಡುವ ಬಗ್ಗೆ:**

ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರು (ಪ್ರಭಾರ) ವಿಷಯವನ್ನು ಸಭೆಯಲ್ಲಿ ಮಂಡಿಸುತ್ತಾ, ವಾರ್ಷಿಕ ವರದಿ ಪುಸ್ತಕದ ಪುಟ ಸಂಖ್ಯೆ 22 ಮತ್ತು 23 ರಲ್ಲಿ ಮುದ್ರಿತವಾಗಿರುವುದನ್ನು ತಿಳಿಸಿ, ಬ್ಯಾಂಕಿನ ವ್ಯವಹಾರಿಕ ಲಾಭ ರೂ.1.42 ಕೋಟಿಗಳಿದ್ದು, 2021–2022ನೇ ಸಾಲಿನ ಅಂತ್ಯಕ್ಕೆ ಎಲ್ಲಾ ಮೂಲಗಳಿಂದ ಬಂದ ಆದಾಯದಲ್ಲಿ ಖರ್ಚುಗಳನ್ನು ಕಳೆದ ನಂತರ ರೂ.7,88,59,483–28ಗಳ ನಿವ್ವಳ ನಷ್ಟ ಉಂಟಾಗಿರುತ್ತದೆ. ದೇಶದಲ್ಲಿ ಕೋವಿಡ್–19ರ ಎರಡನೇ ಅಲೆಯ ವೈರಾಣು ಪ್ರಮಾಣದ ಹರಡುವಿಕೆಯನ್ನು ತಡೆಗಟ್ಟಲು ಸರ್ಕಾರವು ಲಾಕ್‌ಡೌನ್ ಘೋಷಿಸಿದ ಪರಿಣಾಮದಿಂದಾಗಿ ಬ್ಯಾಂಕಿಂಗ್ ಚಟುವಟಿಕೆಗಳ ಮೇಲೆ ತೀವ್ರತರ ಪರಿಣಾಮ ಬೀರಿದೆ. 2021ರ ಮಾರ್ಚ್‌ನಲ್ಲಿ ರೂ.77.42 ಕೋಟಿಗಳಿದ್ದ ಅನುತ್ಪಾದಿತ ಆಸ್ತಿಯು ಮಾರ್ಚ್–2022ಕ್ಕೆ ರೂ.69.81 ಕೋಟಿಗಳಿಗೆ ಇಳಿಕೆಯಾಗಿದೆ. ಹಿಂದಿನ ಸಾಲಿನಲ್ಲಿ Doubtful Asset-2ರಲ್ಲಿ ವರ್ಗೀಕರಣಗೊಂಡಿದ್ದ ಭದ್ರತಾ ಅನುತ್ಪಾದಿತ ಸಾಲಗಳಿಗೆ ಶೇ.30ರಷ್ಟು ಕಾದಿರಿಸಲಾಗಿದ್ದು, ವರದಿ ಸಾಲಿಗೆ ಅವುಗಳು Doubtful Asset-3ರಲ್ಲಿ ವರ್ಗೀಕರಣಗೊಂಡ ಕಾರಣ ಆರ್.ಬಿ.ಐ. ಸುತ್ತೋಲೆಯನ್ವಯ ಶೇ.100ರಷ್ಟು ಕಾದಿರಿಸಬೇಕಾದ ಕಾರಣ ಸುಮಾರು ರೂ.7.00 ಕೋಟಿಗಳಷ್ಟು ಎನ್.ಪಿ.ಎ. ಮೊತ್ತವನ್ನು ಕಾದಿರಿಸಿ (Provision), ಲಾಭ–ನಷ್ಟ ತ:ಖ್ತೆಯಲ್ಲಿ ಖರ್ಚಿಗೆ ಒಳಪಡಿಸಿರುವುದರ ಜೊತೆಗೆ, PMC Bank

(Punjab And Maharashtra Co-op Bank) ನಲ್ಲಿ ಬ್ಯಾಂಕು ರೂ.10.00 ಕೋಟಿಗಳನ್ನು ನಿಶ್ಚಿತ ಠೇವಣಿಗಳಲ್ಲಿ ಹೂಡಿಕೆ ಮಾಡಿದ್ದು, ಸದರಿ ಬ್ಯಾಂಕು ತೊಂದರೆಗೆ ಒಳಗಾದ ಕಾರಣ ಆರ್.ಬಿ.ಐ. ನಿರ್ದೇಶನದಂತೆ ಇದನ್ನು ಅನುತ್ಪಾದಿತ ಹೂಡಿಕೆಯೆಂದು ಪರಿಗಣಿಸಿ, ವಾರ್ಷಿಕ ರೂ.2.00 ಕೋಟಿಗಳನ್ನು ಕಾದಿರಿಸಬೇಕಾಯಿತು ಹಾಗೂ ಇದರ ಮೇಲೆ ಬ್ಯಾಂಕಿಗೆ ಬರಬೇಕಾಗಿದ್ದ ಸುಮಾರು ರೂ.1.00 ಕೋಟಿಗಳಷ್ಟು ಬಡ್ಡಿ ಸಹ ಬಂದಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದಾಗಿ ಸಾಲ ವಸೂಲಾತಿಯನ್ನು ಮಾಡಿದರೂ ಸಹ ಅನುತ್ಪಾದಿತ ಸಾಲಗಳಿಗೆ ಮತ್ತು ಅನುತ್ಪಾದಿತ ಹೂಡಿಕೆಗಳ ಮೇಲೆ ಕಾಯ್ದಿರಿಸಬೇಕಾದ ಮೊತ್ತ ಹೆಚ್ಚಾದ ಕಾರಣ ಬ್ಯಾಂಕು ಮೊದಲ ಬಾರಿಗೆ ರೂ.7.89 ಕೋಟಿಗಳ ನಿವ್ವಳ ನಷ್ಟವನ್ನು ಅನುಭವಿಸಬೇಕಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ಪತ್ರ ಸಂಖ್ಯೆ DCBS(BG)No.1662/09.01.144/2018–2019 ದಿನಾಂಕ 23–01–2019ರ ಮೂಲಕ ಬ್ಯಾಂಕಿನ ಮೇಲೆ ಮೇಲುಸ್ತುವಾರಿ ಕ್ರಮ (SAF-Supervisory Action Framework) ವನ್ನು ಜಾರಿಗೊಳಿಸುವ ಮೂಲಕ ಹಲವಾರು ನಿರ್ದೇಶನಗಳನ್ನು ನೀಡಿರುತ್ತದೆ. ತದನಂತರ ಪತ್ರ ಸಂಖ್ಯೆ DOS(UCB)(BG)(SAF) No.75550/12.07.144/2021–22 ದಿನಾಂಕ 22–07–2021ರ ನಿರ್ದೇಶನದನ್ವಯ ಬ್ಯಾಂಕಿನಲ್ಲಿ ನಿವ್ವಳ ಎನ್.ಪಿ.ಎ. ಶೇಕಡ 10ಕ್ಕಿಂತ ಹೆಚ್ಚಿಗೆ ಇರುವುದರಿಂದ ಡಿವಿಡೆಂಡ್ ಘೋಷಣೆ ಮಾಡದಿರಲು ನಿರ್ದೇಶಿಸಿರುತ್ತದೆಂದು ವಿವರಿಸಿ, ವರದಿ ಸಾಲಿನಲ್ಲಿ ಬ್ಯಾಂಕು ಲಾಭ ಗಳಿಸದೇ ಇರುವುದರಿಂದ ನಿವ್ವಳ ನಫೆ ವಿಲೇವಾರಿಗೆ ಯಾವುದೇ ಮೊತ್ತವನ್ನು ಸೂಚಿಸಿರುವುದಿಲ್ಲವೆಂದು ವಿವರಗಳನ್ನು ಸಭೆಯ ಮುಂದೆ ಮಂಡಿಸಿದರು.

ಮುಂದುವರಿದು, ಬ್ಯಾಂಕಿನ ಇತಿಹಾಸದಲ್ಲಿಯೇ ಮೊದಲ ಬಾರಿಗೆ ನಷ್ಟ ಹೊಂದಿರುವುದು ತುಂಬಾ ಅಸಂತೋಷದ ವಿಷಯವೆಂದು ತಿಳಿಸಿ, ಬ್ಯಾಂಕಿನಲ್ಲಿ ಹೆಚ್ಚಿನ ಸಾಲ ಮತ್ತು ಮುಂಗಡಗಳನ್ನು ನೀಡುವುದರ ಜೊತೆಗೆ ಸುಸ್ತಿ/ಅನುತ್ಪಾದಿತ ಆಸ್ತಿಗಳನ್ನು ವಸೂಲಿ ಮಾಡುವ ಮೂಲಕ ಲಾಭ ಗಳಿಸಲು ಮತ್ತು ಸದಸ್ಯರಿಗೆ ಡಿವಿಡೆಂಡ್ ನೀಡುವಂತಾಗಲು ಅಗತ್ಯ ಕ್ರಮವಿಡುವುದಾಗಿ ತಿಳಿಸಿ, ಬ್ಯಾಂಕು ಲಾಭ ಗಳಿಸದೇ ಇರುವುದರಿಂದ ನಿವ್ವಳ ನಫೆ ವಿಲೇವಾರಿಗೆ ಯಾವುದೇ ಮೊತ್ತವನ್ನು ಸೂಚಿಸದಿರುವುದಕ್ಕೆ ಅನುಮೋದನೆ ನೀಡಬೇಕೆಂದು ಕೋರಿದರು.

ಸಭೆಯಲ್ಲಿ ವಿಷಯವನ್ನು ಚರ್ಚಿಸಿ, ಬ್ಯಾಂಕು 2021–2022ನೇ ಸಾಲಿನಲ್ಲಿ ರೂ.1.42 ಕೋಟಿಗಳ ವ್ಯವಹಾರಿಕ ಲಾಭ ಗಳಿಸಿದ್ದರೂ ಸಹ, ಅನುತ್ಪಾದಿತ ಆಸ್ತಿಗಳು ಮತ್ತು ಅನುತ್ಪಾದಿತ ಹೂಡಿಕೆಗಳಿಗೆ ಹೆಚ್ಚಿನ ಮೊತ್ತವನ್ನು ಕಾದಿರಿಸಿದ (Provision) ಕಾರಣ ರೂ.7.89 ಕೋಟಿಗಳ ನಿವ್ವಳ ನಷ್ಟ ಉಂಟಾಗಿರುವುದರಿಂದ 2021–2022ನೇ ಸಾಲಿಗೆ ಯಾವುದೇ ನಿವ್ವಳ ನಫೆ ವಿಲೇವಾರಿ ಮಾಡದಿರಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

ಬ್ಯಾಂಕು ನಿವ್ವಳ ನಷ್ಟ ಹೊಂದಿರುವುದರಿಂದ ಆಡಳಿತ ಮಂಡಲಿಯು ನಿವ್ವಳ ನಫೆ ವಿಲೇವಾರಿಗೆ ಯಾವುದೇ ಮೊತ್ತವನ್ನು ಸೂಚಿಸದಿರುವುದನ್ನು ಒಪ್ಪಬಹುದೆಂದು ಸದಸ್ಯರಾದ ಶ್ರೀ ಗೋಪಿ.ಜೆ. ಸದಸ್ಯತ್ವ ಸಂಖ್ಯೆ 119142 ರವರು ಒಪ್ಪಿಗೆ ಸೂಚಿಸಿದಾಗ, ಸದಸ್ಯರಾದ ಶ್ರೀಮತಿ ನೇತ್ರಾವತಿ.ಎನ್ ಸದಸ್ಯತ್ವ ಸಂಖ್ಯೆ 120874 ರವರು ಅನುಮೋದಿಸಿದ ಮೇರೆಗೆ ಸಭೆಯು 2021–2022ನೇ ಸಾಲಿಗೆ ಯಾವುದೇ ನಿವ್ವಳ ನಫೆ ವಿಲೇವಾರಿಯನ್ನು ಮಾಡದಂತೆ ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**11) ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಮತ್ತು ಸದಸ್ಯತ್ವದಿಂದ ಸಮಾಪನೆ ಮಾಡಿರುವ ಬಗ್ಗೆ ಪರಿಶೀಲಿಸುವುದು:**

ಬ್ಯಾಂಕಿನ ನಿರ್ದೇಶಕರಾದ ಶ್ರೀ ಬಿ.ಎಲ್.ವೆಂಕಟಾಚಲಪತಿ ಯವರು ವಿಷಯವನ್ನು ಮಂಡಿಸಿ,ವಿವರಣೆಯನ್ನು

ನೀಡುತ್ತಾ, ವಾರ್ಷಿಕ ವರದಿ ಪುಸ್ತಕದ ಪುಟ ಸಂಖ್ಯೆ 10ರಲ್ಲಿ ವಿವರಣೆಗಳನ್ನು ನೀಡಲಾಗಿರುತ್ತದೆ. ಅದರಂತೆ ವರದಿ ಸಾಲಿನಾರಂಭದಲ್ಲಿ ಒಟ್ಟು ಸದಸ್ಯರ ಸಂಖ್ಯೆ 37612 ಇದ್ದು, ವರದಿ ಸಾಲಿನಲ್ಲಿ 107 ಸದಸ್ಯರು ಹೊಸದಾಗಿ ನೊಂದಣಿಯಾಗಿದ್ದು, 1097 ಸದಸ್ಯರು ತಮ್ಮ ಸದಸ್ಯತ್ವವನ್ನು ರದ್ದು ಪಡಿಸಿಕೊಂಡಿದ್ದು ಸಾಲಿನಾಂತ್ಯಕ್ಕೆ 36622 ಸದಸ್ಯರಿರುತ್ತಾರೆ. ಸದಸ್ಯತ್ವವನ್ನು ರದ್ದುಪಡಿಸಿದವರಲ್ಲಿ ಕೆಲವರು ದೈವಾಧೀನರಾಗಿದ್ದು, ಇನ್ನು ಕೆಲವರು ಷೇರು ಹಣವನ್ನು ಸಾಲಕ್ಕೆ ಹೊಂದಾಣಿಕೆ ಮಾಡಿಕೊಂಡ ಕ್ರಮಗಳಿಂದಾಗಿ ಹಾಗೂ ಮತ್ತೆ ಕೆಲವರು ಅನಿವಾರ್ಯ ಕಾರಣಗಳಿಂದ ತಮ್ಮ ಸದಸ್ಯತ್ವವನ್ನು ರದ್ದುಪಡಿಸಿಕೊಂಡಿರುತ್ತಾರೆಂದು ತಿಳಿಸಿ, ವರದಿ ಸಾಲಿನಲ್ಲಿ ಅತಿ ಹೆಚ್ಚು ಸದಸ್ಯರು ಕೋವಿಡ್–19 ರಿಂದಾಗಿ ಮೃತರಾಗಿರುತ್ತಾರೆ ಹಾಗೂ ಬ್ಯಾಂಕಿನಲ್ಲಿ ಸಾಲ ಸೌಲಭ್ಯ ಪಡೆಯುವವರಿಗೆ ಮಾತ್ರ ಸದಸ್ಯತ್ವ ನೀಡುತ್ತಿದ್ದು, ವರದಿ ಸಾಲಿನಲ್ಲಿ ಸಾಲ ಮಂಜೂರಾತಿ ಮಾಡಿರುವ 107 ಸದಸ್ಯರಿಗೆ ಮಾತ್ರ ಸದಸ್ಯತ್ವ ನೀಡಿರುವ ಕಾರಣ ಷೇರು ಬಂಡವಾಳವು ಆರಂಭದ ರೂ.17.74 ಕೋಟಿಗಳಿಂದ ರೂ.16.28 ಕೋಟಿಗಳಿಗೆ ಕುಸಿದಿದ್ದು, ಷೇರು ಸಂಗ್ರಹಣೆಯಲ್ಲಿ ಸುಮಾರು ರೂ.1.46 ಕೋಟಿಗಳಷ್ಟು ಕಡಿಮೆಯಾಗಿದೆಯೆಂದು ವಿವರಿಸಿ, ಸನ್ಮಾನ್ಯ ಸದಸ್ಯರು ಪರಿಶೀಲಿಸಬೇಕೆಂದು ಕೋರಿ, ಸನ್ಮಾನ್ಯ ಸದಸ್ಯರುಗಳು ಸಾಲದ ಪ್ರಸ್ತಾವನೆಗಳನ್ನು ತರುವಂತೆ ಹಾಗೂ ಪರಿಚಯಿಸುವ ಮೂಲಕ ಸದಸ್ಯರ ಮತ್ತು ಷೇರು ಹಣದ ಹೆಚ್ಚಳಕ್ಕೆ ಸಹಕರಿಸಬೇಕೆಂದು ವಿನಂತಿಸಿದರು.

ಸದಸ್ಯರಾದ ಶ್ರೀ ತಿಮ್ಮೇಗೌಡ.ಟಿ. ಸದಸ್ಯತ್ವ ಸಂಖ್ಯೆ 13336 ರವರು ಮಾತನಾಡಿ, ಬ್ಯಾಂಕಿನಲ್ಲಿ ಸಾಲ ಪಡೆಯಲು ಅಗತ್ಯವಿರುವವರು ಬಂದಾಗ ಅಂತಹವರಿಗೆ ಮಾತ್ರ ಸದಸ್ಯತ್ವವನ್ನು ನೀಡಬೇಕು, ಮತ್ತೆ ಕೆಲವರು ಡೂಪ್ಲಿಕೇಟ್ ಸ್ಯಾಲರಿ ಸರ್ಟಿಫಿಕೇಟ್ ತಂದು ಸದಸ್ಯತ್ವ ಪಡೆದು ಬ್ಯಾಂಕಿಗೆ ಮೋಸ ಮಾಡುವ ಸಲುವಾಗಿಯೇ ಬರುತ್ತಾರೆ. ಇಂತಹವರಿಗೆ ಕೆಲವು ಜನ ಸಹಕರಿಸುವವರಿದ್ದಾರೆ. ಆದ್ದರಿಂದ ಸದಸ್ಯತ್ವವನ್ನು ನೀಡುವಾಗ ಎಚ್ಚರಿಕೆ ವಹಿಸುವಂತೆ ಸಲಹೆ ನೀಡಿದರು.

ಉಪಾಧ್ಯಕ್ಷರಾದ ಶ್ರೀ ಡಿ.ಆರ್.ವಿಜಯ ಸಾರಥಿಯವರು ಮಾತನಾಡಿ, ಹೊಸ ಆಡಳಿತ ಮಂಡಲಿ ಬಂದ ನಂತರ 2–3 ವರ್ಷಗಳಿಂದ ಮುಕ್ತ ಸದಸ್ಯತ್ವವನ್ನು (ಓಪನ್ ಮೆಂಬರ್ಶಿಪ್) ನೀಡುತ್ತಿಲ್ಲ. ಸಾಲಗಳಿಗಾಗಿ ಬರುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಸಾಲ ಪಡೆಯಲು ಅರ್ಹತೆಯಿದ್ದಲ್ಲಿ ಮಾತ್ರ ಅಂತಹವರನ್ನು ಸದಸ್ಯರನ್ನಾಗಿ ಮಾಡಿಕೊಂಡು ನಂತರ ಸಾಲ ಮಂಜೂರು ಮಾಡಲಾಗುತ್ತಿದೆ. ಯಾವುದೇ ಬೋಗಸ್ ಮೆಂಬರ್ಶಿಪ್ ನೀಡದಂತೆ ಎಲ್ಲಾ ಎಚ್ಚರಿಕೆಯ ಕ್ರಮಗಳನ್ನು ವಹಿಸಲಾಗಿದೆಯೆಂದು ವಿವರಿಸಿ, ತಾವು ಚರ್ಚೆಯಲ್ಲಿ **"ಸೊಸೈಟಿ"** ಎಂದು ಸಂಭೋದಿಸದೆ **"ಬ್ಯಾಂಕು"** ಎಂದು ಸಂಭೋದಿಸುವಂತೆ ಮನವಿ ಮಾಡಿಕೊಂಡು, ಸೊಸೈಟಿಗಳನ್ನು ಸಂಪೂರ್ಣವಾಗಿ ಸಹಕಾರ ಇಲಾಖೆಯು ನಿಯಂತ್ರಿಸಿದರೆ, ಬ್ಯಾಂಕುಗಳನ್ನು ಭಾರತೀಯ ರಿಸರ್ವ್ ಬ್ಯಾಂಕು ನಿಯಂತ್ರಿಸುತ್ತದೆಂದು ವಿವರಣೆ ನೀಡಿ, ಈ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕು ಸಹ ಸೊಸೈಟಿಗಳು **"ಬ್ಯಾಂಕು"**ಎಂಬ ಪದವನ್ನು ಬಳಸಬಾರದೆಂದು ಆದೇಶಗಳನ್ನು ಹೊರಡಿಸಿದೆಯೆಂದರು.

ಸದಸ್ಯರಾದ ಶ್ರೀಮತಿ ಲಕ್ಷ್ಮಿ.ಕೆ ಸದಸ್ಯತ್ವ ಸಂಖ್ಯೆ 120867 ರವರು ಈ ವಿವರವು ಬ್ಯಾಂಕಿನ ದಾಖಲೆಗಳಲ್ಲಿ ಇರುವುದನ್ನೇ ನೀಡಿರುವುದರಿಂದ ಮತ್ತು ಲೆಕ್ಕ ಪರಿಶೋಧಕರೂ ಸಹ ಇದನ್ನು ದೃಢಪಡಿಸಿರುವುದರಿಂದ ಈ ವಿವರವನ್ನು ಒಪ್ಪಬಹುದೆಂದು ಸೂಚಿಸಿದ ಮೇರೆಗೆ ಸದಸ್ಯರಾದ ಶ್ರೀ ತಿಮ್ಮೇಗೌಡ.ಟಿ. ಸದಸ್ಯತ್ವ ಸಂಖ್ಯೆ 13336 ರವರು ಅನುಮೋದಿಸಿದ ಮೇರೆಗೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

**12) ಮಂಡಲಿ ಮತ್ತು ಪದಾಧಿಕಾರಿಗಳಿಗೆ 2021–2022ನೇ ಸಾಲಿನಲ್ಲಿ ನೀಡಿರುವ ಸಂಭಾವನೆ, ಪ್ರಯಾಣ ಹಾಗೂ ದಿನಭತ್ಯೆಯ ಮೇಲಿನ ವರದಿಯನ್ನು ಪರಿಶೀಲಿಸುವುದು:**

ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರು (ಪ್ರಭಾರ) ವಿಷಯವನ್ನು ಸಭೆಯಲ್ಲಿ ಮಂಡಿಸುತ್ತಾ, ಬ್ಯಾಂಕಿನ ಆಡಳಿತ ಮಂಡಲಿ ಸದಸ್ಯರ ಸೇವೆಯು ಗೌರವಯುತವಾದುದಾರರೂ, ನಿರ್ದೇಶಕರುಗಳು ಸಭೆಗಳಿಗೆ ಹಾಜರಾದಾಗ ಅಥವಾ ನಿರ್ದೇಶಕರಾಗಿ ಬ್ಯಾಂಕಿನ ಯಾವುದೇ ಕೆಲಸಗಳನ್ನು ನಿರ್ವಹಿಸಿದಾಗ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಹಾಗೂ ಬ್ಯಾಂಕಿನ ಬೈಲಾ ಸಂಖ್ಯೆ 53ರಲ್ಲಿ ನಿಗದಿಪಡಿಸಿರುವ ಅನ್ವಯ ನಿರ್ದೇಶಕರುಗಳು ಸಭಾಭತ್ಯೆ, ದಿನಭತ್ಯೆ ಹಾಗೂ ಪ್ರವಾಸ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ. ಇದರನ್ವಯ 2021–2022ನೇ ಸಾಲಿನಲ್ಲಿ ಈ ಬಾಬ್ತಿನಡಿ ರೂ.7.88 ಲಕ್ಷಗಳಷ್ಟು ವೆಚ್ಚ ಮಾಡಲಾಗಿರುತ್ತದೆ. ವರದಿ ಸಾಲಿನಲ್ಲಿ ಆಡಳಿತ ಮಂಡಲಿ ಮತ್ತು ಇತರೆ ಉಪಸಮಿತಿಗಳು ಒಟ್ಟಾರೆಯಾಗಿ ವಿವಿಧ 40 ಸಭೆಗಳನ್ನು ನಡೆಸಿದ್ದು, ಇದರ ಜೊತೆಗೆ ಭದ್ರತಾ ಸಾಲಗಳ ಪ್ರಸ್ತಾವನೆಗಳಿಗೆ ಆಧಾರವಾಗಿ ನೀಡಿರುವ ಸ್ಥಿರಾಸ್ತಿ ಮತ್ತು ಕೈಗಾರಿಕೆಗಳಿಗೆ ಆಡಳಿತ ಮಂಡಲಿ ಸದಸ್ಯರು ಭೇಟಿ ನೀಡಿ ಪರಿವೀಕ್ಷಣೆ ನಡೆಸುತ್ತಿದ್ದು, ಈ ಸಂಬಂಧ ಭತ್ಯೆಗಳನ್ನು ನೀಡಲಾಗಿದ್ದು, ಇದಕ್ಕೆ ಮಾನ್ಯ ಸದಸ್ಯರುಗಳು ಅನುಮತಿ ನೀಡಬೇಕೆಂದು ಕೋರಿದರು.

ಸದಸ್ಯರಾದ ಶ್ರೀಮತಿ ರಾಧ ಸದಸ್ಯತ್ವ ಸಂಖ್ಯೆ 121742 ರವರು ಮಾತನಾಡಿ, ಎಲ್ಲ ಸರಿ ಇರುವುದರಿಂದ ಓದುವುದು ಬೇಡ, ಮುಂದಿನ ವಿಷಯಕ್ಕೆ ಹೋಗಬಹುದೆಂದು ತಿಳಿಸಿದರು.

ಸದಸ್ಯರಾದ ಶ್ರೀ ತಿಮ್ಮೇಗೌಡ.ಟಿ. ಸದಸ್ಯತ್ವ ಸಂಖ್ಯೆ 13336 ರವರು ಮಾತನಾಡಿ, ಬ್ಯಾಂಕಿನ ಆರ್ಥಿಕ ಪರಿಸ್ಥಿತಿ ಹೀಗಿರುವಾಗ ನಮ್ಮ ಬ್ಯಾಂಕಿನ ಪದಾಧಿಕಾರಿಗಳು ಆರ್ಥಿಕವಾಗಿ ಸಬಲರಾಗಿರುವುದರಿಂದ ಭತ್ಯೆಗಳನ್ನು ಪಡೆಯದೆ ಉಚಿತವಾಗಿ ಸೇವೆ ಸಲ್ಲಿಸಬಹುದೆಂದು ತಿಳಿಸಿ, ಸಾಧ್ಯವಾದಷ್ಟು ಖರ್ಚು–ವೆಚ್ಚಗಳನ್ನು ತಗ್ಗಿಸುವಂತೆ ಸಲಹೆ ನೀಡಿದರು.

ಇದಕ್ಕೆ ಸಲಹೆಗಾರರಾದ ಶ್ರೀ ಬಿ.ಆರ್.ನಾಗರಾಜ ಅವರು ಪ್ರತಿಕ್ರಿಯಿಸಿ, ಒಂದೇ ದಿನ 3–4 ಸಭೆಗಳನ್ನು ನಡೆಸಲಾಗುತ್ತಿದ್ದು ಒಂದೇ ಕನ್ವೆಯನ್ಸ್ ನೀಡುವ ಮೂಲಕ ವೆಚ್ಚಗಳನ್ನು ಕಡಿಮೆ ಮಾಡಲಾಗುತ್ತಿದೆ ಹಾಗೂ ಬ್ಯಾಂಕಿನಲ್ಲಿ ರೆಮ್ಯುನರೇಷನ್ ಖಾತೆಯಲ್ಲಿ ಹಣ ಖರ್ಚು ಹಾಕಲೇಬೇಕು. ಉಚಿತವಾಗಿ ಸೇವೆ ಸಲ್ಲಿಸಿದರೆ ಅದು ತಪ್ಪು ಅರ್ಥ ಕಲ್ಪಿಸುವುದರಿಂದ, ಇಲಾಖೆ ಸೂಚಿಸಿರುವಂತೆ ಬೈಲಾ ರೀತ್ಯಾ ಭತ್ಯೆಗಳನ್ನು ಪಾವತಿಸಲಾಗುತ್ತಿದೆಯೆಂದು ವಿವರ ನೀಡಿದರು.

ಸದಸ್ಯರಾದ ಶ್ರೀ ಪ್ರಮೋದ್.ಹೆಚ್. ಸದಸ್ಯತ್ವ ಸಂಖ್ಯೆ 19976 ರವರು ಮಾತನಾಡಿ, ನಿರ್ದೇಶಕರುಗಳಿಗೆ ಹಾಲಿ ನೀಡುತ್ತಿರುವ ಸಭಾಭತ್ಯೆಯನ್ನು (Honorarium–ಗೌರವಧನ) ದ್ವಿಗುಣಗೊಳಿಸುವಂತೆ ಸಲಹೆ ನೀಡಿ, ಇದರಿಂದ ಅವರಿಗೆ ಹೆಚ್ಚಿನ ಜವಾಬ್ದಾರಿಗಳು ಬರುವ ಮೂಲಕ ಬ್ಯಾಂಕು ಲಾಭ ಗಳಿಸಲು ಸಾಧ್ಯವಾಗುತ್ತದೆಂದು ತಿಳಿಸಿದಾಗ, ಸಲಹೆಗಾರರಾದ ಶ್ರೀ ಬಿ.ಆರ್.ನಾಗರಾಜ ಅವರು ಮಾತನಾಡಿ, ಸಭಾಭತ್ಯೆಗಳನ್ನು ಬೈಲಾ ರೀತ್ಯಾ ನೀಡಲು ಮಾತ್ರ ಅವಕಾಶವಿದ್ದು ಡಬಲ್ ನೀಡಲು ಅವಕಾಶವಿಲ್ಲವೆಂದು ವಿವರಿಸಿದರು.

ಉಪಾಧ್ಯಕ್ಷರಾದ ಶ್ರೀ ಡಿ.ಆರ್. ವಿಜಯ ಸಾರಥಿಯವರು ಮಾತನಾಡಿ, ಶ್ರೀ ಪ್ರಮೋದ್.ಹೆಚ್. ರವರು ಭತ್ಯೆಗಳನ್ನು ಡಬಲ್ ಮಾಡಲು ಹೇಳುತ್ತಿದ್ದು, ಶ್ರೀ ತಿಮ್ಮೇಗೌಡ.ಟಿ ರವರು ಭತ್ಯೆಗಳನ್ನು ಪಡೆಯುವುದು ಬೇಡವೆಂದು ತಿಳಿಸುತ್ತಿದ್ದಾರೆ. ಆದರೆ ನಾವುಗಳೆಲ್ಲರೂ ಸಹ ಸೇವೆಯನ್ನು ಗೌರವಯುತವಾಗಿ ಸಲ್ಲಿಸಬೇಕೆಂಬ ಮನಸ್ಥಿತಿ ಹೊಂದಿರುವವರೆ ಹೊರತು ಭತ್ಯೆಗಳು ಡಬಲ್ ಆದರೆ ಆಸಕ್ತಿಯಿಂದ ಕೆಲಸ ಮಾಡುತ್ತಾರೆ, ಸಿಂಗಲ್ ಭತ್ಯೆ ಆದರೆ ನಿರಾಸಕ್ತಿಯಿಂದ ಕೆಲಸ ಮಾಡಬೇಕೆಂಬ ಮನೋಭಾವನೆ ಇರುವವರು ಯಾರು ಇಲ್ಲವೆಂದು ತಿಳಿಸಿದಾಗ, ಶ್ರೀ ಪ್ರಮೋದ್.ಹೆಚ್. ರವರು ಮಾತನಾಡಿ, ನಾನು ಆ ಅರ್ಥದಲ್ಲಿ ಹೇಳಿರುವುದಿಲ್ಲ, ಕೆಲವು ಸಂಘಸಂಸ್ಥೆಗಳು ಈ ರೀತಿ ಮಾಡಿಕೊಂಡಿವೆ. ನಿರ್ದೇಶಕರುಗಳು ಸಹ ಆಟೋ/ಟ್ಯಾಕ್ಸಿ ಇತ್ಯಾದಿಗಳಲ್ಲಿ

ಬಂದು ಹೋಗುವ ಖರ್ಚು–ವೆಚ್ಚಗಳಿಗೆ ಸರಿದೂಗಲೆಂಬ ಅರ್ಥದಲ್ಲಿ ತಿಳಿಸಿರುವುದಾಗಿ ವಿವರಣೆ ನೀಡಿದರು. ಆಗ ಶ್ರೀ ಡಿ.ಆರ್.ವಿಜಯ ಸಾರಥಿಯವರು ಮಾತನಾಡಿ ಬ್ಯಾಂಕು ನಮಗೆಲ್ಲ ವಾಹನದಲ್ಲಿ ಬಂದು ಹೋಗುವ ಖರ್ಚು–ವೆಚ್ಚಗಳಿಗೆ ಅಗತ್ಯವಿರುವಷ್ಟು ಭತ್ಯೆಯನ್ನು ನೀಡುತ್ತಿದೆಯೆಂದು ತಿಳಿಸಿದರು.

ಸದಸ್ಯರಾದ ಶ್ರೀ ಪ್ರಮೋದ್.ಹೆಚ್. ಸದಸ್ಯತ್ವ ಸಂಖ್ಯೆ 19976 ರವರು ಒಪ್ಪಿಗೆ ಸೂಚಿಸಿ ಸದಸ್ಯರಾದ ಶ್ರೀ ತಿಮ್ಮೇಗೌಡ.ಟಿ ಸದಸ್ಯತ್ವ ಸಂಖ್ಯೆ 13336 ರವರು ಅನುಮೋದಿಸಿದ ಮೇರೆಗೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

**13) ಬ್ಯಾಂಕಿನ ಹಾಲಿ ಸ್ವಂತ ಹಳೆ ಕಲ್ಲು ಕಟ್ಟಡ ಸಂಖ್ಯೆ.188, ಆರ್.ವಿ.ರಸ್ತೆ, ಬೆಂಗಳೂರು–560004 ಈ ಸ್ಥಿರಾಸ್ತಿಯನ್ನು ಕಾನೂನು ರೀತ್ಯಾ ಪಾರದರ್ಶಕತೆಯನ್ನು ಪಾಲಿಸಿ ಬಹಿರಂಗ ಹರಾಜಿನಲ್ಲಿ ಮಾರಾಟ ಮಾಡಿ ಬಂದ ಹಣದಿಂದ ಬ್ಯಾಂಕಿನ ಉಪಯೋಗಕ್ಕಾಗಿ ಬೇರೆ ಕಡೆ ಸ್ವಂತ ಕಟ್ಟಡಗಳನ್ನು ಖರೀದಿಸಲು ಅನುಮತಿ ನೀಡುವುದು:**

ಉಪಾಧ್ಯಕ್ಷರಾದ ಶ್ರೀ ಡಿ.ಆರ್.ವಿಜಯ ಸಾರಥಿಯವರು ವಿಷಯದ ವಿವರಣೆ ನೀಡುತ್ತಾ, ವಾರ್ಷಿಕ ವರದಿ ಪುಟ ಸಂಖ್ಯೆ 26 ಮತ್ತು 27ರಲ್ಲಿ ತಿಳಿಸಿರುವಂತೆ, ಬ್ಯಾಂಕಿನ ಕೇಂದ್ರ ಕಛೇರಿಯ ಮುಂಭಾಗದಲ್ಲಿಯೇ ಇರುವ ಹಾಗೂ ಸುಮಾರು 2380.75 ಚದರ ಅಡಿಗಳ ವಿಸ್ತೀರ್ಣ ಹೊಂದಿರುವ ಕಟ್ಟಡವು ಹರಾಜಿನ ಮೂಲಕ ಮಾರಾಟಕ್ಕೆ ಇದ್ದ ಕಾರಣ, ದಿನಾಂಕ 17–05–2006ರಂದು ನಡೆದ ಆಡಳಿತ ಮಂಡಲಿಯ ತೀರ್ಮಾನದಂತೆ ಸಂಖ್ಯೆ.188, ಆರ್.ವಿ.ರಸ್ತೆ, ಬೆಂಗಳೂರು–560004 ಕಟ್ಟಡವನ್ನು ದಿನಾಂಕ 08–06–2006 ರಂದು ನಡೆದ **ಟೆಂಡರ್–ಕಂ–ಹರಾಜಿನ** ಮೂಲಕ ರೂ.1,67,00,000–00 (ನೊಂದಣಿ ಮತ್ತು ಇತರೆ ಖರ್ಚುಗಳನ್ನು ಹೊರತುಪಡಿಸಿ)ಗಳಿಗೆ ಖರೀದಿಸಿದ್ದು, ಹಾಲಿ ಎಲ್ಲಾ ಶಾಖೆಗಳ ಕಡತಗಳ ಸಂಗ್ರಹಣೆ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ಶೇಖರಣೆಗಾಗಿ ಸದರಿ ಕಟ್ಟಡವನ್ನು ಉಪಯೋಗಿಸಲಾಗುತ್ತಿದೆ.

ಬ್ಯಾಂಕು **"ರಜತ ಭವನ"** ನಂ.106, ಆರ್.ವಿ.ರಸ್ತೆ, ವಿ.ವಿ.ಪುರಂ, ಬೆಂಗಳೂರು–560004ರಲ್ಲಿ ಸ್ವಂತ ಕಟ್ಟಡವನ್ನು ಹೊಂದಿದ್ದು, ಸದರಿ ಕಟ್ಟಡದಲ್ಲಿ ಆಡಳಿತ ಕಛೇರಿ ಮತ್ತು ವಿ.ವಿ.ಪುರಂ ಶಾಖೆಗಳ ವ್ಯವಹಾರಗಳನ್ನು ನಡೆಸುತ್ತಿದ್ದು, ಉಳಿದ ಎಂಟು (8) ಶಾಖೆಗಳು ಬಾಡಿಗೆ ಕಟ್ಟಡಗಳಲ್ಲಿ ವ್ಯವಹರಿಸುತ್ತಿದ್ದು, ಬಾಡಿಗೆಯಾಗಿ ವಾರ್ಷಿಕ ಸುಮಾರು ರೂ.80.00 ಲಕ್ಷಗಳನ್ನು ಖರ್ಚು ಮಾಡುತ್ತಿದ್ದು, ಇದು ಬ್ಯಾಂಕಿಗೆ ಹೆಚ್ಚಿನ ಹೊರೆಯಾಗಿದೆ ಹಾಗೂ ಮಾರಾಟ ಮಾಡಲು ಉದ್ದೇಶಿಸಿರುವ ಬ್ಯಾಂಕಿನ ಹಳೇ ಕಲ್ಲು ಕಟ್ಟಡ ಸಂಖ್ಯೆ.188, ಆರ್.ವಿ.ರಸ್ತೆ, ಬೆಂಗಳೂರು–560004 ಸ್ಥಿರಾಸ್ತಿಯನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಕಾನೂನಿನ ರೀತ್ಯಾ ಬಾಡಿಗೆ ನೀಡಿ ಆದಾಯ ಗಳಿಸಲು ಸಹ ಅವಕಾಶ ಇಲ್ಲದಿರುವುದು ಬ್ಯಾಂಕಿಗೆ ಲಾಭದಾಯಕವಾಗಿರುವುದಿಲ್ಲ. ಆದ್ದರಿಂದ ಸದರಿ ಕಟ್ಟಡವನ್ನು ಕಾನೂನು ರೀತ್ಯಾ ಪಾರದರ್ಶಕತೆಯನ್ನು ಪಾಲಿಸಿ ಬಹಿರಂಗ ಹರಾಜಿನಲ್ಲಿ ಮಾರಾಟ ಮಾಡಿ ಬಂದ ಹಣದ ಜೊತೆಗೆ ಬ್ಯಾಂಕಿನ ಕಟ್ಟಡ ನಿಧಿಯಲ್ಲಿರುವ ಹಣವನ್ನು ಸೇರಿಸಿ ಬ್ಯಾಂಕಿನ ಶಾಖೆಗಳ ಉಪಯೋಗಕ್ಕಾಗಿ ಸೂಕ್ತ ಸ್ಥಳ ಪರಿಶೀಲಿಸಿ, ಖಾಲಿ ನಿವೇಶನಗಳನ್ನು ಖರೀದಿಸಿ ಕಟ್ಟಡಗಳನ್ನು ನಿರ್ಮಿಸುವುದು ಅಥವಾ ಸೂಕ್ತ ಕಟ್ಟಡಗಳನ್ನು ಖರೀದಿಸುವ ಮೂಲಕ ಶಾಖೆಗಳಿಗೆ ಸ್ವಂತ ಕಟ್ಟಡಗಳನ್ನು ಹೊಂದುವುದು ಲಾಭದಾಯಕ ಮತ್ತು ಉಪಯುಕ್ತವಾಗಿರುವುದರಿಂದ ಬ್ಯಾಂಕಿನ ಆಡಳಿತ ಕಛೇರಿಯ ಮುಂಭಾಗದಲ್ಲಿರುವ ಸ್ವಂತ ಹಳೆಯ ಕಲ್ಲು ಕಟ್ಟಡಸಂಖ್ಯೆ.188,ಆರ್.ವಿ.ರಸ್ತೆ, ಬೆಂಗಳೂರು–560004 ಈ ಕಟ್ಟಡವನ್ನು ಮಾರಾಟ ಮಾಡಲು ಮತ್ತು ಶಾಖೆಗಳಿಗೆ ಖಾಲಿ ನಿವೇಶನಗಳನ್ನು ಖರೀದಿಸಿ ಕಟ್ಟಡಗಳನ್ನು ನಿರ್ಮಿಸಲು ಅಥವಾ ಸೂಕ್ತ ಕಟ್ಟಡಗಳನ್ನು ಖರೀದಿಸಲು ಅನುಮೋದನೆ ನೀಡಬೇಕೆಂದು ಕೋರಿದರು.

ಸದಸ್ಯರಾದ ಶ್ರೀಮತಿ ಭಾರತಿ.ಬಿ.ರಾವ್ ಸದಸ್ಯತ್ವ ಸಂಖ್ಯೆ 120875 ರವರು ಮಾತನಾಡಿ, ಪುಟ ಸಂಖ್ಯೆ 7ರಲ್ಲಿ ಬ್ಯಾಂಕಿನ ಕಟ್ಟಡದ ಮಾರಾಟದ ಬಗ್ಗೆ ತಿಳಿಸಿರುವಿರಿ, ಮುಂದಿನ ನಿರ್ಧಾರವೇನೆಂದು ಪ್ರಶ್ನಿಸಿದರು.

ಉಪಾಧ್ಯಕ್ಷರಾದ ಶ್ರೀ ಡಿ.ಆರ್.ವಿಜಯ ಸಾರಥಿಯವರು ಮಾತನಾಡಿ, ಸದರಿ ಕಟ್ಟಡವು 1905ರಲ್ಲಿ ನಿರ್ಮಾಣವಾಗಿದ್ದು, ಸುಮಾರು 115 ವರ್ಷಗಳ ಹಳೆಯ ಕಟ್ಟಡವಾಗಿದೆ. ಕಾರ್ಪೊರೇಷನ್ ರೂಲ್ಸ್ ಪ್ರಕಾರವೂ ಇದು ಹಳೆಯ ಕಟ್ಟಡವಾಗಿದ್ದು ಬಳಕೆಗೂ ಸಹ ತೊಂದರೆಯಾಗುವುದರಿಂದ ಅದನ್ನು ಮಾರಾಟ ಮಾಡಿ ಮೂರು ಶಾಖೆಗಳಿಗೆ ಸ್ವಂತ ಕಟ್ಟಡಗಳನ್ನು ಹೊಂದಬೇಕೆಂಬುದು ಆಡಳಿತ ಮಂಡಲಿಯ ಉದ್ದೇಶವಾಗಿದೆ. ಆದ್ದರಿಂದ ಸದರಿ ಕಟ್ಟಡವನ್ನು ಇಲಾಖಾ ಅನುಮತಿ ಪಡೆದು ಕಾನೂನುಬದ್ಧವಾಗಿ ಬಹಿರಂಗ ಹರಾಜಿನ ಮೂಲಕ ಮಾರಾಟ ಮಾಡಿ, ಬರುವ ಹಣದಿಂದ ಹಾಗೂ ಕಟ್ಟಡ ನಿಧಿಯಲ್ಲಿರುವ ಹಣವನ್ನು ಉಪಯೋಗಿಸಿಕೊಂಡು ಬ್ಯಾಂಕಿಗೆ 2-3 ಸ್ಥಿರಾಸ್ತಿಗಳನ್ನು ಮಾಡುವ ಉದ್ದೇಶ ಹೊಂದಲಾಗಿದೆಯೆಂದರು.

ಸದಸ್ಯರಾದ ಶ್ರೀ ತಿಮ್ಮೇಗೌಡ.ಟಿ ಸದಸ್ಯತ್ವ ಸಂಖ್ಯೆ 13336 ರವರು ಮಾತನಾಡಿ, ಸದರಿ ಕಟ್ಟಡವು ಒಂದು **"ಹೆರಿಟೇಜ್"** ಕಟ್ಟಡದಂತಿರುವುದರಿಂದ ಅದನ್ನು ಹಾಗೆಯೇ ಉಳಿಸಿಕೊಳ್ಳಲು ಏಕೆ ಪ್ರಯತ್ನಿಸಬಾರದು? ಸರ್ಕಾರದಿಂದ ಸಿ.ಎ. ಸೈಟ್ ಪಡೆಯಲು ಏಕೆ ಪ್ರಯತ್ನಿಸಬಾರದೆಂದು ಪ್ರಶ್ನಿಸಿದಾಗ,

ಉಪಾಧ್ಯಕ್ಷರಾದ ಶ್ರೀ ಡಿ.ಆರ್.ವಿಜಯ ಸಾರಥಿಯವರು ಉತ್ತರಿಸುತ್ತಾ, ಸರ್ಕಾರವು ಬ್ಯಾಂಕುಗಳಿಗೆ ಸಿ.ಎ. ಸೈಟ್‌ಗಳನ್ನು ನೀಡುವುದಿಲ್ಲ, ಅದು ಶಿಕ್ಷಣ ಸಂಸ್ಥೆಗಳಿಗೆ ಅಥವಾ ಆಸ್ಪತ್ರೆಗಳಿಗೆ ಮಾತ್ರ ಅವಕಾಶವಿದೆ ಹೊರತು ವಾಣಿಜ್ಯ (ಕರ್ಮಷಿಯಲ್) ವ್ಯವಹಾರಗಳನ್ನು ನಡೆಸುವ ಬ್ಯಾಂಕುಗಳಿಗೆ ನೀಡುವುದಿಲ್ಲ. ಅದೇ ರೀತಿ **"ಹೆರಿಟೇಜ್"** ಕಟ್ಟಡ ಮಾಡಲು ಸಲಹೆ ನೀಡಿರುವಿರಿ, **"ಹೆರಿಟೇಜ್"**ಬಿಲ್ಡಿಂಗ್ ಮಾಡಿ ಯಾವುದೇ ವಾಣಿಜ್ಯ ವ್ಯವಹಾರ ಮಾಡುವಂತಿಲ್ಲ, ಹೈಟೆಕ್ ಬಿಲ್ಡಿಂಗ್ ಮಾಡಿ ಬೇರೆಯವರಿಗೆ ಬಾಡಿಗೆಗೆ ನೀಡುವಂತಿಲ್ಲ ಆದ್ದರಿಂದ ಏನೇ ಮಾಡಿದರೂ ಸ್ವಂತ ಕಟ್ಟಡಗಳನ್ನು ಹೊಂದಿ ಬಾಡಿಗೆಗಳನ್ನು ಕಡಿಮೆ ಮಾಡುವ ಉದ್ದೇಶ ಹೊಂದಿದ್ದೇವೆಂದು ವಿವರಿಸಿದರು. ನಮ್ಮಲ್ಲಿ ಈಗ ಹಾಲಿ ರೂ.2.50 ಕೋಟಿ ಬಿಲ್ಡಿಂಗ್ ಫಂಡ್ ಇದ್ದು, ಸದರಿ ಕಟ್ಟಡವನ್ನು ಮಾರಾಟ ಮಾಡಿ ಬರುವ ಹಣ ಸೇರಿಸಿ 2-3 ಶಾಖೆಗಳಿಗೆ ಸ್ವಂತ ಕಟ್ಟಡಗಳನ್ನು ಹೊಂದುವುದು ನಮ್ಮೆಲ್ಲರ ಉದ್ದೇಶವಾಗಿದ್ದು, ಆಡಳಿತ ಮಂಡಲಿಯು ಅನುಮೋದಿಸಿ, ಮಹಾಸಭೆಯ ಅನುಮೋದನೆಗಾಗಿ ತಮ್ಮ ಮುಂದೆ ಮಂಡಿಸಿರುವುದಾಗಿ ತಿಳಿಸಿ, ತಾವುಗಳು ಮಂಜೂರಾತಿ ನೀಡಿದರೆ, ಪ್ರಸ್ತಾವನೆಯನ್ನು ಇಲಾಖೆಯ ಅನುಮತಿಗಾಗಿ ಕಳಿಸಿ, ಅನುಮತಿ ಪಡೆದು ಮುಂದಿನ ಕ್ರಮಗಳನ್ನು ಜರುಗಿಸುವುದಾಗಿ ತಿಳಿಸಿದಾಗ, ಸದಸ್ಯರಾದ ಶ್ರೀ ಪ್ರಮೋದ್.ಹೆಚ್. ಸದಸ್ಯತ್ವ ಸಂಖ್ಯೆ 19976 ರವರು ಮಾತನಾಡಿ ಸುತ್ತ ಮುತ್ತ ಅಂಗಡಿಗಳನ್ನು ಮಾಡಿ ಮಧ್ಯದಲ್ಲಿ ಬ್ಯಾಂಕ್ ಮಾಡಿದರೆ ಬಾಡಿಗೆ ಆದಾಯ ಬರುತ್ತದೆಂದು ಸಲಹೆ ನೀಡಿದಾಗ, ಉಪಾಧ್ಯಕ್ಷರು ಮಾತನಾಡಿ, ಈಗ ತಾನೆ ತಿಳಿಸಿದಂತೆ ಕೋ-ಆಪರೇಟೀವ್ ಕಾನೂನಿನಲ್ಲಿ ನಾನ್ ಬ್ಯಾಂಕಿಗೆ ವ್ಯವಹಾರಗಳನ್ನು ನಡೆಸಲು ಅವಕಾಶವಿಲ್ಲದ ಕಾರಣ ಹಾಗೆ ಮಾಡಲು ಸಾಧ್ಯವಿಲ್ಲವೆಂದು ಮತ್ತೊಮ್ಮೆ ವಿವರಿಸಿದರು.

ಸದಸ್ಯರಾದ ಶ್ರೀ ಪ್ರಮೋದ್.ಹೆಚ್. ಸದಸ್ಯತ್ವ ಸಂಖ್ಯೆ 19976 ರವರು ಬ್ಯಾಂಕಿನ ಹಾಲಿ ಸ್ವಂತ ಹಳೆ ಕಲ್ಲು ಕಟ್ಟಡ ಸಂಖ್ಯೆ.188, ಆರ್.ವಿ.ರಸ್ತೆ, ಬೆಂಗಳೂರು-560004 ಈ ಸ್ಥಿರಾಸ್ತಿಯನ್ನು ಕಾನೂನು ರೀತ್ಯಾ ಪಾರದರ್ಶಕತೆಯನ್ನು ಪಾಲಿಸಿ ಬಹಿರಂಗ ಹರಾಜಿನಲ್ಲಿ ಮಾರಾಟ ಮಾಡಿ ಬಂದ ಹಣದ ಜೊತೆಗೆ ಬ್ಯಾಂಕಿನಲ್ಲಿ ಲಭ್ಯವಿರುವ ಕಟ್ಟಡ ನಿಧಿಯಲ್ಲಿನ ಹಣವನ್ನು ಹೊಂದಿಸಿಕೊಂಡು ಬ್ಯಾಂಕಿನ ಶಾಖೆಗಳ

ಉಪಯೋಗಕ್ಕಾಗಿ ಪ್ರತಿಷ್ಠಿತ ಬಡಾವಣೆಗಳಲ್ಲಿ ಖಾಲಿ ನಿವೇಶನಗಳನ್ನು ಖರೀದಿಸಿ ಕಟ್ಟಡಗಳನ್ನು ನಿರ್ಮಿಸಲು ಅಥವಾ ಸೂಕ್ತ ಕಟ್ಟಡಗಳನ್ನು ಖರೀದಿಸಲು ಒಪ್ಪಿಗೆ ಸೂಚಿಸಿದ ಮೇರೆಗೆ ಶ್ರೀಮತಿ ಸುಮ.ಪಿ. ಸದಸ್ಯತ್ವ ಸಂಖ್ಯೆ 120865 ರವರು ಅನುಮೋದಿಸಿದ ಮೇರೆಗೆ ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**14) ಮುನ್ಸೂಚನೆಯ ಮೇರೆಗೆ ಸಭಾಪತಿಯವರ ಅನುಮತಿ ಮೇರೆಗೆ ಚರ್ಚಿಸಬಹುದಾದ ವಿಷಯಗಳು:**

ಪ್ರಧಾನ ವ್ಯವಸ್ಥಾಪಕರು (ಪ್ರಭಾರ) ಮಾತನಾಡಿ, ಮಹಾಸಭೆಯಲ್ಲಿ ಬ್ಯಾಂಕಿನ ಆಡಳಿತ ವಿಷಯದಲ್ಲಿ ಯಾವುದಾದರೂ ಚರ್ಚಿಸತಕ್ಕ ವಿಷಯವಿದ್ದರೆ 5 ದಿನಗಳ ಮುಂಚಿತವಾಗಿ ಚರ್ಚೆಯ ವಿಷಯವನ್ನು ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಿಗೆ (ಪ್ರಭಾರ) ಲಿಖಿತ ಮೂಲಕ ತಲುಪಿಸಬೇಕೆಂದು ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯ ಪುಟ ಸಂಖ್ಯೆ 6ರಲ್ಲಿ ತಿಳಿಸಿದ್ದ ಮೇರೆಗೆ ನಿಗದಿತ ಅವಧಿಯೊಳಗೆ ಯಾವುದೇ ಲಿಖಿತ ಪತ್ರಗಳು ಬಂದಿರುವುದಿಲ್ಲವೆಂದು ಮಹಾಸಭೆಗೆ ತಿಳಿಸಿದರು.

**ಶ್ರೀಮತಿ ರೂಪ.ಜಿ.ಎಂ.**ಸದಸ್ಯತ್ವ ಸಂಖ್ಯೆ 121087 ರವರು ಬ್ಯಾಂಕಿನ ಸುವರ್ಣ ಮಹೋತ್ಸವ ಯಾವಾಗ ಆಚರಿಸಲಾಗುವುದೆಂದು ಪ್ರಶ್ನಿಸಿದರು.

**ಶ್ರೀ ಪ್ರಮೋದ್.ಹೆಚ್**. ಸದಸ್ಯತ್ವ ಸಂಖ್ಯೆ 19976 ರವರು ಬ್ಯಾಂಕಿನ ಸುವರ್ಣ ಮಹೋತ್ಸವದ ಅಂಗವಾಗಿ ಎಲ್ಲ ಸದಸ್ಯರಿಗೆ ಸುವರ್ಣವನ್ನು ಉಡುಗೊರೆಯಾಗಿ ನೀಡಬೇಕೆಂದು ಸಲಹೆ ನೀಡಿದರು.

**ಶ್ರೀ ತಿಮ್ಮೇಗೌಡ.ಟಿ** ಸದಸ್ಯತ್ವ ಸಂಖ್ಯೆ 13336 ರವರು ಸುವರ್ಣ ಮಹೋತ್ಸವವನ್ನು ನಡೆಸಲು ಈಗಾಗಲೇ ನಿಧಿಯನ್ನು ಕ್ರೋಢೀಕರಿಸಿರುವುದರಿಂದ ಸಮಾರಂಭವನ್ನು ಉತ್ತಮವಾಗಿ ಆಚರಿಸಬೇಕು ಹಾಗೂ ಎಲ್ಲಾ ಸದಸ್ಯರಿಗೂ ಉಡುಗೊರೆಗಳು ಲಭಿಸುವಂತೆ ಕ್ರಮವಿಡಬೇಕು. ಸಮಾರಂಭಕ್ಕೆ ಬಂದವರಿಗೆ ಮಾತ್ರ ನೀಡಿ ಉಳಿದ ಸದಸ್ಯರಿಗೆ ನೀಡದೆ ಯಾವುದೇ ತಾರತಮ್ಯ ಮಾಡಬಾರದು ಹಾಗೂ ಕಲ್ಯಾಣ ಮಂಟಪದಲ್ಲಿ ನಡೆಸಿದರೆ ಸ್ಥಳಾವಕಾಶ ಸಾಕಾಗುವುದಿಲ್ಲ ಆದ್ದರಿಂದ ಪ್ಯಾಲೇಸ್ ಗ್ರೌಂಡ್‌ನಲ್ಲಿ ನಡೆಸಬೇಕೆಂದು ಸಲಹೆ ನೀಡಿ, ಬ್ಯಾಂಕಿಗೆ ಹೊಸ ಎಂ.ಡಿ. ನೇಮಕ ಮಾಡುವ ವಿಷಯದ ಬಗ್ಗೆ ಸಭೆಗೆ ಮಾಹಿತಿ ನೀಡುವಂತೆ ತಿಳಿಸಿದರು.

**ಶ್ರೀ ಶ್ರೀನಿವಾಸರಾವ್.ಬಿ.ಆರ್**. ಸದಸ್ಯತ್ವ ಸಂಖ್ಯೆ 103100 ರವರು ಬ್ಯಾಂಕಿನಲ್ಲಿ ಜೆರಾಕ್ಸ್ ಮಿಷನ್ ಅಳವಡಿಸಿಕೊಳ್ಳುವಂತೆ ಹಾಗೂ ಎಲ್ಲಾ ಸಿಬ್ಬಂದಿಗಳಿಗೆ ಸಮವಸ್ತ್ರ ಕಲ್ಪಿಸಿಕೊಡುವಂತೆ ಸಲಹೆ ನೀಡಿದರು.

ಉಪಾಧ್ಯಕ್ಷರು ಉತ್ತರಿಸಿ, ಬ್ಯಾಂಕಿನ ಸುವರ್ಣ ಮಹೋತ್ಸವವನ್ನು 2022ರ ಡಿಸೆಂಬರ್ ಅಂತ್ಯದೊಳಗೆ ಮಾಡುವ ಉದ್ದೇಶ ಹೊಂದಲಾಗಿದ್ದು, ಕಾನೂನಿನ ಇತಿಮಿತಿಯೊಳಗೆ ಉಡುಗೊರೆಯನ್ನು ನೀಡಲಾಗುವುದು. ಸಮಾರಂಭಕ್ಕೆ ಬರದೆ ಇರುವ ಸದಸ್ಯರುಗಳು ಉಡುಗೊರೆಗಳನ್ನು ಪಡೆಯಲು ಒಂದು ತಿಂಗಳ ಕಾಲಾವಕಾಶವನ್ನು ನೀಡಿ, ಅಷ್ಟರೊಳಗೆ ಪಡೆಯಲು ತಿಳಿಸಲಾಗುವುದು ಹಾಗೂ ಸುವರ್ಣ ಮಹೋತ್ಸವವನ್ನು ಪ್ಯಾಲೇಸ್ ಗ್ರೌಂಡ್‌ನಲ್ಲಿ ನಡೆಸುವ ಬಗ್ಗೆ ಎಲ್ಲ ರೂಪುರೇಷೆಗಳನ್ನು ಸಿದ್ಧಪಡಿಸಲಾಗುತ್ತಿದೆಯೆಂದು ತಿಳಿಸಿ, ಬ್ಯಾಂಕಿನಲ್ಲಿ ಜೆರಾಕ್ಸ್ ಮಿಷನ್ ಅಳವಡಿಸಿಕೊಳ್ಳುವ ಬಗ್ಗೆ ಕ್ರಮವಿಡಲಾಗುವುದು ಹಾಗೂ ಸಿಬ್ಬಂದಿಗಳಿಗೆ ಸಮವಸ್ತ್ರ ಒದಗಿಸುವ ಬಗ್ಗೆ ಮುಂದೆ ಚರ್ಚಿಸಿ ತೀರ್ಮಾನಿಸಲಾಗುವುದೆಂದು ತಿಳಿಸಿದರು.

ಸಲಹೆಗಾರರಾದ ಶ್ರೀ ಬಿ.ಆರ್.ನಾಗರಾಜ ರವರು ಮಾತನಾಡಿ, ಬ್ಯಾಂಕಿಗೆ ಹೊಸ ಪ್ರಧಾನ ವ್ಯವಸ್ಥಾಪಕರ (ಜಿ.ಎಂ.)/ವ್ಯವಸ್ಥಾಪಕ ನಿರ್ದೇಶಕರ (ಎಂ.ಡಿ.) ನೇಮಕ/ಮರು ನೇಮಕ ಕುರಿತು ಪ್ರಸ್ತಾವನೆಯನ್ನು

ಆರ್.ಬಿ.ಐ.ಗೆ ಸಲ್ಲಿಸಲಾಗಿದೆ. ಆದರೆ ಆರ್.ಬಿ.ಐ. ನೀಡಿದ್ದ ಸುತ್ತೋಲೆಯನ್ನು ಪ್ರಶ್ನಿಸಿ ಹಲವಾರು ರಾಜ್ಯಗಳ ಸಹಕಾರಿ ಬ್ಯಾಂಕುಗಳು/ಸಹಕಾರಿ ಬ್ಯಾಂಕುಗಳ ಮಹಾಮಂಡಳಗಳು ಸುಪ್ರೀಂ ಕೋರ್ಟ್‌ನಲ್ಲಿ ಕೇಸ್ ನಡೆಸುತ್ತಿರುವುದರಿಂದ ಈ ಬಗ್ಗೆ ಅಂತಿಮ ಆದೇಶ ಬಂದ ನಂತರ ಪ್ರಧಾನ ವ್ಯವಸ್ಥಾಪಕರ (ಜಿ.ಎಂ.) /ವ್ಯವಸ್ಥಾಪಕ ನಿರ್ದೇಶಕರ (ಎಂ.ಡಿ.) ಪೂರ್ಣ ಅವಧಿಯ ನೇಮಕ/ಮರು ನೇಮಕದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ವಿವರಿಸಿದರು.

ಮುಂದುವರಿದು ಮಾತನಾಡಿ, ಇಂದಿನ ವರ್ಚುಯೆಲ್ ಮಹಾಸಭೆಗೆ ಲಾಗಿನ್ ಆಗಿರುವ ಸದಸ್ಯರುಗಳಲ್ಲಿ ಸುಮಾರು 100ಕ್ಕೂ ಹೆಚ್ಚಿನ ಸದಸ್ಯರುಗಳು ಚಾಟ್ ಮೂಲಕ ಹಲವಾರು ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಅವುಗಳಲ್ಲಿ ಉಪಯುಕ್ತವಾದವುಗಳನ್ನು ಅಳವಡಿಸಿಕೊಳ್ಳಲು ಕ್ರಮವಿಡಲಾಗುವುದು. ಜೊತೆಗೆ ಕೆಲವು ಸದಸ್ಯರು ಪ್ರಶ್ನೆಗಳನ್ನೂ ಕೇಳಿದ್ದು, ಸದರಿ ಪ್ರಶ್ನೆಗಳು ಈಗಾಗಲೇ ಮಹಾಸಭೆಯಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಚರ್ಚಿಸಲಾದ ಪ್ರಶ್ನೆಗಳೇ ಆಗಿದ್ದು, ಇವುಗಳಿಗೆ ಉತ್ತರಿಸಲಾಗಿದೆಯೆಂದು ತಿಳಿಸಿ, ಈ ಪ್ರಶ್ನೆಗಳಲ್ಲಿ ಪ್ರಮುಖವಾದದ್ದು ಎನ್.ಪಿ.ಎ. ಕಡಿಮೆ ಮಾಡುವ ಬಗ್ಗೆ ಹಾಗೂ ಡಿವಿಡೆಂಡ್ ಘೋಷಣೆ ಬಗ್ಗೆ ಇರುವುದಾಗಿ ತಿಳಿಸಿ, ಈಗಾಗಲೇ ಮಹಾಸಭೆಯಲ್ಲಿ ತಿಳಿಸಿರುವಂತೆ ಆರ್.ಬಿ.ಐ. ನಿರ್ದೇಶನದನ್ವಯ ಅನುತ್ಪಾದಿತ ಸಾಲಗಳು ಮತ್ತು ಅನುತ್ಪಾದಿತ ಹೂಡಿಕೆಗಳಿಗಾಗಿ ಕಾದಿರಿಸಿದ ಮೊತ್ತ ಶೇಕಡ 30ರಿಂದ ಶೇಕಡ 100ಕ್ಕೆ ಹೆಚ್ಚಾದ ಕಾರಣ ಬ್ಯಾಂಕು ರೂ.7.89 ಕೋಟಿಗಳ ನಿವ್ವಳ ನಷ್ಟ ಹೊಂದಿರುವುದರಿಂದ ಮತ್ತು ಬ್ಯಾಂಕಿನ ಮೇಲೆ ಆರ್.ಬಿ.ಐ. ಮೇಲುಸ್ತುವಾರಿ ಇದ್ದು, ಎನ್.ಪಿ.ಎ. ಪ್ರಮಾಣ ಶೇ.10 ಕ್ಕಿಂತ ಹೆಚ್ಚಿಗೆ ಇರುವುದರಿಂದ, ವರದಿ ಸಾಲಿಗೆ ಡಿವಿಡೆಂಡ್ ಘೋಷಣೆ ಮಾಡಿರುವುದಿಲ್ಲವೆಂದು ತಿಳಿಸಿ, **ಚಾಟ್‌ಬಾಕ್ಸ್** ನಲ್ಲಿದ್ದ ಹಲವು ಪ್ರಮುಖ ಅಂಶಗಳನ್ನು ಈ ಕೆಳಕಂಡಂತೆ ಪ್ರಸ್ತಾಪಿಸಿ, ಉತ್ತರಿಸಿದರು.

**ಶ್ರೀ ಶಿವಕುಮಾರ್.ಎ.ಎಲ್**. ಸದಸ್ಯತ್ವ ಸಂಖ್ಯೆ 18913 ರವರು ಬ್ಯಾಂಕಿನಿಂದ ಯಾವುದೇ ಸೌಲಭ್ಯಗಳನ್ನು ಪಡೆದಿಲ್ಲವೆಂದು ತಿಳಿಸಿದ್ದಾರೆ. ಬ್ಯಾಂಕಿನಲ್ಲಿ ದೊರೆಯುವ ಸೌಲಭ್ಯಗಳನ್ನು ವೆಬ್‌ಸೈಟ್‌ನಲ್ಲಿ ಪಡೆಯಬಹುದು ಅಥವಾ ಹತ್ತಿರದ ಶಾಖೆಗೆ ಖುದ್ದು ಭೇಟಿ ನೀಡಿ ಅಗತ್ಯವಿರುವ ಸೌಲಭ್ಯಗಳನ್ನು ಪಡೆಯುವುದು.

**ಶ್ರೀಮತಿ ಗಿರಿಜಾಕುಮಾರಿ.ಸಿ.ಆರ್**. ಸದಸ್ಯತ್ವ ಸಂಖ್ಯೆ 4258 ರವರು ಹೊಸ ಸದಸ್ಯತ್ವಕ್ಕೆ ಫೀ ಎಷ್ಟು ಎಂದಿದ್ದಾರೆ. ಹೊಸ ಸದಸ್ಯತ್ವವನ್ನು ಸಾಲ ಪಡೆಯುವವರಿಗೆ ಅಥವಾ ಜಾಮೀನು ಹಾಕುವವರಿಗೆ ಮಾತ್ರ ಸದಸ್ಯತ್ವ ನೀಡಲಾಗುತ್ತಿದ್ದು, ಷೇರು ಮೊತ್ತ ರೂ.1,000/– ಮತ್ತಿತರೆ ಎಲ್ಲವೂ ಸೇರಿ ಸುಮಾರು ರೂ. 1,700/– ಪಾವತಿಸಬೇಕಾಗುತ್ತದೆ.

**ಶ್ರೀ ಶ್ಯಾಮಸುಂದರ್.ಹೆಚ್.ಆರ್**. ಸದಸ್ಯತ್ವ ಸಂಖ್ಯೆ 18443ರವರು ಮುಂದಿನ ವರ್ಷವಾದರೂ ಡಿವಿಡೆಂಡ್ ಅನ್ನು ನಿರೀಕ್ಷಣೆ ಮಾಡಬಹುದಾ? **ಶ್ರೀ ಕಟ್ಟಿಮನಿ.ಬಿ.ಕೆ** ಸದಸ್ಯತ್ವ ಸಂಖ್ಯೆ 14115 ರವರು ಸಹ ಡಿವಿಡೆಂಡ್ ಬಗ್ಗೆ ಪ್ರಶ್ನಿಸಿದ್ದಾರೆ. ಇಂದಿನ ಮಹಾಸಭೆಯಲ್ಲಿ ಅದೇ ವಿಷಯವಾಗಿ ಮಾತನಾಡಲಾಗಿದೆ. ಖಂಡಿತ ಡಿವಿಡೆಂಡ್ ನೀಡಲು ಕ್ರಮವಿಡಲಾಗುವುದು.

**ಶ್ರೀ ಕುಮಾರ್.ಎಲ್.ವಿ**. ಸದಸ್ಯತ್ವ ಸಂಖ್ಯೆ 6254 ರವರು ಮಹಾಸಭೆಯ ಆಹ್ವಾನ ಪತ್ರಿಕೆಯ ಬುಕ್‌ಲೆಟ್ ಬಂದಿಲ್ಲವೆಂದಿದ್ದಾರೆ. ಸುಮಾರು 36164 ಸದಸ್ಯರಿಗೂ ಸಹ ಸರ್ಟಿಫಿಕೇಟ್ ಆಫ್ ಪೋಸ್ಟಿಂಗ್ ಮೂಲಕ ಆಹ್ವಾನ ಪತ್ರಿಕೆಯನ್ನು ರವಾನಿಸಲಾಗಿದೆ. ನಿಮ್ಮ ಹತ್ತಿರದ ಅಂಚೆಕಛೇರಿಯಲ್ಲಿ ವಿಚಾರಿಸುವುದು.

**ಶ್ರೀ ರಮೇಶ್.ಎ.ಎನ್** ಸದಸ್ಯತ್ವ ಸಂಖ್ಯೆ 11384 ರವರು ಬ್ಯಾಂಕಿನ ಎನ್.ಪಿ.ಎ. ಪ್ರಮಾಣವೆಷ್ಟು ಎಂದಿದ್ದಾರೆ. ಇಂದಿಗೆ ಬ್ಯಾಂಕಿನ ಎನ್.ಪಿ.ಎ. ಪ್ರಮಾಣವು ನೆಟ್ 20% ಇದೆ.

**ಶ್ರೀ ಮಹೇಂದ್ರಕುಮಾರ್.ವಿ.ಕೆ.** ಸದಸ್ಯತ್ವ ಸಂಖ್ಯೆ 11608 ರವರು ಸಾಲ ವಸೂಲಾತಿ ಖರ್ಚುಗಳನ್ನು ಸುಸ್ತಿದಾರರಿಂದ ಪಡೆಯುವಂತೆ ಸಲಹೆ ನೀಡಿ ಠೇವಣಿಗಳ ಮೆಚ್ಯುರಿಟಿ ಡೇಟ್ ಬಗ್ಗೆ ಪ್ರಸ್ತಾಪಿಸಿದ್ದಾರೆ. ಬ್ಯಾಂಕು ಸಾಲ ವಸೂಲಾತಿಗಾಗಿ ಮೊದಲು ಖರ್ಚುವೆಚ್ಚಗಳನ್ನು ಮಾಡಿ, ಅನಂತರ ಎಲ್ಲಾ ಖರ್ಚುವೆಚ್ಚಗಳನ್ನು ಸುಸ್ತಿದಾರರಿಂದಲೇ ವಸೂಲಿ ಮಾಡಲಾಗುತ್ತಿದೆ. ಅಂದಾಜು ರೂ.100/– ವೆಚ್ಚ ಮಾಡಿದರೆ ರೂ.150/– ವಸೂಲಿ ಮಾಡಲಾಗುತ್ತಿದೆ. ಹೊಸ ಸಾಫ್ಟ್‌ವೇರ್‌ನಲ್ಲಿ ಠೇವಣಿಗಳ ಮೆಚ್ಯುರಿಟಿ ಡೇಟ್ ವ್ಯತ್ಯಾಸವಿದ್ದು, ಈ ತಿಂಗಳೊಳಗೆ ಸರಿಪಡಿಸಲಾಗುವುದು.

**ಶ್ರೀಮತಿ ರಶ್ಮಿರಾಜ್ ಸುವರ್ಣ.ಜೆ.** ಸದಸ್ಯತ್ವ ಸಂಖ್ಯೆ 20803 ರವರು ಕಳೆದ ವರ್ಷ ಸೆಪ್ಟೆಂಬರ್–2022ರೊಳಗೆ ಇಂಟರ್ನೆಟ್ ಬ್ಯಾಂಕಿಂಗ್ ಮತ್ತು ಮೊಬೈಲ್ ಬ್ಯಾಂಕಿಂಗ್ ಆರಂಭಿಸುವುದಾಗಿ ತಿಳಿಸಿದ್ದು, ಯಾವ ಹಂತದಲ್ಲಿದೆಯೆಂದಿದ್ದಾರೆ. ಈ ಬಗ್ಗೆ ಕ್ಷಮೆ ಕೋರುತ್ತೇವೆ, ಏಕೆಂದರೆ ಇಂಟರ್ನೆಟ್ ಬ್ಯಾಂಕಿಂಗ್ ಆರಂಭಿಸಲು ಆರ್.ಬಿ.ಐ.ನ ಅನುಮತಿ ಬೇಕಾಗುತ್ತದೆ ಹಾಗೂ ಬ್ಯಾಂಕು (SAF) ಮೇಲುಸ್ತುವಾರಿಯಿಂದ ಹೊರಕ್ಕೆ ಬರಬೇಕು ಜೊತೆಗೆ ನಿವ್ವಳ ಎನ್.ಪಿ.ಎ. ಪ್ರಮಾಣ ಶೇಕಡ 6 ರೊಳಗೆ ಬರಬೇಕಾಗಿದೆ. ಹೊಸ ಸಾಫ್ಟ್‌ವೇರ್ ಅಳವಡಿಕೆ ಈಗ ಮುಗಿದಿದ್ದು, ಮೊದಲು NEFT/RTGS, ATMಗಳನ್ನು ನೀಡಿ ಮುಂದೆ ಅದರ ಬಗ್ಗೆ ಯೋಜಿಸಲಾಗುವುದು.

**ಶ್ರೀ ಹೆಚ್.ಎಸ್.ಮೋಹನ್ ಕೃಷ್ಣ ಶೆಟ್ಟಿ** ಸದಸ್ಯತ್ವ ಸಂಖ್ಯೆ 14237 ರವರು ಡಿವಿಡೆಂಡ್ ಬಗ್ಗೆ ಕೇಳಿದ್ದಾರೆ. ಮುಂದಿನ ವರ್ಷ ನೀಡುತ್ತೇವೆ.

**ಶ್ರೀ ಶ್ರೀಧರ್.ಆರ್.** ಸದಸ್ಯತ್ವ ಸಂಖ್ಯೆ 9447 ರವರು ಮುಂದಿನ ಮಹಾಸಭೆಯನ್ನು ಭೌತಿಕವಾಗಿ ನಡೆಸುವಂತೆ ಕೋರಿದ್ದಾರೆ. ಅವರ ಸಲಹೆಯನ್ನು ಗಮನಿಸಿ ದಾಖಲಿಸಿದೆ.

**ಶ್ರೀ ಶೇಖರ್.ಎಲ್.ವಿ** ಸದಸ್ಯತ್ವ ಸಂಖ್ಯೆ 8020 ರವರು ಖಾತೆದಾರರಿಗೆ ವಾರ್ಷಿಕ ಬ್ಯಾಲೆನ್ಸ್ ಶೀಟ್ ಅನ್ನು ವಾಟ್ಸಪ್ ಮೂಲಕ ಕಳಿಸಲು ಸಲಹೆ ನೀಡಿದ್ದಾರೆ. ಅವರ ಸಲಹೆಯನ್ನು ಗಮನಿಸಿ ದಾಖಲಿಸಿದೆ.

**ಶ್ರೀ ವಿಜಯಕುಮಾರ್.ಕೆ.ಎಸ್.** ಸದಸ್ಯತ್ವ ಸಂಖ್ಯೆ 3892 ರವರು ವರ್ಚುಯೆಲ್ ಮೀಟಿಂಗ್‌ಗೆ ಹಾಜರಾಗುವ ಸದಸ್ಯರಿಗೆ ಏಕೆ ಸಿಟ್ಟಿಂಗ್ ಫೀ ನೀಡುವುದಿಲ್ಲವೆಂದಿದ್ದಾರೆ. ವರ್ಚುಯೆಲ್ ಮೀಟಿಂಗ್‌ಗೆ ಹಾಜರಾಗುವ ಸದಸ್ಯರಿಗೆ ಸಿಟ್ಟಿಂಗ್ ಫೀ ನೀಡಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಇಂದಿನ ಮಹಾಸಭೆಗೆ ಹಾಜರಾಗಿರುವ ಆಡಳಿತ ಮಂಡಲಿ ಸದಸ್ಯರಿಗೂ ಸಹ ಸಿಟ್ಟಿಂಗ್ ಫೀ ನೀಡುವುದಿಲ್ಲ.

**ಶ್ರೀ ರಂಗನಾಥ ಗುಪ್ತ.ಎನ್.ಎಸ್.** ಸದಸ್ಯತ್ವ ಸಂಖ್ಯೆ 1545 ರವರು ಪರ್ಸನಲ್ ಲೋನ್ ನೀಡುವ ಮೂಲಕ ಸಾಲಗಳನ್ನು ಹೆಚ್ಚಿಸಲು ತಿಳಿಸಿದ್ದಾರೆ. ಬ್ಯಾಂಕು ಆರ್.ಬಿ.ಐ.ನ ಮೇಲುಸ್ತುವಾರಿಯಲ್ಲಿದ್ದು, ಪರ್ಸನಲ್ ಲೋನ್ ನೀಡದಂತೆ ಸೂಚಿಸಿರುವುದರಿಂದ ಸಾಧ್ಯವಿಲ್ಲ, ಮುಂದೆ ಬ್ಯಾಂಕು SAF ನಿಂದ ಹೊರ ಬಂದ ನಂತರ ಈ ಬಗ್ಗೆ ಕ್ರಮವಿಡಲಾಗುವುದು.

**ಶ್ರೀಮತಿ ಸುಮಿತ್ರ.ಆರ್.** ಸದಸ್ಯತ್ವ ಸಂಖ್ಯೆ 7654 ರವರು ಬ್ಯಾಂಕಿನಲ್ಲಿ ಹೂಡಿರುವ ಠೇವಣಿಗಳ ಸುರಕ್ಷತೆಯ ಬಗ್ಗೆ ಪ್ರಶ್ನಿಸಿದ್ದಾರೆ. ಬ್ಯಾಂಕಿನ ಪ್ರತಿ ಠೇವಣಿದಾರರ ಠೇವಣಿ ರೂ.5.00 ಲಕ್ಷಗಳವರೆಗೆ DICGCಯಲ್ಲಿ ವಿಮಾ ಯೋಜನೆಯಡಿ ವಿಮೆಯ ಪರಿಧಿಗೆ ಒಳಪಡಿಸಲಾಗಿದ್ದು, ಪ್ರೀಮಿಯಂ ಮೊತ್ತವನ್ನು ಪಾವತಿಸಲಾಗಿದೆ ಹಾಗೂ ವಿಮೆಯು ಚಾಲ್ತಿಯಲ್ಲಿದೆ.

**ಶ್ರೀ ಎನ್. ಮಲ್ಲಿಕಾರ್ಜುನ** ಸದಸ್ಯತ್ವ ಸಂಖ್ಯೆ 10526 ರವರು ಎ.ಟಿ.ಎಂ. ಬಗ್ಗೆ ಹಾಗೂ ಬ್ಯಾಂಕು ನಷ್ಟದಲ್ಲಿರುವ ಬಗ್ಗೆ ತಿಳಿಸಿದ್ದಾರೆ. ಹೊಸ ಸಾಫ್ಟ್‌ವೇರ್ ಅಳವಡಿಸಲಾಗಿದ್ದು, ಶೀಘ್ರವಾಗಿ ಎ.ಟಿ.ಎಂ.

ಸೇವೆಗೆ ಕ್ರಮವಿಡಲಾಗುವುದು ಹಾಗೂ ಎನ್.ಪಿ.ಎ. ಮೊತ್ತ ಶೇ.30 ರಿಂದ ಶೇ.100ರಷ್ಟು ಕಾದಿರಿಸಿದ ಪರಿಣಾಮ ಬ್ಯಾಂಕು ನಷ್ಟ ಹೊಂದಿದೆ ಮುಂದೆ ಎಲ್ಲಾ ಶಾಖೆಗಳು ಲಾಭ ಗಳಿಸಲು ಕ್ರಮ ಕೈಗೊಳ್ಳಲಾಗಿದೆ.

**ಶ್ರೀ ಎಂ.ವಿ. ಜಗನ್ನಾಥಗುಪ್ತ** ಸದಸ್ಯತ್ವ ಸಂಖ್ಯೆ 3523 ರವರು ಹಲವಾರು ಸಭೆ–ಸಮಾರಂಭಗಳು, ಪ್ರತಿಭಟನೆ ಇತ್ಯಾದಿಗಳು ನಡೆಯುತ್ತಿವೆ, ಬ್ಯಾಂಕು ಏಕೆ ಮಹಾಸಭೆಯನ್ನು ಹಾಲ್‌ನಲ್ಲಿ ನಡೆಸುತ್ತಿಲ್ಲ ಎಂದಿದ್ದಾರೆ. ಮಹಾಸಭೆಯನ್ನು ನಡೆಸಲು ಸರ್ಕಾರವು ಸೂಚಿಸಿರುವ ಆದೇಶವನ್ನು ಪಾಲಿಸಿ ವರ್ಚುಯೆಲ್ ಆಗಿ ನಡೆಸಲಾಗಿದೆ.

ಸದಸ್ಯರಾದ ಶ್ರೀ ತಿಮ್ಮೇಗೌಡ.ಟಿ. ಸದಸ್ಯತ್ವ ಸಂಖ್ಯೆ 13336 ರವರು ಮಹಾಸಭೆಯನ್ನು ಉದ್ದೇಶಿಸಿ ಸಂಸ್ಥಾಪಕರು ಮತ್ತು ಅಧ್ಯಕ್ಷರು ಒಂದೆರಡು ಮಾತುಗಳನ್ನಾಡಬೇಕೆಂದು ಕೋರಿ, ಬ್ಯಾಂಕಿಗೆ ಸಿಬ್ಬಂದಿಗಳೇ ಬ್ಯಾಂಕಿನ ಬೆನ್ನೆಲುಬು ಆದ್ದರಿಂದ ಅವರಿಗೆ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಡುವಂತೆ ಕೋರಿ, ವಾರ್ಷಿಕ ವರದಿಯಲ್ಲಿ ಪ್ರತಿ ವಿಷಯದ ಮುಂದೆಯೇ ಅದಕ್ಕೆ ಸಂಬಂಧಪಟ್ಟ ಮಾಹಿತಿಗಳನ್ನು ಒದಗಿಸುವಂತೆ ಸಲಹೆ ನೀಡಿದರು.

ಬ್ಯಾಂಕಿನ ಸಂಸ್ಥಾಪಕರು ಮತ್ತು ಅಧ್ಯಕ್ಷರು ಆದ ಡಾ: ಕೆ.ಎಂ.ರಂಗಧಾಮ ಶೆಟ್ಟಿಯವರು ಮಾತನಾಡಿ, ಈಗಾಗಲೇ ಇಂದಿನ ಮಹಾಸಭೆಯ ಸ್ವಾಗತ ಭಾಷಣದಲ್ಲಿ ಹಲವಾರು ವಿಚಾರಗಳನ್ನು ತಮ್ಮ ಮುಂದೆ ಹಂಚಿಕೊಂಡಿದ್ದೇನೆ. ಸಹಕಾರಿ ರಂಗಕ್ಕೆ ನೋಬಲ್ ಪ್ರಶಸ್ತಿ ಬಂದಿರುವ ಬಗ್ಗೆ ತಾವು ಸಹ ಪ್ರಶಂಸೆ ವ್ಯಕ್ತಪಡಿಸಿರುವುದು ಸ್ವಾಗತಾರ್ಹ. ನಮ್ಮ ಬ್ಯಾಂಕಿಗೂ ಸಹ 10–12 ಬಾರಿ ರಾಜ್ಯ ಮಟ್ಟದ ಪ್ರಶಸ್ತಿ ಲಭಿಸಿದೆ. ಸಹಕಾರಿ ಬ್ಯಾಂಕುಗಳಲ್ಲಿ ಅತಿ ಹೆಚ್ಚು ಅಂದರೆ ಶೇ.25ರ ಡಿವಿಡೆಂಡ್ ನೀಡಿದ ಹೆಗ್ಗಳಿಕೆ ನಮ್ಮ ಬ್ಯಾಂಕಿಗೆ ಸಲ್ಲುತ್ತದೆ. ನಂತರ ಭಾರತೀಯ ರಿಸರ್ವ್ ಬ್ಯಾಂಕು, ಬ್ಯಾಂಕಿನ ನಿಧಿಗಳನ್ನು ಹೆಚ್ಚಿಸಿಕೊಳ್ಳುವಂತೆ ಸಲಹೆ ನೀಡಿದ ಮೇರೆಗೆ ಅವರ ನಿರ್ದೇಶನಗಳನ್ನು ಪಾಲಿಸಲಾಗುತ್ತಿದೆ. ಹಿಂದೆ ಮಹಾಸಭೆಗಳನ್ನು ಹಬ್ಬದಂತೆ ಆಚರಿಸಲಾಗುತ್ತಿದ್ದು, ಅದು ಮರುಕಳಿಸಬೇಕೆಂಬುದು ನಮ್ಮೆಲ್ಲರ ಆಸೆ. ಸಿಬ್ಬಂದಿಗಳಿಗೆ 7ನೇ ವೇತನ ಶ್ರೇಣಿಯ ವೇತನವನ್ನು ನೀಡುತ್ತಿದ್ದು, ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಭತ್ಯೆಗಳನ್ನು ನೀಡಲಾಗುತ್ತಿದೆ. ಹಿಂದೆ 2–3 ದಿನಗಳ ಪ್ರವಾಸ, 2–3 ತಿಂಗಳ ಬೋನಸ್ ನೀಡಲಾಗುತ್ತಿತ್ತು. ಅವರು ಕೇಳುವ ಮೊದಲೇ ಅವರಿಗೆ ಅಗತ್ಯವಿರುವ ಎಲ್ಲಾ ಸೌಕರ್ಯಗಳನ್ನು ಆಡಳಿತ ಮಂಡಲಿಯು ಕಲ್ಪಿಸಿಕೊಡುತ್ತಿದ್ದಾರೆಂದು ಅವರೇ ಹೇಳಿಕೊಳ್ಳುತ್ತಿದ್ದಾರೆ. **"ಸದಸ್ಯರ ಪ್ರಗತಿಯೇ ಬ್ಯಾಂಕಿನ ಪ್ರಗತಿ"** ಆದ್ದರಿಂದ ಬ್ಯಾಂಕಿನ ಸುವರ್ಣ ಮಹೋತ್ಸವವನ್ನು ಸದಸ್ಯರಿಗಾಗಿ ಉತ್ತಮ ಜಾಗದಲ್ಲಿ ನಡೆಸಿ ಎಲ್ಲಾ ಸದಸ್ಯರಿಗೆ ನೆನಪಿನ ಕಾಣಿಕೆಯಾಗಿ ಉಡುಗೊರೆಯನ್ನು ನೀಡಲಾಗುವುದು. ಬ್ಯಾಂಕಿನಲ್ಲಿ ಸುಮಾರು 37000 ಸದಸ್ಯರಿದ್ದು, ಎಲ್ಲರಿಗೂ ಸ್ಥಳಾವಕಾಶ ಮತ್ತು ಉಡುಗೊರೆಯ ಮೌಲ್ಯ ನಿರ್ಧರಿಸಲು ಒಂದು ಕಮಿಟಿಯನ್ನು ಮಾಡಿ ಸುವರ್ಣ ಮಹೋತ್ಸವದ ಆಗುಹೋಗುಗಳ ಬಗ್ಗೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳುವುದಾಗಿ ಆಶ್ವಾಸನೆಯನ್ನು ನೀಡಿದರು.

ಶ್ರೀ ಬಿ.ಆರ್. ನಾಗರಾಜರವರು ಮಾತನಾಡಿ, ವಾರ್ಷಿಕ ವರದಿಯಲ್ಲಿ ಪ್ರತಿ ವಿಷಯದ ಮುಂದೆಯೇ ಅದಕ್ಕೆ ಸಂಬಂಧಪಟ್ಟ ಮಾಹಿತಿಗಳನ್ನು ಒದಗಿಸುವಂತೆ ಸಲಹೆನೀಡಿರುವ ಬಗ್ಗೆ ಪ್ರಸ್ತಾಪಿಸಿ, ಇದನ್ನು ವಾರ್ಷಿಕ ವರದಿ ಪುಸ್ತಕದ ಪುಟ ಸಂಖ್ಯೆ 5,6 ಮತ್ತು 7ರಲ್ಲಿ ವಿವರಿಸಲಾಗಿದೆಯೆಂದರು.

ಮುಂದುವರಿದು, ಸದಸ್ಯರಾದ ಶ್ರೀ ಕೆ.ಸದಾನಂದ ಶಾಸ್ತ್ರಿ ಸದಸ್ಯತ್ವ ಸಂಖ್ಯೆ 105293 ರವರು **52ನೇ ವಾರ್ಷಿಕ ಮಹಾಸಭೆ–ಪ್ರಶ್ನೋತ್ತರಗಳು ಹಾಗೂ ಸಲಹೆ ಸೂಚನೆಗಳು** ಎಂಬುದಾಗಿ ನಿನ್ನೆ ಅಂದರೆ ದಿನಾಂಕ 22–09–2022ರಂದು ಮೇಲ್ ಮೂಲಕ ಉತ್ತರಕ್ಕಾಗಿ 15 ಪ್ರಶ್ನೆಗಳನ್ನು ಕಳಿಸಿದ್ದಾರೆ. ಅದೇ ದಿನದಂದು ಸದರಿ ಸದಸ್ಯರಿಗೆ ಮೇಲ್ ಮೂಲಕ ಎಲ್ಲ ಪ್ರಶ್ನೆಗಳಿಗೂ ಉತ್ತರಿಸಲಾಗಿದ್ದು, ಆ ಎಲ್ಲಾ ಪ್ರಶ್ನೆಗಳು ಇಂದಿನ ಮಹಾಸಭೆಯಲ್ಲಿ ಚರ್ಚಿತವಾದ ವಿಷಯಗಳೇ ಆಗಿದೆಯೆಂದು ತಿಳಿಸಿದರು.

**16) ವಂದನಾರ್ಪಣೆ:**

ಬ್ಯಾಂಕಿನ ನಿರ್ದೇಶಕರಾದ ಶ್ರೀಮತಿ ಮಹಾಲಕ್ಷ್ಮಿಯವರು ಬ್ಯಾಂಕಿನ ಅಧ್ಯಕ್ಷರಾದ ಡಾ: ಕೆ.ಎಂ. ರಂಗಧಾಮಶೆಟ್ಟಿ ಯವರಿಗೂ, ಉಪಾಧ್ಯಕ್ಷರಾದ ಶ್ರೀ ಡಿ.ಆರ್. ವಿಜಯಸಾರಥಿ ಯವರಿಗೂ, ಪ್ರಧಾನ ವ್ಯವಸ್ಥಾಪಕರಾದ ಶ್ರೀ ಕೆ.ಎನ್. ಕೃಷ್ಣಯ್ಯ ಶೆಟ್ಟ ಯವರಿಗೂ, ಮಾಜಿ ಪ್ರಭಾರ ಪ್ರಧಾನ ವ್ಯವಸ್ಥಾಪಕರು ಹಾಗೂ ಹಾಲಿ ಬ್ಯಾಂಕಿನ ಸಲಹೆಗಾರರಾಗಿರುವ ಶ್ರೀ ಬಿ.ಆರ್. ನಾಗರಾಜ ರವರಿಗೂ, ಆಡಳಿತ ಮಂಡಲಿಯ ನಿರ್ದೇಶಕರುಗಳಿಗೂ ಹಾಗೂ ವಿಡಿಯೋ ಕಾನ್ಫರೆನ್ಸ್ / ವರ್ಚುಯೆಲ್ ಮೀಟಿಂಗ್ ಮೂಲಕ ಮಹಾಸಭೆಯಲ್ಲಿ ಭಾಗವಹಿಸಿದ ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನು ತಿಳಿಸುತ್ತಾ, ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಹಾಗೂ ಪ್ರಗತಿಗೆ ಸರ್ವ ರೀತಿಯಲ್ಲಿ ಸದಾ ಸಹಕಾರ ಮತ್ತು ಬೆಂಬಲವನ್ನು ನೀಡುತ್ತಾ ಬಂದಿರುವ ಎಲ್ಲಾ ಸದಸ್ಯ ಬಾಂಧವರಿಗೆ, ಠೇವಣಿದಾರರಿಗೆ ಮತ್ತು ಎಲ್ಲಾ ಗ್ರಾಹಕರಿಗೆ ಆಡಳಿತ ಮಂಡಲಿಯು ಅತ್ಯಂತ ಸಂತೋಷದಿಂದ ಕೃತಜ್ಞತಾಪೂರ್ವಕ ವಂದನೆಗಳನ್ನು ಅರ್ಪಿಸುತ್ತೇವೆಂದೂ,

ಬ್ಯಾಂಕಿನ ಪ್ರಗತಿಗೆ ಸದಾ ಮಾರ್ಗದರ್ಶನ ನೀಡುತ್ತಿರುವ ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕಾರಿ ವರ್ಗದವರಿಗೂ, ಕರ್ನಾಟಕ ಸಹಕಾರಿ ಇಲಾಖೆಯ ಅಧಿಕಾರಿ ವರ್ಗದವರಿಗೂ, ಪಟ್ಟಣ ಸಹಕಾರ ಬ್ಯಾಂಕುಗಳ ರಾಷ್ಟ್ರೀಯ ಮತ್ತು ರಾಜ್ಯ ಮಹಾಮಂಡಲದ ಅಧ್ಯಕ್ಷರು ಮತ್ತು ಅಧಿಕಾರಿಗಳಿಗೂ ಹಾಗೂ ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕಿನ ಅಧಿಕಾರಿಗಳಿಗೂ, ಎಸ್.ಬಿ.ಐ. ಡಿಸ್ಕೌಂಟ್ ಅಂಡ್ ಫೈನಾನ್ಸ್ ಹೌಸ್ ಆಫ್ ಇಂಡಿಯಾ ಲಿಮಿಟೆಡ್ ನ ಅಧಿಕಾರಿಗಳಿಗೂ, ಐ.ಸಿ.ಐ.ಸಿ.ಐ. ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಐ.ಡಿ.ಬಿ.ಐ.ಬ್ಯಾಂಕ್, ಹೆಚ್.ಡಿ.ಎಫ್.ಸಿ.ಬ್ಯಾಂಕ್, ಇಂಡಸ್‌ಇಂಡ್ ಬ್ಯಾಂಕ್, ಕೆನರಾ ಬ್ಯಾಂಕ್ ಮತ್ತು ಆಕ್ಸಿಸ್ ಬ್ಯಾಂಕ್ ಅಧಿಕಾರಿಗಳಿಗೆ ಬ್ಯಾಂಕಿನ ಆಡಳಿತ ಮಂಡಲಿಯು ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತದೆಂದೂ,

ಬ್ಯಾಂಕಿಗೆ ಸಾಫ್ಟ್‌ವೇರ್, ಕಂಪ್ಯೂಟರ್ ಹಾರ್ಡ್‌ವೇರ್ ಸರಬರಾಜು ಮಾಡಿದ ಸಂಸ್ಥೆಯವರುಗಳಿಗೆ, ಶಾಖೆಗಳ ಪೀಠೋಪಕರಣ ಹಾಗೂ ವಿದ್ಯುದ್ಧೀಕರಣಗೊಳಿಸಿದ ಗುತ್ತಿಗೆದಾರರುಗಳಿಗೆ, ಬ್ಯಾಂಕಿನ ಕಾನೂನು ಸಲಹೆಗಾರರುಗಳಿಗೆ, ಬ್ಯಾಂಕಿಂಗ್ ಸಲಹೆಗಾರರುಗಳಿಗೆ, ಸ್ಥಿರಾಸ್ತಿ ಮೌಲ್ಯಮಾಪಕರುಗಳಿಗೆ, ಚಿನ್ನಾಭರಣ ಮೌಲ್ಯಮಾಪಕರುಗಳಿಗೆ, ಶಾಸನಬದ್ಧ ಲೆಕ್ಕ ಪರಿಶೋಧನೆ ನಿರ್ವಹಿಸಿದ ಲೆಕ್ಕ ಪರಿಶೋಧಕರಿಗೆ ಹಾಗೂ ಆಂತರಿಕ ಲೆಕ್ಕ ಪರಿಶೋಧಕರುಗಳಿಗೂ ಆಡಳಿತ ಮಂಡಲಿಯ ಹೃತ್ಪೂರ್ವಕ ವಂದನೆಗಳು.

ಬ್ಯಾಂಕಿನ ವ್ಯವಹಾರಗಳಲ್ಲಿ ಕಾರ್ಯ ನಿರ್ವಹಿಸಿ ಅಭಿವೃದ್ಧಿಯಲ್ಲಿ ಭಾಗಿಯಾಗಿರುವ ಎಲ್ಲಾ ಸಿಬ್ಬಂದಿ ವರ್ಗದವರಿಗೂ, ಪಿಗ್ಮಿ ಠೇವಣಿ ಸಂಗ್ರಹಕಾರರಿಗೂ, ವೈದ್ಯಕೀಯ ಧನ ಸಹಾಯಕ್ಕಾಗಿ ಬರುವ ಅರ್ಜಿಗಳನ್ನು ಪರಿಶೀಲಿಸುತ್ತಿರುವ ಡಾ: ಶ್ರೀನಿವಾಸ್ ರವರಿಗೂ, ಎಲ್ಲಾ ಶಾಖಾ ಕಟ್ಟಡದ ಮಾಲೀಕರುಗಳಿಗೂ ಮತ್ತು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಬ್ಯಾಂಕಿನ ಅಭಿವೃದ್ಧಿಗೆ ಸಹಕಾರ ನೀಡುತ್ತಿರುವ ಎಲ್ಲಾ ಮಹನೀಯರುಗಳಿಗೂ ಮತ್ತು ಗಣ್ಯರಿಗೂ ಆಡಳಿತ ಮಂಡಲಿಯ ಪರವಾಗಿ ಹೃತ್ಪೂರ್ವಕವಾದ ವಂದನೆಗಳನ್ನು ಸಲ್ಲಿಸಿದರು.

ಸಹಿ/–

**(ಡಾ|| ಕೆ.ಎಂ. ರಂಗಧಾಮ ಶೆಟ್ಟಿ)**

ಸಂಸ್ಥಾಪಕರು ಹಾಗೂ ಅಧ್ಯಕ್ಷರು

ದಿನಾಂಕ : 23.09.2022

ಸ್ಥಳ : ಬೆಂಗಳೂರು

**ಭಾಗ – 1**

**'ಶಾಸನಬದ್ಧ ಲೆಕ್ಕ ಪರಿಶೋಧಕರ ಸ್ವತಂತ್ರ ವರದಿ'**

**ಶ್ರೀ ಸುಬ್ರಮಣ್ಯೇಶ್ವರ ಕೋ–ಆಪರೇಟಿವ್ ಬ್ಯಾಂಕ್ ಲಿ.,**

ವಿ.ವಿ.ಪುರಂ, ಬೆಂಗಳೂರು, ಇದರ ಸದಸ್ಯರಿಗೆ

1) **ಆರ್ಥಿಕ ತ:ಖ್ತೆಗಳ ಬಗ್ಗೆ ವರದಿ :**
ನಾವು ಶ್ರೀ ಸುಬ್ರಮಣ್ಯೇಶ್ವರ ಕೋ–ಆಪರೇಟಿವ್ ಬ್ಯಾಂಕ್ ಲಿ, ಬೆಂಗಳೂರು ಇದರ ಸನ್ 2022–23ನೇ ಸಾಲಿನ ಶಾಸನಬದ್ಧ ಲೆಕ್ಕ ಪರಿಶೋಧನೆಯನ್ನು ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ 1959ರ ಕಲಂ 63(1) ರಲ್ಲಿ ಪ್ರದಪ್ತವಾದ ಅಧಿಕಾರದಂತೆ ಕೈಗೊಂಡಿದ್ದು ಅದರಲ್ಲಿ ಬ್ಯಾಂಕಿನ 9 ಶಾಖೆಗಳ ಲೆಕ್ಕ ಪರಿಶೋಧಿತ ತ:ಖ್ತೆಗಳು ಸೇರಿದಂತೆ ದಿ.31–03–2023 ರಂತ್ಯದ ಲಾಭ ಹಾನಿ ತ:ಖ್ತೆಯು, ನಗದು ಹರಿಯು ತ:ಖ್ತೆಯು ಹಾಗೂ ದಿ. 31–03–2023 ಕ್ಕೆ ಇರುವ ಸಾಲ ಜಿಂದಗಿ ತ:ಖ್ತೆಯು ಅಲ್ಲದೆ ಬ್ಯಾಂಕಿನ ಲೆಕ್ಕ ಪತ್ರಗಳ ಪದ್ಧತಿಗಳ ಸಂಕ್ಷಿಪ್ತ ಮತ್ತು ಇತರೆ ವಿವರಣಾತ್ಮಕ ಮಾಹಿತಿ ಒಳಗೊಂಡಿರುತ್ತದೆ.

2) **ಆರ್ಥಿಕ ತ:ಖ್ತೆಗಳ ಕುರಿತು ಆಡಳಿತ ಮಂಡಳಿಯ ಜವಾಬ್ದಾರಿ :**
ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 (ಸಹಕಾರಿ ಬ್ಯಾಂಕುಗಳಿಗೆ ಅನ್ವಯವಾಗುವಂತೆ), ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರಲ್ಲಿರುವ ಅವಕಾಶಗಳಂತೆ ಅಲ್ಲದೆ ರಿಝರ್ವ್ ಬ್ಯಾಂಕು, ನಬಾರ್ಡ್, ಸಹಕಾರ ಸಂಘಗಳ ನಿಬಂಧಕರು ಕರ್ನಾಟಕ ರಾಜ್ಯ ಹಾಗೂ ನಿರ್ದೇಶಕರು ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ ಕರ್ನಾಟಕ ರಾಜ್ಯ ಇವರು ಹೊರಡಿಸುವ ಕಾಲಕಾಲಿನ ಮಾರ್ಗಸೂಚಿಗಳು ಮತ್ತು ಸುತ್ತೋಲೆಗಳನ್ನು ಗಮನಿಸಿ ಆರ್ಥಿಕ ತ:ಖ್ತೆಗಳನ್ನು ಸಿದ್ದಪಡಿಸುವುದು ಬ್ಯಾಂಕಿನ ಆಡಳಿತ ಮಂಡಳಿಯ ಜವಾಬ್ದಾರಿಯಾಗುತ್ತದೆ.

3) **ಶಾಸನಬದ್ಧ ಲೆಕ್ಕ ಪರಿಶೋಧಕರ ಜವಾಬ್ದಾರಿ :**
ನಾವು ಭಾರತೀಯ ಸನ್ನದು ಲೆಕ್ಕ ಪರಿಶೋಧಕರ ಸಂಸ್ಥೆಯವರು ನಿರ್ದೇಶಿಸಿರುವ ಮಾರ್ಗಸೂಚಿಗಳ ಪ್ರಕಾರ ಬ್ಯಾಂಕಿನ ಸನ್ 2022–23ನೇ ಸಾಲಿನ ಶಾಸನಬದ್ಧ ಲೆಕ್ಕ ಪರಿಶೋಧನೆ ಕೈಗೊಂಡಿದ್ದು, ಸದರಿ ಮಾರ್ಗಸೂಚಿಗಳ ಪ್ರಕಾರ ಬ್ಯಾಂಕಿನ ಲೆಕ್ಕ ಪರಿಶೋಧಿತ ಆರ್ಥಿಕ ತ:ಖ್ತೆಗಳು ವಾಸ್ತವಿಕ ತಪ್ಪು ಹೇಳಿಕೆಗಳು ನೀಡುತ್ತಿರುವುದಿಲ್ಲವೆಂಬ ಬಗ್ಗೆ ನೈತಿಕ ಅಗತ್ಯತೆಗಳ ಮೇರೆಗೆ ಖಚಿತ ಅಭಿಪ್ರಾಯ ನೀಡುವುದು ನಮ್ಮ ಮುಖ್ಯ ಜವಾಬ್ದಾರಿಯಾಗುತ್ತದೆ.

4) ನಮ್ಮ ಲೆಕ್ಕ ಪರಿಶೋಧನೆಯ ವ್ಯಾಪ್ತಿಯು ಬ್ಯಾಂಕಿನ ಆರ್ಥಿಕ ತ:ಖ್ತೆಗಳು ಬ್ಯಾಂಕಿನ ಕಾರ್ಯವಿಧಾನವನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವ ಕುರಿತು ಬಹಿರಂಗ ಪಡಿಸುವುದು, ಅಲ್ಲದೆ ಲೆಕ್ಕ ಪರಿಶೋಧಕರ ತೀರ್ಪಿನಲ್ಲಿ ಅಪಾಯದ ಮೌಲ್ಯಮಾಪನ ಮತ್ತು ವಾಸ್ತವಿಕ ತಪ್ಪು ಹೇಳಿಕೆಗಳು ನೀಡುತ್ತಿರುವುದಿಲ್ಲವೆಂಬ ಬಗ್ಗೆ, ಬ್ಯಾಂಕಿನ ಆಂತರಿಕ ನಿಯಂತ್ರಣ ಪದ್ಧತಿಯಂತೆ ಬ್ಯಾಂಕು ಕ್ರಮ ಕೈಗೊಂಡು ಆರ್ಥಿಕ ತ:ಖ್ತೆಗಳನ್ನು ತಯಾರಿಸುವ ಬಗ್ಗೆ, ಬ್ಯಾಂಕು ಅಳವಡಿಸಿರುವ ಲೆಕ್ಕ ಪತ್ರಗಳ ಪದ್ಧತಿಯ ಮೌಲಿಕರಣ ಬಗ್ಗೆ, ಅಲ್ಲದೆ ಆಡಳಿತ ಮಂಡಳಿಯವರ ಲೆಕ್ಕಗಳ ಅಂದಾಜುಗಳು ಸಮಂಜಸವಾಗಿರುವ ಬಗ್ಗೆ ಹಾಗೂ ಬ್ಯಾಂಕಿನ ಆರ್ಥಿಕ ತ:ಖ್ತೆಗಳ ಒಟ್ಟಾರೆ ಪ್ರಸ್ತುತಿ ಬಗ್ಗೆ ವಿಮರ್ಷೆ ಮುಂತಾದವುಗಳನ್ನು ಒಳಗೊಂಡಿರುತ್ತದೆ.

5) ಬ್ಯಾಂಕಿನ ಲೆಕ್ಕ ಪರಿಶೋಧನೆಗೆ ಲಭ್ಯವಾಗಿರುವ ದಾಖಲಾತಿಗಳು ಲೆಕ್ಕ ಪರಿಶೋಧನೆಯ ಬಗ್ಗೆ ನಮ್ಮ ಅಭಿಪ್ರಾಯ ನೀಡಲು ಸಾಕಷ್ಟು ಇರುವುದು ಎಂದು ನಾವು ನಂಬುತ್ತೇವೆ.

6) **ಅರ್ಹತಾತ್ಮಕ ಅಭಿಪ್ರಾಯ : (Qualified Opinion).**
ನನ್ನ/ನಮ್ಮ ತಿಳುವಳಿಕೆ, ಅಭಿಪ್ರಾಯದಂತೆ ಹಾಗೂ ಲೆಕ್ಕ ಪರಿಶೋಧನಾ ಕಾಲಕ್ಕೆ ನನಗೆ/ನಮಗೆ ನೀಡಿದ

ಮಾಹಿತಿ ಹಾಗೂ ವಿವರಣೆಗಳಂತೆ, ಬ್ಯಾಂಕಿನ ಆರ್ಥಿಕ ತ:ಖ್ತೆಗಳು, ಅನುಸೂಚಿಗಳು ಹಾಗೂ ಮಾಹಿತಿಗಳ ಮೇಲಿನ ಟಿಪ್ಪಣಿಗಳು, ಬ್ಯಾಂಕಿಂಗ್ ನಿಯಂತ್ರಣಕಾಯ್ದೆ 1949 (ಸಹಕಾರಿ ಬ್ಯಾಂಕುಗಳಿಗೆ ಅನ್ವಯವಾಗುವಂತೆ), ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರಲ್ಲಿರುವ ಅವಕಾಶಗಳಂತೆ, ಅಲ್ಲದೆ ರಿಝರ್ವ ಬ್ಯಾಂಕು, ನಬಾರ್ಡ, ಸಹಕಾರ ಸಂಘಗಳ ನಿಬಂಧಕರು ಕರ್ನಾಟಕ ರಾಜ್ಯ ಹಾಗೂ ನಿರ್ದೇಶಕರು ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ ಕರ್ನಾಟಕ ರಾಜ್ಯ ಇವರು ಹೊರಡಿಸುವ ಕಾಲಕಾಲಿನ ಮಾರ್ಗಸೂಚಿಗಳು ಮತ್ತು ಸುತ್ತೋಲೆಗಳನ್ನು ಗಮನಿಸಿ ಸಿದ್ದಪಡಿಸಿರುವ ಬ್ಯಾಂಕಿನ

1) ದಿನಾಂಕ 31.03.2023ರಂತ್ಯಕ್ಕೆ ಇರುವ ಅಢಾವೆ ಪತ್ರಿಕೆಯು,
2) ಸನ್ 2022–23 ನೇ ಸಾಲಿನ ಲಾಭ ಹಾನಿ ಪತ್ರಿಕೆಯು ಹಾಗೂ
3) ದಿನಾಂಕ 31.03.2023ರಂತ್ಯಕ್ಕೆ ಇರುವ ಜಮಾ ಮತ್ತು ಖರ್ಚು ತ:ಖ್ತೆಯು ವರದಿಯಲ್ಲಿ ವಿವರವಾಗಿ ವಿಮರ್ಶಿಸಿದ ಕಾರಣಗಳಿಂದ ಈ ಕೆಳಗಿನ ಅಂಶಗಳ ಬಗ್ಗೆ ಅನುಪಾಲನೆ/ತಿದ್ದುಪಡಿ ಮಾಡಬೇಕಾಗಿದೆ ಎಂಬ ಷರಾಕ್ಕೆ ಒಳಪಟ್ಟು ಬ್ಯಾಂಕಿನ ನಿಜವಾದ ಹಾಗೂ ನ್ಯಾಯಸಮ್ಮತವಾದ ಆರ್ಥಿಕ ಸ್ಥಿತಿ ಪ್ರತಿಬಿಂಬಿಸುತ್ತದೆ ಅಂತ ಅಭಿಪ್ರಾಯ ಪಡುತ್ತೇನೆ.

**ಎ) ಅನುಪಾಲನೆ ಮಾಡಬೇಕಾಗಿರುವ ಅಂಶಗಳು :**

1. ಆಡಳಿತ ಮಂಡಳಿ ಬ್ಯಾಂಕಿನ ಪ್ರಗತಿಯ ಸಂಬಂಧ ನಿಖರ ಹಾಗೂ ವಾಸ್ತವವಾದ ಗುರಿಗಳನ್ನು ನಿಗಧಿಗೊಳಿಸಬೇಕು. ಸದರಿ ಗುರಿಗಳನ್ನು ಸಾಧಿಸಲು ಪರಿಣಾಮಕಾರಿ ಕ್ರಮವಿಡಬೇಕು.

2. ಭಾರತೀಯ ರಿಸರ್ವ್ ಬ್ಯಾಂಕಿನ ದಿ.31.03.2022ರ ಅಂತ್ಯಕ್ಕೆ ಆದತನಿಖಾ ವರದಿಯಲ್ಲಿನ ಅಂಶಗಳನ್ನು ಹಾಗು ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗಳಲ್ಲಿನ ಸೂಚನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು.

3. ಬ್ಯಾಂಕಿಗೆ ಆಸ್ತಿಯ ಅಡಮಾನದ ಹಕ್ಕು ಪತ್ರಕ್ಕೆ (Title Deed) ಸಂಬಂಧಿಸಿದಂತೆ ಪ್ರತಿ ವರ್ಷ ಸಂಭವಿಸುತ್ತಿರುವ 1 ಅಥವಾ 2 ವಂಚನೆ ಪ್ರಕರಣಗಳ ಹಿನ್ನೆಲೆಯಲ್ಲಿ, ಸಾಲಗಾರರು ಬ್ಯಾಂಕಿಗೆ ಒದಗಿಸುವ ಆಸ್ತಿಯ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ನಿರ್ದಿಷ್ಟ ಮತ್ತು ಬಲವಾದ ಆಂತರಿಕ ನಿಯಂತ್ರಣಕ್ಕೆ ಬ್ಯಾಂಕು ಕಠಿಣವಾದ ನಿಯಮಾವಳಿಗಳನ್ನು ಕಲ್ಪಿಸಬೇಕಾಗಿರುತ್ತದೆ.

4. ಪ್ರತಿ ವರ್ಷದಿಂದ ವರ್ಷಕ್ಕೆ ಅನುತ್ಪಾದಕ ಆಸ್ತಿಯ ಶೇಕಡವಾರು ಪ್ರಮಾಣ ಏರಿಕೆಯಾಗುತ್ತಿದ್ದು. ಈ ಅನುತ್ಪಾದಕ ಆಸ್ತಿಯ ಶೇಕಡವಾರು ಪ್ರಮಾಣವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಸುಸ್ತಿ ಸಾಲಗಳ ವಸೂಲಾತಿಗೆ ಅತ್ಯಗತ್ಯ ಕ್ರಮವಿಡಬೇಕಾಗಿರುತ್ತದೆ.

5. ಸಾಲ ಮಂಜೂರು ಮಾಡುವಾಗ ಸಾಲಗಾರರ ಆದಾಯ ದಾಖಲಾತಿಗಳು, ಸಾಲ ಮರುಪಾವತಿಯ ಸಾಮರ್ಥ್ಯ, ಆದಾಯತೆರಿಗೆ ದಾಖಲೆಗಳು ಮತ್ತು ಇತರೆ ಆರ್ಥಿಕ ತಃಖ್ತೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಸಾಲ ಮಂಜೂರು ಮಾಡಲು ಸೂಚಿಸಿದೆ.

6. ಬ್ಯಾಂಕಿನ ಕೆಲವೂಂದು ಶಾಖೆಗಳು ನಷ್ಟದಲ್ಲೆ ಮುಂದುವರೆದಿದ್ದು, ಮತ್ತು ಆ ಶಾಖೆಗಳ ಸಾಲ ನೀಡುವಿಕೆ, ಠೇವಣಿಗಳಲ್ಲಿ ಮತ್ತು ಸದಸ್ಯರ ಸಂಖ್ಯೆಯಲ್ಲಿ ಹೆಚ್ಚಳವಿರುವುದಿಲ್ಲ ಮತ್ತು ಆ ಶಾಖೆಗಳು ಒಟ್ಟಾರೆ ಬ್ಯಾಂಕಿನ ಸರ್ವತೋಮುಖ ಬೆಳೆವಣಿಗೆಯನ್ನು ಕುಂಠಿತಗೊಳಿಸುತ್ತವೆ. ಆದ್ದರಿಂದ ಬ್ಯಾಂಕಿನ

ಆಡಳಿತ ಮಂಡಳಿಯು ನಷ್ಟದಲ್ಲಿ ಮುಂದುವರೆದಿರುವ ಶಾಖೆಗಳನ್ನು ಪ್ರಗತಿಗೊಳಿಸಲು, ಬ್ಯಾಂಕಿನ ಬೇರೆ ಶಾಖೆಯೊಂದಿಗೆ ವಿಲೀನಗೊಳಿಸಲು ಅಥವಾ ಸ್ಥಗಿತಗೊಳಿಸಲು ದಿಟ್ಟ ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾಗಿರುತ್ತದೆ.

7. ಬ್ಯಾಂಕಿನಲ್ಲಿ ಅಡವಿಟ್ಟ ಆಸ್ತಿಗಳ ಮೌಲ್ಯವು ಸಂಬಂಧಿಸಿದ ಸಾಲಗಳ ಖಾತೆಗಳಲ್ಲಿ ಅಳವಡಿಕೆಯಾಗಿಲ್ಲ. ಇಂತಹ ಮೌಲ್ಯಗಳು ಹಳೆಯ ತಂತ್ರಾಂಶದಿಂದ ಹೊಸ ತಂತ್ರಾಂಶಕ್ಕೆ ವರ್ಗಾವಣೆಯಾಗಿರದೇ ಇರುವುದರಿಂದ ಈ ಸನ್ನಿವೇಶವು ನಿರ್ಮಾಣವಾಗಿರುತ್ತದೆ. ಆಡಳಿತ ಮಂಡಳಿಯು ಈ ನ್ಯೂನತೆಯನ್ನು ನಿವಾರಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು.

8. ಆರ್.ಬಿ.ಐ ಪ್ರಕಾರ ಕಡ್ಡಾಯವಾಗಿ ಸಿಸ್ಟಂನಲ್ಲಿ ದೈನಂದಿನ (DAY END PROCESS) ಕಾರ್ಯವಿಧಾನದ ಭಾಗವಾಗಿ ಅನುತ್ಪಾದಕ ಆಸ್ತಿ (NPA/SMA) ವರ್ಗೀಕರಿಸಬೇಕಾಗಿದ್ದು. ಆದರೆ ಆಯಾಯ ದಿನದ ಕೊನೆಯಲ್ಲಿ NPA/SMA ವರ್ಗೀಕರಣವು ಬ್ಯಾಂಕಿಗೆ ಲಭ್ಯವಾಗುತ್ತಿಲ್ಲ. ಇಂತಹ ದೋಷವನ್ನು ಅತ್ಯಂತ ಶೀಘ್ರವಾಗಿ ಸರಿಪಡಿಸಿಕೊಳ್ಳುವ ಅವಶ್ಯಕತೆ ಇದೆ.

9. ಹೊಸ ತಂತ್ರಾಂಶದಲ್ಲಿ ಯಾವುದೇ ರೀತಿಯ ಎಕ್ಸಪ್ಷನಲ್ (Exceptional) & MIS ವರದಿಗಳು ಲಭ್ಯವಾಗುವ ಅವಕಾಶವಿರುವುದಿಲ್ಲ. ಇಂತಹ ನ್ಯೂನ್ಯತೆಯನ್ನು ತ್ವರಿತವಾಗಿ ಸರಿಪಡಿಸಿಕೊಳ್ಳಬೇಕು.

10. ಆದ್ಯತಾ ವಲಯಗಳಿಗೆ ನೀಡುವ ಸಾಲಗಳ ಕೊರತೆಯಿಂದಾಗಿ ಆರ್.ಬಿ.ಐ ನಿರ್ದೇಶನದಂತೆ, SIDBI ಯಲ್ಲಿ ರೂ11,18,17,500.00 ಹೂಡಿಕೆಮಾಡಿದ್ದು. ಕೇವಲ ಶೇ 3% ಬಡ್ಡಿಯನ್ನು ಪಡೆದುಕೊಳ್ಳುವುದರಿಂದ, ನಮ್ಮ ಕಾಷ್ಟ್ ಆಫ್ ಫಂಡ್ಸ್‌ಗಳಿಗೆ ಹೋಲಿಸಿದಾಗ ಬ್ಯಾಂಕಿಗೆ ಹೊರೆಯಾಗುತ್ತಿರುವುದು/ನಷ್ಟವಾಗುತ್ತಿರುವುದು ಕಂಡುಬಂದಿರುತ್ತದೆ. ಆದುದರಿಂದ ಆದ್ಯತಾ ವಲಯಗಳಿಗೆ ಸಾಲ ನೀಡುವ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ.

11. ಆರ್‌ಬಿಐ ಸುತ್ತೋಲೆ UBD.BPD. (PCB). MC.NO.1 /13.05.000/2013-14 DTD.01.07.2013- Master Circular – Exposure Norms and Statutory/ Other Restrictions – UCBs ರನ್ವಯ ರೂ.10 ಲಕ್ಷಗಳಿಗಿಂತ ಮೇಲ್ಪಟ್ಟ ಸಾಲ ಪ್ರಕರಣಗಳಲ್ಲಿ ಸಾಲಗಾರರಿಂದ ಶಾಸನಬದ್ದ ಸನ್ನದು ಲೆಕ್ಕಿಗರಿಂದ ಪರಿಶೋಧನೆಯಾದ ಆರ್ಥಿಕ ತ:ಖ್ತೆಗಳನ್ನು ಪಡೆಯಬೇಕಾಗಿರುತ್ತದೆ, ವರದಿ ಸಾಲಿನಲ್ಲಿ ಲೆಕ್ಕ ಪರಿಶೋಧನಾ ವೇಳೆಯಲ್ಲಿ ಗಮನಿಸಿದ ಕೆಲವು ಖಾತೆಗಳಲ್ಲಿ ನಿಗಧಿತ ಕಾಲಕಾಲಕ್ಕೆ ಪಡೆಯದೆಇರುವುದನ್ನು ಗಮನಿಸಿದ್ದು, ಮತ್ತು ಪರಿಶೋಧಿತ ಪತ್ರಗಳನ್ನು ಪಡೆಯಲು ಸೂಚಿಸಲಾಗಿದೆ.

ಈ ಮೇಲಿನ ಅಂಶಗಳಿಗೆ ವರದಿ ಪುಸ್ತಕದಲ್ಲಿನ ಆಯಾ ಕಂಡಿಕೆಯಲ್ಲಿ ಸಮಜಾಯಿಷಿ ನೀಡಲಾಗಿದೆ.

**7) ಇತರೆ ಕಾನೂನಾತ್ಮಕ ಹಾಗೂ ನಿಯಂತ್ರಕ ಅಗತ್ಯತೆಗಳ ವರದಿ:**

ಬ್ಯಾಂಕಿನ ಸಾಲ ಜಿಂದಗಿ ತ:ಖ್ತೆಯು ಹಾಗೂ ಲಾಭಹಾನಿ ತ:ಖ್ತೆಯು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 (ಸಹಕಾರಿ ಬ್ಯಾಂಕುಗಳಿಗೆ ಅನ್ವಯವಾಗುವಂತೆ)ರಲ್ಲಿ ಪ್ರತ್ಯೇಕವಾಗಿ ನಿಗದಿಪಡಿಸಿರುವ ನಮೂನೆ 'ಎ' ಮತ್ತು 'ಬಿ' ರಂತೆ ಇರುತ್ತದೆ.

**8) ನಾವು ವರದಿಸುವುದೇನೆಂದರೆ :**

ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 (ಸಹಕಾರಿ ಬ್ಯಾಂಕುಗಳಿಗೆ ಅನ್ವಯವಾಗುವಂತೆ), ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರಂತೆ ಮತ್ತು ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶನಾಲಯವು ಹೊರಡಿಸಿರುವ ಸೂಚನೆಗಳು ಅಗತ್ಯಗೊಳಿಸಿರುವಂತೆ ನಿಗಧಿತ ವಿಷಯಗಳ ಮೇಲೆ ವಿಸ್ತೃತ ವರದಿಯನ್ನು, ನಮ್ಮ ಈ ವರದಿಯೊಂದಿಗೆ ಲಗತ್ತಿಸಲಾಗಿದೆ.

ಸಹಕಾರ ಸಂಘಗಳ ಅಧಿನಿಯಮ 1959 ಕಲಂ 63(16)ರಲ್ಲಿ ಸೂಚಿಸಿರುವಂತೆ ನಾವು ಹೇಳುವುದೇನೆಂದರೆ:

ಅ) ಲೆಕ್ಕ ಪರಿಶೋಧನಾ ಕಾಲಕ್ಕೆ ನಾವು ಎಲ್ಲ ಅವಶ್ಯಕ ಮಾಹಿತಿ ಹಾಗೂ ವಿವರಣೆಗಳನ್ನು ಪಡೆದಿದ್ದು, ಅವುಗಳು ನಮ್ಮ ಜ್ಞಾನ ಹಾಗೂ ನಂಬಿಕೆಯ ಪ್ರಕಾರ ತೃಪ್ತಿಕರವಾಗಿ ಇರುತ್ತದೆ.

ಆ) ಬ್ಯಾಂಕಿನ ಶಾಖೆಗಳಿಂದ ಹಾಗೂ ಕಚೇರಿಯಿಂದ ಸ್ವೀಕೃತವಾಗಿರುವ ತ:ಖ್ತೆಗಳು ಹಾಗೂ ಬ್ಯಾಂಕಿನಲ್ಲಿ ಇಟ್ಟಿರುವ ಲೆಕ್ಕ ಪುಸ್ತಕಗಳು ಕಾನೂನು ಬದ್ಧವಾಗಿ ಇರುತ್ತದೆ ಎಂದು ಅಭಿಪ್ರಾಯ ಪಡಲಾಗಿದೆ.

ಇ) ನಮ್ಮ ತಿಳವಳಿಕೆ ಪ್ರಕಾರ ಬ್ಯಾಂಕಿನ ವ್ಯವಹಾರಗಳು ಬ್ಯಾಂಕಿನ ಲೆಕ್ಕ ಪುಸ್ತಕಗಳ ಜೊತೆ ಹಾಗೂ ನಿಯತಕಾಲಿಕೆಗಳೊಂದಿಗೆ ಹೊಂದಾಣಿಕೆ ಇರುತ್ತದೆ.

ಈ) ಭಾರತದಲ್ಲಿ ಸರ್ವಸಾಧಾರಣವಾಗಿ ಉಪಯೋಗಿಸುವ ಲೆಕ್ಕಪತ್ರ ಮಾನದಂಡವು ಬ್ಯಾಂಕು ಅಳವಡಿಸಿದೆ.

9) ಬ್ಯಾಂಕು ಸನ್ 2022–23ನೇ ಸಾಲಿನಲ್ಲಿ 'ಬಿ' ವರ್ಗದಲ್ಲಿ ವರ್ಗೀಕರಿಸಲಾಗಿದೆ.

**ಸಿ.ಎಸ್.ಎಂ.ಆರ್. ಅಂಡ್ ಅಸೋಸಿಯೇಟ್ಸ್**
ಸನ್ನದ್ದು ಲೆಕ್ಕ ಪರಿಶೋಧಕರ ಪರವಾಗಿ
ಸಹಿ/–
**(ಸಿಎ ಶಿವಕುಮಾರ ಸಿ.)**
ಪಾಲುದಾರರು
ಸದಸ್ಯತ್ವ ಸಂಖ್ಯೆ : 219076
ನೋಂದಣಿ ಸಂಖ್ಯೆ : 010106S
UDIN : 23219076BGSWAW2421

ಸ್ಥಳ : ಬೆಂಗಳೂರು
ದಿನಾಂಕ : 28.06.2023

## ಭಾಗ-2
## ಬ್ಯಾಂಕಿನ ಪರಿಚಯಾತ್ಮಕ ವಿವರಗಳು

**1. ಬ್ಯಾಂಕಿನ ವಿವರಗಳು**

| | |
|---|---|
| 1. ಬ್ಯಾಂಕಿನ ಹೆಸರು | ಶ್ರೀ ಸುಬ್ರಮಣ್ಯೇಶ್ವರ ಕೋ-ಆಪರೇಟಿವ್ ಬ್ಯಾಂಕ್ ಲಿ. |
| 2. ಬ್ಯಾಂಕಿನ ವಿಳಾಸ | ನಂ.106, ರಜತ ಭವನ, ಆರ್.ವಿ.ರಸ್ತೆ, ವಿ.ವಿ.ಪುರಂ ಬೆಂಗಳೂರು - 560 004. |
| 3. ಬ್ಯಾಂಕಿನ ನೋಂದಣಿ ಸಂಖ್ಯೆ/ ದಿನಾಂಕ | ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೆಂಗಳೂರು 1ನೇ ವಲಯ ಬೆಂಗಳೂರು, ಅವರ ನೋಂದಣಿ ಪತ್ರದ ಸಂಖ್ಯೆ ಬಿ/ಎಆರ್‌ಬಿಐ-1/1870/70-71 ದಿನಾಂಕ 01.04.1971ರ ಪ್ರಕಾರ ಶ್ರೀ ಸುಬ್ರಮಣ್ಯೇಶ್ವರ ಸಹಕಾರ ಸಂಘ ನಿ., ಎಂದು ನೋಂದಣಿಯಾಗಿದ್ದು, ನಂತರ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು ಬೆಂಗಳೂರು ವಿಭಾಗ, ಬೆಂಗಳೂರು, ಅವರ ನೋಂದಣಿ ಪತ್ರದ ಸಂಖ್ಯೆ ಜೆಆರ್‌ಬಿಹೆಚ್/11/ಎಂ.ಎಂ.ಸಿ/38/ 75-76, ದಿನಾಂಕ 29.04.1976ರ ಮೇರೆಗೆ ಶ್ರೀ ಸುಬ್ರಮಣ್ಯೇಶ್ವರ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಎಂದು ನೋಂದಣಿ ಯಾಗಿರುತ್ತದೆ. |

4. ರಿಸರ್ವ್ ಬ್ಯಾಂಕಿನಿಂದ ಪಡೆದ ಬ್ಯಾಂಕಿಂಗ್ ಲೈಸನ್ಸ್ ಕ್ರಮಾಂಕ ಹಾಗೂ ದಿನಾಂಕ ವಿವರ ಕೆಳಕಂಡಂತಿದೆ

| ಕ್ರ ಸಂ | ಶಾಖೆಗಳ ವಿವರ | ಆರ್.ಬಿ.ಐ ಪರವಾನಗಿ ಸಂಖ್ಯೆ / ದಿನಾಂಕ | ವ್ಯವಹಾರ ಪ್ರಾರಂಭಿಸಿದ ದಿನಾಂಕ |
|---|---|---|---|
| 1 | ಆಡಳಿತ ಕಚೇರಿ | ಯುಬಿಡಿ ಬಿ.ಜಿ. ಬಿಎಲ್. ಎಚ 365 ದಿನಾಂಕ 03.11.1999 | 01.04.1971 ಸಹಕಾರ ಸಂಘವಾಗಿ |
| 2 | ವಿಶ್ವೇಶ್ವರಪುರಂ ಶಾಖೆ | ಯುಬಿಡಿ ಬಿ.ಜಿ. ಬಿಎಲ್. 633 ದಿನಾಂಕ 08.04.2013 | 13.06.1976 |
| 3 | ಅವೆನ್ಯೂರಸ್ತೆ ಶಾಖೆ | ಯುಬಿಡಿ ಕೆಎ 550 ಪಿ ದಿನಾಂಕ 11.09.1986 | 01.04.1971 |

| | | | |
|---|---|---|---|
| 4 | ವಿಜಯನಗರ ಶಾಖೆ | ಯುಬಿಡಿ ಬಿ.ಜಿ. ಬಿಎಲ್. 149<br>ದಿನಾಂಕ 28.06.1995 | 06.06.1996 |
| 5 | ಸುಬ್ರಮಣ್ಯನಗರ ಶಾಖೆ | ಯುಬಿಡಿ ಬಿ.ಜಿ. ಬಿಎಲ್. 222<br>ದಿನಾಂಕ 18.12.1996 | 20.06.1997 |
| 6 | ಪದ್ಮನಾಭನಗರ ಶಾಖೆ | ಯುಬಿಡಿ ಬಿ.ಜಿ. ಬಿಎಲ್. 223<br>ದಿನಾಂಕ 18.12.1996 | 14.12.1997 |
| 7 | ಕಾಚರಕನಹಳ್ಳಿ ಶಾಖೆ | ಯುಬಿಡಿ ಬಿ.ಜಿ. ಬಿಎಲ್. 557<br>ದಿನಾಂಕ 23.10.2009 | 24.06.2010 |
| 8 | ಯಶವಂತಪುರ ಶಾಖೆ | ಯುಬಿಡಿ ಬಿ.ಜಿ. ಬಿಎಲ್. 677<br>ದಿನಾಂಕ 03.06.2014 | 04.09.2014 |
| 9 | ನಾಗರಭಾವಿ ಶಾಖೆ | ಯುಬಿಡಿ ಬಿ.ಜಿ. ಬಿಎಲ್. 672<br>ದಿನಾಂಕ 20.05.2014 | 02.11.2014 |
| 10 | ಕೋಣನಕುಂಟೆ ಶಾಖೆ | ಯುಬಿಡಿ ಬಿ.ಜಿ. ಬಿಎಲ್. 673<br>ದಿನಾಂಕ 20.05.2014 | 01.12.2014 |

| | |
|---|---|
| 5. ಬ್ಯಾಂಕಿನ ಕಾರ್ಯಕ್ಷೇತ್ರ (ಸಂಘದ ಉಪನಿಯಮ ಸಂಖ್ಯೆಯೊಂದಿಗೆ ವಿವರಿಸಿ) | ಬ್ಯಾಂಕಿನ ಉಪನಿಯಮ 3ರನ್ವಯ ಬ್ಯಾಂಕಿನ ಕಾರ್ಯಕ್ಷೇತ್ರವು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಹಾಗೂ ಮಂಡ್ಯ ಜಿಲ್ಲೆಗಳ ವ್ಯಾಪ್ತಿಗೆ ಅನ್ವಯಿಸುತ್ತದೆ. |

**2. ಬ್ಯಾಂಕಿನ ಮುಖ್ಯ ಉದ್ದೇಶಗಳು/ಚಟುವಟಿಕೆಗಳು (ಸಂಘದ ಉಪನಿಯಮ ಸಂಖ್ಯೆಯೊಂದಿಗೆ ವಿವರಿಸಿ)**

1) ಬ್ಯಾಂಕಿನ ಉಪನಿಯಮ 5ರ ಪ್ರಕಾರ – ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ 1949 (ಸಹಕಾರ ಸಂಘಗಳಿಗೆ ಅನ್ವಯಿಸುವಂತೆ)ರ ನಿಯಮಗಳ ಅನ್ವಯ, ಭಾರತೀಯ ರಿಸರ್ವ್ ಬ್ಯಾಂಕಿನ ಉಸ್ತುವಾರಿಯಲ್ಲಿ, ಬ್ಯಾಂಕಿಂಗ್ ವ್ಯವಹಾರ ನಡೆಸುವ ಪ್ರಮುಖ ಉದ್ದೇಶದೊಂದಿಗೆ ಇನ್ನಿತರೆ 25 ಉದ್ದೇಶಗಳನ್ನು ಹೊಂದಿರುತ್ತದೆ.

**3. ಬ್ಯಾಂಕಿನ ಪದಾಧಿಕಾರಿಗಳ ಹೆಸರು, ಹುದ್ದೆ ಮತ್ತು ಅವಧಿ: (ದಿನಾಂಕ 31–03–2023 ರಲ್ಲಿದ್ದಂತೆ)**

| | |
|---|---|
| 1) ಅಧ್ಯಕ್ಷರು | ಡಾ ॥ ಕೆ.ಎಂ.ರಂಗಧಾಮ ಶೆಟ್ಟಿ |
| 2) ಉಪಾಧ್ಯಕ್ಷರು | ಶ್ರೀ ವಿಜಯಸಾರಥಿ ಡಿ.ಆರ್. |
| 3) ಮುಖ್ಯಕಾರ್ಯನಿರ್ವಹಣಾಧಿಕಾರಿಗಳು (ಪ್ರಭಾರದಲ್ಲಿರುವವರು) | ಶ್ರೀ. ಬಿ.ಆರ್.ನಾಗರಾಜ (ದಿ.30.04.2022 ರವರೆಗೆ)<br>ಕೆ.ಎನ್. ಕೃಷ್ಣಯ್ಯ ಶೆಟ್ಟಿ (ದಿ. 01.05.2022 ರಿಂದ) |

**4) ಶಾಖೆಗಳು ಮತ್ತು ಅವುಗಳ ವಿಳಾಸ**

| ಕ್ರ ಸಂ | ಶಾಖೆಯ ಹೆಸರು | ಶಾಖೆಯ ವಿಳಾಸ | ಶಾಖಾ ವ್ಯವಸ್ಥಾಪಕರು |
|---|---|---|---|
| 1 | ವಿಶ್ವೇಶ್ವರಪುರಂ ಶಾಖೆ (ಪ್ರಧಾನ ಕಛೇರಿ ಶಾಖೆ) | ನಂ.106, ರಜತ ಭವನ,<br>ಆರ್.ವಿ.ರಸ್ತೆ, ವಿ.ವಿ.ಪುರಂ<br>ಬೆಂಗಳೂರು-560 004 | ಶ್ರೀ ಆರ್.ಪಿ. ವೆಂಕಟೇಶ್ ಕಿರಣ್ |
| 2 | ಅವೆನ್ಯೂ ರಸ್ತೆ ಶಾಖೆ | ನಂ.11, ರೇಷಮ್ ಮಹಲ್<br>ನೆಲ ಮಹಡಿ, 2ನೇ ಅಡ್ಡ ರಸ್ತೆ<br>ಕೆಂಪೇಗೌಡ ಎಕ್ಸ್‌ಟೆನ್ಷನ್<br>ಕೆ.ಜಿ.ರಸ್ತೆ, ಬೆಂಗಳೂರು-560 009 | ಶ್ರೀ ಎಸ್. ರವಿ |
| 3 | ವಿಜಯನಗರ ಶಾಖೆ | ಸಿ.ಎ. 10/40, 2ನೇ ಮುಖ್ಯ ರಸ್ತೆ<br>ವಿಜಯನಗರ<br>ಬೆಂಗಳೂರು-560 040 | ಶ್ರೀ ಕೆ.ಎಸ್. ದಿನೇಶ್ ಬಾಬು (ಪ್ರಭಾರ) |
| 4 | ಸುಬ್ರಮಣ್ಯನಗರ ಶಾಖೆ | ನಂ.156/33, 1ನೇ ಮುಖ್ಯ ರಸ್ತೆ<br>ಮಾರುತಿ ಎಕ್ಸ್‌ಟೆನ್ಷನ್<br>ಶ್ರೀರಾಂಪುರಂ,<br>ಬೆಂಗಳೂರು-560021 | ಶ್ರೀ ಬಿ.ಜೆ. ಹರೀಶ್ (ಪ್ರಭಾರ) |
| 5 | ಪದ್ಮನಾಭನಗರ ಶಾಖೆ | ನಂ.44, 100 ಅಡಿ ವರ್ತುಲ ರಸ್ತೆ<br>ಬಿ.ಟಿ.ಎಸ್. ಡಿಪೋ ಎದುರು<br>ಬಿ.ಎಸ್.ಕೆ 3ನೇ ಹಂತ<br>ಬೆಂಗಳೂರು-560 085 | ಶ್ರೀ ಆರ್.ಎ. ಶ್ರೀಕಾಂತ್ (ಪ್ರಭಾರ) |
| 6 | ಕಾಚರಕನಹಳ್ಳಿ ಶಾಖೆ | ನಂ.12, ಜೈ ಗಣೇಶ್ ಪ್ಲಾಜಾ<br>ಕಮ್ಮನಹಳ್ಳಿ ಮುಖ್ಯ ರಸ್ತೆ<br>ರಾಮಸ್ವಾಮಿ ಪಾಳ್ಯ<br>ಬೆಂಗಳೂರು-560 033. | ಶ್ರೀ ಎಸ್. ಶಿವರಾಮು (ಪ್ರಭಾರ) |
| 7 | ಯಶವಂತಪುರ ಶಾಖೆ | ನಂ.15, ರೂಪ್ ಆರ್ಕೆಡ್<br>11ನೇ ಮುಖ್ಯ ರಸ್ತೆ<br>ಗೋಕುಲ್ 1ನೇ ಹಂತ<br>1ನೇ ಘಟ್ಟ, ಯಶವಂತಪುರ<br>(ಎಲ್.ಐ.ಸಿ. ಕಛೇರಿ ಸಮೀಪ)<br>ಬೆಂಗಳೂರು-560 054 | ಶ್ರೀ ಹೆಚ್. ಪ್ರಕಾಶ್ (ಪ್ರಭಾರ) |

| | | | |
|---|---|---|---|
| 8 | ನಾಗರಭಾವಿ ಶಾಖೆ | ನಂ.27/17, ಅಕ್ಷಯ ಸ್ಕ್ವೇರ್, ಪಾಪರೆಡ್ಡಿ ಪಾಳ್ಯ, ಮಲ್ಲತ್ತಳ್ಳಿ ನಾಗರಭಾವಿ ಬೆಂಗಳೂರು–560 072 | ಶ್ರೀ ಮಹೇಂದ್ರ ಕುಮಾರ್ ವಿ. (ಪ್ರಭಾರ) |
| 9 | ಕೋಣನಕುಂಟೆ ಶಾಖೆ | ನಂ.174, ಶ್ರೀರಂಗ ಕಾಂಪ್ಲೆಕ್ಸ್ ಅಮೃತನಗರ ಮುಖ್ಯ ರಸ್ತೆ ನ್ಯೂ ಬ್ಯಾಂಕ್ ಕಾಲೋನಿ ಕೋಣನಕುಂಟೆ ಬೆಂಗಳೂರು–560 062 | ಶ್ರೀ ಎಂ. ಮುನಿರಾಜಪ್ಪ (ಪ್ರಭಾರ) |

**ಲೆಕ್ಕಪರಿಶೋಧನೆ ಮತ್ತು ಆಂತರಿಕ ಪರಿಶೋಧನೆ ವಿವರಗಳು**

**5) ಲೆಕ್ಕಪರಿಶೋಧನೆಗೆ ದಾಖಲೆಗಳನ್ನು ಒದಗಿಸಿದವರ ಹೆಸರು ಮತ್ತು ಹುದ್ದೆ**

ಕಂಡಿಕೆ 3 ಮತ್ತು 4ರಲ್ಲಿ ತಿಳಿಸಿರುವಂತೆ ಶಾಖೆಯ ಹಂತದಲ್ಲಿ ಶಾಖಾ ವ್ಯವಸ್ಥಾಪಕರು ಮತ್ತು ಅವರ ಸಿಬ್ಬಂದಿ, ಕೇಂದ್ರ ಕಛೇರಿಯ ಹಂತದಲ್ಲಿ ಪ್ರಧಾನ ವ್ಯವಸ್ಥಾಪಕರು (ಪ್ರಭಾರ) ಹಾಗೂ ಅವರ ಸಿಬ್ಬಂದಿ ಲೆಕ್ಕ ಮಸ್ತಕಗಳನ್ನು ಹಾಜರು ಪಡಿಸಿರುತ್ತಾರೆ.

**6) ಹಿಂದಿನ ಸಾಲಿನ ಲೆಕ್ಕ ಪರಿಶೋಧಕರ ಹೆಸರು ಮತ್ತು ವಿಳಾಸ**

| | |
|---|---|
| ಲೆಕ್ಕಪರಿಶೋಧಕರ ಹೆಸರು | ಸಿಎ ಶಿವಕುಮಾರ ಸಿ. |
| ಹುದ್ದೆ ಹಾಗೂ ವಿಳಾಸ | ಪಾಲುದಾರರು<br>ಮೆ॥ ಸಿಎಸ್‌ಎಂಆರ್ ಅಂಡ್ ಅಸೋಸಿಯೇಟ್ಸ್<br>ಸನ್ನದು ಲೆಕ್ಕಪರಿಶೋಧಕರು, ನಂ. 6, 2ನೇ ಮಹಡಿ<br>80 ಅಡಿ ರಸ್ತೆ, ನಾಗರಭಾವಿ ಮುಖ್ಯರಸ್ತೆ, ಚಂದ್ರ ಲೇಔಟ್<br>ಬೆಂಗಳೂರು–560 040 |
| ಎಂಪಾನಲ್‌ಮೆಂಟ್ ನಂಬರ್ | ಎಫ್–22/02/2013 - Category A |
| ಲೆಕ್ಕಪರಿಶೋಧನಾ ಅವಧಿ | 2021–22 |

**7) ಪ್ರಸಕ್ತ ಸಾಲಿನ ಲೆಕ್ಕ ಪರಿಶೋಧನೆಯ ವಿವರ**

| | |
|---|---|
| ಲೆಕ್ಕಪರಿಶೋಧಕರ ಹೆಸರು<br>ಹುದ್ದೆ ಹಾಗೂ ವಿಳಾಸ | ಸಿಎ ಶಿವಕುಮಾರ ಸಿ. ಪಾಲುದಾರರು<br>ಮೆ॥ ಸಿ.ಎಸ್.ಎಂ.ಆರ್. ಅಂಡ್ ಅಸೋಸಿಯೇಟ್ಸ್<br>ಸನ್ನದು ಲೆಕ್ಕಪರಿಶೋಧಕರು,<br>ನಂ. 6, 2ನೇ ಮಹಡಿ, 80 ಅಡಿಯ ರಸ್ತೆ, ನಾಗರಭಾವಿ<br>ಮುಖ್ಯರಸ್ತೆ, ಚಂದ್ರ ಲೇಔಟ್, ಬೆಂಗಳೂರು–560 040 |
| ಎಂಪಾನಲ್‌ಮೆಂಟ್ ನಂಬರ್ | F-22-02-2013 - Category A |
| ನೇಮಕಾತಿ ಉಲ್ಲೇಖ / ವಂಟನೆ ಆದೇಶ ಸಂಖ್ಯೆ ಮತ್ತು ದಿನಾಂಕ | ಸಂಖ್ಯೆ. ಎಸ್.ಎಸ್.ಸಿ.ಬಿ./ಎಸ್.ಎ./ 373/2022–2023<br>ದಿನಾಂಕ 29.09.2022 |

| | |
|---|---|
| ಲೆಕ್ಕಪರಿಶೋಧನೆಯ ಆರಂಭದ ದಿನಾಂಕ | 03.05.2023 |
| ಲೆಕ್ಕಪರಿಶೋಧನೆಯ ಮುಕ್ತಾಯದ ದಿನಾಂಕ | 28.06.2023 |
| ಲೆ.ಪ.ಗೆ ತೆಗೆದುಕೊಂಡ (ಮಾನವ) ದಿನಗಳು | 72 ದಿನಗಳು |

**8. ಲೆಕ್ಕಪರಿಶೋಧನಾ ವರ್ಗೀಕರಣ :**

(ನಿರ್ದೇಶಕರ ಲೆಕ್ಕ ಪರಿಶೋಧನಾ ಮಾರ್ಗಸೂಚಿ (Audit Instruction) ಕ್ರಮ ಸಂಖ್ಯೆಯೊಂದಿಗೆ ವಿಮರ್ಷಿಸಿ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ವರದಿಗೆ ಲಗತ್ತಿಸುವುದು.)

| | |
|---|---|
| ಪ್ರಸಕ್ತ ಸಾಲಿನ ಲೆಕ್ಕಪರಿಶೋಧನಾ **ವರ್ಗೀಕರಣ** | ಬಿ ದರ್ಜೆ |
| ಹಿಂದಿನ ಸಾಲಿನ ಲೆಕ್ಕಪರಿಶೋಧನಾ **ವರ್ಗೀಕರಣ** | ಬಿ ದರ್ಜೆ |

**9. ಆಂತರಿಕ/ಸಮವರ್ತಿ ಲೆಕ್ಕ ಪರಿಶೋಧನೆ ಬಗ್ಗೆ ವಿಮರ್ಶೆ :**

| | |
|---|---|
| 1) ಬ್ಯಾಂಕಿನ ವ್ಯವಹಾರಕ್ಕನುಗುಣವಾಗಿ ಆಂತರಿಕ ಅಥವಾ ಸಮವರ್ತಿ ಲೆಕ್ಕಪರಿಶೋಧನೆಗೆ ಕ್ರಮವಿಡಲಾಗಿದೆಯೆ? | ಕ್ರಮವಿಡಲಾಗಿದೆ |
| 2) ಅಂತಹ ಪರಿಶೋಧನೆ ನಿಯಮಿತವಾಗಿ ನಡೆಯುತ್ತಿದೆಯೆ? | ನಿಯಮಿತವಾಗಿ ನಡೆಯುತ್ತಿರುತ್ತದೆ, ಸಮವರ್ತಿ ಲೆಕ್ಕ ಪರಿಶೋಧಕರು ಶಾಖೆಗಳ ಆಂತರಿಕ ಲೆಕ್ಕ ಪರಿಶೋಧನೆಯನ್ನು ಪ್ರತಿ ತ್ರೈಮಾಸಿಕದ ನಂತರ ವರದಿಗಳನ್ನು ನೀಡಿರುತ್ತಾರೆ. ವರದಿಗಳಿಗೆ ಅನುಪಾಲನ ವರದಿ ನೀಡಲಾಗಿದೆ. ಆಂತರಿಕ ಲೆಕ್ಕ ಪರಿಶೋಧನೆಯನ್ನು ಆಯಾಯ ತಿಂಗಳಿನಲ್ಲಿ ಕೈಗೊಂಡು ಮಾಸಿಕವಾರು ವರದಿಗಳನ್ನು ಪಡೆಯುವ ಪದ್ಧತಿ ಅಳವಡಿಸಿಕೊಳ್ಳುವುದು ಸೂಕ್ತವಾಗಿದೆ. |

3) ಪರಿಶೋಧನಾ ವರದಿಯಲ್ಲಿ ಗುರುತಿಸಿರುವ ಗಂಭೀರ ನ್ಯೂನತೆಗಳು

1. ಶಾಖೆಗಳಲ್ಲಿ ನಗದು ಶಿಲ್ಕನ್ನು ನಿಗಧಿತ ಮಿತಿ ಮೀರಿ ಉಳಿಸಿಕೊಳ್ಳಲಾಗಿದೆ.

   **ಸಮಜಾಯಿಷಿ:**

   ಬ್ಯಾಂಕಿನ ಎಲ್ಲಾ ಶಾಖೆಗಳು ಸಂಜೆ ವೇಳೆಯಲ್ಲಿ ಬ್ಯಾಂಕಿಂಗ್ ಸೇವೆಯನ್ನು ನೀಡುತ್ತಿದ್ದು, ಈ ವೇಳೆಯಲ್ಲಿ ಜಮಾವಾಗುವ ನಗದನ್ನು ಕೆಲವು ಸಂದರ್ಭಗಳಲ್ಲಿ ಕೇಂದ್ರ ಕಛೇರಿಗೆ ಸಂದಾಯ ಮಾಡಲು ಸಾಧ್ಯವಾಗದ ಕಾರಣ, ಮರುದಿನವೇ ಕೇಂದ್ರ ಕಛೇರಿಗೆ ಜಮಾ ಮಾಡಲಾಗುತ್ತಿದೆ. ಶಾಖೆಗಳ ದೈನಂದಿನ ವ್ಯವಹಾರಗಳ ಅಂಕಿ ಅಂಶಗಳನ್ನು ಗಮನಿಸಿ ಶಾಖೆಗಳಲ್ಲಿ ಹೊಂದಬಹುದಾದ ನಗದು ಮಿತಿಯನ್ನು ಕಾಲಕಾಲಕ್ಕೆ ಆಡಳಿತ ಮಂಡಲಿಯು ಪುನರ್‌ವಿಮರ್ಶಿಸುತ್ತಿರುತ್ತದೆ.
2. ಸಾಲಗಳ ಮಂಜೂರಾತಿಯ ನಂತರ ಅದರ ಸದುಪಯೋಗದ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ, ಧೃಡೀಕರಿಸಿಕೊಂಡಿಲ್ಲ.

**ಸಮಜಾಯಿಷಿ:**

ಸಾಲ ವಿತರಣೆ ಹಂತದಲ್ಲಿ, ನಂತರ ಹಂತ ಹಂತವಾಗಿ ಸಾಲವನ್ನು ಬಿಡುಗಡೆ ಮಾಡುವ ಸಂದರ್ಭದಲ್ಲಿ ಶಾಖಾ ವ್ಯವಸ್ಥಾಪಕರುಗಳು ಸಾಲದ ಸದುಪಯೋಗದ ಬಗ್ಗೆ ಪರಿಶೀಲಿಸುತ್ತಿದ್ದು, ವರದಿಯನ್ನು ದೃಢೀಕರಿಸಿಕೊಂಡು ಕಡತದಲ್ಲಿ ಸಂರಕ್ಷಿಸಿಡಲು ಸೂಚಿಸಲಾಗಿದೆ.

3. ಕೆಲವೊಂದು ಲಾಕರ್‌ಗಳ ಬಾಡಿಗೆ ಬಾಕಿ ಉಳಿದಿದ್ದು, ಅದರ ವಸೂಲಿಗೆ ಕ್ರಮವಿಡುವುದು.

**ಸಮಜಾಯಿಷಿ:**

ವಸೂಲಾಗದೇ ಬಾಕಿ ಇರುವ ಎಲ್ಲಾ ಶಾಖೆಗಳ ಒಟ್ಟು 12 ಪ್ರಕರಣಗಳ ಗ್ರಾಹಕರುಗಳಿಗೆ ಬಾಡಿಗೆ ಪಾವತಿಸಲು ಸೂಚಿಸಿ, ಪತ್ರ ವ್ಯವಹಾರವನ್ನು ಮಾಡಲಾಗಿದ್ದು, ವಸೂಲಿಗೆ ಕ್ರಮವಿಡಲಾಗಿದೆ. ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ ಸಂಖ್ಯೆ DOR.LEG.RFC/04/09.07.005/2021/22, dated : 18.08.2021 ರನ್ವಯ ಲಾಕರ್ ಬಾಡಿಗೆ ವಸೂಲಿ ಆಗದಿದ್ದ ಪಕ್ಷದಲ್ಲಿ ಸದರಿ ಸುತ್ತೋಲೆಯ ಪ್ರಕಾರ ಕಾನೂನು ಕ್ರಮವಹಿಸಿ ಲಾಕರ್‌ಅನ್ನು ಚುಕ್ತಗೊಳಿಸಲಾಗುವುದು.

4. ಅನುತ್ಪಾದಕ ಆಸ್ತಿಗಳಿಗೆ ಸಂಬಂಧಿಸಿದಂತೆ ಸಾಲಗಳ ತ್ವರಿತ ವಸೂಲಿಗಾಗಿ ಅಗತ್ಯ ಕ್ರಮವಿಡಬೇಕಾಗಿದೆ.

**ಸಮಜಾಯಿಷಿ:**

ಬ್ಯಾಂಕಿನಲ್ಲಿ ಅನುತ್ಪಾದಕ ಆಸ್ತಿಗೊಳಪಟ್ಟ ಸಾಲಗಳ ತ್ವರಿತ ವಸೂಲಿಗಾಗಿ ಬ್ಯಾಂಕಿನ ಕೇಂದ್ರಿಕೃತ ಸಾಲ ವಸೂಲಾತಿ ತಂಡದವರು ಸುಸ್ತಿದಾರರ ವಾಸ ಸ್ಥಳಕ್ಕೆ ಭೇಟಿ ಮಾಡಿ ವಸೂಲಾತಿಗೆ ಕ್ರಮ ಕೈಗೊಳ್ಳುತ್ತಿರುತ್ತಾರೆ. ಅದಾಗ್ಯೂ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ, ಮೊದಲ 70 ಸುಸ್ತಿದಾರರನ್ನು ಆಡಳಿತ ಮಂಡಲಿ ಸಭೆಗೆ ಬರಮಾಡಿಕೊಂಡು ಮರುಪಾವತಿಸಲು ಮನವೊಲಿಸಲಾಗುತ್ತಿರುತ್ತದೆ. ಈ ಯಾವುದೇ ಕ್ರಮಗಳಿಗೆ ಸ್ಪಂದಿಸದವರ ಮೇಲೆ ಕಾನೂನು ರೀತ್ಯಾ ಕ್ರಮ ಕೈಗೊಂಡಿದ್ದರಿಂದ ಒಟ್ಟು 48 ಖಾತೆಗಳ ಮೊತ್ತ ರೂ. 24.38 ಕೋಟಿಗಳ ಅನುತ್ಪಾದಕ ಆಸ್ತಿಗಳ ಮೇಲೆ ಹರಾಜು ಪ್ರಕ್ರಿಯೆ ನಡೆದಿದ್ದು, 5 ಖಾತೆಗಳಲ್ಲಿ ಸುಸ್ತಿ ಸಾಲ ರೂ. 1.46 ಕೋಟಿಗಳನ್ನು ಪಾವತಿ ಮಾಡಿ, ಖಾತೆಗಳನ್ನು ತೀರುವಳಿ ಮಾಡಿರುತ್ತಾರೆ. 8 ಖಾತೆಗಳಲ್ಲಿ ಸುಸ್ತಿ ಸಾಲಗಳನ್ನು ಚುಕ್ತಾ ಮಾಡಿ ರೂ. 2.23 ಕೋಟಿಗಳಷ್ಟು ಉತ್ತಮ ಆಸ್ತಿಗಳಾಗಿ ಪರಿವರ್ತನೆಗೊಂಡಿರುತ್ತವೆ. ಸುಮಾರು 8 ಖಾತೆಗಳಿಂದ ರೂ. 2.50 ಕೋಟಿಗಳು ಭಾಗಶಃ ವಸೂಲಿಯಾಗಿರುತ್ತದೆ. ಇನ್ನುಳಿದ ಖಾತೆಗಳಲ್ಲಿ ಯಾವುದೇ ಬಿಡ್‌ದಾರರು ಭಾಗವಹಿಸದೇ ಇರುವುದರಿಂದ ಹರಾಜನ್ನು ಮುಂದೂಡಿರುತ್ತದೆ. ಇದೇ ರೀತಿಯ ಕಾನೂನು ಕ್ರಮಗಳನ್ನು ಕೈಗೊಂಡು ಮುಂದಿನ ಸಾಲಿನಾಂತ್ಯಕ್ಕೆ ನಿವ್ವಳ ಎನ್.ಪಿ.ಎ. ಯನ್ನು ಶೇಕಡ 6 ರೊಳಗೆ ತರಲು ಯೋಜನೆಯನ್ನು ರೂಪಿಸಲಾಗಿದೆ.

| | |
|---|---|
| 4) ಅವುಗಳಿಗೆ ಸಂಘವು ನೀಡಿದ ಅನುಪಾಲನಾ ವರದಿಯ ವಿವರ | ಮೇಲ್ಕಂಡ ಅನೇಕ ನ್ಯೂನತೆಗಳನ್ನು ಆಡಳಿತ ಮಂಡಳಿಯ ಆಡಿಟ್ ಸಮಿತಿಯಲ್ಲಿ ಪರಿಶೀಲಿಸಿ ಕ್ರಮವಿಡಲು ಸೂಚಿಸಲಾಗುತ್ತಿದೆ. ಸಂಬಂಧಿಸಿದ ಶಾಖಾ ವ್ಯವಸ್ಥಾಪಕರಿಗೆ ನ್ಯೂನತೆಗಳನ್ನು ಸರಿಪಡಿಸಿಕೊಂಡು ಅನುಪಾಲನಾ ವರದಿ ಸಲ್ಲಿಸಲು ಬ್ಯಾಂಕಿನ ಕೇಂದ್ರ ಕಛೇರಿಯಿಂದ ಆಗಾಗ ಸೂಚನೆ ನೀಡಲಾಗುತ್ತಿದೆ. |

<table>
<tr><td>5) ಅಂತಹ ನ್ಯೂನತೆಗಳು ಮುಂದು ವರೆದಿದೆಯೆ? ಅವುಗಳ ನಿವಾರಣೆಗೆ ಕೈಗೊಂಡ ಕ್ರಮಗಳೇನು?</td><td>ಮುಂದುವರೆದಿವೆ. ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಕ್ರಮವಿಡಲಾಗಿದೆ.</td></tr>
<tr><td><u>ಆಂತರಿಕ ಹತೋಟಿ</u><br>ಲೆಕ್ಕಪತ್ರಗಳ ನಿರ್ವಹಣೆ ಬಗ್ಗೆ ನೀಡಿರುವ ಮಾರ್ಗ ಸೂಚಿಗಳು/ ಆದೇಶ/ಕೈಪಿಡಿಗಳ ಬಗ್ಗೆ.</td><td>ಅನುಸರಿಸಲಾಗಿದೆ</td></tr>
<tr><td>ಲೆಕ್ಕಪುಸ್ತಕಗಳ ಸರಿದೂಗಿಸುವಿಕೆ (Balancing)/ ಸಮನ್ವಯ ಉಪಪುಸ್ತಕಗಳ ಮೇಲೆ ಹತೋಟಿ</td><td>ಸಮರ್ಪಕ ಹತೋಟಿಗೆ ಕ್ರಮವಿಡಲಾಗಿದೆ</td></tr>
<tr><td>ಲೆಕ್ಕಪುಸ್ತಕಗಳ ಸರಿದೂಗಿಸುವಿಕೆ. ಮೇಲ್ವಿಚಾರಣೆಗೆ ಅಳವಡಿಸಲಾದ ಪದ್ಧತಿ/ಹತೋಟಿಗಳು, ಸಮನ್ವಯ ಮತ್ತು ಉಪಪುಸ್ತಕಗಳ ನಿರ್ವಹಣೆಯಲ್ಲಿ ಅನುಸರಿಸಿದ ಪದ್ಧತಿಯ ಬಗ್ಗೆ.</td><td>ಬ್ಯಾಂಕ್ ಗಣಕೀಕೃತ ಲೆಕ್ಕಪತ್ರಗಳನ್ನು ನಿರ್ವಹಿಸುತ್ತಿದ್ದಾರೆ.<br><br>ಪ್ರಸಕ್ತ ವರ್ಷದಲ್ಲಿ ಬ್ಯಾಂಕು ಹೊಸ ತಂತ್ರಾಂಶವನ್ನು ಅಳವಡಿಸಿದ್ದು. ಅದರಲ್ಲಿ ಕೆಲವೂಂದು ನ್ಯೂನತೆಗಳನ್ನು ಗಮನಿಸಲಾಗಿದ್ದು, ಅವುಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮವಿಡಬೇಕಾಗಿರುತ್ತದೆ</td></tr>
<tr><td></td><td>ಅ) ಹೊಸ ತಂತ್ರಾಂಶದಲ್ಲಿ ಕೆಲವು ಎಕ್ಸೆಪ್ಷನಲ್ (Exceptional) & MIS ವರದಿಗಳು ಲಭ್ಯವಾಗುವ ಅವಕಾಶವಿರುವುದಿಲ್ಲ. ಇಂತಹ ನ್ಯೂನ್ಯತೆಯನ್ನು ತ್ವರಿತವಾಗಿ ಸರಿಪಡಿಸಿಕೂಳ್ಳಬೇಕು.</td></tr>
<tr><td colspan="2">ಸಮಜಾಯಿಷಿ:<br>ಹೊಸ ತಂತ್ರಾಂಶದಲ್ಲಿ ಎಕ್ಸ್‌ಪ್ಷನಲ್ (Exceptional) ವರದಿಗಳು ಈಗ ಲಭ್ಯವಿರುತ್ತದೆ. ಕೆಲವು MIS ವರದಿಗಳು ಲಭ್ಯವಿದ್ದು, ಉಳಿದಿರುವ MIS ವರದಿಗಳನ್ನು ಅನುಷ್ಠಾನಗೊಳಿಸಲು ಕ್ರವಿಡಲಾಗುವುದು.</td></tr>
<tr><td></td><td>ಆ) ಬ್ಯಾಂಕಿನಲ್ಲಿ ಅಡವಿಟ್ಟ ಆಸ್ತಿಗಳ ಮೌಲ್ಯವು ಸಂಬಂಧಿಸಿದ ಸಾಲಗಳ ಖಾತೆಗಳಲ್ಲಿ ಅಳವಡಿಕೆಯಾಗಿಲ್ಲ. ಇಂತಹ ಮೌಲ್ಯಗಳು ಹಳೆಯ ತಂತ್ರಾಂಶದಿಂದ ಹೊಸ ತಂತ್ರಾಂಶಕ್ಕೆ ವರ್ಗಾವಣೆಯಾಗಿರದೇ ಇರುವುದರಿಂದ ಇಂತಹ ಸನ್ನಿವೇಶವು ನಿರ್ಮಾಣವಾಗಿರುತ್ತದೆ.ಆಡಳಿತ ಮಂಡಳಿಯು ಈ ನ್ಯೂನತೆಯನ್ನು ನಿವಾರಿಸಲು ಸೂಕ್ತ ಕ್ರಮಗಳನ್ನು ಕೈಗೂಳ್ಳಬೇಕು.</td></tr>
<tr><td colspan="2">ಸಮಜಾಯಿಷಿ:<br>ಬ್ಯಾಂಕಿನಲ್ಲಿ ಅಡವಿಟ್ಟ ಆಸ್ತಿಗಳ ಮೌಲ್ಯವನ್ನು ಸಂಬಂಧಿಸಿದ ಎಲ್ಲಾ ಸಾಲಗಳ ಖಾತೆಗಳಲ್ಲಿ ಹೊಸದಾಗಿ ಡೇಟಾ ನಮೂದು ಮಾಡುತ್ತಿದ್ದು, ಈ ಕಾರ್ಯವು ಭಾಗಶಃ ಪೂರ್ಣಗೊಂಡಿದ್ದು, ಉಳಿದಿರುವ ಕೆಲವು ಖಾತೆಗಳನ್ನು ಸಹ ಶೀಘ್ರವಾಗಿ ಪೂರ್ಣಗೊಳಿಸಲಾಗುವುದು.</td></tr>
</table>

| | |
|---|---|
| | ಇ) ಆರ್.ಬಿ.ಐ ಪ್ರಕಾರ ಕಡ್ಡಾಯವಾಗಿ ಸಿಸ್ಟಂನಲ್ಲಿ ದೈನಂದಿನ ಅಂತಿಮ ಕಾರ್ಯವಿಧಾನದ ಭಾಗವಾಗಿ ಅನುತ್ಪಾದಕ ಆಸ್ತಿ (NPA/SMA) ವರ್ಗೀಕರಿಸಬೇಕಾಗಿದ್ದು. ಆದರೆ ಆಯಾಯ ದಿನದ ಕೊನೆಯಲ್ಲಿ NPA/SMA ವರ್ಗೀಕರಣವು ಬ್ಯಾಂಕಿಗೆ ಲಭ್ಯವಾಗುತ್ತಿಲ್ಲ. ಇಂತಹ ದೋಷವನ್ನು ಅತ್ಯಂತ ಶೀಘ್ರವಾಗಿ ಸರಿಪಡಿಸಿಕೊಳ್ಳುವ ಅವಶ್ಯಕವಿದೆ. |
| **ಸಮಜಾಯಿಷಿ:**<br>ದೈನಂದಿನ ಅಂತಿಮ ಕಾರ್ಯವಿಧಾನದ ಭಾಗವಾಗಿ ಅನುತ್ಪಾದಕ ಆಸ್ತಿ (NPA/SMA) ವರ್ಗೀಕರಣವನ್ನು ಸಿಸ್ಟಂನಲ್ಲಿ ಪೂರ್ಣ ಪ್ರಮಾಣದಲ್ಲಿ ಅಳವಡಿಕೆಯಾಗದಿರುವ ಬಗ್ಗೆ ಸಾಫ್ಟ್‌ವೇರ್ ಸರಬರಾಜುದಾರರ ಗಮನಕ್ಕೆ ಈಗಾಗಲೇ ಮಾಹಿತಿ ನೀಡಿದ್ದು, ಸದರಿಯವರು ಈ ವರ್ಗೀಕರಣವು ಪರೀಕ್ಷಾ ಹಂತದಲ್ಲಿ ಇರುವುದಾಗಿ ತಿಳಿಸಿರುತ್ತಾರೆ. ಈ ಕಾರ್ಯವು ಪೂರ್ಣಗೊಂಡ ನಂತರ ಸಿಸ್ಟಂ ಜನರೇಟೆಡ್ ಎನ್.ಪಿ.ಎ. ಯನ್ನು ಲೆಕ್ಕ ಪರಿಶೋಧಕರ ಸಲಹೆಯಂತೆ ಪೂರ್ಣ ಪ್ರಮಾಣದಲ್ಲಿ ಅಳವಡಿಸಿಕೊಳ್ಳಲಾಗುವುದು. | |
| ಇವುಗಳ ಅನುಷ್ಠಾನದ ಕ್ರಮದ ಬಗ್ಗೆ ಹಿಂಬಾಲಿಕೆ ಕ್ರಮ. | ಅಗತ್ಯ ಕ್ರಮವಿಡಲಾಗಿದೆ. |
| **ಜಾಗರೂಕತೆ:**<br>ವರದಿ ಸಾಲಿನಲ್ಲಿ ಲೆಕ್ಕಪರಿಶೋಧನೆಯಲ್ಲಿ ಪತ್ತೆ ಹಚ್ಚಲಾದ ಗುರುತರ ವಂಚನೆ ಪ್ರಕರಣಗಳ ಬಗ್ಗೆ. | ಬ್ಯಾಂಕಿನ ಪದ್ಮನಾಭನಗರ ಶಾಖೆಯಲ್ಲಿ ಖಾತೆ ಸಂಖ್ಯೆ 10065500209 ರೂ 50.00 ಲಕ್ಷದ ಸಾಲದ ಪ್ರಕರಣದಲ್ಲಿ ಸಾಲಗಾರರು ನಕಲಿ ದಾಖಲೆ ಪತ್ರ ಮತ್ತು ಇ.ಸಿ ದಾಖಲೆಗಳನ್ನು ಬ್ಯಾಂಕಿಗೆ ಸಲ್ಲಿಸಿ ಸಾಲ ಪಡೆದಿರುತ್ತಾರೆ.<br>ಮುಂದುವರಿದು, ಈ ಮೇಲೆ ಸೂಚಿಸಿದ ಸಾಲಗಳ ದಾಖಲೆಗಳು ನಕಲಿಯೆಂದು ಫೆಬ್ರವರಿ ಮಾಹೆಯಲ್ಲಿ ಬ್ಯಾಂಕಿನ ಗಮನಕ್ಕೆ ಬಂದಿರುತ್ತದೆ. ಆದಾಗ್ಯೂ ಲೆಕ್ಕಪರಿಶೋಧನ ವೇಳೆಯಲ್ಲಿ ಈ ಸಂಬಂದ ಪರಿಶೀಲಿಸಿ. ಬ್ಯಾಂಕು ಇದನ್ನು ಅನುತ್ಪಾದಕ ಸಾಲಗಳೆಂದು ಪರಿಗಣಿಸಿ ಸದರಿ ಸಾಲಗಳ ಮೇಲೆ ಶೇಕಡ 100ರಷ್ಟು ಅವಕಾಶ ಕಲ್ಪಿಸಿದೆ. ಮತ್ತು ದಿನಾಂಕ 01-03-2023 ರಂದು ಆರ್.ಬಿ.ಐ ಗೆ ಪತ್ರ ಮುಖೇನ ತಿಳಿಸಲಾಗಿದೆ. |
| ಜಾಗ್ರತಾ ವರದಿಗಳ ಮೇಲೆ ಕೈಗೊಂಡ ಅನುಸರಣಾ ಕ್ರಮ<br>ಅಮಾನತ್ತು ಲೆಕ್ಕಗಳು, ಸಂಡ್ರಿ ಡಿಪಾಜಿಟ್‌ಗಳು, ಇತ್ಯಾದಿಗಳ ಬಗ್ಗೆ<br>ಈ ಖಾತೆಗಳಲ್ಲಿನ ಜಮಾ ಹಾಗೂ ಖರ್ಚುಗಳನ್ನು ತೀರಿಸುವ (Clearance) | ಹಿಂದಿನ ಸಾಲುಗಳಲ್ಲಿ ನಡೆದಿರುವ ವಂಚನೆ ಪ್ರಕರಣಗಳ ಬಗ್ಗೆ ಅಗತ್ಯ ಅನುಸರಣಾ ಕ್ರಮವಿಡಲಾಗಿದೆ.<br>ಸಂಬಂಧಿಸಿದ ಕಂಡಿಕೆಗಳಲ್ಲಿ ವಿವರಿಸಿದೆ.<br>ಪರಿಶೀಲಿಸಲಾಗಿದೆ |

| |
|---|
| ಪದ್ಧತಿ ಬಗ್ಗೆ. ಈ ಶೀರ್ಷಿಕೆಯಡಿಯಲ್ಲಿ<br>ಅಸಮಾನ್ಯ ನಮೂದುಗಳ ಪರೀಕ್ಷಾರ್ಥ<br>ಪರಿಶೀಲನೆ ಕೈಗೊಳ್ಳುವುದು. |
| <u>ತನಿಖೆ / ಹಿಂದಿನ ತನಿಖೆಯ ದಿನಾಂಕ</u><br>ಕೆಲವು ದೂರುಗಳ ಸಲ್ಲಿಕೆಯ ಹಿನ್ನಲೆಯಲ್ಲಿ ಕಲಂ 64ರ ವಿಚಾರಣೆ ನಡೆದಿದ್ದು, ವರದಿ ಸಲ್ಲಿಕೆಯಾಗಿದೆ. ಸದರಿ ವರದಿಯಲ್ಲಿನ ಅಂಶಗಳನ್ನು 2018–19ನೇ ಸಾಲಿನ ವರದಿಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಸದರಿ ವರದಿಯಲ್ಲಿ ಸಾಭೀತಾಗಿದೆ ಎನ್ನಲಾದ ಅಂಶಗಳಿಗೆ ಸಂಬಂಧಪಟ್ಟಂತೆ ದಿ. 22.04.2019 ಮತ್ತು ದಿ. 12.03.2020 ರಂದು ಅನುಪಾಲನಾ ವರದಿಯನ್ನು ನಿಬಂಧಕರಿಗೆ ಸಲ್ಲಿಸಲಾಗಿದೆ.<br>ಭಾರತೀಯ ರಿಸರ್ವ್ ಬ್ಯಾಂಕಿನಿಂದ ದಿ॥ 31.3.2022 ರವರೆಗೆ ಬ್ಯಾಂಕಿನ ಪರಿವೀಕ್ಷಣೆ ನಡೆದಿದ್ದು, ವರದಿ ಲಭ್ಯವಿದೆ. |

**10. ದಾಖಲೆಗಳು, ಲೆಕ್ಕಪತ್ರಗಳ ನಿರ್ವಹಣೆ**

**ಕರ್ನಾಟಕ ಸಹಕಾರ ಸಂಘಗಳ ನಿಯಮ 29 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 8 ರಲ್ಲಿ ನಿರ್ದಿಷ್ಟಪಡಿಸಿದಂತೆ ಈ ಕೆಳಕಂಡ ದಾಖಲೆಗಳು ಮತ್ತು ಪುಸ್ತಕಗಳನ್ನು ನಿರ್ವಹಿಸಿ ಲೆಕ್ಕ ಪರಿಶೀಲನೆಗೆ ಹಾಜರು ಪಡಿಸಿದ್ದಾರೆಯೇ?**

| | | |
|---|---|---|
| ಎ | ಸಹಕಾರಿಯ ಕಾರ್ಯನಿರ್ವಹಣೆ ಮತ್ತು ಸಾಮಾನ್ಯ ಮಾಹಿತಿಯ ತಃಖ್ತೆ | ಹೌದು |
| ಬಿ | ಸಹಕಾರಿ ವರ್ಷಾಂತ್ಯಕ್ಕೆ ಆಡಳಿತ ಮಂಡಲಿಯು ನಗದು ಮತ್ತು ದಾಸ್ತಾನು ಪರಿಶೀಲನೆ ಮಾಡಿದ ತಃಖ್ತೆ; | ಇಲ್ಲ |
| ಸಿ | ಬ್ಯಾಂಕ್ ತಾಳೆ ಮತ್ತು ಉಳಿಕೆ ಮೊಬಲಗು ದೃಢೀಕರಣ ತಃಖ್ತೆ; | ಹೌದು |
| ಡಿ | ಸದಸ್ಯತ್ವ ಮತ್ತು ಷೇರು ಷೆಡ್ಯೂಲು; | ಹೌದು |
| ಇ | ಆಡಳಿತ ಮಂಡಲಿಯ ಸದಸ್ಯರ ಮತ್ತು ನೌಕರರ ಪಟ್ಟಿ; | ಹೌದು |
| ಎಫ್ | ಸದಸ್ಯರಿಗೆ ಮತ್ತು ನಿರ್ದೇಶಕರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು; | ಹೌದು |
| ಜಿ | ನೌಕರರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು; | ಹೌದು |
| ಹೆಚ್ | ತಗಾದೆ ವಸೂಲಿ ಮತ್ತು ಉಳಿಕೆ(ಬಾಕಿ) ತಃಖ್ತೆ; | ಹೌದು |
| ಐ | ಸುಸ್ತಿದಾರರ ಸದಸ್ಯರ ಪಟ್ಟಿ; | ಹೌದು |
| ಜೆ | ಮತದಾನದ ಹಕ್ಕುಳ್ಳ ಸದಸ್ಯರ ಪಟ್ಟಿ; | ಹೌದು |
| ಕೆ | ಹೂಡಿಕೆಗಳ ಮತ್ತು ಅವುಗಳ ದೃಢೀಕರಣ ಷೆಡ್ಯೂಲುಗಳು; | ಹೌದು |
| ಎಲ್ | ಕರಡು ಮತ್ತು ಸಂದೇಹಾಸ್ಪದ ಸಾಲಗಳ ಷೆಡ್ಯೂಲುಗಳು; | ಹೌದು |
| ಎಂ | ಸಾಲ ದೃಢೀಕರಣ ತಃಖ್ತೆಗಳು; | ಹೌದು |
| ಎನ್ | ವರ್ಷದಲ್ಲಿ ಆಸ್ತಿಗಳಲ್ಲಿ ಹೂಡಿರುವ ಮೊಬಲಗಿನ ತಃಖ್ತೆ; | ಹೌದು |

| | | |
|---|---|---|
| ಒ | ಮೂರು ಅಥವಾ ಹೆಚ್ಚು ಆಡಳಿತ ಮಂಡಳಿಯ ಸಭೆಗಳಿಗೆ ಗೈರು ಹಾಜರಾದ ನಿರ್ದೇಶಕರುಗಳ ಷೆಡ್ಯೂಲು; | ಹೌದು |
| ಪಿ | ಮೂರು ಅಥವಾ ಹೆಚ್ಚು ಸಾಮಾನ್ಯ ಸಭೆಗಳಿಗೆ ಗೈರು ಹಾಜರಾದ ಸದಸ್ಯರ ಷೆಡ್ಯೂಲು; | ಹೌದು |
| ಕ್ಯೂ | ಉಪವಿಧಿಗಳಲ್ಲಿ ಉಕ್ತವಾಗಿರುವ ಸದಸ್ಯರ ಹೊಣೆಗಾರಿಕೆಗಳನ್ನು ಪಾಲಿಸದ ಸದಸ್ಯರ ಷೆಡ್ಯೂಲು; | ಹೌದು |
| ಆರ್ | ಹಣ ದುರುಪಯೋಗ ಮತ್ತು ಆರ್ಥಿಕ ಅವ್ಯವಹಾರಗಳ ಪ್ರಕರಣಗಳ ತಃಖ್ತೆ; | ಇಲ್ಲ |
| ಎಸ್ | ಒಂದು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ವಸೂಲಾಗದೇ ಇರುವ ಸಾಲ ಮುಂಗಡಗಳ ಷೆಡ್ಯೂಲು; | ಹೌದು |
| ಟಿ | ವ್ಯಾಜ್ಯ ಮತ್ತು ಜಾರಿ ಪ್ರಕರಣಗಳ ಷೆಡ್ಯೂಲು; | ಹೌದು |
| ಯು | ಮೀಸಲು ಇತರೆ ನಿಧಿಗಳ ಷೆಡ್ಯೂಲು; | ಹೌದು |
| ವ್ಹಿ | ಠೇವಣಿದಾರರ ಷೆಡ್ಯೂಲು; | ಹೌದು |
| ಡಬ್ಲ್ಯೂ | ಆಸ್ತಿ ಮತ್ತು ಸ್ವತ್ತುಗಳ ಷೆಡ್ಯೂಲು; | ಹೌದು |
| ಎಕ್ಸ್ | ಅಖೈರು ದಾಸ್ತಾನಿನ ಷೆಡ್ಯೂಲು; (ಲೇಖನ ಸಾಮಗ್ರಿ, ಮುದ್ರಣ ಸಾಮಗ್ರಿ) | ಹೌದು |
| ವೈ | ಉಪವಿಧಿಗಳಲ್ಲಿ ತಿಳಿಸಲಾಗಿರುವ ಉದ್ದೇಶಗಳಿಗೆ ಸಂಬಂಧಿಸಿದಂತೆ ಅವುಗಳನ್ನು ಎಷ್ಟರಮಟ್ಟಿಗೆ ಸಾಧಿಸಲಾಗಿದೆ ಎಂಬ ಷೆಡ್ಯೂಲು ವರ್ಗವಾರು; | ಹೌದು |
| ಝೆಡ್ | ಸದಸ್ಯರಿಗೆ ನೀಡಿರುವ ಸಾಲ ಮತ್ತು ಮುಂಗಡಗಳ ಷೆಡ್ಯೂಲು; | ಹೌದು |

**11) ನ್ಯೂನತೆಗಳು, ಅನುಪಾಲನೆಗಳು, ಶಾಸನಬದ್ಧ ಕಾರ್ಯಗಳ ನಿರ್ವಹಣೆ**

**ಸಂಘವು ಹಿಂದಿನ ಸಾಲಿನ ವರದಿಯ ಬಗ್ಗೆ ಮತ್ತು ನ್ಯೂನತೆಗಳಿದ್ದಲ್ಲಿ ಅವುಗಳ ಅನುಪಾಲನಾ ಸ್ಥಿತಿಯ ಬಗ್ಗೆ ಟಿಪ್ಪಣಿ**

1) ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಸರಣಾ ವರದಿಯನ್ನು ಸಲ್ಲಿಸಿದ್ದಾರೆಯೇ? ಹೌದು

2) ಸಲ್ಲಿಸಿದ್ದಲ್ಲಿ ವಿವರ

ಅ) ದಿನಾಂಕ 26.09.2022 ರಂದು ಸಹಕಾರ ಲೆಕ್ಕ ಪರಿಶೋಧನಾ ಇಲಾಖೆಗೆ ಸಲ್ಲಿಸಲಾಗಿದೆ.

ಆ) ದಿನಾಂಕ 26.09.2022 ರಂದು ಸಹಕಾರ ಇಲಾಖೆಗೂ ಸಲ್ಲಿಸಲಾಗಿದೆ.

3) ಗಂಭೀರ ಸ್ವರೂಪದ ಆಕ್ಷೇಪಣೆಗಳು ಹಿಂದಿನ ಸಾಲಿನಿಂದ ಮುಂದುವರೆದಿದ್ದರೆ ಕೆಳಗಿನ ನಮೂನೆಯಲ್ಲಿ ವಿವರಿಸುವುದು.

| ಕ್ರ ಸ | ಪುಟ ಸಂಖ್ಯೆ | ಕಂಡಿಕೆ ಸಂಖ್ಯೆ | ನ್ಯೂನತೆಯ ವಿವರ | ನೀಡಿದ ಸಮಜಾಯಿಷಿ | ಪ್ರಸ್ತುತ ಸ್ಥಿತಿ |
|---|---|---|---|---|---|
| 1 | 24 | 21 | ಶಾಖೆಗಳಲ್ಲಿ ಮಿತಿಗೊಳಿಸಿದ ಮಿತಿಗಿಂತಲೂ ಹೆಚ್ಚಿನ ನಗದು ಶಿಲ್ಕು ಉಳಿಸಿಕೊಂಡಿರುವುದು | ಕೊನೆಗಳಿಗೆ ನಗದು ಜಮಾ ಆಗುವುದರಿಂದ ಕೆಲವು ದಿನಗಳಲ್ಲಿ ಶಿಲ್ಕು ಹೆಚ್ಚಿಗೆ ಇರುತ್ತದೆ. | ಮುಂದುವರೆದಿದೆ |

**ಸಮಜಾಯಿಷಿ:**

ಕಂಡಿಕೆ ಸಂಖ್ಯೆ 9(3)(1) ರಲ್ಲಿ ವಿವರಣೆ ನೀಡಲಾಗಿದೆ.

| | | | | | |
|---|---|---|---|---|---|
| 2 | 30 | 24(ಡಿ)(1) | ಸಾಲಗಳ ಬಾಕಿಗಳ ಬಗ್ಗೆ ನಿಯಮಿತವಾಗಿ ಧೃಡೀಕರಣ ಪಡೆಯುತ್ತಿಲ್ಲ | ದೃಡೀಕರಣ ಪಡೆಯಲು ಕ್ರಮವಿಡಲಾಗಿದೆ | ಮುಂದುವರೆದಿದೆ |

**ಸಮಜಾಯಿಷಿ:**

ಸಾಲಗಾರರಿಂದ ಸಾಲಗಳ ಬಾಕಿಗಳ ಬಗ್ಗೆ ದೃಢೀಕರಣವನ್ನು ವರ್ಷಾಂತ್ಯದಲ್ಲಿ ಪಡೆಯುತ್ತಿದ್ದು, ನಿಯಮಿತವಾಗಿಯೂ ಸಹ ಪಡೆಯಲು ಕ್ರಮವಿಡಲಾಗುವುದು.

| | | | | | |
|---|---|---|---|---|---|
| 3 | 30<br>31 | 24ಡಿ(2) ಮತ್ತು 24ಡಿ(5) | ಒತ್ತೆ ಇಟ್ಟ ದಾಸ್ತಾನಿನ ಬಗ್ಗೆ ನಿಯಮಿತವಾಗಿ ಮಾಹಿತಿ ಹಾಗೂ ಆಸ್ತಿ ಜವಾಬ್ದಾರಿ ತಃಖ್ತೆಗಳನ್ನು ಪಡೆಯುತ್ತಿಲ್ಲ ದಾಸ್ತಾನನ್ನು ನಿಯಮಿತವಾಗಿ ಪರಿಶೀಲಿಸುತ್ತಿಲ್ಲ. | ಇದರ ಬಗ್ಗೆ ಕ್ರಮವಿಡಲಾಗಿದೆ | ಮುಂದುವರೆದಿದೆ |

**ಸಮಜಾಯಿಷಿ:**

ಬ್ಯಾಂಕಿನಲ್ಲಿ ಸಾಲಕ್ಕೆ ಆಧಾರವಾಗಿ ಒತ್ತೆ ಇಟ್ಟ ದಾಸ್ತಾನಿನ ವಿವರವನ್ನು ಮಾಹೆಯಾನ ಸಲ್ಲಿಸಲು ಸಾಲಗಾರರಿಗೆ ಸೂಚಿಸಲಾಗಿದ್ದು, ಪ್ರತಿ ಮಾಹೆ ನೀಡುತ್ತಿರುತ್ತಾರೆ. ಸದರಿ ಪಟ್ಟಿಯನ್ನು ನೀಡದೆ / ವಿಳಂಬವಾಗಿ ಸಲ್ಲಿಸಿದ ಸಾಲಗಾರರಿಗೆ ಶೇ. 2 ರಷ್ಟು ದಂಡ ವಿಧಿಸಿ ಸರಿಯಾದ ಸಮಯಕ್ಕೆ ತಪ್ಪದೇ ಸಲ್ಲಿಸಲು ಸೂಚಿಸಲಾಗುತ್ತಿದೆ. ಸಾಲದ ಖಾತೆಗಳನ್ನು ನವೀಕರಿಸುವ ಸಂದರ್ಭದಲ್ಲಿ ಆಸ್ತಿ–ಜವಾಬ್ದಾರಿ ತಃಖ್ತೆಗಳನ್ನು ಪಡೆದು ದಾಸ್ತಾನುಗಳನ್ನು ಪರಿಶೀಲಿಸುವ ಪರಿಪಾಠವಿದ್ದು, ನಿಯಮಿತವಾಗಿ ಪರಿಶೀಲಿಸಲು ಕ್ರಮವಿಡಲಾಗುವುದು.

| | | | | | |
|---|---|---|---|---|---|
| 4 | 28 | 43 | ಶ್ರೀ ಎಸ್.ಜಿ.ಜಗದೀಶ್ ಇವರು ಬ್ಯಾಂಕಿಗೆ ಮಾಡಿದ್ದಾರೆನ್ನಲಾದ ಸಾಲದ ವಂಚನೆ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ | ಇದರ ಬಗ್ಗೆ ಕ್ರಮವಿಡಲಾಗಿದೆ. | ಮುಂದುವರೆದಿದೆ |

| | | | | | |
|---|---|---|---|---|---|
| | | | ಅಗತ್ಯ ಕ್ರಮವಿಡಲು ಆಡಳಿತ ಮಂಡಳಿ ಕ್ರಮ ತೆಗೆದುಕೊಳ್ಳುವುದು. | | |

**ಸಮಜಾಯಿಷಿ:**

ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ ಸಾಲದ ಮೊತ್ತಕ್ಕೆ ಅವಶ್ಯಕ ಅವಕಾಶವನ್ನು ಕಲ್ಪಿಸುವುದರ ಜೊತೆಗೆ ವಸೂಲಾತಿಗೂ ಸಹ ಹಿಂಬಾಲಿಕೆ ಕ್ರಮವಹಿಸಲಾಗಿದೆ. ಹಾಲಿ ಕರ್ನಾಟಕ ಸಹಕಾರಿ ಕಾಯಿದೆ ಸೆಕ್ಷನ್ 70 ರಲ್ಲಿ ದಾವೆ ಹೂಡಲಾಗಿದೆ. ಆದಾಗ್ಯೂ ಉಚ್ಚ ನ್ಯಾಯಾಲಯದಲ್ಲಿಯೂ ಸಹ RFA ಸಂಖ್ಯೆ 358/2022 ರಲ್ಲಿ ಹೂಡಲಾಗಿದೆ.

**12. ಸಹಕಾರ ಸಂಘಕ್ಕೆ/ಸಹಕಾರಿಗೆ ಅನ್ವಯಿಸುವ ಕಾನೂನುಗಳ ಪಾಲನೆ ಅಥವಾ ಉಲ್ಲಂಘನೆ ಕುರಿತು**

**(ಸಹಕಾರ ಕಾಯ್ದೆ ಕಾನೂನಿನ ಉಲ್ಲಂಘನೆ ಹಾಗೂ ಬೈಲಾದ ಉಲ್ಲಂಘನೆ ಇದ್ದಲ್ಲಿ ಸಂಕ್ಷಿಪ್ತವಾಗಿ ವಿವರಿಸಿ.)**

| | |
|---|---|
| 1 | ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ, ಸಹಕಾರಿ ಸಂಘಗಳ ಕಾಯ್ದೆ, ನಿಯಮಗಳ ಪಾಲನೆ ಬಗ್ಗೆ ಟಿಪ್ಪಣಿ ಕ್ರಮಾನುಸಾರವಾಗಿ ಪಾಲಿಸಲಾಗುತ್ತಿದೆ. |
| 2 | ನಿಬಂಧಕರ/ನಿರ್ದೇಶಕರ ಇಲಾಖೆಯ ಸೂಚನೆ, ಸುತ್ತೋಲೆಗಳ ಅಂಶಗಳನ್ನು ಗಮನಿಸಲಾಗಿದೆಯೆ? ಅಳವಡಿಸಿಕೊಳ್ಳಲಾಗಿದೆಯೆ? ಅನುಸರಿಸಲಾಗುತ್ತಿದೆಯೆ?<br>ಹೌದು. ಅನುಸರಿಸಲಾಗುತ್ತಿದೆ. |
| 3 | ನಬಾರ್ಡ್ ಅಥವಾ ಆರ್.ಬಿ.ಐ ನಿರ್ದೇಶನಗಳ ಹಾಗೂ ಮಾರ್ಗಸೂಚಿಗಳ ಅನುಸರಣೆ<br>ಆರ್.ಬಿ.ಐ. ಸೂಚನೆಗಳನ್ನು ಅನುಸರಿಸಲಾಗುತ್ತಿದೆ. |
| 4 | ಉಪವಿಧಿಗಳ ಉಲ್ಲಂಘನೆ, ಕಾಯ್ದೆ ಉಲ್ಲಂಘನೆ, ನಿಯಮಗಳ ಉಲ್ಲಂಘನೆ ಬಗ್ಗೆ ವರದಿ:<br>ಯಾವುದೂ ನಮ್ಮ ಗಮನಕ್ಕೆ ಬಂದಿಲ್ಲ. |
| 5 | ಸಹಕಾರ ಇಲಾಖೆ ಅಥವಾ ಆರ್.ಬಿ.ಐನಿಂದ ವಿಚಾರಣೆ/ ತಪಾಸಣೆ ಬಗ್ಗೆ ವರದಿ:<br>ಸಹಕಾರ ಇಲಾಖೆಯಿಂದ ಪ್ರಸಕ್ತ ಸಾಲಿಗೆ ಯಾವುದೇ ವಿಚಾರಣೆ ಅಥವಾ ತನಿಖೆ ಯಾಗಿರುವುದಿಲ್ಲ.<br>ಸಹಕಾರ ಸಂಘಗಳ ನಿಬಂಧಕರ ಆದೇಶದ ಸಂಖ್ಯೆ ಯು.ಬಿ.ಸಿ./1/ದೂರು/88/ವಿಚಾರಣೆ/2016-17 ದಿನಾಂಕ: 06/03/2017 ಮತ್ತು ದಿನಾಂಕ:04/04/2017ರನ್ವಯ ಬ್ಯಾಂಕಿನ ವಿರುದ್ಧದ ಕೆಲವೊಂದು ಆರೋಪಗಳ ಬಗ್ಗೆ ನಡೆದಿದ್ದ ಸಹಕಾರ ಸಂಘಗಳ ಕಾಯ್ದೆ ಕಲಂ 64ರ ವಿಚಾರಣಾ ವರದಿ ಯಲ್ಲಿನ ಲೋಪ ದೋಷಗಳ ಬಗ್ಗೆ ಬ್ಯಾಕು 22/04/2019 ಮತ್ತು 12/03/2020 ರಂದು ಸಲ್ಲಿಸಿದ ಅನುಪಾಲನಾ ವರದಿಯನ್ನು ಒಪ್ಪಿರುವ ಬಗ್ಗೆ ನಿಬಂಧಕರ ಪತ್ರದ ಸಂಖ್ಯೆ ಯು.ಬಿ.ಸಿ./1 ದೂರು 88/2016-17 ದಿನಾಂಕ: 02/07/2021ರಂತೆ ತಿಳಿಸಿ ಪತ್ರ ಬರೆದಿರುವುದನ್ನು ಗಮನಿಸಲಾಗಿದೆ.<br>2. ಭಾರತೀಯ ರಿಸರ್ವ್ ಬ್ಯಾಂಕ್ ದಿನಾಂಕ: 31/03/2022 ರವರೆಗೆ ಪರಿವೀಕ್ಷಣೆ ನಡೆಸಿದ್ದು ಆರ್.ಬಿ.ಐ. ಪತ್ರದ ಸಂಖ್ಯೆBLR.DOS.QAG No.S.869/12.07.144/2022-23-Dated 13-09-2022 ರಂದು ಪರಿವೀಕ್ಷಣಾ ವರದಿಯನ್ನು ಬ್ಯಾಂಕಿಗೆ ಕಳಿಸಲಾಗಿದ್ದು ವರದಿ ಲಭ್ಯವಿರುತ್ತದೆ.ಸದರಿ ವರದಿಗೆ ಬ್ಯಾಂಕು ದಿನಾಂಕ21-10-2022ರಂದು ಅನುಪಾಲನ ವರದಿ ಸಲ್ಲಿಸಿದೆ. |

1. ಬ್ಯಾಂಕಿನ ದಿನಾಂಕ 31.3.2018ರ ತನಿಖಾವರದಿಯ ಹಿನ್ನಲೆಯಲ್ಲಿ ದಿನಾಂಕ 31.3.2018ಕ್ಕೆ ಬ್ಯಾಂಕ್ ಒಟ್ಟು ಅನುತ್ಪಾದಕ ಆಸ್ತಿ ಶೇ. 13.73% ಗಳನ್ನು ಹೊಂದಿದ್ದರಿಂದ ಭಾರತೀಯ ರಿಸರ್ವ್ ಬ್ಯಾಂಕ್, ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ 1949 ಕಲಂ 36(1) ರಂತೆ ತನ್ನ ಪತ್ರದ ಸಂಖ್ಯೆ ಡಿ.ಸಿ.ಬಿ.ಎಸ್.(ಬಿ.ಜಿ.) ನಂ. 1616/09.01.144/2018–19, ದಿ. 21.01.2019 ರಂತೆ ಮೇಲುಸ್ತುವಾರಿ (SAF) ಕ್ರಮ ತೆಗೆದುಕೊಂಡಿದ್ದು, ಈ ಕೆಳಕಂಡ ನಿರ್ದೇಶನಗಳನ್ನು ಬ್ಯಾಂಕಿಗೆ ನೀಡಿದೆ.

   1. ಸಾಲ ನೀಡಿಕೆಯ ವ್ಯಾಪ್ತಿ ಹಾಗೂ ಗುಂಪಿನ (exposure limit) ಮಿತಿಯನ್ನು ಅರ್ಹತೆ ಇರುವ ಮಿತಿಯಲ್ಲಿ ಶೇ. 25 ರಷ್ಟು ಕಡಿತಗೊಳಿಸಬೇಕು.
   2. ರಿಯಲ್ ಎಸ್ಟೇಟ್, ಸ್ಟಾಕ್ ಮಾರ್ಕೆಟ್ ಇತ್ಯಾದಿ ಸೂಕ್ಷ್ಮವಾದ ಗುಂಪುಗಳಿಗೆ ಸಾಲ ನೀಡುವಂತಿಲ್ಲ. ಇಂತಹ ಗುಂಪುಗಳು ಹಾಗೂ ಕೈಗಾರಿಕೆಗಳು, ಇವುಗಳ ಸಂಬಂಧ ಎನ್.ಪಿ.ಎ. ಹೆಚ್ಚಾಗಿರುವ ಪ್ರಕರಣಗಳಲ್ಲಿ ಸಾಲ ನೀಡಿಕೆಯನ್ನು ಕಡಿಮೆ ಮಾಡುವುದು.
   3. ಬ್ಯಾಂಕಿನ ಯಾವುದೇ ಹೊಸ ಶಾಖೆ ತೆರೆಯುವಂತಿಲ್ಲ ಹಾಗೂ ಈಗಿರುವ ಕಾರ್ಯ ವ್ಯಾಪ್ತಿ ವಿಸ್ತರಿಸುವಂತಿಲ್ಲ.
   4. ಆರ್.ಬಿ.ಐ. ಪೂರ್ವಾನುಮತಿ ಇಲ್ಲದೆ ಸದಸ್ಯರಿಗೆ ಷೇರುಡಿವಿಡೆಂಡ್ ಘೋಷಿಸುವಂತಿಲ್ಲ.
   5. ಎನ್.ಪಿ.ಎ. ಯನ್ನು ವಸೂಲಿ ಮಾಡಲು ಕಾರ್ಯಸಾಧನಾ ಯೋಜನೆಯನ್ನು ತಯಾರಿಸಿ ಕಳುಹಿಸಬೇಕು. ಹೊಸ ಎನ್.ಪಿ.ಎ. ಉತ್ಪತ್ತಿಯಾಗದಂತೆ ಕ್ರಮವಿಡುವ ಬಗ್ಗೆ ಈ ಯೋಜನೆಯಲ್ಲಿ ಸೇರಿಸಬೇಕು.
   6. ಬ್ಯಾಂಕು ತನ್ನ ಸಾಲ ನೀತಿಯನ್ನು ಪುನರ್ ವಿಮರ್ಶೆಗೆ ಒಳಪಡಿಸಬೇಕು. ಸಾಲ ಹಂಚಿಕೆ ಮತ್ತು ವಸೂಲಿಗೆ ಸಂಬಂಧಿಸಿದ ಕುಶಲತೆ ಮತ್ತು ಪದ್ಧತಿಗಳನ್ನು ಉನ್ನತೀಕರಿಸಲು ಅಗತ್ಯ ಕ್ರಮವಿಡಬೇಕು. ದೊಡ್ಡ ಮೊತ್ತದ ಸಾಲಗಳ ಹಂಚಿಕೆಗೆ ಸಂಬಂಧಿಸಿದ ಕಾರ್ಯತಂತ್ರಗಳನ್ನು ದೃಢಗೊಳಿಸಲು ಪುನರ್ ವಿಮರ್ಷೆ ಮಾಡಬೇಕು. ಕಾನೂನು ಕ್ರಮಗಳ ಬಗ್ಗೆ ಪರಿಣಾಮಕಾರಿ ಕ್ರಮವಿಡಬೇಕು. ಪ್ರಾರಂಭದಲ್ಲೆ ಎನ್.ಪಿ.ಎ. ಆಗಬಹುದಾದ ಸಾಲಗಳನ್ನು ಗುರುತಿಸಿ, ತಪ್ಪಿಸಲು ಕ್ರಮವಿಡಬೇಕು.
   7. ಆಡಳಿತ ಮಂಡಳಿ ಪ್ರತಿ ತಿಂಗಳು ಹೆಚ್ಚಿನ ಮೊತ್ತದ ಮೊದಲ 30 ಎನ್.ಪಿ.ಎ. ಒಳಗೊಂಡ ಸಾಲದ ಖಾತೆಗಳನ್ನು ಪರಿಶೀಲನೆಗೊಳಪಡಿಸಿ, ಅದರ ವರದಿಯನ್ನು ಆರ್.ಬಿ.ಐ. ಗೆ ಸಲ್ಲಿಸಬೇಕು. ತ್ರೈಮಾಸಿಕವಾಗಿ ಆರ್.ಬಿ.ಐ. ನಲ್ಲಿ ಆಡಳಿತ ಮಂಡಳಿಯ ಮೇಲುಸ್ತುವಾರಿ ಸಭೆಯನ್ನು ನಡೆಸುವುದು.
   8. ಬ್ಯಾಂಕು ತನಿಖಾ ವರದಿಯಲ್ಲಿನ ಎಲ್ಲಾ ನ್ಯೂನತೆಗಳನ್ನು ಸರಿಪಡಿಸಬೇಕು ಮತ್ತು ತೃಪ್ತಿಕರವಾದ ಅನುಪಾಲನಾ ವರದಿಯನ್ನು ಸಲ್ಲಿಸಬೇಕು, ಮುಂದೆ ಅದೇ ರೀತಿ ಅನುಸರಣೆ ಮಾಡಬೇಕು.

ವರದಿ ಸಾಲಿನಾಂತ್ಯಾಕ್ಕೂ ಸದರಿ ಮೇಲುಸ್ತುವಾರಿ ಕ್ರಮಗಳು ಮುಂದುವರೆದಿವೆ. ಭಾರತೀಯ ರಿಸರ್ವ್ ಬ್ಯಾಂಕಿನ ದಿನಾಂಕ: 31/03/2022 ರ ಪರಿವೀಕ್ಷಣಾ ವರದಿಯಲ್ಲಿ ಮೇಲ್ಕಂಡ ವಿಷಯವನ್ನು ಪ್ರಸ್ತಾಪಿಸಿದ್ದು, ಬ್ಯಾಂಕಿನ ಒಟ್ಟಾರೆ ಎನ್.ಪಿ.ಎ. ಯನ್ನು ಕಡಿಮೆ ಮಾಡಲು ವಿಶೇಷ ಸಾಲ ವಸೂಲಾತಿ ಕ್ರಮಗಳನ್ನು ತೆಗೆದುಕೊಂಡು ಎನ್.ಪಿ.ಎ.ಯನ್ನು ನಿಗದಿತ ಮಿತಿಗೆ ತರಲು, ಆ ಮೂಲಕ ಆರ್.ಬಿ.ಐ. ನ ಮೇಲುಸ್ತುವಾರಿ ಕ್ರಮದಿಂದ ಹೊರಬರಲು ಸೂಚಿಸಲಾಗಿದೆ.

**ಸಮಜಾಯಿಷಿ:**
ಭಾರತೀಯ ರಿಸರ್ವ್ ಬ್ಯಾಂಕಿನ ಮೇಲುಸ್ತುವಾರಿ ಕ್ರಮದಿಂದ ಹೊರಬರಲು, ಈಗಾಗಲೇ ಬ್ಯಾಂಕಿನಿಂದ ಸಾಲ ಪಡೆದು ಸುಸ್ತಿಯಾದ ಖಾತೆದಾರರುಗಳಿಂದ ಸಾಲ ವಸೂಲಿ ಮಾಡಲು ತೀವ್ರತರ ಕಾನೂನು ಕ್ರಮ ಕೈಗೊಂಡಿರುವುದರ ಜೊತೆಗೆ, ದಿನಾಂಕ 04.08.2023 ರಂದು ಭಾರತೀಯ ರಿಸರ್ವ್ ಬ್ಯಾಂಕಿಗೆ ಸಲ್ಲಿಸಿರುವ Road Map ನ ಅಂಕಿ ಅಂಶಗಳ ಪ್ರಕಾರ ಬ್ಯಾಂಕಿನ ಎನ್.ಪಿ.ಎ. ಮೊತ್ತವನ್ನು ಸದರಿ ವರ್ಷಾಂತ್ಯಕ್ಕೆ (ದಿನಾಂಕ 31.3.2024ಕ್ಕೆ) ಕಡಿಮೆ ಮಾಡಿ, ಮೇಲುಸ್ತುವಾರಿಯಿಂದ ಹೊರಬರಲು ಯೋಜನೆ ರೂಪಿಸಲಾಗಿದೆ.

ಬ್ಯಾಂಕು ದಿನಾಂಕ:21–10–2022 ರಲ್ಲಿ ಆರ್.ಬಿ.ಐ.ಗೆ ಸಲ್ಲಿಸಿದ ಅನುಪಾಲನಾ ವರದಿಯಲ್ಲಿ ಬ್ಯಾಂಕಿನ ಸುಸ್ತಿ ಸಾಲಗಳನ್ನು ವಸೂಲಿ ಮಾಡಲು ಇಟ್ಟಿರುವ ಕಾನೂನಾತ್ಮಕ ಕ್ರಮಗಳನ್ನು ವಿವರಿಸಲಾಗಿದೆ.

2. ಬ್ಯಾಂಕಿನಲ್ಲಿ ವ್ಯವಸ್ಥಾಪನಾ ಮಂಡಳಿಯನ್ನು (Board of Management - BOM) ಸ್ಥಾಪಿಸುವ ಬಗ್ಗೆ.

ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ ಸಂಖ್ಯೆ DOR(PCB)BPD.CIR.NO.8/ 12.05.002/ 2019–20. ದಿ.31.12.2019ರಂತೆ ರೂ.100 ಕೋಟಿ ಮೀರಿದ ಠೇವಣಿಗಳನ್ನು ಹೊಂದಿರುವ ಬ್ಯಾಂಕ್‌ಗಳು ತಮ್ಮ ಬ್ಯಾಂಕಿನಲ್ಲಿ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ಎಂಬ ಸಮಿತಿಯನ್ನು ಏರ್ಪಾಡು ಮಾಡಿಕೊಳ್ಳುವುದು ಕಡ್ಡಾಯ ಎಂದು ತಿಳಿಸಲಾಗಿದೆ. ಇದರಂತೆ ಬ್ಯಾಂಕು ದಿನಾಂಕ 31.05.2021 ರಂದು ಬ್ಯಾಂಕಿನಲ್ಲಿ ವ್ಯವಸ್ಥಾಪನಾ ಮಂಡಳಿಯನ್ನು ರಚಿಸಿದ್ದು, ವರದಿ ಸಾಲಿನಲ್ಲಿ 2 ಸಭೆಗಳು ನಡೆದಿರುತ್ತದೆ.

## ಭಾಗ – 3
## ಬ್ಯಾಂಕಿನ ವ್ಯಾವಹಾರಿಕ ವಿವರಗಳು

**13) ದಿನಾಂಕ 31–03–2023 ರಲ್ಲಿರುವಂತೆ ಸದಸ್ಯತ್ವದ ವಿವರ ಈ ಕೆಳಕಂಡಂತೆ ಇರುತ್ತದೆ.**

| ಸದಸ್ಯತ್ವ | ಸಾಮಾನ್ಯ ಸದಸ್ಯತ್ವ | | ನಾಮಮಾತ್ರ ಸದಸ್ಯತ್ವ | | ಸಹ ಸದಸ್ಯತ್ವ | |
|---|---|---|---|---|---|---|
| | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು |
| ವರ್ಷಾರಂಭದಲ್ಲಿ ಇದ್ದ ಸದಸ್ಯರು | 36622 | 37612 | 573 | 554 | – | – |
| ಹೊಸದಾಗಿ ಸದಸ್ಯತ್ವ ಪಡೆದವರು | 253 | 107 | 53 | 65 | – | – |
| ಸದಸ್ಯತ್ವದಿಂದ ಕಡಿಮೆ ಆದವರು | 784 | 1097 | 30 | 46 | – | – |
| ಸಾಲಾಖೈರಿಗೆ ಇರುವ ಸದಸ್ಯರು | 36091 | 36622 | 596 | 573 | – | – |

| | |
|---|---|
| ಸದಸ್ಯತ್ವದ ಬಗ್ಗೆ ವಿಮರ್ಷೆ | – ಬ್ಯಾಂಕಿನ ಸದಸ್ಯರ ಸಂಖ್ಯೆಯು ಹಿಂದಿನ ಸಾಲಿನ ಸಂಖ್ಯೆಗೆ ಹೋಲಿಸಿದಾಗ ವರದಿ ಸಾಲಿನಲ್ಲಿ 531 ಸದಸ್ಯರ ಸಂಖ್ಯೆಯಲ್ಲಿ ಕಡಿಮೆಯಾಗಿದ್ದು, ಶೇಕಡ 1.45ರಷ್ಟು ಸದಸ್ಯತ್ವ ಸಂಖ್ಯೆಯಲ್ಲಿ ಕಡಿಮೆಯಾಗಿರುತ್ತದೆ. |

| | |
|---|---|
| | – ಬ್ಯಾಂಕಿನಲ್ಲಿ ವರದಿ ಸಾಲಿನ ಅಂತ್ಯಕ್ಕೆ 596 ನಾಮಮಾತ್ರ ಸದಸ್ಯರಿದ್ದು ಇದು ರೆಗ್ಯೂಲರ್ ಸದಸ್ಯತ್ವದ ಒಟ್ಟು ಸಂಖ್ಯೆಗೆ ಶೇಕಡ 1.65 ರಷ್ಟು ಇರುತ್ತದೆ.<br>– ಸದಸ್ಯತ್ವ ಕುಳುವಾರು ಪಟ್ಟಿಗೆ ತಾಳೆ ಇರುತ್ತದೆ. |
| ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಅಧಿನಿಯಮ 2014 ರ ಕಲಂ 18(1) ರನ್ವಯ ಸಂಘದಲ್ಲಿರುವ ಸಹ ಸದಸ್ಯರುಗಳ ಸಂಖ್ಯೆಯು ಒಟ್ಟು ಕ್ರಮಬದ್ಧ ಸದಸ್ಯತ್ವದ ಪ್ರತಿಶತ ಹದಿನೈದರಷ್ಟರನ್ನು ಮೀರತಕ್ಕದಲ್ಲ, ಒಂದು ವೇಳೆ ಈಗಾಗಲೇ ಸದರಿ ಪ್ರಮಾಣ 15 ಪ್ರತಿಶತಕ್ಕಿಂತ ಹೆಚ್ಚಿಗೆ ಇದ್ದಲ್ಲಿ ಅಂತಹ ಸದಸ್ಯರು ಕಲಂ 16 ರನ್ವಯ ಕ್ರಮಬದ್ಧ ಸದಸ್ಯತ್ವ ಹೊಂದಲು ಅರ್ಹವಿದ್ದಲ್ಲಿ ಈ ತಿದ್ದುಪಡಿ ದಿನಾಂಕದಿಂದ 6 ತಿಂಗಳೊಳಗೆ ಅಂತಹ ಸಹಸದಸ್ಯರನ್ನು ಕ್ರಮಬದ್ದ ಸದಸ್ಯರೆಂದು ಮಾಡಿಕೊಳ್ಳುವುದು, ಅಥವಾ ಅವರನ್ನು ಸಹ ಸದಸ್ಯತ್ವದಿಂದ ತೆಗೆದುಹಾಕುವುದು ಎಂದು ಇದ್ದು, ಈ ಮೇಲಿನ ಅಂಶಗಳನ್ನು ಗಮನಿಸಿ ಸಂಘದಲ್ಲಿರುವ ಸಹಸದಸ್ಯರ ಬಗ್ಗೆ ವಿಮರ್ಷಿಸುವುದು. | ಬ್ಯಾಂಕಿನಲ್ಲಿ ಸಹ ಸದಸ್ಯತ್ವ ಇರುವುದಿಲ್ಲ. ಆದ್ದರಿಂದ ಅನ್ವಯಿಸುವುದಿಲ್ಲ. |
| ಎಲ್ಲ ಸದಸ್ಯರಿಂದ ಕೆ.ವೈ.ಸಿ. ದಾಖಲಾತಿಗಳನ್ನು ಪಡೆದಿರುವುದರ ಬಗ್ಗೆ ವಿಮರ್ಷೆ | ಅಗತ್ಯವಾದ ಎಲ್ಲಾ ದಾಖಲೆಗಳನ್ನು ಪಡೆದು ಪರಿಶೀಲಿಸಲಾಗಿದೆ. |

**ಬ್ಯಾಂಕಿನ ಸದಸ್ಯರೊಡನೆ ಕೈಕೊಂಡ ವ್ಯವಹಾರಗಳಲ್ಲಿ ಇರುವ ನ್ಯೂನ್ಯತೆಗಳ ಬಗ್ಗೆ ವಿಮರ್ಷೆ :**

| | | |
|---|---|---|
| 1 | ವಿವಿಧ ವರ್ಗಗಳ ಸದಸ್ಯರ ವ್ಯವಹಾರಗಳ ಬಗ್ಗೆ ಟಿಪ್ಪಣಿ | ಬ್ಯಾಂಕು ಸಾಮಾನ್ಯ ಸದಸ್ಯತ್ವ ಮತ್ತು ನಾಮಮಾತ್ರ ಸದಸ್ಯತ್ವಕ್ಕೆ ಮಾತ್ರ ಅವಕಾಶ ನೀಡಲಾಗಿದೆ.<br>ಸಹಸದಸ್ಯತ್ವ ಇರುವುದಿಲ್ಲ.<br>ನಾಮಮಾತ್ರ ಸದಸ್ಯರಿಗೆ ಮತ ನೀಡುವ, ಆಡಳಿತ ದಲ್ಲಿ ಪಾಲ್ಗೊಳ್ಳುವ, ಡಿವಿಡೆಂಡ್ ಪಡೆಯುವ ಹಕ್ಕು ಇರುವುದಿಲ್ಲ. |
| 2 | ಸದಸ್ಯೇತರರೊಂದಿಗಿನ ವ್ಯವಹಾರಗಳ ಬಗ್ಗೆ ಟಿಪ್ಪಣಿ | ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ 1949ರಂತೆ (ಸಹಕಾರ ಸಂಘಗಳಿಗೆ ಅನ್ವಯವಾಗುವಂತೆ) ಸದಸ್ಯರೇತರರಿಂದ ಠೇವಣಿ ಸಂಗ್ರಹಣೆ ಹಾಗು ಇನ್ನಿತರೆ ಬ್ಯಾಂಕಿಂಗ್ ವ್ಯವಹಾರ ನಡೆಸಲಾಗುತ್ತದೆ. |

| | | |
|---|---|---|
| 3 | ವ್ಯಾಪ್ತಿಮೀರಿ ನಡೆಸಿದ ವ್ಯವಹಾರಗಳು | ಇಂತಹ ಪ್ರಕರಣಗಳು ಕಂಡುಬಂದಿರುವುದಿಲ್ಲ. |
| 4 | ಷೇರು ಬಂಡವಾಳ ನಿರ್ವಹಣೆ ಬಗ್ಗೆ ಟಿಪ್ಪಣಿ | ಕೆಳಗಿನ ಕಂಡಿಕೆಯಲ್ಲಿ ವಿವರಿಸಿದೆ. |

**14) ಷೇರು ಬಂಡವಾಳ ಬಗ್ಗೆ ವಿಮರ್ಷೆ :**

**1) ಅಧಿಕೃತ ಷೇರು ಬಂಡವಾಳ :**

| | |
|---|---|
| ಸಂಘದ ಉಪನಿಯಮದನ್ವಯ ಅಧಿಕೃತ ಷೇರು ಬಂಡವಾಳದ ಮಿತಿ ಸಂಘದ ವಾರ್ಷಿಕ ಮಹಾಸಭೆಯಲ್ಲಿ ನಿರ್ಧರಿಸಿದ ಕುರಿತು ಹಾಗೂ ಸಂಘದ ಉಪ ನಿಯಮದನ್ವಯ ಷೇರಿನ ಮುಖಬೆಲೆ ಕುರಿತು ವಿಮರ್ಷಿಸುವುದು. | ಉಪನಿಯಮ 10ರಂತೆ ಬ್ಯಾಂಕಿನಲ್ಲಿ ಪ್ರತಿ ಷೇರಿನ ಮುಖಬೆಲೆ ರೂ.100/-ಗಳು ದಿನಾಂಕ 21.09.2015ರ ಮಹಾ ಸಭೆಯಲ್ಲಿ ಬ್ಯಾಂಕಿನ ಅಧಿಕೃತ ಷೇರು ಬಂಡವಾಳವನ್ನು ರೂ.30.00 ಕೋಟಿ ಎಂದು ನಿಗಧಿಪಡಿಸಲಾಗಿದೆ. |

**ದಿನಾಂಕ 31-03-2023 ಕ್ಕೆ ಇರುವಂತೆ ಬ್ಯಾಂಕಿನ ಸಂದಾಯವಾದ ಷೇರು ಬಂಡವಾಳದ ವಿವರ ಈ ಕೆಳಕಂಡಂತೆ ಇರುತ್ತದೆ.**

(ರೂ.ಲಕ್ಷಗಳಲ್ಲಿ)

| ಷೇರು ಬಂಡವಾಳ | ಸರ್ಕಾರದ ಷೇರು | | ಸಾಮಾನ್ಯ ಷೇರು | | ನಾಮಮಾತ್ರ ಸದಸ್ಯರ ಷೇರು | | ಸಹ ಸದಸ್ಯರ ಷೇರು | |
|---|---|---|---|---|---|---|---|---|
| | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು |
| ವರ್ಷಾರಂಭದಲ್ಲಿದ್ದಂತೆ | – | – | 1627.55 | 1773.89 | – | – | – | – |
| ಪ್ರಸಕ್ತ ಸಾಲಿನಲ್ಲಿನ ಜಮಾ | – | – | 31.56 | 23.93 | – | – | – | – |
| ಪ್ರಸಕ್ತ ಸಾಲಿನಲ್ಲಿನ ಖರ್ಚು | – | – | 61.63 | 170.27 | – | – | – | – |
| ಸಾಲಾಖೈರಿಗೆ ಇದ್ದಂತೆ | – | – | 1597.48 | 1627.55 | – | – | – | – |

ಪ್ರಸಕ್ತ ವರ್ಷಾಂತ್ಯದಲ್ಲಿರುವ ಷೇರು ಮೊಬಲಗು ಹಿಂದಿನ ಸಾಲಿನ ಅಂತ್ಯದ ಷೇರು ಮೊಬಲಗಿಗೆ ಹೋಲಿಸಿದಾಗ ಶೇ. 1.85% ರಷ್ಟು ಇಳಿಕೆಯಾಗಿರುತ್ತದೆ.

**ಸರ್ಕಾರದ ಷೇರು ಬಂಡವಾಳದ ಬಗ್ಗೆ ವಿಮರ್ಷೆ :**

ಸರ್ಕಾರದ ಷೇರು ಧನ ಕುರಿತಂತೆ ಮಂಜೂರಾತಿ ಆದೇಶ ಮತ್ತು ಮರು ಪಾವತಿಯ ಕಂತುಗಳ ಷರತ್ತು ಇತ್ಯಾದಿ ಕುರಿತು ವಿಮರ್ಷಿಸುವುದು.

ಸರ್ಕಾರದ ಷೇರು ಧನ ಇರುವುದಿಲ್ಲ.

**ಸಂದಾಯವಾದ ಷೇರು ಬಂಡವಾಳದ ಬಗ್ಗೆ ವಿಮರ್ಷೆ**

(ಇದರಲ್ಲಿ ಸಂದಾಯವಾದ ಷೇರು ಬಂಡವಾಳ ಅಧಿಕೃತ ಷೇರು ಬಂಡವಾಳದ ಮಿತಿಯಲ್ಲಿ ಇರುವಂತೆ, ಷೇರಿನ ಮುಖಬೆಲೆಯಂತೆ ಪೂರ್ಣ ಇರುವ ಬಗ್ಗೆ, ಎಲ್ಲ ಸದಸ್ಯರಿಗೆ ಷೇರು ಪ್ರಮಾಣ ಪತ್ರ ನೀಡಿರುವ ಬಗ್ಗೆ, ಸಂಘದಲ್ಲಿ ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ಕಲಂ 122 ರಂತೆ ಸದಸ್ಯರ ರಿಜಿಸ್ಟರಿನಲ್ಲಿ ಪೂರ್ಣ ವಿವರಗಳೊಂದಿಗೆ ಬರೆದು ಇಟ್ಟಿರುವ ಬಗ್ಗೆ ವಿಮರ್ಷಿಸುವುದು.)

ಸಂದಾಯವಾದ ಷೇರು ಬಂಡವಾಳವು ಅಧಿಕೃತ ಷೇರು ಬಂಡವಾಳದ ಮಿತಿಯಲ್ಲಿದೆ.
ಕುಳುವಾರು ಪಟ್ಟಿ ತಯಾರಿಸಿದ್ದಾರೆಯೇ ? ತಾಳೆಯಾಗಿದೆಯೇ ?
(ವ್ಯತ್ಯಾಸವಿದ್ದಲ್ಲಿ ವ್ಯತ್ಯಾಸ ಯಾವ ಸಾಲಿನದು ಎಂಬುದರ ಬಗ್ಗೆ ವಿಮರ್ಷಿಸುವುದು)
ಕುಳುವಾರು ಪಟ್ಟಿಗೆ ತಾಳೆ ಇರುತ್ತದೆ.

**15) ಮೀಸಲು ನಿಧಿ ಮತ್ತು ಇತರೆ ನಿಧಿಗಳು : 'ಶೆಡ್ಯೂಲ್ ಯು' ನಲ್ಲಿರುವ ಪ್ರಕಾರ**

1 ಸಂಘದಲ್ಲಿರುವ ಮೀಸಲು ನಿಧಿಯನ್ನು ಸಹಕಾರಿ ಸಂಘಗಳ ನಿಯಮ 23 ರಂತೆ ಪ್ರತ್ಯೇಕವಾಗಿ ಗುಂತಾಯಿಸಿಲಾಗಿದೆಯೇ ? ಪ್ರತ್ಯೇಕವಾಗಿ ಗುಂತಾಯಿಸದೆ ಇದ್ದಲ್ಲಿ ಸಹಕಾರ ಸಂಘಗಳ ನಿಬಂಧಕರ ಅನುಮತಿ ಪಡೆದಿದ್ದಾರೆಯೇ ? ಗುಂತಾವಣಿಯ ಮೇಲಿನ ಬಡ್ಡಿ ಸಾಲಾಖ್ಯೆರಿಗೆ ಸಂಘಕ್ಕೆ ಜಮಾ. ಆಗಿದೆಯೇ? ಇಲ್ಲದಿದ್ದಲ್ಲಿ ಅವಧಿ ಸಮೇತ ಕಾರಣ ತಿಳಿಸಿ.

ದಿ.31.03.2023ಕ್ಕೆ ಬ್ಯಾಂಕ್ ರೂ. 18,74,65,436/– ಗಳ ಆಪದ್ದನ ನಿಧಿ ಹೊಂದಿರುತ್ತದೆ. ಸದರಿ ಮೊಬಲಗನ್ನು ಪೂರ್ಣವಾಗಿ ಸರ್ಕಾರಿ ಭದ್ರತೆಯ ಪರಿಪಕ್ವತೆಯ (HTM) ವರ್ಗಗಳಲ್ಲಿ ರೂ. 19,46,20,000–00 ಗಳನ್ನು ಹೂಡಿಕೆ ಮಾಡಿ 'ಇಯರ್ ಮಾರ್ಕ್' ಮಾಡಲಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ ಸಂಖ್ಯೆ DCBR.CEO.BPD(PCM) MC NO. 13/ 19.5.000/2015–16; DATED 01.07.2015 ರಂತೆ, ಪ್ರತಿ ಬ್ಯಾಂಕಿನಲ್ಲಿ ಹೂಡಿರುವ ಹೂಡಿಕೆಯು ಹಿಂದಿನ ಸಾಲಾಂತ್ಯಕ್ಕೆ ಉಳಿದಿರುವ ತನ್ನ ಠೇವಣಿಗಳ ಶೇ.5% ರಷ್ಟನ್ನು ಮೀರಬಾರದು, ಹಾಗು ಬ್ಯಾಂಕು ಹೊಂದಿರುವ ಇತರೆ ಎಲ್ಲಾ ಬ್ಯಾಂಕುಗಳಲ್ಲಿನ ಹೂಡಿಕೆ ಮೊತ್ತ ಹಿಂದಿನ ಸಾಲಿನ ಅಂತ್ಯಕ್ಕೆ ಉಳಿದಿರುವ ತನ್ನ ಠೇವಣಿಗಳ ಶೇ.20ರನ್ನು ಮೀರಬಾರದೆಂದು ತಿಳಿಸಲಾಗಿದೆ.

ಪ್ರಸಕ್ತ ಸಾಲಿನಲ್ಲಿ ಎಲ್ಲಾ ಹೂಡಿಕೆಗಳಿಂದ ರೂ. 1920.37 ಲಕ್ಷಗಳ ಬಡ್ಡಿ ಜಮಾ ಬಂದಿರುತ್ತದೆ.

2 ನಿಧಿಗಳ ನಿಯೋಜನೆ ಮಾಡುವಾಗ ಕಾಯ್ದೆ ಪ್ರಕರಣ 58 ರ ಅಂಶಗಳನ್ನು ಪಾಲಿಸಲಾಗಿದೆಯೆ? ಈ ಕೆಳಕಂಡ ವಿವರಗಳಿಗೊಳಪಟ್ಟು ಪಾಲಿಸಲಾಗಿದೆ.

2021–22ನೇ ಸಾಲಿಗೆ ಬ್ಯಾಂಕ್ ನಿವ್ವಳ ನಷ್ಟ ಹೂಂದಿರುತ್ತದೆ, ವರದಿ ಸಾಲಿನಲ್ಲಿ ನಿಧಿಗಳ ನಿಯೋಜನೆ ಮಾಡುವಾಗ ಕಾಯಿದೆ ಕಲಂ 58ರಅಂಶಗಳನ್ನು ಪಾಲಿಸಲಾಗಿದೆ.

ಬ್ಯಾಂಕು 2021–22ನೇ ಸಾಲಿಗೆ ನಷ್ಟ ಹೊಂದಿರುವುದರಿಂದ ಸದಸ್ಯರಿಗೆ ಡಿವಿಡೆಂಡ್ ಹಂಚಿರುವುದಿಲ್ಲ.

ಪ್ರಸ್ತುತ ಬ್ಯಾಂಕ್, ಬ್ಯಾಂಕಿಂಗ್ ನಿಯಂತ್ರಣಾ ಕಾಯ್ದೆ ಕಲಂ36(1)ರಂತೆ ಭಾರತೀಯ ರಿಸರ್ವ್ ಬ್ಯಾಂಕಿನ ಮೇಲುಸ್ತುವಾರಿ ನಿಬಂಧನೆಗೆ ಒಳಪಟ್ಟಿದ್ದು, ಸದಸ್ಯರಿಗೆ ಡಿವಿಡೆಂಡ್ ಹಂಚಲು ಆರ್.ಬಿ.ಐ.ನ ಪೂರ್ವಾನುಮತಿ ಅಗತ್ಯವಾಗಿರುತ್ತದೆ

3 ಬ್ಯಾಂಕು ಕರ್ನಾಟಕ ಸಹಕಾರಿ ಸಂಘಗಳ ನಿಯಮ 23(2) ರನ್ವಯ ತನ್ನ ಕಾಯ್ದಿಟ್ಟ ನಿಧಿಯನ್ನು ಅಥವಾ ಅದರ ಒಂದು ಭಾಗವನ್ನು ನಿಬಂಧಕರ ಆದೇಶದನ್ವಯ ಸ್ವಂತ ವ್ಯಾಪಾರಕ್ಕಾಗಿ ಅಥವಾ ಸಂಘದ ಕಟ್ಟಡ ನಿರ್ಮಾಣ ಅಥವಾ ಖರೀದಿಗಾಗಿ ಅಥವಾ ಭೂಮಿಗಳ ಖರೀದಿಯಲ್ಲಿ ತೊಡಗಿಸಲು ಅನುಮತಿ ಪಡೆಯದಿದ್ದಲ್ಲಿ, ಸದರಿ ಆದೇಶದ ಷರತ್ತುಗಳ ಹಾಗೂ ಅವುಗಳ ಪಾಲನೆಯ ಕುರಿತು ವಿಮರ್ಷಿಸುವುದು.

ಅಂತಹ ಪ್ರಕರಣ ಕಂಡುಬಂದಿರುವುದಿಲ್ಲ.

| | |
|---|---|
| 4 | ಈ ಮೇಲಿನಂತೆ ವಿನಿಯೋಗಿಸಿದ ಕಾಯ್ದಿಟ್ಟ ನಿಧಿಯ ಮೊತ್ತ ಹಾಗೂ ಸ್ಥಿರಾಸ್ತಿಯಲ್ಲಿ ವಿನಿಯೋಗಿಸಿದ ಕಟ್ಟಡ ನಿಧಿಯ ಮೊತ್ತವನ್ನು ಸಂಘದ ಸಾಲ ಜಿಂದಗಿ (Balance Sheet) ತಖ್ತೆಯ ಸಂಬಂಧಿಸಿದ ನಿಧಿಯ ಕೆಳಗೆ ಒಳಗಿನ ಅಂಕಣದಲ್ಲಿ (Inner Column) ಕಡ್ಡಾಯವಾಗಿ ನಮೂದಿಸುವುದು.<br>ಅನ್ವಯಿಸುವುದಿಲ್ಲ |
| 5 | ಬ್ಯಾಂಕು ಸಹಕಾರ ಶಿಕ್ಷಣ ನಿಧಿಯ ವಂತಿಗೆಯನ್ನು ಪಾವತಿಸಿದೆಯೆ? ಸಹಕಾರ ಶಿಕ್ಷಣ ನಿಧಿಯನ್ನು ಪಾವತಿಸುವ ಮೊದಲೇ ಸಂಘದ ಸದಸ್ಯರಿಗೆ ಡಿವಿಡೆಂಡ್ ಹಂಚಿ ಸಹಕಾರ ಸಂಘಗಳ ಕಾಯಿದೆ ಕಲಂ 57(4) (ಬಿ) ಯ ಉಲ್ಲಂಘನೆಯಾಗಿದೆಯೇ ?<br>ಬ್ಯಾಂಕು 2021–22 ನೇ ಸಾಲಿನಲ್ಲಿ ನಷ್ಟ ಹೊಂದಿರುವುದರಿಂದ ಸಹಕಾರ ಶಿಕ್ಷಣ ನಿಧಿ ವಂತಿಗೆಯನ್ನು ಪಾವತಿಸಿರುವುದಿಲ್ಲ. |

**16) ಹೊರಗಿನಿಂದ ಪಡೆದ ಸಾಲಗಳು:**

| | |
|---|---|
| ಬ್ಯಾಂಕು ಹೊರಗಿನಿಂದ ಸಾಲ ಪಡೆಯಲು ಉಪನಿಯಮದಲ್ಲಿ ಇರುವ ಅವಕಾಶ ಹಾಗೂ ಮಿತಿಯ ಬಗ್ಗೆ ವಿಮರ್ಷೆ | ಬ್ಯಾಂಕಿನ ಉಪನಿಯಮ 6ಸಿ ಅಂತೆ ಹಣಕಾಸು ಸಂಸ್ಥೆ ಬ್ಯಾಂಕುಗಳಿಂದ ಸಾಲಗಳನ್ನು ಪಡೆಯಲು ಅವಕಾಶವಿದೆ. ಆದರೆ ಬ್ಯಾಂಕು ಯಾವುದೇ ಸಾಲ ಪಡೆದಿರುವುದಿಲ್ಲ. |

**1 ಬ್ಯಾಂಕಿನಿಂದ ಪಡೆದ ಸಾಲಗಳು:**

ಎ] ಬ್ಯಾಂಕಿನ ಹೆಸರು ಮತ್ತು ಶಾಖೆ — ಅನ್ವಯಿಸುವುದಿಲ್ಲ

ಬಿ] ಹೊರಗಿನಿಂದ ಪಡೆದ ವಿವಿದ ಸಾಲದ ವಿವರ:

| ಕ್ರ.ಸಂ | ಸಾಲದ ವಿವರ | ಆರಂಭದ ಬಾಕಿ | ಸಾಲ ತಂದಿದ್ದು | ಸಾಲ ಮರುಪಾವತಿ | ವರ್ಷಾಂತ್ಯದ ಬಾಕಿ |
|---|---|---|---|---|---|
| 1 | ನಗದು ಪತ್ತಿನ ಸಾಲ | ಅನ್ವಯಿಸುವುದಿಲ್ಲ | | | |
| 2 | ಇನ್ನಿತರೆ ಸಾಲಗಳು | | | | |

| | |
|---|---|
| ಸಿ] ಪಡೆದ ಸಾಲಗಳಲ್ಲಿ ಸುಸ್ತಿ ಸಾಲದ ವಿವರ | ಅನ್ವಯಿಸುವುದಿಲ್ಲ |
| ಡಿ] ಸಾಲಗಳ ಮೇಲೆ ಪಾವತಿಸಿರುವ ಬಡ್ಡಿ [ನಿಖರತೆ ಬಗ್ಗೆ ಪರಿಶೀಲಿಸಿ ವಿಮರ್ಷಿಸುವುದು] ಸಾಲಾಂತ್ಯ ದಿ: 31.3.2023 ಕ್ಕೆ ಪಾವತಿಗೆ ಬಾಕಿ ಇರುವ ಬಡ್ಡಿ, ಈ ಬಡ್ಡಿಗೆ ಅವಕಾಶ ಕಲ್ಪಿಸಿರುವ ಬಗ್ಗೆ ವಿಮರ್ಷಿಸುವುದು. | ಅನ್ವಯಿಸುವುದಿಲ್ಲ |

| | |
|---|---|
| **2 ಸಂಘ ಸಂಸ್ಥೆಗಳಿಂದ ಪಡೆದ ಸಾಲಗಳ ವಿವರ:** [ಸಾಲಾಂತ್ಯ ದಿ: 31.3.2023 ಕ್ಕೆ ದೃಡೀಕರಣ ಪತ್ರದೊಂದಿಗೆ ತಾಳೆ ಇರುವ ಬಗ್ಗೆ ಹಾಗೂ ಈ ಸಾಲಗಳ ಸುಸ್ತಿ ಬಗ್ಗೆ ವಿಮರ್ಷೆ ನೀಡುವುದು] | ಅನ್ವಯಿಸುವುದಿಲ್ಲ |
| **3 ಸರ್ಕಾರದ ಸಾಲಗಳು:** {ಸರ್ಕಾರದಿಂದ ಪಡೆದಿರುವ ವಿವಿದ ಸಾಲಗಳ ವರ್ಗಾವಾರು ವಿವರ, ಪಡೆದ ಸಾಲಗಳ ವಿನಿಯೋಗದ ಬಗ್ಗೆ ಹಾಗೂ ಸಾಲಾಂತ್ಯ ದಿ, 31.3.2023 ಕ್ಕೆ ಬಾಕಿ ಇರುವ ಮೊತ್ತಕ್ಕೆ ದೃಡೀಕರಣ ಪತ್ರದೊಂದಗೆ ತಾಳೆ ಇರುವ ಬಗ್ಗೆ ವಿಮರ್ಷೆ] | ಬ್ಯಾಂಕು ಯಾವುದೇ ಸರ್ಕಾರಿ ಸಾಲವನ್ನು ಪಡೆದಿರುವುದಿಲ್ಲ. |
| 4. ಬ್ಯಾಂಕು ಹೊರಗಿನಿಂದ ಪಡೆದ ಸಾಲದ ವರ್ಷಾಂತ್ಯಕ್ಕೆ ಕೊಡತಕ್ಕ ಇರುವ ಬಾಕಿಗಳಿಗೆ ಹಾಗೂ ಸಂಬಂಧಿಸಿದ ಸಂಘ ಸಂಸ್ಥೆಗಳ ಬಾಕಿ ದೃಢಿಕರಣ ಪತ್ರಗಳಿಗೆ ತಾಳೆ ಇದೆಯೇ? ವ್ಯತ್ಯಾಸ ಇದ್ದಲ್ಲಿ ಈ ಕುರಿತು ಸಮನ್ವಯ ಪಟ್ಟಿ ತಯಾರಿಸಿ ತಾಳೆ ನೋಡಲಾಗಿದೆಯೇ ? (ಸದರಿ ವ್ಯತ್ಯಾಸದ ವರ್ಷವಾರು ವಿವರ ನೀಡಿ ಸಮನ್ವಯ ಪಟ್ಟಿ ಕಡ್ಡಾಯವಾಗಿ ವರದಿಗೆ ಲಗತ್ತಿಸಿ, ಅದರಲ್ಲಿ ಇರುವ ನ್ಯೂನ್ಯತೆಯ ಕುರಿತು ನಿಖರವಾಗಿ ವಿವರಿಸಿ ಪ್ರಸಕ್ತ ಸಾಲಿನ ನ್ಯೂನ್ಯತೆಗಳನ್ನು ಸರಿಪಡಿಸಿರುವ ಬಗ್ಗೆ ಕಡ್ಡಾಯವಾಗಿ ವಿಮರ್ಷಿಸುವುದು.) | ಅನ್ವಯಿಸುವುದಿಲ್ಲ |

**17) ತೇವಣಿಗಳು :**

1 ಬ್ಯಾಂಕು ತೇವಣಿ ಸಂಗ್ರಹಣೆ ಮಾಡಲು ಉಪನಿಯಮದಲ್ಲಿ ಅವಕಾಶವಿರುವ ಬಗ್ಗೆ ಸಂಘವು ಸಂಗ್ರಹಿಸಿರುವ ತೇವಣಿ ಉಪನಿಯಮದನುಸಾರ ಇರುವ ಬಗ್ಗೆ ವಿಮರ್ಷಿಸಿ

ಉಪನಿಯಮ 6ಬಿ, 7 ಮತ್ತು 8 ರಂತೆ ಬ್ಯಾಂಕು ವಿವಿಧ ತೇವಣಿಗಳನ್ನು ಸಂಗ್ರಹಿಸಲು ಅವಕಾಶವಿದೆ.

ಮೇಲ್ಕಂಡ ಉಪನಿಯಮಗಳು ಹಾಗೂ ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆ ಅನ್ವಯ ಈ ಬ್ಯಾಂಕು, ಸದಸ್ಯರು ಮತ್ತು ಸದಸ್ಯರೇತರರಿಂದ ಮುಂದಿನ ಕಂಡಿಕೆಯಲ್ಲಿ ತಿಳಿಸಿರುವಂತೆ, ತೇವಣಿಗಳನ್ನು ಸಂಗ್ರಹಿಸಿರುತ್ತದೆ.

2 ಬ್ಯಾಂಕು ಸಂಗ್ರಹಣೆ ಮಾಡಿರುವ ವಿವಿಧ ತೇವಣಿಗಳ ವಿವರಗಳು [ಕಳೆದ ಸಾಲು ಹಾಗೂ ಪ್ರಸಕ್ತ ಸಾಲಿಗೆ ಸಂಗ್ರಹಿಸಿರುವ ಮೊಬಲಗು ಹೆಚ್ಚು/ಕಡಿಮೆ ಶೇ. ಮಾಹಿತಿಯೊಂದಿಗೆ ವಿಮರ್ಷಿಸಿ)

(ರೂ. ಲಕ್ಷಗಳಲ್ಲಿ)

| ಠೇವಣಿ ವಿವರಗಳು | ಆರಂಭ ಬಾಕಿ | ಪ್ರಸಕ್ತ ಸಾಲಿನ ಜಮಾ | ಪ್ರಸಕ್ತ ಸಾಲಿನ ಖರ್ಚು | ವರ್ಷಾಂತ್ಯಕ್ಕೆ ಬಾಕಿ | ಯಾದಿಯ ಮೊತ್ತ | ಅಂತರ ಶೇಕಡಾವಾರು ಪ್ರಮಾಣ ಏರಿಕೆ/ಇಳಿಕೆ |
|---|---|---|---|---|---|---|
| 1) ಖಾಯಂ ಠೇವಣಿ | 17723.90 | 19056.84 | 23031.10 | 13749.64 | 13749.64 | –22.42 |
| 2) ಶ್ರೀನಿಧಿ ಠೇವಣಿ–1 | 19836.44 | 19143.40 | 21896.48 | 17083.36 | 17083.36 | –13.88 |
| 3) ಶ್ರೀವಾರಿಧಿ ಠೇವಣಿ | 24.33 | 3.72 | 5.06 | 22.99 | 22.99 | –5.51 |
| 4) ರೀಕರಿಂಗ್ ಠೇವಣಿ | 657.04 | 553.08 | 623.19 | 586.93 | 586.93 | –10.67 |
| 5) ಪಿಗ್ಮಿ ಠೇವಣಿ | 874.59 | 3501.17 | 3383.33 | 992.43 | 992.43 | 13.47 |
| 6) ಭದ್ರತಾ ಠೇವಣಿ | 155.70 | 12.44 | 20.24 | 147.90 | 147.90 | –5.01 |
| 7) ಉಳಿತಾಯ ಖಾತೆಗಳು | 6834.29 | 38535.04 | 38480.45 | 6888.88 | 6888.88 | 0.80 |
| 8) ಚಾಲ್ತಿ ಖಾತೆಗಳು | 653.85 | 18002.88 | 17562.12 | 1094.61 | 1094.61 | 67.41 |
| 9) ಅವಧಿ ಮುಗಿದ ಠೇವಣಿ | 9.26 | 12653.77 | 12657.82 | 5.21 | 5.21 | –43.74 |
| 10) ಸಾಲಗಳ ಮೀರೆಳೆತ (ಕ್ರೆಡಿಟ್) | 13.78 | – | 10.47 | 3.31 | 3.31 | –75.98 |
| **ಒಟ್ಟು ಮೊತ್ತ** | **46783.18** | **111462.34** | **117659.79** | **40575.26** | **40575.26** | **–13.26** |

ಹಿಂದಿನ ಸಾಲಿಗೆ ಹೋಲಿಸಿದಾಗ ಪ್ರಸಕ್ತ ಸಾಲಿನ ಅಂತ್ಯಕ್ಕೆ ಬ್ಯಾಂಕು ರೂ 62.08 ಕೋಟಿಗಳಷ್ಟು ಠೇವಣಿ ಸಂಗ್ರಹಣೆಯಲ್ಲಿ ಕಡಿಮೆಯಾಗಿದ್ದು ವರ್ಷಾಂತ್ಯಕ್ಕೆ ಬ್ಯಾಂಕು ಒಟ್ಟಾರೆ ಶೇ 13.26ರಷ್ಟು ಠೇವಣಿಗಳಲ್ಲಿ ಇಳಿಕೆಯಾಗಿರುತ್ತದೆ.

**ಒಟ್ಟು ಠೇವುಗಳ ಕಳೆದ 02 ವರ್ಷಗಳ ಅಂಕಿಗಳೊಂದಿಗೆ ತುಲನಾತ್ಮಕ ವಿವರ:**

**(ರೂ. ಲಕ್ಷಗಳಲ್ಲಿ)**

| 2022–23ಕ್ಕೆ | 2021–22ಕ್ಕೆ | 2020–21ಕ್ಕೆ |
|---|---|---|
| ರೂ.40575.26 | ರೂ.46783.18 | ರೂ.45178.39 |

**ಠೇವಣಿಗಳಲ್ಲಿ ಆಗಿರುವ ಹೆಚ್ಚಳ/ಕಡಿತದ ಬಗ್ಗೆ ವಿಮರ್ಷೆ :**

ಪ್ರಸಕ್ತ ಸಾಲಿನ ಅಂತ್ಯಕ್ಕೆ ಠೇವಣಿಯ ಮೊತ್ತವು ಹಿಂದಿನ ಸಾಲಿನ ಅಂತ್ಯಕ್ಕೆ ಇದ್ದ ಮೊತ್ತಕ್ಕಿಂತಲೂ ಶೇ.13.26% ರಷ್ಟು ಇಳಿಕೆಯಾಗಿರುತ್ತದೆ.

| | |
|---|---|
| 3 ಸದಸ್ಯರಲ್ಲದವರಿಂದ ಠೇವಣಿ ಸ್ವೀಕರಿಸಲಾಗಿದೆಯೇ? ಎಷ್ಟು ವ್ಯಕ್ತಿಗಳಿಂದ ಒಟ್ಟು ಎಷ್ಟು ಮೊತ್ತದ ಠೇವು ಪಡೆಯಲಾಗಿದೆ? | ಹೌದು. 2022–2023ರ ಅಂತ್ಯಕ್ಕೆ 11638 ಸದಸ್ಯರೇತರರ ಖಾತೆಗಳಿಂದ ರೂ.24295.51 ಲಕ್ಷಗಳ ಠೇವಣಿ ಸಂಗ್ರಹಿಸಲಾಗಿದೆ. |
| 4 ಠೇವಿನ ಮೇಲೆ ಪಾವತಿಸುತ್ತಿರುವ ಬಡ್ಡಿ ದರಗಳು ಆಡಳಿತ ಮಂಡಳಿ ನಿರ್ಧರಿಸಿರುವ ತೀರ್ಮಾನಕ್ಕೆ ಅನುಗುಣವಾಗಿದೆಯೇ? ವರದಿ ವರ್ಷದಲ್ಲಿ ಪಾವತಿಸಿದ ಬಡ್ಡಿಯ ಮೊತ್ತ | ಹೌದು. ಆಡಳಿತ ಮಂಡಳಿ ನಿರ್ಧರಿಸಿದ ದರಗಳಿಗನುಗುಣವಾಗಿ ಬಡ್ಡಿಯನ್ನು ಪಾವತಿಸಲಾಗಿದೆ. ವರದಿ ವರ್ಷದಲ್ಲಿ ರೂ. 2804.86 ಲಕ್ಷಗಳ ಬಡ್ಡಿ ಪಾವತಿಸಿದೆ. |
| 5 ಠೇವಣಿದಾರರಿಗೆ ಪಾಸ್ ಪುಸ್ತಕ / ಸರ್ಟಿಫಿಕೇಟ್ ನೀಡಲಾಗಿದೆಯೇ? | ಹೌದು, ನೀಡಲಾಗಿದೆ. |
| 6 ಎಲ್ಲಾ ಠೇವಣಿಗಳ ಮೇಲೆ ಬಡ್ಡಿ ಕೊಟ್ಟಿದೆಯೇ? ಬಡ್ಡಿ ಪಾವತಿ ಆಗದೇ ಇದ್ದಲ್ಲಿ ಸಾಲಾಂತ್ಯಕ್ಕೆ ಹೊರಬಾಕಿ ಆಗುವ ಬಡ್ಡಿ ಮೊಬಲಗಿಗೆ ಸೂಕ್ತವಾಗಿ ಲೆಕ್ಕಾಚಾರ ಮಾಡಿ [ಕುಳುವಾರು ತಯಾರಿಸಿ] ಅವಕಾಶ ಕಲ್ಪಿಸಿರುವ ಬಗ್ಗೆ ವಿಮರ್ಷಿಸಿ | ಅವಧಿ ಠೇವಣಿಗಳ ಬಾಬ್ತು ಮಾಸಿಕ ಮತ್ತು ತ್ರೈಮಾಸಿಕವಾಗಿ ಬಡ್ಡಿ ನೀಡಲಾಗುತ್ತದೆ. ಆದರೂ, ವರ್ಷಾಂತ್ಯಕ್ಕೆ ಕೊಡಬೇಕಾದ ಬಡ್ಡಿ ರೂ. 208.03 ಲಕ್ಷಗಳಿದ್ದು, ಸದರಿ ಮೊಬಲಗನ್ನು ವರ್ಷಾಂತ್ಯಕ್ಕೆ ಕಾದಿರಿಸಲಾಗಿದೆ.<br>ಉಳಿತಾಯ ಠೇವಣಿ, ಆವರ್ತಕ ಠೇವಣಿಗಳಿಗೆ ವರ್ಷಾಂತ್ಯಕ್ಕೆ ಬಡ್ಡಿ ಆಕರಣೆ ಮಾಡಿ ಠೇವಣಿಗೆ ಸೇರಿಸಲಾಗುತ್ತಿದೆ. |
| 7 ಪಿಗ್ಮಿ ಠೇವಿನ ವ್ಯವಹಾರ ಕೈಗೊಂಡಿರುವರೋ? | ಹೌದು |
| 8 ಪಿಗ್ಮಿ ಏಜೆಂಟರ ಸಂಖ್ಯೆ ಮತ್ತು ನಿಗದಿಪಡಿಸಿದ ಕಮಿಷನ್. | ಬ್ಯಾಂಕಿನಲ್ಲಿ 13 ಜನ ಪಿಗ್ಮಿ ಏಜೆಂಟರುಗಳಿರುತ್ತಾರೆ. ವರದಿ ಸಾಲಿನಲ್ಲಿ ಅವರು ಸಂಗ್ರಹಿಸಿದ ಠೇವಣಿಗಳ ಮೇಲೆ ಶೇ.2.5% ರಷ್ಟು ಕಮೀಷನ್ ನೀಡಲಾಗುತ್ತಿದೆ. ವರದಿ ಸಾಲಿನಲ್ಲಿ ಒಟ್ಟು ರೂ. 43.56 ಲಕ್ಷ ಕಮಿಷನ್ ನೀಡಲಾಗಿದೆ. |
| 9 ಠೇವಣಾತಿಗಳನ್ನು ಮತ್ತು ಅದರ ಮೇಲಿನ ಬಡ್ಡಿ ಪಾವತಿಸುವಾಗ ಆದಾಯ ತೆರಿಗೆ ನಿಯಮಗಳನ್ನು ಪಾಲಿಸಿರುವರೇ? | ಬಡ್ಡಿ ಪಾವತಿಸುವಾಗ ಆದಾಯ ತೆರಿಗೆ ನಿಯಮಗಳನ್ನು ಪಾಲಿಸಲಾಗುತ್ತಿದೆ. |

10 ಅನಿಶ್ಚಿತ ಜವಾಬ್ದಾರಿಗಳು : (Contingent Liabilities)

ದಿನಾಂಕ 31.03.2023ಕ್ಕೆ ಈ ಕೆಳಕಂಡ ಅನಿಶ್ಚಿತ ಜವಾಬ್ದಾರಿಗಳನ್ನು ಬ್ಯಾಂಕು ಹೊಂದಿರುತ್ತದೆ.

ಅ) ಠೇವಣಿದಾರರ ಶಿಕ್ಷಣ ಮತ್ತು ಅರಿವು ನಿಧಿ (ಡಿ.ಇ.ಎ.ಎಫ್) – ರೂ. 2,10,48,819.45

ಆ) ಬ್ಯಾಂಕ್ ಖಾತರಿ – ರೂ. 2,10,000.00

1) ಕಳೆದ 10 ವರ್ಷಗಳಿಂದ ಸತತವಾಗಿ ವ್ಯವಹರಿಸದ 9435 ಠೇವಣಿ ಹಾಗೂ ಇತರೆ ಖಾತೆಗಳಲ್ಲಿನ ಮೊಬಲಗು ರೂ. 2,10,48,819.45 ಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಠೇವಣಿದಾರರ ಶಿಕ್ಷಣ ಮತ್ತು ಅರಿವು ನಿಧಿ (ಡಿ.ಇ.ಎ.ಎಫ್)ಗೆ ವರ್ಗಾಯಿಸಲಾಗಿದೆ. ಪ್ರಸಕ್ತ 2022–23ರ ಅವಧಿಯಲ್ಲಿ 442 ಠೇವಣಿಗಳ ಮೊಬಲಗೂ ರೂ. 11,11,604.33–00 ಡಿ.ಇ.ಎ.ಎಫ್. ಗೆ ವರ್ಗಾಯಿಸಲಾಗಿದೆ.

2) ದಿನಾಂಕ 31.3.2023 ಕ್ಕೆ ಬ್ಯಾಂಕು ನೀಡಿರುವ ಬ್ಯಾಂಕ್ ಖಾತರಿ ಮೊತ್ತ ರೂ. 2,10,000–00 ಗಳಿಗೆ ಕುಳುವಾರು ಪಟ್ಟಿಯನ್ನು ತಯಾರಿಸಿದ್ದು ತಾಳೆ ಇರುತ್ತದೆ.

ದ್ರವ್ಯಾಸ್ತಿಗಳ (ಫ್ಲುಯಿಡ್ ರಿಸೋರ್ಸಸ್) ಬಗ್ಗೆ ವಿಮರ್ಶೆ SLR/CRRಗಳ ನಿರ್ವಹಣೆ–ಶಾಖೆಗಳ ವಾರದ ಆಖೈರಾದ ಸ್ಥಿತಿಯ ಬಗ್ಗೆ (ಡಿಮ್ಯಾಂಡ್ ಆ್ಯಂಡ ಟೈಮ್ ಲಯಾಬಿಲಿಟೀಸ್) ಅನುಪಾಲನಾ ವರದಿ ಗಳನ್ನು ಸಲ್ಲಿಸುವ ಪದ್ಧತಿಯನ್ನು ಹೊಂದಿರುತ್ತದೆಯೇ? ಈ ಸಂಬಂಧದ ದಾಖಲೆಗಳನ್ನು ನಿರ್ವಹಿಸಲಾಗಿದೆಯೇ?

ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ 1949 (ಸಹಕಾರ ಸಂಘಗಳಿಗೆ ಅನ್ವಯಿಸುವಂತೆ) ಕಲಂ 18 ಮತ್ತು 24ರ ಅಡಿ ಬ್ಯಾಂಕು ಭಾರತೀಯ ರಿಸರ್ವ್ ಬ್ಯಾಂಕ್ ಆಗಿಂದಾಗ್ಗೆ ನೀಡುವ ಸೂಚನೆಗಳ ಅನ್ವಯ ನಗದು ಮೀಸಲು ಮತ್ತು ದ್ರವ್ಯಾಸ್ತಿಯನ್ನು ನಿರ್ವಹಿಸಬೇಕಾಗಿದೆ. ಪ್ರಸಕ್ತ 2022–23ನೇ ಸಾಲಿನಲ್ಲಿ ನಗದು ಮೀಸಲು ಮತ್ತು ದ್ರವ್ಯಾಸ್ಥಿಯನ್ನು (ಎಸ್.ಎಲ್.ಆರ್) ಈ ಕೆಳಕಂಡಂತೆ ನಿರ್ವಹಿಸಬೇಕಾಗಿದೆ.

**ಅ) ನಗದು ಮೀಸಲು**

ದಿ. 01.04.2022 ರಿಂದ ದಿ. 20.05.2022ರ ವರೆಗೆ ಶೇ.4.00

ದಿ. 21.05.2022 ರಿಂದ ದಿ. 31.03.2023ರ ವರೆಗೆ ಶೇ.4.50

**ಆ) ದ್ರವ್ಯಾಸ್ಥಿ**

ದಿ.01–04–2022 ರಿಂದ ದಿ.31.03.2023 ರವರೆಗೆ ಶೇ.18

ಬ್ಯಾಂಕಿನಲ್ಲಿ ವರ್ಷಪೂರ್ತಿ ಭಾರತೀಯ ರಿಸರ್ವ್ ಬ್ಯಾಂಕು ನಿಗದಿ ಪಡಿಸಿದ ಕನಿಷ್ಟ ಮೊಬಲಿಗಿಂತ ಹೆಚ್ಚಾಗಿ ನಗದು ಮೀಸಲು ಮತ್ತು ದ್ರವ್ಯಾಸ್ತಿಯನ್ನು ನಿರ್ವಹಿಸುವುದನ್ನು ಗುರುತಿಸಲಾಗಿದೆ.

**ಉದಾಹರಣೆಗೆ:**

ನಗದು ಮೀಸಲು (ರೂ. ಸಾವಿರಗಳಲ್ಲಿ)

| ಕ್ರಸಂ | ದಿನಾಂಕ | ಡಿ.ಟಿ.ಎಲ್. ಮೊಬಲಗು | ಇರಬೇಕಾದ ಮೊಬಲಗು | ಇದ್ದ ಮೊಬಲಗು | ಶೇಕಡವಾರು ಪ್ರಮಾಣ | ಕನಿಷ್ಠ / ಗರಿಷ್ಠ |
|---|---|---|---|---|---|---|
| 1 | 12.04.2022 | 4596658 | 183866 | 204616 | 4.45% | ಕನಿಷ್ಠ |
| 2 | 10.01.2023 | 4269489 | 192127 | 312403 | 7.32% | ಗರಿಷ್ಠ |

ದ್ರವ್ಯಾಸ್ಥಿ (ರೂ. ಸಾವಿರಗಳಲ್ಲಿ)

| ಕ್ರಸಂ | ದಿನಾಂಕ | ಡಿ.ಟಿ.ಎಲ್ ಮೊಬಲಗು | ಇರಬೇಕಾದ ಮೊಬಲಗು | ಇದ್ದ ಮೊಬಲಗು | ಶೇಕಡವಾರು ಪ್ರಮಾಣ | ಕನಿಷ್ಠ/ ಗರಿಷ್ಠ |
|---|---|---|---|---|---|---|
| 1 | 04.05.2022 | 4652492 | 837449 | 2071469 | 45.00% | ಕನಿಷ್ಠ |
| 2 | 10.01.2023 | 4269489 | 768508 | 2168712 | 51.00% | ಗರಿಷ್ಠ |

12 ವರದಿ ಸಾಲಿನಲ್ಲಿ ಇವುಗಳ ಪಾಲನೆಯಲ್ಲಿ ಆಗಿರುವ ವಿಫಲತೆಯ ಬಗ್ಗೆ ಹಾಗೂ ಈ ಕುರಿತು ರಿಸರ್ವ್ ಬ್ಯಾಂಕಿಗೆ ದಂಡದ ಮೊತ್ತ ಪಾವತಿಸಿದಲ್ಲಿ ಅದಕ್ಕೆ ಸೂಕ್ತ ಜವಾಬ್ದಾರಿ ನಿಗದಿ ಪಡಿಸಿ ಆರ್ಥಿಕ ತ:ಖ್ತೆಯಲ್ಲಿ ತೋರಿಸಲಾಗಿದೆಯೇ?

ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ 1949 (ಸಹಕಾರ ಸಂಘಗಳಿಗೆ ಅನ್ವಯಿಸುವಂತೆ) ಕಲಂ 18 ಮತ್ತು 24ರಲ್ಲಿ ನಿಗಧಿ ಪಡಿಸಿದ ಕನಿಷ್ಠ ಮಿತಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಮೇಲೆ ತಿಳಿಸಿದಂತೆ ನಗದು ಮೀಸಲು ದ್ರವ್ಯಾಸ್ಥಿಯನ್ನು ನಿರ್ವಹಿಸಲಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್ ನಿಗಧಿ ಗೊಳಿಸಿದ ಕನಿಷ್ಟ ಮಿತಿ ನಿರ್ವಹಿಸುವುದರಲ್ಲಿ ಯಾವುದೇ ವಿಫಲತೆ ಇಲ್ಲದ ಕಾರಣ ದಂಡದ ಪ್ರಶ್ನೆ ಉದ್ಭವಿಸುವುದಿಲ್ಲ.

13 **ಠೇವಣಾತಿಗಳಲ್ಲಿ ಗಮನಿಸಲಾದ ನ್ಯೂನತೆಗಳು:–**

[ಠೇವಣಿ ಸಂಗ್ರಹಣೆಯಲ್ಲಿ ಗಮನಿಸಲಾದ ನ್ಯೂನ್ಯತೆಗಳಿದ್ದಲ್ಲಿ ವಿವರಗಳೊಂದಿಗೆ ನಮೂದಿಸಿ ವಿಮರ್ಷಿಸುವುದು]

ಠೇವಣಿ ಖಾತೆಗಳನ್ನು ತೆರೆಯುವಾಗ ಕೆ.ವೈ.ಸಿ ನಿಯಮಗಳನ್ನು ಪಾಲಿಸಲಾಗುತ್ತಿದ್ದರೂ. ಕೆಲವೂ ಹಳೆಯ ಖಾತೆಗಳ ಕೆ.ವೈ.ಸಿ ಪಡೆಯಲು ಕ್ರಮವಿಡುವುದು.

**ಸಮಜಾಯಿಷಿ:**

ಬ್ಯಾಂಕಿನಲ್ಲಿ ಖಾತೆಗಳನ್ನು ತೆರೆಯುವಾಗ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ ಕೆ.ವೈ.ಸಿ. ನಿಯಮಗಳನ್ನು ಪಾಲಿಸುವ ಪರಿಪಾಠವಿರುತ್ತದೆ. ಪಡೆಯದೇ ಇರುವ ಕೆಲವು ಹಳೆಯ ಖಾತೆಗಳ ಖಾತೆದಾರರುಗಳಿಗೆ ಪತ್ರ ವ್ಯವಹಾರದ ಮುಖಾಂತರ ಕೆ.ವೈ.ಸಿ. ದಾಖಲಾತಿಗಳನ್ನು ಸಲ್ಲಿಸಲು ಸೂಚಿಸಲಾಗಿರುತ್ತದೆ.

**18 ಸಹಾಯಧನಗಳು :**

| **ಸರ್ಕಾರದಿಂದ ಪಡೆದ ಸಹಾಯಧನ ಕುರಿತಂತೆ ವಿವರಣೆ** | |
|---|---|
| ಮಂಜೂರಾದ ಮೊತ್ತ ಹಾಗೂ ಉದ್ದೇಶ, ಉಪಯೋಗಿಸಿದ ರೀತಿ ಇತ್ಯಾದಿ ವಿವರಣೆ. [ಮಂಜೂರಾಗಿರುವ ಎಲ್ಲಾ ರೀತಿಯ ಸಹಾಯಧನದ ಬಗ್ಗೆ ಪೂರ್ಣವಾಗಿ ವಿವರಣೆ ನೀಡುವುದು] | ಸರ್ಕಾರದಿಂದ ಯಾವುದೇ ರೀತಿಯ ಸಹಾಯಧನವನ್ನು ಪಡೆದಿಲ್ಲ. |

| | |
|---|---|
| ಬ್ಯಾಂಕು ವರದಿ ಸಾಲಿನಲ್ಲಿ ಕೇಂದ್ರ / ರಾಜ್ಯ ಸರ್ಕಾರಗಳಿಂದ ಬಡ್ಡಿ ಸಹಾಯ ಧನವನ್ನು ಪಡೆದಿರುತ್ತದೆಯೇ? ಪಡೆದಿದ್ದಲ್ಲಿ ಅದು ಸರ್ಕಾರದ ಆದೇಶಕ್ಕನುಗುಣವಾಗಿದೆಯೇ? ವಿವರಗಳನ್ನು ನಮೂದಿಸುವುದು (ಅನ್ವಯವಾಗುವಲ್ಲಿ ಮಾತ್ರ) | ಅನ್ವಯಿಸುವುದಿಲ್ಲ. |

**19) ಇತರೆ ಜವಾಬ್ದಾರಿಗಳು :**

[ಇತರೆ ಜವಾಬ್ದಾರಿ ಶೀರ್ಷಿಕೆಯಡಿ ಬರುವ ಎಲ್ಲಾ ಬಾಬ್ತುಗಳ ಕುರಿತು ವಿವರಗಳನ್ನು ಪೂರ್ಣವಾಗಿ ವಿಮರ್ಷಿಸುವುದು] : 31.03.2023ಕ್ಕೆ ವಿವರ ಕೆಳಕಂಡಂತಿದೆ

| ಕ್ರಸಂ | ವಿವರ | ಮೊತ್ತ |
|---|---|---|
| 1 | ಪೇ ಆರ್ಡರ್‌ಗಳು | 62,92,043.28 |
| 2 | ಲೆಕ್ಕ ಪರಿಶೋಧನಾ ವೆಚ್ಚ ಕೊಡಬೇಕಾದ್ದು | 4,64,666.00 |
| 3 | ಆದಾಯ ತೆರಿಗೆ ಕೊಡಬೇಕಾದ್ದು | 1,88,51,467.00 |
| 4 | ಕ್ಲಿಯರಿಂಗ್ ಚೆಕ್ ಬಾಬ್ತು | 10,21,182.00 |
| 5 | ಕಾಯ್ದಿರಿಸಿಕೊಂಡ ಇತರೆ ವೆಚ್ಚಗಳು | 79,67,669.62 |
| 6 | ರಾಜ್ಯ / ಕೇಂದ್ರ ಜಿ.ಎಸ್.ಟಿ | 1,78,164.00 |
| 7 | ಸಾಮಾನ್ಯ ಅಮಾನತ್ತು ಪಾವತಿ ಬಾಕಿ | 83,97,858.09 |
| 8 | ಸಿಬ್ಬಂದಿ ಭವಿಷ್ಯ ನಿಧಿ ಬಾಕಿ | 12,39,252.00 |
| 9 | ಇ.ಎಂ.ಡಿ. – ಇನ್‌ಫ್ರಾಸಾಫ್ಟ್ ಇಂಡಿಯಾ ಲಿ. | 6,00,000.00 |
| 10 | ಟಿ.ಡಿ.ಎಸ್. ಬಾಕಿ | 18,95,512.00 |
| 11 | ಚುನಾವಣಾ ಠೇವಣಿ ಬಾಕಿ | 7,000.00 |
| | **ಒಟ್ಟು** | **4,69,14,813.99** |

**1. ಪೇ ಆರ್ಡರ್‌ಗಳು – ರೂ. 62,92,043.28**

ದಿ.31.03.2023ಕ್ಕೆ ರೂ62,92,043.28/– ಪೇ ಆರ್ಡರ್‌ಗಳು ಕ್ಲಿಯರ್ ಆಗಲು ಬಾಕಿ ಉಳಿದಿರುತ್ತದೆ. ಇವುಗಳ ಪೈಕಿ ಹಲವು ಪೇ ಆರ್ಡರ್‌ಗಳು 2012–13ನೇ ಸಾಲಿನಿಂದಲೂ ಚುಕ್ತ ಆಗಲು ಬಾಕಿ ಇರುತ್ತದೆ. ಇದರಲ್ಲಿ ರೂ47,65,182.00 ಗಳು ಆಡಿಟ್ ತಪಾಸಣೆ ದಿನಾಂಕಕ್ಕೆ ಚುಕ್ತವಾಗಿರುತ್ತದೆ. ಕುಳುವಾರು ಪಟ್ಟಿಗೆ ತಾಳೆ ಇದ್ದು, 10 ವರ್ಷಕ್ಕೆ ಮೀರಿದ ಬಾಕಿಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಡಿ.ಇ.ಎ.ಎಫ್. ಖಾತೆಗೆ ವರ್ಗಾಯಿಸಲಾಗುತ್ತಿದೆ.

**2. ಲೆಕ್ಕ ಪರಿಶೋಧನಾ ವೆಚ್ಚ ಕೊಡಬೇಕಾದ್ದು – ರೂ. 4,64,666/–**

2022–23ನೇ ಸಾಲಿಗೆ ಬ್ಯಾಂಕು ರೂ. 4,64,666.00ಗಳನ್ನು ಲೆಕ್ಕಪರಿಶೋಧನಾ ಶುಲ್ಕದ ಬಾಬ್ತು ಅವಕಾಶ ಕಲ್ಪಿಸಿದೆ. ಇದರಲ್ಲಿ ಬ್ಯಾಂಕಿನ ಅಂತರಿಕ ಲೆಕ್ಕಪರಿಶೋಧಕರಿಗೆ ದಿ.31.03.2023ಕ್ಕೆ ಪಾವತಿಸಬೇಕಾದ ಮೊಬಲಗು ಹಾಗೂ ಶಾಸನ ಬದ್ಧ ಲೆಕ್ಕಪರಿಶೋಧಕರಿಗೆ 2022–23ನೇ ಸಾಲಿಗೆ ಪಾವತಿಸಬೇಕಾದ ಮೊಬಲಗು ಸೇರಿರುತ್ತದೆ.

**3. ಆದಾಯ ತೆರಿಗೆ ಕೊಡಬೇಕಾದ್ದು – ರೂ. 1,88,51,467/–**

2009–10ರಿಂದ 2021–22ನೇ ಹಣಕಾಸು ವರ್ಷಗಳಿಗೆ ಸಂಬಂಧಿಸಿದಂತೆ 6 ವರ್ಷಗಳ ಬಾಕಿ ರೂ.1,80,51,467.00/–ಗಳು ಹಾಗೂ2022–23ನೇ ಸಾಲಿಗೆ ಆದಾಯ ತೆರಿಗೆಗಾಗಿ ರೂ. 8,00,000/– ಅವಕಾಶವನ್ನು ಕಲ್ಪಿಸಲಾಗಿದೆ. ಆದಾಯ ತೆರಿಗೆ ಇಲಾಖೆಯ ತಗಾದೆಗೊಳಪಟ್ಟು ಇಲಾಖೆಗೆ ಪಾವತಿಸುವುದು.

**4. ಕ್ಲಿಯರಿಂಗ್ ಚೆಕ್ಕುಗಳ ಬಾಕಿ – ರೂ. 10,21,182/–**

ದಿ.31.03.2023ರಂದು ಬ್ಯಾಂಕಿಗೆ ಸಲ್ಲಿಕೆಯಾದ ಕ್ಲಿಯರಿಂಗ್ ಆಗಬೇಕಾದ ಚೆಕ್ಕುಗಳ ಮೊತ್ತ ರೂ.10,21,182.00ಗಳಿದ್ದು, ಸದರಿ ಚೆಕ್ಕುಗಳು ಏಪ್ರಿಲ್, 2023ರಲ್ಲಿ ತೀರುವಳಿ ಆಗಿರುತ್ತದೆ.

**5. ಕಾಯ್ದಿರಿಸಿಕೊಂಡ ಇತರೆ ವೆಚ್ಚಗಳು – ರೂ. 79,67,669.62**

ದಿ.31.03.2023ಕ್ಕೆ ಬ್ಯಾಂಕು ಈ ಕೆಳಗಿನ ವಿವರದಂತೆ ರೂ. 79,67,669.62 ಗಳನ್ನು ಈ ಲೆಕ್ಕ ಶೀರ್ಷಿಕೆಯಲ್ಲಿ ಹೊಂದಿರುತ್ತದೆ. ವಿವರ ಕೆಳಕಂಡಂತಿದೆ.

| ಕ್ರ ಸಂ | ವಿವರ | ಮೊಬಲಗು |
|---|---|---|
| 1 | ಮಾರಾಟಾಧಿಕಾರಿಯವರಿಗೆ ಬಾಕಿ<br>ಅ) ಹಳೆಯದು | 1,85,600.00 |
| 2 | ದೂರವಾಣಿ ವೆಚ್ಚ | 22,691.82 |
| 3 | ವಿದ್ಯುತ್ ವೆಚ್ಚ | 1,09,328.00 |
| 4 | ವೃತ್ತಿ ತೆರಿಗೆ | 21,000.00 |
| 5. | ಸಾಲ ವಸೂಲಾತಿ ವೆಚ್ಚ ಕಾದಿರಿಸಿದ್ದು | 74,87,748.80 |
| 6. | ಜೀವ ವಿಮೆ ನಿಗಮಕ್ಕೆ ಬಾಕಿ | 1,08,921.00 |
| 7. | ಯಶಸ್ವಿನಿ ವಿಮೆ | 32,380.00 |
| | **ಒಟ್ಟು** | **79,67,669.62** |

ಕ್ರಸಂ. 1 ಹಿಂದಿನ ಸಾಲಿನಲ್ಲಿ ಮಾರಾಟಾಧಿಕಾರಿ ನಿಯಮ 441 ಇವರ ಬಾಬ್ತು ಸರ್ಕಾರಕ್ಕೆ ಪಾವತಿಸಬೇಕಾದ ವೆಚ್ಚ ರೂ. 1,85,600–00 ಗಳು ಹಳೆಯ ಬಾಕಿಯಾಗಿರುತ್ತದೆ. ಲೆಕ್ಕ ಚುಕ್ತಗೊಳಿಸಲು ಯಾವುದೇ ಮಾಹಿತಿ ಲಭ್ಯವಿಲ್ಲವೆಂದು ತಿಳಿಸಲಾಗಿದೆ. ಸರ್ಕಾರಕ್ಕೆ ಪಾವತಿಸಬೇಕಾದ ಈ ಮೊಬಲಗನ್ನು ತಗಾದೆ ಆದ ತಕ್ಷಣವೇ ಸರ್ಕಾರಕ್ಕೆ ಪಾವತಿಸಬೇಕಾಗಿತ್ತು.

ಪ್ರಸ್ತುತ ಈ ಬಾಕಿಯ ಸಂಬಂಧ ಬ್ಯಾಂಕಿನಲ್ಲಿ ನಿಯಮ 441ಅಡಿ ಮಾರಾಟ ಅಧಿಕಾರಿಯಾಗಿದ್ದವರ ವೇತನ ವಿತರಣಾಧಿಕಾರಿಯಾದ ಸಹಕಾರ ಸಂಘಗಳ ಸಹಾಯಕ ನಿಬಂಧಕರಿಗೆ ಪತ್ರ ಬರೆದು ಈ ತಗಾದೆ / ಬಾಕಿಯ ಬಗ್ಗೆ ಮಾಹಿತಿ ಕೋರಲಾಗಿತ್ತೆಂದು, ಆದರೆ ಸದರಿ ಕಛೇರಿಯವರಿಂದ ಯಾವುದೇ ಮಾಹಿತಿ ಬಾಕಿಯ ವಿವರ ಲಭ್ಯವಾಗಿಲ್ಲವೆಂದು ತಿಳಿಸಲಾಗಿದೆ.

ಆದ್ದರಿಂದ ಸದರಿ ಮೊತ್ತವನ್ನು ಆಪದ್ಧನಕ್ಕೆ ವರ್ಗಾಯಿಸಲು ಆಡಳಿತ ಮಂಡಳಿ ಪರಿಶೀಲಿಸುವುದು.

ಉಳಿದಂತೆ ಕ್ರಮಸಂಖ್ಯೆ 2 ರಿಂದ 6ರವರೆಗಿನ ಅವಕಾಶಗಳು ದಿನಾಂಕ 31.03.2023ಕ್ಕೆ ಪಾವತಿಸಬೇಕಾದ ಬಾಕಿಗಳಾಗಿದ್ದು ಅವಕಾಶ ಕಲ್ಪಿಸಲಾಗಿದೆ. ಮುಂದಿನ ಸಾಲಿನಲ್ಲಿ ಪಾವತಿಸಿದೆ ಎಂದು ತಿಳಿಸಲಾಗಿದೆ.

**6. ರಾಜ್ಯ / ಕೇಂದ್ರ ಜಿ.ಎಸ್.ಟಿ ಹಾಗು ಟಿ.ಡಿ.ಎಸ್. ಮೊಬಲಗು ರೂ. 1,78,164.00**

ಇದನ್ನು ಮುಂದಿನ ಸಾಲುಗಳಲ್ಲಿ ಸರ್ಕಾರಕ್ಕೆ ಪಾವತಿಸಿರುವುದಾಗಿ ತಿಳಿಸಲಾಗಿದೆ.

**7. ಸಾಮಾನ್ಯ ಅಮಾನತ್ತು ಪಾವತಿ ಬಾಕಿ – ರೂ. 83,97,858.09**

2012–13ನೇ ಸಾಲಿನಿಂದ ಸಾಮಾನ್ಯ ಬ್ಯಾಂಕಿಂಗ್ ವ್ಯವಹಾರದಲ್ಲಿ ಉದ್ಭವಿಸಿರುವ ಈ ಮೊಬಲಗನ್ನು ಸಂಬಂಧಿಸಿದವರು ಹಿಂಪಡೆಯದೇ ಇರುವ ಕಾರಣ ಬಹಳ ವರ್ಷಗಳಿಂದ ಮುಂದುವರೆದಿದೆ. 10ವರ್ಷ ಮೀರಿದ ತಕ್ಷಣ ಲೆಕ್ಕಗಳ ಮೊಬಲಗನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಡಿ.ಇ.ಎ.ಎಫ್. ನಿಧಿಗೆ ವರ್ಗಾಯಿಸಲು ಸೂಚಿಸಿದೆ.ಇದರಲ್ಲಿ ಬ್ಯಾಂಕಿನಲ್ಲಿ ಸಾಲ ಪಡೆದು ಸುಸ್ತಿಯಾದ ಸಾಲಗಾರರುಗಳ ಅಡಮಾನವಿಟ್ಟ ಆಸ್ತಿಗಳ ಹರಾಜು ಪ್ರಕ್ರಿಯೆಯ ಮೊತ್ತವು ಸಹ ಸೇರಿರುತ್ತದೆ.

**8. ಸಿಬ್ಬಂದಿ ಭವಿಷ್ಯ ನಿಧಿ ಬಾಕಿ – ರೂ. 12,39,252.00**

ದಿ. 31.3.2023ಕ್ಕೆ ಬಾಕಿ ಇರುವ ಭವಿಷ್ಯ ನಿಧಿ ರೂ. 12,39,252.00 ಗಳನ್ನು ಭವಿಷ್ಯ ನಿಧಿ ಪ್ರಾಧಿಕಾರಕ್ಕೆ ಪಾವತಿಸಬೇಕಾಗಿದೆ. ಇದನ್ನು ಏಪ್ರಿಲ್ ಮಾಹೆಯಲ್ಲಿ ಪಾವತಿಸಲಾಗಿದೆ.

**9. ಇ.ಎಂ.ಡಿ. ಬಾಕಿ ಇನ್ಸಾಫ್ಟ್ ಸಾಫ್ಟ್ ಇಂಡಿಯಾ ಲಿ – ರೂ. 6,00,000/–**

ಬ್ಯಾಂಕಿನಲ್ಲಿ ಸಿ.ಬಿ.ಎಸ್. ತಂತ್ರಾಂಶವನ್ನು ಅಳವಡಿಸಿಕೊಳ್ಳುವ ಸಂಬಂಧ ಮೇಲ್ಕಂಡ ಸಂಸ್ಥೆಯೊಂದಿಗೆ ಮಾಡಿಕೊಂಡ ಒಪ್ಪಂದದ ಅನ್ವಯ, ಪಡೆದಿರುವ ಇ.ಎಂ.ಡಿ. ರೂ.5,00,000/–ಗಳುಹಾಗೂ ವರದಿ ಸಾಲಿನಲ್ಲಿ ಸರಸ್ವತ್ ಇನ್ಫೋಟೆಕ್ ಸಂಸ್ಥೆಯ ರೊ 1,00,000/– ಗಳು ಸೇರಿದಂತೆ ಒಟ್ಟು ರೂ 6,00,000/– ಗಳು ಚುಕ್ತವಾಗದೆ ಬಾಕಿ ಇರುತ್ತದೆ. ಇದನ್ನು ಚುಕ್ತ ಮಾಡಲು ಕ್ರಮವಿಡುವುದು.

**ಸಮಜಾಯಿಷಿ:**
ಇನ್‌ಫ್ರಾ ಸಾಫ್ಟ್ ಇಂಡಿಯಾ ಲಿ., ರವರಿಂದ ಪಡೆದಿರುವ ರೂ. 5,00,000–00 ಗಳಿಗೆ ಲೆಕ್ಕ ಪರಿಶೋಧಕರ ಸಲಹೆಯಂತೆ ಕ್ರಮವಿಡಲಾಗಿದೆ. ಸರಸ್ವತ್ ಇನ್ಫೋಟೆಕ್ ಸಂಸ್ಥೆಯವರಿಂದ ಪಡೆದಿರುವ ರೂ. 1,00,000–00 ಗಳನ್ನು ಸದರಿಯವರಿಗೆ ವಹಿಸಿರುವ ಗಣಕೀಕರಣ ಕೆಲಸವು ಪೂರ್ಣಗೊಂಡ ನಂತರ ಚುಕ್ತಗೊಳಿಸಲು ಕ್ರಮವಿಡಲಾಗುವುದು.

**10. ಟಿ.ಡಿ.ಎಸ್. ಬಾಕಿ ರೂ. 18,95,512.00**

ಟಿ.ಡಿ.ಎಸ್. ಬಾಕಿ ಬ್ಯಾಂಕಿನ ಠೇವಣಿದಾರರ ಬಡ್ಡಿ ಹಾಗೂ ಕೆಲವೊಂದು ಗುತ್ತಿಗೆ ಕೆಲಸಗಳ ಸಂಬಂಧ, ಕಟಾಯಿಸಿರುವ ಟಿಡಿಎಸ್ ರೂ. 18,95,512.00 ಗಳನ್ನು ಆದಾಯ ತೆರಿಗೆ ಇಲಾಖೆಗೆ ಪಾವತಿಸುವುದು.

**11. ಚುನಾವಣಾ ಠೇವಣಿ ಬಾಕಿ – ರೂ. 7,000.00**

2019–2020ನೇ ವರ್ಷದಲ್ಲಿ ಬ್ಯಾಂಕಿನ ಆಡಳಿತ ಮಂಡಳಿಗೆ ನಡೆದ ಚುನಾವಣೆ ಸಂಬಂಧ ಅಭ್ಯರ್ಥಿಗಳಿಂದ ಪಡೆದ ಠೇವಣಿ ರೂ. 7,000–00 ಗಳ ಬಾಕಿಯಿದ್ದು ನಿಯಮಾನುಸಾರ ಲೆಕ್ಕ ಚುಕ್ತಗೊಳಿಸುವುದು.

**ಸಮಜಾಯಿಷಿ:**
ಕಳೆದ ಸಾಲಿನಲ್ಲಿದ್ದ ರೂ. 38,000–00 ಗಳಲ್ಲಿ, ವರದಿ ಸಾಲಿನಲ್ಲಿ ರೂ. 31,000–00 ಗಳನ್ನು ಚುಕ್ತ ಮಾಡಿ ಸಾಲಿನಾಂತ್ಯಕ್ಕೆ ಇರುವ ಮೊಬಲಗನ್ನು ಚುಕ್ತಗೊಳಿಸಲು ಕ್ರಮವಿಡಲಾಗುವುದು.

**20) ಲಾಭ ವಿಂಗಡಣೆ**

| | |
|---|---|
| ಹಿಂದಿನ ಸಾಲಿನ ಕ್ರೂಡಿಕೃತ ಲಾಭ | 2021–22 ರಲ್ಲಿ ಬ್ಯಾಂಕು ರೂ. 788.59 ಲಕ್ಷಗಳ ನಷ್ಟ ಹೊಂದಿರುತ್ತದೆ. |
| ಲಾಭ ವಿಂಗಡನೆಗೆ ಮಹಾ ಸಭೆಯ ಒಪ್ಪಿಗೆ ಪಡೆಯಲಾಗಿದೆಯೆ? ಅದು ಕ.ಸ.ಸಂಘಗಳ ಕಾಯ್ದೆ ಕಲಂ 57 ಹಾಗೂ ಸಂಘದ ಉಪ ನಿಯಮದನ್ವಯ ಮಾಡಿಕೊಳ್ಳಲಾಗಿದೆಯೇ ? | ಹಿಂದಿನ ಸಾಲಿನಲ್ಲಿ ಬ್ಯಾಂಕು ನಷ್ಟ ಹೊಂದಿದ್ದು ಲಾಭ ವಿಂಗಡಣೆ ಅನ್ವಯಿಸುವುದಿಲ್ಲ. |
| ಘೋಷಣೆಯಾದ ಲಾಭಾಂಶ ಹಂಚಿಕೆಯಾಗಿದೆಯೆ? | ಹಿಂದಿನ ಸಾಲಿನಲ್ಲಿ ಬ್ಯಾಂಕು ನಷ್ಟ ಹೊಂದಿದ್ದು ಲಾಭ ಘೋಷಣೆ ಅನ್ವಯಿಸುವುದಿಲ್ಲ. |
| ವಿತರಣೆಯಾಗದ ಲಾಭಾಂಶದ ಮೊತ್ತ | ಅನ್ವಯಿಸುವುದಿಲ್ಲ. |
| ಮೂರು ವರ್ಷ ಮೀರಿದ ಕ್ರೋಢೀಕೃತ ಲಾಭಾಂಶದ ಕುರಿತು ಉಪನಿಯಮದಂತೆ ಕ್ರಮವಿರಿಸಲು ಸೂಚಿಸುವುದು | ಮೂರು ವರ್ಷಗಳಿಗೂ ಮೇಲ್ಪಟ್ಟ ಡಿವಿಡೆಂಡ್ ಬಾಕಿಯನ್ನು ಉಪನಿಯಮ 107 ರಂತೆ ಆಪದ್ಧನಕ್ಕೆ ವರ್ಗಾಯಿಸಲಾಗಿದೆ. |

**21) ನಗದು ಶಿಲ್ಕು ಪರಿಶೀಲನೆ:**

| ಸಾಲಾಖೈರಿಗೆ ಸಂಘದಲ್ಲಿನ ನಗದು ಶಿಲ್ಕು | | | ರೂ. 2,29,49,913/– (ಶಾಖೆಗಳು ಸೇರಿ) | |
|---|---|---|---|---|
| ಲೆಕ್ಕ ಪರಿಶೋಧನಾ ಸಮಯದಲ್ಲಿ ನಗದು ಶಿಲ್ಕು ಪರಿಶೀಲನೆ ವಿವರಗಳು | | | | |
| **ಪರಿಶೀಲನೆಯ ಕಛೇರಿ** | **ದಿನಾಂಕ** | **ನಗದು(ರೂ)** | **ಹಾಜರು ಪಡಿಸಿದ ಸಿಬ್ಬಂದಿ ಹೆಸರು/ಹುದ್ದೆ** | |
| | | | **ಲೆಕ್ಕಿಗರು / ಸಹಾಯಕ ಲೆಕ್ಕಿಗರು** | **ನಗದು ಗುಮಾಸ್ತ** |
| 1) ವಿ.ವಿ.ಪುರಂ ಶಾಖೆ | 18–05–2023 | 1,09,16,773 | ಕವಿತಾ .ಎ.ಎಸ್ | ಡಿ.ಎಸ್.ಅನಂತರಾಜು |
| 2) ಅವೆನ್ಯೂರಸ್ತೆ ಶಾಖೆ | 05–05–2023 | 32,23,062 | ಸಂಕಣ್ಣ ಕಬೂರ್ | ಕೆ, ಜಯಂತ್‌ಕುಮಾರ್ |
| 3) ವಿಜಯನಗರ ಶಾಖೆ | 09–05–2023 | 33,24,702 | ಅಶ್ವಥ್‌ನಾರಾಯಣ.ವಿ | ಶ್ರೀಧರ.ಎಂ.ಬಿ |
| 4) ಸುಬ್ರಮಣ್ಯನಗರ ಶಾಖೆ | 17–05–2023 | 12,66,301 | ಎನ್.ಎಲ್.ಪ್ರಸಾದ್ | ಎಸ್.ಅಂಜನಪ್ಪ |
| 5) ಪದ್ಮನಾಭನಗರ ಶಾಖೆ | 12–05–2023 | 11,47,588 | ಅಂಜನಾ | ಸಿದ್ದರಾಜು.ಎಸ್ |
| 6) ಕಾಚರಕನಹಳ್ಳಿ ಶಾಖೆ | 29–05–2023 | 10,94,411 | ಎಸ್.ಶಿವರಾಂ | ವೈ.ಆರ್.ನಾಗೇಂದ್ರ |
| 7) ಯಶವಂತಪುರ ಶಾಖೆ | 08–05–2023 | 6,30,929 | ರಾಜೇಗೌಡ ಆರ್.ಎಂ. | ಜಿ.ಕುಸುಮ |
| 8) ನಾಗರಭಾವಿ ಶಾಖೆ | 05–05–2023 | 9,74,029 | ಸಿ.ಎನ್.ಪದ್ಮ | ಹೆಚ್.ಬಿ. ನವೀನ್ |
| 9) ಕೋಣನಕುಂಟೆ ಶಾಖೆ | 15–05–2023 | 16,78,300 | ಉಮೇಶ ವಿ | ಕೆ.ರಾಜ |

| | |
|---|---|
| ಪರಿಶೀಲಿಸಿದ ನಗದು, ನಗದು ಪುಸ್ತಕದೂಂದಿಗೆ ಹೊಂದಾಣಿಕೆಯಾಗುತ್ತಿದೆಯೇ? | ಹೌದು |
| ಲೆಕ್ಕ ಪರಿಶೋಧನಾ ಕಾಲಕ್ಕೆ ನಗದು ಪುಸ್ತಕ ಅಪೂರ್ಣವಿದ್ದಲ್ಲಿ ಅದನ್ನು ಯಾವ ದಿನಾಂಕದ ವರೆಗೆ ಬರೆಯಲಾಗಿದೆ ಎಂಬುದರ ಬಗ್ಗೆ ವಿವರಣೆ ನೀಡುವುದು. ಹಾಗೂ ನಗದು ಪುಸ್ತಕದಲ್ಲಿ ದಾಖಲಿಸಿ ಹಾಜರುಪಡಿಸಿದ ಕೈಶಿಲ್ಕದ ಮೊತ್ತ ನಗದು ಪುಸ್ತಕದಲ್ಲಿ ನಮೂದಿಸುವುದು | ಬ್ಯಾಂಕಿನ ಲೆಕ್ಕ ಪತ್ರಗಳು ಗಣಕೀಕೃತವಾಗಿದ್ದು, ನಗದು ಪುಸ್ತಕ ಪೂರ್ಣವಾಗಿ ಲಭ್ಯವಿದೆ. |
| ಸಂಘದ ಉಪನಿಯಮಗಳಲ್ಲಿ ನಗದು ಶಿಲ್ಕು ಜವಾಬ್ದಾರಿ ಹಾಗೂ ಮಿತಿಯನ್ನು ನಿಗದಿಪಡಿಸಿದ್ದಾರೆಯೆ? ಎಷ್ಟು? ಹಾಗೂ ಯಾರ ಅಭಿರಕ್ಷೆಯಲ್ಲಿ? | |

ಹೌದು. ಶಾಖೆಗಳಲ್ಲಿ ಉಳಿಸಿಕೊಳ್ಳಬಹುದಾದ ನಗದು ಶಿಲ್ಕಿನ ಮಿತಿಯನ್ನು ಆಡಳಿತ ಮಂಡಳಿ ನಿಗಧಿಪಡಿಸಿದ್ದು, ವಿವರ ಕೆಳಕಂಡಂತಿದೆ.

| ಶಾಖೆಯ ಹೆಸರು | ನಿಗಧಿಪಡಿಸಿದ ಮಿತಿ |
|---|---|
| 1) ವಿ.ವಿ.ಪುರಂ ಶಾಖೆ | 125 ಲಕ್ಷ |
| 2) ಅವೆನ್ಯೂರಸ್ತೆ ಶಾಖೆ | 40 ಲಕ್ಷ |
| 3) ವಿಜಯನಗರ ಶಾಖೆ | 30 ಲಕ್ಷ |
| 4) ಸುಬ್ರಮಣ್ಯನಗರ ಶಾಖೆ | 22 ಲಕ್ಷ |
| 5) ಪದ್ಮನಾಭನಗರ ಶಾಖೆ | 15 ಲಕ್ಷ |
| 6) ಕಾಚರಕನಹಳ್ಳಿ ಶಾಖೆ | 12 ಲಕ್ಷ |
| 7) ಯಶವಂತಪುರ ಶಾಖೆ | 8 ಲಕ್ಷ |
| 8) ನಾಗರಭಾವಿ ಶಾಖೆ | 15 ಲಕ್ಷ |
| 9) ಕೋಣನಕುಂಟೆ ಶಾಖೆ | 15 ಲಕ್ಷ |

ಉಪನಿಯಮ ಸಂಖ್ಯೆ 92ರಂತೆ ಬ್ಯಾಂಕಿನ ನಗದು ಹಣ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹಾಗೂ ಅವರಿಂದ ಅಧಿಕಾರ ಪಡೆದ ಶಾಖಾ ವ್ಯವಸ್ಥಾಪಕರು ನಗದು ಗುಮಾಸ್ತರು ಹಾಗು ಲೆಕ್ಕಿಗರ ಅಭಿರಕ್ಷೆಯಲ್ಲಿರುತ್ತದೆ.

| | |
|---|---|
| ಅನಾವಶ್ಯಕವಾಗಿ ನಗದು ಶಿಲ್ಕು ಮುಂದುವರಿಸಿದ್ದಲ್ಲಿ ವಿವರಣೆ ನೀಡಿ. | ಶಾಖೆಗಳಲ್ಲಿ ಕೆಲವು ಸಂದರ್ಭಗಳಲ್ಲಿ ವ್ಯವಹಾರ ಹೆಚ್ಚಾದಾಗ ನಿಗಧಿತ ಮಿತಿಗಿಂತ ಹೆಚ್ಚಿನ ನಗದು ಶಿಲ್ಕನ್ನು ಉಳಿಸಿಕೊಂಡಿರುವುದನ್ನು ಗಮನಿಸಲಾಗಿದೆ. |
| ನಗದು ಶಿಲ್ಕನ್ನು ಸೂಕ್ತ ವಿಮೆಗೆ ಒಳಪಡಿಸಲಾಗಿದೆಯೆ? ವಿವರಣೆ ನೀಡಿ. | ಹೌದು. ದಿನಾಂಕ 01.07.2022ರಿಂದ 30.06.2023ರ ವರೆಗೆ ನಗದು ಮತ್ತು ಚಿನ್ನಾಭರಣಗಳ ಮೇಲೆ ರೂ.12.50 ಕೋಟಿ, ನಗದು ಸಾಗಾಣಿಕೆ ಮೇಲೆ ರೂ.75.00 ಲಕ್ಷಕ್ಕೆ ವಿಮೆ ಮಾಡಿಸಲಾಗಿದೆ. |
| ನಗದು ಶಿಲ್ಕನ್ನು ಕಾಲಕಾಲಕ್ಕೆ ಅದಿಕೃತರು ಪರೀಕ್ಷಿಸಿದ್ದಾರೆಯೆ? | ಪರಿಶೀಲಿಸಲಾಗುತ್ತಿದೆ. |

## 22) ಬ್ಯಾಂಕ್ ಖಾತೆಗಳಲ್ಲಿ ಶಿಲ್ಕು

| ಬ್ಯಾಂಕಿನ ಹೆಸರು | ಖಾತೆ ಸಂಖ್ಯೆ | ಬ್ಯಾಂಕಿನ ಪ್ರಕಾರ ಉಳಿಕೆ ಶಿಲ್ಕು | ಬ್ಯಾಂಕ್ ಪುಸ್ತಕದ ಪ್ರಕಾರ ಉಳಿಕೆ ಶಿಲ್ಕು | ಅಂತರ |
|---|---|---|---|---|
| 1) ಭಾರತೀಯ ರಿಸರ್ವ್ ಬ್ಯಾಂಕ್ | 38253501004 | 10,72,01,464.09 | 10,72,01,464.09 | – |
| 2) ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ನಿಯಮಿತ | 11/104/0121001 | 23,24,698.39 | 23,24,698.39 | – |
| 3) ಐ.ಸಿ.ಐ.ಸಿ.ಐ. ಬ್ಯಾಂಕ್ | 000205001786 | 1,85,81,636.95 | 1,86,98,824.95 | –1,17,188.00 |
| 4) ಎಸ್.ಬಿ.ಐ. | 52075146403 | 1,49,321.00 | 1,49,321.00 | – |
| 5) ಐ.ಡಿ.ಬಿ.ಐ. | 024102000009157 | 10,64,35,905.99 | 10,64,35,905.99 | – |
| 6) ಹೆಚ್.ಡಿ.ಎಫ್.ಸಿ. | 00090380001601 | 70,33,535.60 | 78,69,869.60 | –8,36,334.00 |
| 7) ಇಂಡಸ್ ಇಂಡ್ ಬ್ಯಾಂಕ್ | 200004019163 | 66,61,144.82 | 62,67,565.78 | 3,93,579.04 |
| 8) ಆಕ್ಸಿಸ್ ಬ್ಯಾಂಕ್ | 915020032100108 | 30,38,521.76 | 33,47,357.76 | –3,08,836.00 |
| **ಒಟ್ಟು** | | **25,14,26,228.60** | **25,22,95,007.56** | **–8,68,778.96** |

ಬ್ಯಾಂಕು ಹೊರಗಿನಿಂದ ವಿವಿಧ ಬ್ಯಾಂಕು ಖಾತೆಗಳ ವರ್ಷಾಂತ್ಯಕ್ಕೆ ಇರುವ ಬಾಕಿಗಳಿಗೆ ಹಾಗೂ ಸಂಬಂಧಿಸಿದ ಸಂಘ ಸಂಸ್ಥೆಗಳ ಬಾಕಿ ದೃಢಿಕರಣ ಪತ್ರಗಳಿಗೆ ತಾಳೆ ಇದೆಯೇ? ವ್ಯತ್ಯಾಸ ಇದ್ದಲ್ಲಿ ಈ ಕುರಿತು ಸಮನ್ವಯ ಪಟ್ಟಿ ತಯಾರಿಸಿ ತಾಳೆ ನೋಡಲಾಗಿದೆಯೇ? (ಸದರಿ ವ್ಯತ್ಯಾಸದ ವರ್ಷವಾರು ವಿವರ ನೀಡಿ ಸಮನ್ವಯ ಪಟ್ಟಿ ಕಡ್ಡಾಯವಾಗಿ ವರದಿಗೆ ಲಗತ್ತಿಸಿ, ಅದರಲ್ಲಿ ಇರುವ ನ್ಯೂನ್ಯತೆಯ ಕುರಿತು ನಿಖರವಾಗಿ ವಿವರಿಸಿ ಪ್ರಸಕ್ತ ಸಾಲಿನ ನ್ಯೂನ್ಯತೆಗಳನ್ನು ಸರಿಪಡಿಸಿರುವ ಬಗ್ಗೆ ಕಡ್ಡಾಯವಾಗಿ ವಿಮರ್ಷಿಸುವುದು.)

ಮೇಲ್ಕಂಡ ಬ್ಯಾಂಕ್ ಶಿಲ್ಕುಗಳನ್ನು ಬ್ಯಾಂಕಿನ ದೃಢೀಕರಣ ಪಟ್ಟಿಯೊಂದಿಗೆ ಪರಿಶೀಲಿಸಲಾಗಿದ್ದು, ಮೇಲ್ಕಂಡ ಎಲ್ಲಾ ಬ್ಯಾಂಕ್ ಖಾತೆಗಳು ಬ್ಯಾಂಕು ತಯಾರಿಸಿರುವ ಸಮನ್ವಯ ಪಟ್ಟಿಗೆ ಒಳಪಟ್ಟು ತಾಳೆಯಿರುತ್ತದೆ.

## ನಿಷ್ಕ್ರಿಯ ಬ್ಯಾಂಕ್ ಖಾತೆಗಳ ವಿವರ

| | |
|---|---|
| ಸಹಕಾರೇತರ ಬ್ಯಾಂಕುಗಳಲ್ಲಿ ವ್ಯವಹಾರ ನಡೆಸಲು ಸಹಕಾರ ಸಂಘಗಳ ಕಾಯಿದೆ ಕಲಂ 58 (ಇ) ಪ್ರಕಾರ ಮಂಜೂರಾತಿ ಪಡೆದಿದೆಯೇ? | ಹೌದು |
| ನಿಷ್ಕ್ರಿಯ ಬ್ಯಾಂಕ್ ಖಾತೆಗಳ ವಿವರ | ನಿಷ್ಕ್ರಿಯ ಬ್ಯಾಂಕ್ ಖಾತೆಗಳು ಇರುವುದಿಲ್ಲ. |
| ವರದಿ ಸಾಲಿನಲ್ಲಿ ಸದರಿ ಖಾತೆಗಳ ಮೇಲೆ ಬಂದಿರುವ ಆದಾಯ | ಚಾಲ್ತಿ ಖಾತೆಗಳಾದ ಕಾರಣ ಯಾವುದೇ ಆದಾಯ ಬಂದಿರುವುದಿಲ್ಲ |

**23) ಹೂಡಿಕೆಗಳು**

ಷಡ್ಯೂಲ್‌ಕೆ ಪ್ರಕಾರ ದಿನಾಂಕ 31–03–2023ಕ್ಕೆ ಬ್ಯಾಂಕು ಹೊಂದಿರುವ ಹೂಡಿಕೆಗಳು ರೂ. 26,830.52 ಲಕ್ಷಗಳು. ವಿವರಗಳು ಈ ಕೆಳಕಂಡಂತೆ ಇರುತ್ತದೆ.

**ಎಸ್.ಎಲ್.ಆರ್ ಹೂಡಿಕೆಗಳು (ರೂ.ಲಕ್ಷಗಳಲ್ಲಿ)**

| ಕ್ರ ಸಂ | ಹೂಡಿಕೆ ಸ್ವರೂಪ | 31.3.2023 ಕ್ಕೆ ಮೊಬಲಗು |
|---|---|---|
| 1 | ರಾಜ್ಯ ಮತ್ತು ಕೇಂದ್ರ ಸರ್ಕಾರಿ ಭದ್ರತಾ ಪತ್ರಗಳಲ್ಲಿ ಠೇವಣಿ | 17,521.11 |
| 2. | ರಾಜ್ಯ ಮತ್ತು ಕೇಂದ್ರ ಸರ್ಕಾರಿ ಭದ್ರತಾ ಪತ್ರಗಳಲ್ಲಿ ಠೇವಣಿ (ಆಪದ್ಧನ ಖಾತೆ) | 1,946.20 |
| | **ಒಟ್ಟು ಮೊಬಲಗು** | **19,467.31** |

**ನಾನ್ – ಎಸ್.ಎಲ್.ಆರ್ ಹೂಡಿಕೆಗಳು (ರೂ.ಲಕ್ಷಗಳಲ್ಲಿ)**

| ಕ್ರ ಸಂ | ಹೂಡಿಕೆ ಸ್ವರೂಪ | 31.3.2023 ಕ್ಕೆ ಮೊಬಲಗು |
|---|---|---|
| 1 | ಸರ್ಕಾರಿ ಮತ್ತು ಖಾಸಗಿ ಕಂಪನಿಗಳ ಬಾಂಡುಗಳಲ್ಲಿ | 672.54 |
| 2 | ಮ್ಯುಚುಯಲ್ ಫಂಡ್ | 200.00 |
| 3 | ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ | 0.25 |
| 4 | ಇಫ್ಕೋ ಷೇರು | 5.00 |
| 5 | ಯೂನಿಟಿ ಸ್ಮಾಲ್ ಫೈನಾನ್ಸ್ ಬ್ಯಾಂಕ್ನಲ್ಲಿ – PNCP SHARES | 880.19 |
| 6 | ಯೂನಿಟಿ ಸ್ಮಾಲ್ ಫೈನಾನ್ಸ್ ಬ್ಯಾಂಕ್ನಲ್ಲಿ – EQUITY SHARES | 220.05 |
| | **ಒಟ್ಟು ಮೊಬಲಗು** | **1,978.03** |

**ವಿವಿಧ ಬ್ಯಾಂಕುಗಳ ನಿಶ್ಚಿತ ಠೇವಣಿಗಳಲ್ಲಿ (ರೂ.ಲಕ್ಷಗಳಲ್ಲಿ)**

| ಕ್ರ ಸಂ | ಹೂಡಿಕೆ ಸ್ವರೂಪ | 31.3.2023 ಕ್ಕೆ ಮೊಬಲಗು |
|---|---|---|
| 1 | ಅಪೆಕ್ಸ್ ಬ್ಯಾಂಕ್ ನಿಶ್ಚಿತ ಠೇವಣಿಯಲ್ಲಿ | 1250.00 |
| 2 | ಇತರೆ ಸಹಕಾರಿ ಮತ್ತು ಖಾಸಗಿ ಬ್ಯಾಂಕ್‌ಗಳಲ್ಲಿ | 1650.00 |
| 3 | SIDBI ನಲ್ಲಿ (PSLC) | 1118.18 |
| 4 | ಕರೆ ಠೇವಣಿಗಳು | 1367.00 |
| | **ಒಟ್ಟು** | **5385.18** |

ದಿ.31.03.2023ಕ್ಕೆ ಬ್ಯಾಂಕ್ ಕೇಂದ್ರ ಮತ್ತು ರಾಜ್ಯ ಸರ್ಕಾರದ ಪತ್ರಗಳಲ್ಲಿ ಹೂಡಿರುವ ಒಟ್ಟು ಮೊತ್ತ ರೂ.19,467.31 ಲಕ್ಷಗಳು (ಆಪದ್ಧನ ನಿಧಿ ಎಂದು ಪರಿಗಣಿಸಿದ ರೂ.1,946.20 ಲಕ್ಷಗಳು ಸೇರಿ).

ದಿ.31.03.2023ಕ್ಕೆ ಬ್ಯಾಂಕಿನ ಡಿ.ಟಿ.ಎಲ್. ಮೊತ್ತ ರೂ.40,347.42 ಲಕ್ಷಗಳು, ಅಂದರೆ ಒಟ್ಟು ಎನ್.ಡಿ.ಟಿ.ಎಲ್.ಗೆ ಸಂಘವು ಹೊಂದಿರುವ ಎಸ್.ಎಲ್.ಆರ್ ಹೂಡಿಕೆಗಳು ಶೇ.48.25 ರಷ್ಟಿದೆ. ಭಾರತೀಯ ರಿಜರ್ವ್ ಬ್ಯಾಂಕಿನ ಸೂಚನೆಯ ಅನ್ವಯ ಇದು ದಿ.31.03.2023ಕ್ಕೆ ಕನಿಷ್ಠ ಶೇ.18ರಷ್ಟಿರಬೇಕು.

ನಾನ್ ಎಸ್.ಎಲ್.ಆರ್ ಮೊಬಲಗು ದಿ. 31.03.2023ಕ್ಕೆರೂ.877.79 ಲಕ್ಷಗಳು (ಹಿಂದಿನ ಸಾಲಿನ ಠೇವಣಿ ಮೊತ್ತ ರೂ.46,783.18 ಲಕ್ಷಗಳು) ಒಟ್ಟು ಠೇವಣಿಯ ಶೇ.1.88ರಷ್ಟಿದೆ. ಇದು ಭಾರತೀಯ ರಿಜರ್ವ್ ಬ್ಯಾಂಕಿನ ಸೂಚನೆಯಂತೆ ಶೇ.10ರಷ್ಟು ಇರಬಹುದಾಗಿದೆ.

ಬ್ಯಾಂಕ್ ದಿ.31.03.2023ಕ್ಕೆ ಹೊಂದಿರುವ ಇತರೆ ಬ್ಯಾಂಕ್‌ಗಳಲ್ಲಿನ ಚಾಲ್ತಿ ಮತ್ತು ನಿಶ್ಚಿತ ಠೇವಣಿಗಳಲ್ಲಿನ ಒಟ್ಟು ಮೊಬಲಗು ರೂ.5,717.94ಲಕ್ಷ (ಆರ್.ಬಿ.ಐ. ಚಾಲ್ತಿ ಖಾತೆ ಹಾಗೂ SIDBI ಹೊರತುಪಡಿಸಿ) ದಿ.31.03.2022ರ ಅಂತ್ಯಕ್ಕೆ ಇದ್ದ ಒಟ್ಟು ಠೇವಣಿಗಳ ಶೇ.12.22ರಷ್ಟಿದೆ. (ಇರಬಹುದಾದ್ದು ಶೇ.20). ಪ್ರತಿ ಬ್ಯಾಂಕಿನಲ್ಲಿನ ಠೇವಣಿಯು ಹಿಂದಿನ ಸಾಲಿನ ಅಂತ್ಯಕ್ಕೆ ಇದ್ದ ಒಟ್ಟು ಠೇವಣಿಗಳ ಶೇ.5ರಷ್ಟು ಮೀರಬಾರದೆಂದು ಆರ್.ಬಿ.ಐ ತಿಳಿಸಿದ್ದು, ಶೇ.5ರ ಮಿತಿಯಲ್ಲಿದೆ.

ಆದ್ಯತಾ ವಲಯಗಳಿಗೆ ನೀಡುವ ಸಾಲಗಳ ಕೊರತೆಯಿಂದಾಗಿ ಆರ್.ಬಿ.ಐ ನಿರ್ದೇಶನದಂತೆ, SIDBI ಯಲ್ಲಿ ರೂ. 11,18,17,500 ಹೂಡಿಕೆಮಾಡಿದ್ದು. ಕೇವಲ ಶೇ 3% ಬಡ್ಡಿಯನ್ನು ಪಡೆದುಕೊಳ್ಳುವುದರಿಂದ, ನಮ್ಮ ಕಾಸ್ಟ್ ಆಫ್ ಫಂಡ್ಸ್‌ಗಳಿಗೆ ಹೋಲಿಸಿದಾಗ ಬ್ಯಾಂಕಿಗೆ ಹೊರೆಯಾಗುತ್ತಿರುವುದು / ನಷ್ಟವಾಗುತ್ತಿರುವುದು ಕಂಡು ಬಂದಿರುತ್ತದೆ. ಆದುದರಿಂದ ಆದ್ಯತಾ ವಲಯಗಳಿಗೆ ಸಾಲ ನೀಡುವ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ.

**ಸಮಜಾಯಷಿ:**
ಕ್ರಮವಿಡಲಾಗುವುದು.

ನಾನ್ ಎಸ್.ಎಲ್.ಆರ್. ಹೂಡಿಕೆಗಳ ಪೈಕಿ ಮೆ॥ ಫಸ್ಟ್ ಲೀಸಿಂಗ್ ಕಂ – ರೂ.100 ಲಕ್ಷಗಳ ಹೂಡಿಕೆಯ ಮೇಲೆಯಾವುದೇ ಬಡ್ಡಿ ಜಮಾ ಆಗುತ್ತಿಲ್ಲ.ಈ ಹೂಡಿಕೆಯನ್ನು ಎನ್.ಪಿ.ಐ ಎಂದು ವರ್ಗೀಕರಿಸಲಾಗಿದೆ.

ದಿನಾಂಕ: 24/09/2020ರ ಆಡಳಿತ ಮಂಡಳಿಯ ಸಭೆಯಲ್ಲಿ ಮೇಲ್ಕಂಡ ಬ್ಯಾಂಕು ಹಾಗೂ ಖಾಸಗೀ ಸಂಸ್ಥೆಗಳ ಮೇಲುಸ್ತುವಾರಿ ಹೊಂದಿರುವವರಿಗೆ ಪತ್ರವನ್ನು ಬರೆದು ಬ್ಯಾಂಕಿನ ಸದ್ಯದ ಆರ್ಥಿಕ ಪರಿಸ್ಥಿತಿಯನ್ನು ವಿವರಿಸಿ ಬ್ಯಾಂಕು ತೊಡಗಿಸಿರುವ ಹೂಡಿಕೆಗಳನ್ನು ಮರುಪಾವತಿ ಮಾಡುವಂತೆ ಕೋರಲು ನಿರ್ಣಯಿಸಲಾಗಿದೆ.

ಭಾರತಿಯ ರಿಸರ್ವ್ ಬ್ಯಾಂಕು ದಿನಾಂಕ 25–01–2022ರ ಕೇಂದ್ರ ಸರ್ಕಾರದ ಗೆಜೆಟ್ ಪ್ರಕಟಣೆಯ ಅನ್ವಯ PMC ಬ್ಯಾಂಕನ್ನು ಮೆ// ಯೂನಿಟಿ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನೊಂದಿಗೆ ವಿಲೀನಗೊಳಿಸಿ. ಪಿ.ಎಂ.ಸಿ ಬ್ಯಾಂಕಿನಲ್ಲಿರುವ ಠೇವಣಿಯನ್ನು ವಿಲೀನ ಪ್ರಕ್ರಿಯೆಯ ನಿಯಮಗಳನುಸಾರ ಶೇಕಡ 80:20 ರ ಅನುಪಾತದಂತೆ PNCPS (Perpectual Non-Cumulative Preference Shares) ಹಾಗೂ Equity Warrant ಗಳಾಗಿ ಪರಿವರ್ತಿಸಲು ಆದೇಶ ನೀಡಿರುತ್ತಾರೆ.ಸದರಿಯವರ ನಿರ್ದೇಶನದಂತೆ ಪಿ.ಎಂ.ಸಿ ಬ್ಯಾಂಕಿನ ಹೂಡಿಕೆಯನ್ನು ನಿಯಮಗಳನುಸಾರ ಪರಿವರ್ತಿಸಿಕೊಳ್ಳಲಾಗಿದೆ.

ರಿಲಿಯನ್ಸ್ ಹೋಂ ಫೈನಾನ್ಸ್ (RHFL) ಕಂಪೆನಿಯಲ್ಲಿ ಹೂಡಿಕೆ ಮಾಡಿದ್ದ ರೂ 200.00 ಲಕ್ಷಗಳಿಗೆ ಸಂಬಂಧಿಸಿದಂತೆ ವರದಿ ಸಾಲಿನಲ್ಲಿ ಆರ್.ಬಿ.ಐ ಮಾನದಂಡಗಳ ಪ್ರಕಾರ ಸದರೀ ಕಂಪೆನಿಯನ್ನು ಮಾರಾಟ ಮಾಡಾಲಾಗಿದ್ದು. ಆ ಮಾರಾಟದ ಹಣವನ್ನು ಕಂಪೆನಿಯ ಸಾಲಗಾರರು ಹಾಗೂ ಹೂಡಿಕೆದಾರರ ನಡುವೆ ಸರ್ವೋಚ್ಚ ನ್ಯಾಯಲಯದ ಆದೇಶದ ಪ್ರಕಾರ ಸಮಾನ ಅನುಪಾತದಂತೆ ಹಂಚಲಾಗಿದ್ದು ಇದರ ಪ್ರಕಾರ ರೂ 55.41 ಲಕ್ಷಗಳಷ್ಟು ಮೊತ್ತವನ್ನು ಜಮಾ ಪಡೆದಿದ್ದು. ಇದರಲ್ಲಿ ರೂ 4.29 ಲಕ್ಷಗಳನ್ನು ಬರಬೇಕಾದ ಬಡ್ಡಿಗೆ ಜಮಾ ತೆಗೆದುಕೂಂಡು ಉಳಿದ ರೂ 51.12 ಲಕ್ಷಗಳನ್ನು ಸದರಿ ಹೂಡಿಕೆಗೆ ಜಮಾ ತೆಗೆದುಕೂಳ್ಳಲಾಗಿದೆ. ಹಾಗೂ ರೂ 148.88 ಲಕ್ಷಗಳನ್ನು ಹೂಡಿಕೆಯ ಸವಕಳಿ ನಿಧಿಯಿಂದ ಸರಿದೂಗಿಸಿಕೂಂಡು ಸದರಿ ಹೂಡಿಕೆಯನ್ನು ಚುಕ್ತಗೂಳಿಸಲಾಗಿದೆ.

ಪಸ್ಟ್ ಲೀಜಿಂಗ್ ಕಂಪನಿ ಇದರ ಲಿಕ್ವಿಡೇಟರ್ ರವರಿಗೆ ಆಕ್ಸೀಸ್ ಟ್ರಸ್ಟಿ ಸರ್ವೀಸಸ್ ಲಿಮಿಟೆಡ್ ಮುಂಬೈ ಇವರ ಮುಖಾಂತರ ದಿನಾಂಕ:29/09/2020ರಂದು ಪತ್ರ ಬರೆಯಲಾಗಿದೆ. ಸದರಿ ಪತ್ರವನ್ನು ಲಿಕ್ವಿಡೇಟ್‌ರವರಿಗೆ ಕಳಿಸಿರುವ ಬಗ್ಗೆ ಮಾಹಿತಿ ಇರುತ್ತದೆ. ಕಂಪನಿಯ ಲಿಕ್ವಿಡೇಷನ್ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ.

ಈ ಮೇಲಿನ ಪ್ರಕರಣಗಳನ್ನು ಗಮನಿಸಿದಾಗ ಹೂಡಿಕೆಗಳನ್ನು ಆಯ್ಕೆ ಮಾಡುವಾಗ ಲಾಭದಾಯಕವಾದ ಹೂಡಿಕೆಗಳನ್ನು ಆಯ್ಕೆ ಮಾಡುವ ನಿಟ್ಟಿನಲ್ಲಿ ಎಚ್ಚರಿಕೆಯಿಂದ ಲಾಭದಾಯಕ ಹೂಡಿಕೆಗಳನ್ನು ಆಯ್ಕೆ ಮಾಡಿಕೂಳ್ಳುವ ಅಗತ್ಯವಿರುತ್ತದೆ.

ಬ್ಯಾಂಕು ಹಿಂದಿನ ಸಾಲಿನ ಅಂತ್ಯಕ್ಕೆ ರೂ.24,958.71ಲಕ್ಷಗಳ ಹೂಡಿಕೆ ಹೊಂದಿದ್ದು, ಪ್ರಸಕ್ತ ಸಾಲಿನ ಅಂತ್ಯಕ್ಕೆ ರೂ.21,445.34 ಲಕ್ಷಗಳ ಹೂಡಿಕೆ ಹೊಂದಿರುತ್ತದೆ. ಹಿಂದಿನ ಸಾಲಿಗೆ ಹೋಲಿಸಿದಾಗ ಶೇ.14.08 ರಷ್ಟು ಕಡಿಮೆಯಾಗಿರುತ್ತದೆ.

ಹೂಡಿಕೆಗಳ ನೀತಿಯನ್ನು ದಿ.23.02.2023 ರಂದು ಬ್ಯಾಂಕಿನ ಆಡಳಿತ ಮಂಡಳಿ ಅನುಮೋದಿಸಿದೆ.

ಸದರಿ ನೀತಿಯಲ್ಲಿ ಫ್ರಂಟ್ ಆಫೀಸ್, ಮಿಡಲ್ ಆಫೀಸ್ ಹಾಗೂ ಬ್ಯಾಕ್ ಆಫೀಸ್ ವಿಭಾಗಗಳನ್ನು ಸ್ಥಾಪಿಸಿದ್ದು, ಅಂದಿನ ಪ್ರಧಾನ ವ್ಯವಸ್ಥಾಪಕರು ಹಾಗೂ ಇತರೆ ಬ್ಯಾಂಕ್ ಅಧಿಕಾರಿಗಳಿಗೆ ಹೂಡಿಕೆ ಮಾಡುವ ಮತ್ತು ಹಿಂಪಡೆಯುವ ಅಧಿಕಾರವನ್ನು ಪ್ರತ್ಯಾಯೋಜನೆ ಮಾಡಿದೆ.

ಈ ಮೇಲಿನ ಎಸ್.ಎಲ್.ಆರ್. ಹೂಡಿಕೆಗಳಾದ ರಾಜ್ಯ ಮತ್ತು ಕೇಂದ್ರ ಭದ್ರತಾ ಪತ್ರಗಳನ್ನುಎಸ್.ಬಿ.ಐ.ನ ಡಿ.ಎಫ್.ಹೆಚ್.ಐ. ಲಿಮಿಟೆಡ್‌ನ ಎಸ್.ಜಿ.ಎಲ್. ಖಾತೆ ಸಂಖ್ಯೆ. ಎಸ್.ಎಸ್.ವಿ.103371ರ ಮುಖಾಂತರ ನಡೆಸಲಾಗುತ್ತಿದೆ. ಸದರಿ ಸಂಸ್ಥೆ 31.03.2023ಕ್ಕೆ ನೀಡಿರುವ ಧೃಡೀಕರಣಕ್ಕೆ ತಾಳೆಯಿದೆ.

ಆಡಳಿತ ಮಂಡಳಿಯ ಪೂರ್ವಾನುಮತಿಯೊಂದಿಗೆ ಹೂಡಿಕೆಗಳ ವ್ಯವಹಾರವನ್ನು ನಿರ್ವಹಿಸಲಾಗುತ್ತಿದೆ. ಬ್ಯಾಂಕು 2022–23ನೇ ಸಾಲಿನಲ್ಲಿ ಎಸ್.ಎಲ್.ಆರ್. ಹೂಡಿಕೆಗಳನ್ನು ಈ ಕೆಳಕಂಡಂತೆ ವರ್ಗಿಕರಿಸಿದೆ.

| | | | |
|---|---|---|---|
| 1) | ಹೆಚ್.ಟಿ.ಎಂ. (ಪರಿಪಕ್ವತೆಯಲ್ಲಿ) | – | ರೂ. 7,481.85 ಲಕ್ಷ |
| 2) | ಹೆಚ್.ಎಫ್.ಟಿ. (ವಿಕ್ರಯಕ್ಕೆ ಕಾದಿರಿಸಿರುವುದು) | – | ಇಲ್ಲ |
| 3) | ಎ.ಎಫ್.ಎಸ್. (ವಿಕ್ರಯಕ್ಕೆ ಲಭ್ಯವಿರುವುದು) | – | ರೂ. 11,985.46 ಲಕ್ಷ |
| | ಒಟ್ಟು | – | ರೂ. 19,467.31 ಲಕ್ಷ |

| | | | |
|---|---|---|---|
| 1) | ಮೇಲ್ಕಂಡ ಹೂಡಿಕೆಗಳ ಮುಖಬೆಲೆ | – | ರೂ. 19,386.00 ಲಕ್ಷ |
| 2) | ಸದರಿ ಹೂಡಿಕೆಯ ಖರೀದಿ ಅಥವಾ ಪುಸ್ತಕದ ಮೌಲ್ಯ | – | ರೂ. 19,467.31 ಲಕ್ಷ |
| 3) | ದಿನಾಂಕ 31.03.2023ಕ್ಕೆ ಇದ್ದ ಮೇಲಿನವುಗಳ ಮಾರುಕಟ್ಟೆ ಬೆಲೆ | – | ರೂ. 18,938.38 ಲಕ್ಷ |
| 4) | ಖರೀದಿ / ಪುಸ್ತಕದ ಬೆಲೆಗೂ ಮಾರುಕಟ್ಟೆ ಬೆಲೆಗೆ ಇರುವ ವ್ಯತ್ಯಾಸ | – | ರೂ. 528.93 ಲಕ್ಷ |

ಒಟ್ಟು 39 ಹೂಡಿಕೆಗಳ ಪೈಕಿ 9 ಹೂಡಿಕೆಗಳ ಬಾಬ್ತು ಲಾಭವು, ಉಳಿದ 30 ಹೂಡಿಕೆಗಳ ಬಾಬ್ತು ನಷ್ಟವು ಇದ್ದು, ಹೂಡಿಕೆಗಳ ಪುಸ್ತಕಗಳ ಬೆಲೆಯಲ್ಲಿ ನಿವ್ವಳ ನಷ್ಟ ರೂ. 528.93 ಲಕ್ಷಗಳಾಗುತ್ತದೆ.

ಪ್ರಸಕ್ತ ವರದಿಸಾಲಿನಲ್ಲಿ ಬ್ಯಾಂಕು ಎಲ್ಲಾ ಹೂಡಿಕೆಗಳಿಂದ ರೂ.2,196.07ಲಕ್ಷಗಳ ಬಡ್ಡಿ, ಡಿವಿಡೆಂಡ್ ಹಾಗೂ ಭದ್ರತೆಗಳ ಮಾರಾಟದಿಂದ ಬಂದ ಲಾಭಾಂಶ ಗಳಿಸಿದೆ. ಗಳಿಕೆಯ ಸರಾಸರಿ ಪ್ರಮಾಣ ಒಟ್ಟು ಸರಾಸರಿ ಹೂಡಿಕೆಗಳ ಮೊತ್ತ ರೂ. 30340.49 ಲಕ್ಷಗಳಿಗೆ ಶೇ.7.24% ರಷ್ಟಾಗುತ್ತದೆ.

31.03.2023ಕ್ಕೆ ಬ್ಯಾಂಕು ಹೂಡಿಕೆಗಳ ಮೇಲಿನ ಏರಿಳಿತ ನಿಧಿ ರೂ.642.90 ಲಕ್ಷ ಹಾಗೂ ಹೂಡಿಕೆಗಳ ಮೇಲಿನ ಸವಕಳಿ ನಿಧಿ ರೂ. 642.84 ಲಕ್ಷಗಳಿದ್ದು, ಒಟ್ಟು ರೂ. 1285.74 ಲಕ್ಷಗಳ ನಿಧಿ ಹೊಂದಿದ್ದು, ಇದು ಒಟ್ಟು ಹೂಡಿಕೆಗಳ ಮೊತ್ತ ರೂ 21,445.34 ಲಕ್ಷಗಳಿಗೆ ಶೇ. 6.00 ರಷ್ಟು ಹಾಗೂ ಎ.ಎಫ್.ಎಸ್. ಹೂಡಿಕೆ ಮೊತ್ತ ರೂ 12,858.00 ಲಕ್ಷಗಳಿಗೆ ಶೇ. 10.00 ರಷ್ಟು ಇರುತ್ತದೆ.

1) ಹೂಡಿಕೆಗಳ ಖರೀದಿ ಮತ್ತು ಮಾರಾಟದ ಬಗ್ಗೆ ಹೊಂದಿರುವ ಪದ್ಧತಿ, ಅಧಿಕಾರ ಪ್ರತ್ಯಾಯೋಜನೆ ಇತ್ಯಾದಿ ಬಗ್ಗೆ ವರದಿಸುವುದು.

ಆಡಳಿತ ಮಂಡಳಿಯು ಹೂಡಿಕೆಗಳ ನೀತಿಯನ್ನು ಪರಾಮರ್ಶಿಸಿ ದಿ.23–02–2023 ರಂದು ಅನುಮೋದಿಸಿ ಜಾರಿಗೆ ತಂದಿದ್ದು, ಪ್ರಸಕ್ತ ಸಾಲಿನಲ್ಲಿ ಮುಂದುವರೆದಿದೆ.

ಬ್ಯಾಂಕು ತನ್ನೆಲ್ಲಾ ಎಸ್.ಎಲ್.ಆರ್. ಹೂಡಿಕೆಗಳ ಖರೀದಿ ಮತ್ತು ಮಾರಾಟ ವ್ಯವಹಾರವನ್ನು ಎಸ್.ಬಿ.ಐನ ಡಿ.ಎಫ್.ಹೆಚ್.ಐ.ಲಿ., ಸಂಸ್ಥೆಯಲ್ಲಿನ ಎಸ್.ಜಿ.ಎಲ್. ಖಾತೆಯ ಮುಖಾಂತರ ನಡೆಸಲಾಗುತ್ತದೆ. ಪ್ರಧಾನವಾಗಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ಆಡಳಿತ ಮಂಡಳಿಯ ಪೂರ್ವಾನುಮತಿಯೊಂದಿಗೆ ಹೂಡಿಕೆಗಳ ವ್ಯವಹಾರವನ್ನು ನಿರ್ವಹಿಸುತ್ತಿದ್ದಾರೆ.

2) ಹೂಡಿಕೆಗಳ ಬಗ್ಗೆ ಹತೋಟಿ, ಕಾಲಕಾಲಕ್ಕೆ ಅವುಗಳ ಪರಿಶೀಲನೆ/ ಲೆಕ್ಕಪತ್ರದೊಂದಿಗೆ ಸಮನ್ವಯಗೊಳಿಸುವಿಕೆ ಬಗ್ಗೆ ವಿಮರ್ಷೆ

ಆಡಳಿತ ಮಂಡಳಿಯ ಉಸ್ತುವಾರಿಯಲ್ಲಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಅವರ ಸಿಬ್ಬಂದಿ ಹೂಡಿಕೆ ವ್ಯವಹಾರದ ಪರಿಶೀಲನೆ ಮತ್ತು ಲೆಕ್ಕಪತ್ರಗಳೊಂದಿಗೆ ಸಮನ್ವಯಗೊಳಿಸುವ ಬಗ್ಗೆ ಕ್ರಮವಿಟ್ಟಿರುತ್ತಾರೆ.

3) ಮೌಲ್ಯ ಮಾಪನ ಮಾದರಿ, ಹಿಂದಿನ ಸಾಲಿಗೆ ಹೋಲಿಸಿದಲ್ಲಿ ಮೌಲ್ಯ ಮಾಪನದಲ್ಲಿ ಆಗಿರುವ ಬದಲಾವಣೆ, ಮೌಲ್ಯದಲ್ಲಿ ಕುಸಿತ ಮತ್ತು ಈ ಸಂಬಂಧ ಕಲ್ಪಿಸಿರುವ ಅವಕಾಶಗಳ ಬಗ್ಗೆ ವಿಮರ್ಷೆ

ಕಾಲಕಾಲಕ್ಕೆ FBIL ಯಿಂದ ಪ್ರಕಟಗೊಳ್ಳುವ ಹೂಡಿಕೆಗಳ ಮೌಲ್ಯವನ್ನು ಆಧರಿಸಿ ಹೂಡಿಕೆಗಳ ಮೌಲ್ಯಮಾಪನವನ್ನು ಮಾಡಲಾಗುತ್ತಿದೆ.

4 SGL/BRS ಪದ್ಧತಿ, ಸಾಲಾಂತ್ಯಕ್ಕೆ ಇರುವ SGL/BRS ಮೇಲಿನ ಹತೋಟಿ ಹಾಗೂ ನಂತರದಲ್ಲಿ ಅವುಗಳ ತೀರಿಕೆ.

ಬ್ಯಾಂಕು ಎಸ್.ಎಲ್.ಆರ್. ಹೂಡಿಕೆಗಳನ್ನು ಎಸ್.ಬಿ.ಐ– ಡಿ.ಎಫ್.ಹೆಚ್.ಐ. ಲಿ., ಮುಂಬೈ ಇಲ್ಲಿನ ಎಸ್.ಜಿ.ಎಲ್. ಖಾತೆಯ ಮುಖಾಂತರ ವ್ಯವಹರಿಸಲಾಗುತ್ತಿದೆ.

**23ಎ. ಮೀಸಲು ನಿಧಿಗಳು ಮತ್ತು ಹೂಡಿಕೆಗಳ ಬಗ್ಗೆ ವ್ಯಾಖ್ಯಾನ:**

1) ನಿಧಿಗಳ ಸಮಂಜಸತೆಯ ಮತ್ತು ಅವುಗಳ ಸಮರ್ಪಕ ಬಳಕೆಯ ಬಗ್ಗೆ.

ದಿನಾಂಕ : 23–09–2022ರಲ್ಲಿ ನಡೆದ ಬ್ಯಾಂಕಿನ ಮಹಾಸಭೆಯಲ್ಲಿ ಬ್ಯಾಂಕು 2021–22ನೇ ಸಾಲಿನಲ್ಲಿ ನಷ್ಟ ಹೊಂದಿರುವುದರಿಂದ ಉಪನಿಯಮ 105ರಂತೆ ಹಂಚಿಕೆ ಮಾಡಲಾಗಿರುವುದಿಲ್ಲ.

2) SLR ಹೂಡಿಕೆಗಳನ್ನು AFS, HTM ಮತ್ತು HFT ಗಳೆಂದು ಪ್ರತ್ಯೇಕಿಸಲಾಗಿದೆಯೇ?

ಹೌದು. ಮೇಲಿನ ಕಂಡಿಕೆಯಲ್ಲಿ ವಿವರಿಸಿದೆ.

3) ರೂ. 100 ಕೋಟಿ ಮೀರಿ ಠೇವಣಿ ಹೊಂದಿದ್ದಲ್ಲಿ, ಬ್ಯಾಂಕು ಹೂಡಿಕೆಗಳ ಏರಿಳಿತ ಮೀಸಲು ನಿಧಿಯನ್ನು ನಿರ್ವಹಿಸಿದೆಯೇ?

ಹೌದು. ದಿ. 31.3.2023 ಕ್ಕೆ ರೂ. 642.90 ಲಕ್ಷಗಳ ಹೂಡಿಕೆಗಳ ಏರಿಳಿತ ನಿಧಿ ಇದ್ದು, ಇದು ಬ್ಯಾಂಕು ಹೊಂದಿರುವ ವಿಕ್ರಯಕ್ಕಾಗಿ ಲಭ್ಯವಿರುವ (ಎ.ಎಫ್.ಎಸ್.) ಹೂಡಿಕೆಗಳ ಮೊತ್ತ ರೂ. 12,858.00 ಲಕ್ಷಗಳಿಗೆ ಶೇ. 5.00 ರಷ್ಟಿದೆ.

ಹೂಡಿಕೆಗಳ ಅಂತಿಮ ಶಿಲ್ಕು ಆಯಾ ಸಂಸ್ಥೆಯವರು ನೀಡಿರುವ ಶಿಲ್ಕು ದೃಢೀಕರಣ ಪತ್ರಗಳಿಗೆ ತಾಳೆಯಾಗಿರುತ್ತದೆಯೆ?

ಹೌದು. ತಾಳೆಯಿದೆ.

ನಿಧಿಗಳ ನಿಯೋಜನೆಗೆ ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರಚಿಸಿದೆಯೆ?

ಉಪನಿಯಮ 105ರಲ್ಲಿ ನಿಧಿಗಳ ಕ್ರೋಢೀಕರಣಕ್ಕಾಗಿ ಅವಕಾಶ ಕಲ್ಪಿಸಿರುವುದನ್ನು ಬಿಟ್ಟರೆ ಯಾವುದೇ ಮಾರ್ಗದರ್ಶಿ ಸೂತ್ರಗಳನ್ನು ರಚಿಸಿಕೊಂಡಿಲ್ಲ.

**ಸಮಜಾಯಿಷಿ:**

ಬ್ಯಾಂಕು ಸೃಜಿಸಿರುವ ನಿಧಿಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶನ ಹಾಗೂ ಸಹಕಾರ ಸಂಘಗಳ ಕಾಯ್ದೆ ಅನ್ವಯ ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಯಡಿಯಲ್ಲಿ ಆಯಾ ಉದ್ದೇಶಗಳಿಗಾಗಿಯೆ ವಿನಿಯೋಗಿಸಲಾಗುತ್ತಿದೆ.

ನಿಧಿಗಳಲ್ಲಿನ ಹೂಡಿಕೆಗಳು ಕಾಯ್ದೆಗನುಗುಣವಾಗಿದೆಯೆ?

ನಿಧಿಗಳಲ್ಲಿನ ಹೂಡಿಕೆಗಳು ಸಹಕಾರ ಸಂಘಗಳ ಕಾಯಿದೆ ಕಲಂ 58ರಲ್ಲಿ ನಿಗಧಿಪಡಿಸಿದ ವಿವಿಧ ಬ್ಯಾಂಕ್ ಖಾತೆಗಳಲ್ಲಿ, ಭಾರತೀಯ ರಿಸರ್ವ್ ಬ್ಯಾಂಕ್ ನೀಡಿರುವ ಸುತ್ತೋಲೆಗಳ ಅನುಸಾರ ವಿನಿಯೋಗಿಸಲಾಗಿದೆ.

ಸದರಿ ಹೂಡಿಕೆಗಳು ಮೇಲಿನ ಲಾಭಾಂಶ, ಕಾಲಕಾಲಕ್ಕೆ ಸಂಘಕ್ಕೆ ಜಮಾ ಆಗಿದೆಯೇ ?

ಪಸ್ಟ್ ಲೀಜಿಂಗ್ ಕಂಪನಿಮೇಲೆ ಮಾಡಿರುವ ಹೂಡಿಕೆ ಹೊರತುಪಡಿಸಿ, ಉಳಿದೆಲ್ಲಾ ಹೂಡಿಕೆಗಳಿಂದ ಬಡ್ಡಿ, ಡಿವಿಡೆಂಡ್ ಬರುತ್ತಿದೆ. 2022–23ನೇ ಸಾಲಿಗೆ ರೂ 1,920.37 ಲಕ್ಷ ಬಡ್ಡಿ /ಡಿವಿಡೆಂಡ್ ಬ್ಯಾಂಕಿಗೆ ಜಮಾ ಆಗಿದೆ.

ಹೂಡಿಕೆಗಳ ನಿರ್ವಹಣೆ ಬಗ್ಗೆ ಟಿಪ್ಪಣಿ ಮೇಲಿನ ಕಂಡಿಕೆಗಳಲ್ಲಿ ವಿವರಿಸಿದೆ.

**24) ಸದಸ್ಯರ ಸಾಲ ಮತ್ತು ಮುಂಗಡಗಳು :**

ಎ **ಸಾಲಗಳ ಮೌಲ್ಯಾಂಕನ (Credit Appraisal)**

ಉಪ ನಿಯಮಗಳ ಹಾಗೂ ಸಾಲದ ನಿಯಮಾಳಿಗಳ ಪ್ರಕಾರ ಸದಸ್ಯರಿಗೆ ನೀಡಬಹುದಾದ ವಿವಿಧ ರೀತಿಯ ಸಾಲ, ಸಾಲಗಳ ಮಿತಿ, ಸಾಲಗಳ ಅವಧಿ ಒಬ್ಬ ಸದಸ್ಯನು ಎಲ್ಲ ರೀತಿಯ ಪಡೆಯಬಹುದಾದ ಒಟ್ಟು ಸಾಲದ ಮಿತಿಯ ಬಗ್ಗೆ ಹಾಗೂ ಇಂತಹ ರಿಜಿಸ್ಟರ ಸಂಘದಲ್ಲಿ ಬರೆದಿಟ್ಟಿರುವುದರ ಬಗ್ಗೆ ವಿಮರ್ಶೆ.

ಉಪನಿಯಮ 5(15) ಮತ್ತು 68ರಂತೆ ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಗಳಿಗೆ ಒಳಪಟ್ಟು ಬ್ಯಾಂಕಿನ ಆಡಳಿತ ಮಂಡಳಿ ಅಂಗೀಕರಿಸಿದ ಸೂಕ್ತ ಭದ್ರತೆಗಳ ಆಧಾರದ ಮೇಲೆ ಸಾಲಗಳು ಹಾಗೂ ಬ್ಯಾಂಕ್ ಖಾತರಿಯನ್ನು ನೀಡಲು ಅವಕಾಶವಿರುತ್ತದೆ.

ಬ್ಯಾಂಕು ರೂಪಿಸಿರುವ ಸಾಲದ ನಿಯಮಗಳ ಪ್ರಕಾರ (ನಿಯಮ 26.1ರಂತೆ) ಪ್ರತಿ ವರ್ಷವು ಬ್ಯಾಂಕಿನ ಆಡಳಿತ ಮಂಡಳಿ ಭಾರತೀಯ ರಿಸರ್ವ್ ಬ್ಯಾಂಕು ನಿಗಧಿ ಪಡಿಸಿರುವ ಸಾಲದ ಮಿತಿಯಂತೆ, ಪ್ರತಿ ವ್ಯಕ್ತಿಯ ಹಾಗೂ ಗುಂಪಿನ ಗರಿಷ್ಟ ಸಾಲ ಪಡೆಯುವ ಅರ್ಹತೆಯನ್ನು ನಿಗಧಿಪಡಿಸಬೇಕೆಂದು ತಿಳಿಸಿದೆ. ಭಾರತೀಯ ರಿಸರ್ವ್ ಬ್ಯಾಂಕು ತನ್ನ ಸುತ್ತೋಲೆಯ ಸಂಖ್ಯೆ DOR(PCB)BPD,CIR NO 10/13.05.000/2019–20 ದಿನಾಂಕ 13/03/2020 ರಂತೆ ಬ್ಯಾಂಕು ಹೊಂದಿರುವ Tier–1 ಬಂಡವಾಳ ನಿಧಿಯ ಶೇ.15% ರಷ್ಟು ವ್ಯಕ್ತಿಗಳಿಗೆ, ಶೇ.25% ರಷ್ಟು ಗುಂಪುಗಳಿಗೆ ಸಾಲ ನೀಡಬಹುದೆಂದು ಮಿತಿಯನ್ನು ನಿಗಧಿಪಡಿಸಿದೆ. ಇದನ್ನು ಬ್ಯಾಂಕು ಪ್ರತಿ ವರ್ಷವು ಆಯಾ ಸಾಲಿನ ಲೆಕ್ಕಪರಿಶೋಧನೆ ಮುಕ್ತಾಯವಾದ ನಂತರ ಲೆಕ್ಕ ಹಾಕಬೇಕೆಂದು ತಿಳಿಸಲಾಗಿದೆ.

ಭಾರತೀಯ ರಿಜರ್ವ್ ಬ್ಯಾಂಕ್ ತನ್ನ ಪತ್ರದ ಸಂಖ್ಯೆ DOS(UCB)(BG)(SAF)NO 75550/ 12.07.144 2021–22 ದಿ.22.07.2021 ರಂತೆ, ಬ್ಯಾಂಕು SAF ಈ ನಿಯಂತ್ರಣಕ್ಕೆ (Supervisory Action Frame)ಗೆ ಒಳಪಟ್ಟಿರುವುದರಿಂದ ಕೆಲವೊಂದು ನಿರ್ದೇಶನಗಳನ್ನು ನೀಡಿದೆ. ಅವುಗಳಲ್ಲಿ ವ್ಯಕ್ತಿಗಳ ಹಾಗೂ ಗುಂಪುಗಳಿಗೆ ಸಾಲ ನೀಡಿರುವ ಮಿತಿಯನ್ನು (Exposure) ಈಗಿರುವುದಕ್ಕಿಂತ ಶೇ. 50% ರಷ್ಟು ಕಡಿಮೆ ಮಾಡಲು ಸೂಚಿಸಿದೆ. ಇದರನ್ವಯ ಬ್ಯಾಂಕ್ ದಿ. 26–08–2022 ರ ಆಡಳಿತ ಮಂಡಳಿ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯ ಕೈಗೊಂಡಿದ್ದು, ಇದು ದಿ. 01–09–2022 ಜಾರಿಗೆ ಬಂದಿರುವುದೆಂದು ತಿಳಿಸಲಾಗಿದೆ.

| ಕ್ರ. ಸಂ. | ವಿವರ | ಸಾಲ ನೀಡಿಕೆಯು ಬಂಡವಾಳ ನಿಧಿಯ ಶೇಕಡಾವಾರು ಪ್ರಮಾಣ | ಅರ್ಹತೆ ಹೊಂದಿರುವುದು | ನಿಗಧಿಗೊಳಿಸಿದ್ದು |
|---|---|---|---|---|
| 1. | ವ್ಯಕ್ತಿಗಳು | ಶೇ. 15 | ರೂ. 2.49 ಕೋಟಿ | ರೂ. 2.40 ಕೋಟಿ |
| 2. | ಗುಂಪುಗಳು | ಶೇ. 25 | ರೂ. 4.15 ಕೋಟಿ | ರೂ. 4.00 ಕೋಟಿ |

ಬ್ಯಾಂಕಿನ ಆಡಳಿತ ಮಂಡಳಿಯು ದಿ. 28.04.2022 ರ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಸಾಲ ವಿತರಣೆ ಹಾಗು ವಸೂಲಾತಿಯ ಬಗ್ಗೆ ಈ ಕೆಳಕಂಡ ಗುರಿಗಳನ್ನು ನಿಗಧಿಪಡಿಸಿದೆ.

1) 2022–23ನೇ ಸಾಲಿಗೆ ಸಾಲ ವಿತರಣೆ ರೂ. 113.21 ಕೋಟಿ.

2) 2022–23ನೇ ಸಾಲಿಗೆ ಸಾಲ ವಸೂಲಾತಿ ರೂ. 64.64 ಕೋಟಿ.

ಪ್ರಸಕ್ತ ಸಾಲಿನಲ್ಲಿ ಸಾಧಿಸಿದ ಗುರಿ
1) ಸಾಲ ವಿತರಣೆ ರೂ. 57.08 ಕೋಟಿ.
2) ಸಾಲ ವಸೂಲಾತಿ ರೂ. 63.48 ಕೋಟಿ.

**ಭಾರತೀಯರಿಜರ್ವ್ ಬ್ಯಾಂಕ್ ತನ್ನಪತ್ರದಸಂಖ್ಯೆ DOR(PCB).BPD.CIR. No. 10/13.05.000/ 2019-20 ದಿ.13-03-2020 ರಂತೆ, ಯು.ಸಿ.ಬಿ.ಯು ತಮ್ಮ ಒಟ್ಟು ಸಾಲಗಳಲ್ಲಿ ಕನಿಷ್ಠ ಶೇಕಡ 50 ಪ್ರತಿ ಶತವನ್ನು 25 ಲಕ್ಷ ಮೀರದ ಸಾಲಗಳಲ್ಲಿ ಅಥವಾ ಬ್ಯಾಂಕಿನ ಶ್ರೇಣಿ 1 (Tier-I) ಬಂಡವಾಳದ 0.2% ಮೀರದಂತೆ(ಪ್ರತಿ ಸಾಲಕ್ಕೆ) ತೊಡಗಿಸಿಕೊಳ್ಳಬೇಕು ಮತ್ತು ಇದು ಒಬ್ಬ ಸಾಲಗಾರರಿಗೆ ಗರಿಷ್ಠ 1 ಕೋಟಿ ಮಿತಿಯಲ್ಲಿರಬೇಕು.ಇದನ್ನು ದಿನಾಂಕ 31-03-2024 ರ ಒಳಗೆ ಅಳವಡಿಸಿಕೊಳ್ಳಬೇಕಾಗಿರುತ್ತದೆ. ದಿನಾಂಕ 31-03-2023 ಆಸ್ತಿ ಮತ್ತು ಜವಾಬ್ದಾರಿ ತಃಖ್ತೆ ಪ್ರಕಾರ ಇದು ಅಂದಾಜು 28% ಇರುತ್ತದೆ.ಇದನ್ನು ಶೇ 50%ಕ್ಕೆ ಹೆಚ್ಚಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವುದು ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ.

**ಸಮಜಾಯಿಷಿ:**
ಪರಿಶೋಧಕರ ಅಂಕಿ ಅಂಶವನ್ನು ಗಮನಿಸಲಾಗಿದ್ದು, ಕ್ರಮವಿಡಲಾಗುವುದು.

ಸಾಲ ವಿತರಣೆ ಮತ್ತು ಸಾಲ ವಸೂಲಾತಿ ಗುರಿಗಳನ್ನು ವಾಸ್ತವಿಕ ನೆಲೆಯ ಮೇಲೆ ಗುರುತಿಸಬೇಕಾಗಿದ್ದು, ಅದನ್ನು ಆಡಳಿತ ಮಂಡಳಿ ಮನಗಾಣಬೇಕಾಗಿದೆ.

ಕ್ಲಿಷ್ಟಕರವಾದ ದೀರ್ಘಾವಧಿಯ ಹಳೆ ಬಾಕಿಗಳ ವಸೂಲಾತಿಗೆ ಆದ್ಯ ಗಮನ ನೀಡಬೇಕಾಗಿದೆ.

ಉಪನಿಯಮ 68ರಂತೆ ಈ ಕೆಳಕಂಡ ಸಾಲಗಳನ್ನು ನೀಡಲು ಅವಕಾಶವಿರುತ್ತದೆ.

1) ಜಾಮೀನು ಸಾಲ
2) ಚರ ಮತ್ತು ಸ್ಥಿರ ಸ್ವತ್ತುಗಳ ಆಧಾರ ಸಾಲ
3) ಸರ್ಕಾರಿ / ಅರೆಸರ್ಕಾರಿ ಭದ್ರತೆ ಪತ್ರಗಳ, ಉಗ್ರಾಣ ರಸೀದಿಗಳ ಆಧಾರದ ಮೇಲೆ ಸಾಲ
4) ಚಿನ್ನಾಭರಣ ಆಧಾರ ಸಾಲ.

ಬಿ **<u>ಸಾಲ ಮಂಜೂರಾತಿ/ ವಿತರಣೆ</u>**
ಅಧಿಕಾರ ಪ್ರತ್ಯಾಯೋಜನೆ/ ಪ್ರಾಧಿಕಾರದ ವಿವಿಧ ಹಂತಗಳು (authority at various levels) ಪ್ರಾಧಿಕಾರದ ಮಿತಿ ಹಾಗೂ ಸಾಲ ಮಂಜೂರಾತಿಯ ನಿಬಂಧನೆಗಳ ಪಾಲನೆಯ ನಂತರ ಸಾಲವನ್ನು ವಿತರಿಸಲಾಗಿದೆಯೇ?

ಉಪನಿಯಮ 67ರಂತೆ ಪ್ರತಿ ವರ್ಷವು ಸಾಲ ನೀಡಿಕೆಯ ಸಂಬಂಧ ಸಾಲದ ನೀತಿಗಳನ್ನು ರೂಪಿಸಲು ತಿಳಿಸಲಾಗಿದೆ. ಪ್ರಸಕ್ತ ಸಾಲಿಗೆ ಬ್ಯಾಂಕು ದಿ.27-06-2022 ರಂದು ಸಾಲದ ನೀತಿಯನ್ನು ಅನುಮೋದಿಸಿದೆ. ಪ್ರಸಕ್ತ ಸಾಲಿನಲ್ಲಿ ಚಿನ್ನಾಭರಣ ಸಾಲಗಳ ಮೇಲೆ ರೂ 10.00 ಲಕ್ಷಗಳ ವರೆಗೆ ಶಾಖಾ ವ್ಯವಸ್ಥಾಪಕರು ಹಾಗು ಜಾಮೀನು ಸಾಲ, ಸರ್ಕಾರಿ / ಅರೆಸರ್ಕಾರಿ ಭದ್ರತೆ ಸಾಲ, ಇವುಗಳ ಸಂಬಂಧ ರೂ.1 ಲಕ್ಷಗಳ ವರೆಗೆ ಸಾಲವನ್ನು ಬ್ಯಾಂಕಿನ ಶಾಖಾ ವ್ಯವಸ್ಥಾಪಕರು, ರೂ. 2 ಲಕ್ಷಗಳವರೆಗೆ ಉಪ ಪ್ರಧಾನ ವ್ಯವಸ್ಥಾಪಕರು ಹಾಗೂ ರೂ.3 ಲಕ್ಷಗಳವರೆಗೆ ಸಾಲವನ್ನು ಪ್ರಧಾನ ವ್ಯವಸ್ಥಾಪಕರು ನೀಡಿರುತ್ತಾರೆ.

ಈ ಮಿತಿಗಿಂತ ಮೇಲ್ಪಟ್ಟ ಎಲ್ಲಾ ಸಾಲಗಳನ್ನು ಸಾಲದ ಉಪಸಮಿತಿಯ ಪರಿಶೀಲನೆಗೆ ಒಳಪಡಿಸಿ ಅದರ ಅನುಮೋದನೆ ನಂತರ ಆಡಳಿತ ಮಂಡಳಿಯ ಸ್ಥಿರೀಕರಣ ಪಡೆಯಲಾಗಿರುತ್ತದೆ.

| | |
|---|---|
| ಸಿ | **ದಾಖಲೀಕರಣ ಸಂಗ್ರಹಣೆ (Documentation)** |
| | ಸಾಲ ಮಂಜೂರಾತಿ ಆದೇಶಗಳಲ್ಲಿನ ನಿಬಂಧನೆಗಳಂತೆ ದಾಖಲೆಗಳನ್ನು ಪಡೆದಿರುವುದನ್ನು ಖಚಿತಪಡಿಸಿ ಕೊಳ್ಳುವುದು, ದಾಖಲೆಗಳ ಸ್ವರೂಪ, ಈ ಸಂಬಂಧ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ನ್ಯೂನತೆಗಳು ಹಾಗೂ ಇವುಗಳ ನಿವಾರಣೆಗೆ ಸಲಹೆಗಳು. ಜಂಟಿ/ ಸಹಕಾರ ಕೂಟ ಸಾಲಗಳ ದಾಖಲೆಗಳ ಸಂಗ್ರಹಣೆಯ ಪದ್ಧತಿ. (documentation of consortium advances)<br><br>ಪಡೆಯಲಾಗಿದೆ. |
| ಡಿ | **ದಾಖಲೆಗಳ ನವೀಕರಣ/ಪುನರ್ ಪರಿಶೀಲನೆ/ ಮುನ್ನೆಚ್ಚರಿಕೆ/ ಮೇಲ್ವಿಚಾರಣೆ:** |
| 1 | ಸಾಲಗಳ ಬಾಕಿಗಳ ನಿಯತಕಾಲಿಕ ದೃಢೀಕರಣ<br><br>ಸಾಲ ಮಂಜೂರಾತಿ / ವಿತರಣೆಗೆ ಮೊದಲು ಸಾಲಗಾರನ ಸಾಲ ಪಡೆಯುವ ಸಾಮರ್ಥ್ಯ ಹಾಗು ಮರುಪಾವತಿ ಸಾಮರ್ಥ್ಯದ ಅವಲೋಕನೆ, ಸಾಲ ವಿತರಣೆಯ ನಂತರ ಸೂಕ್ತ ಮೇಲುಸ್ತುವಾರಿಗೆ (Pre-sanction appraisal and Post-sanction supervision) ಸಂಬಂಧಿಸಿದ ಮಾನದಂಡಗಳನ್ನು ರಚಿಸಿಕೊಂಡು ಅದರಂತೆ ಬ್ಯಾಂಕು ಕಾರ್ಯ ನಿರ್ವಹಿಸಬೇಕಾಗಿದೆ. |
| 2 | ಸಾಲಗಾರರಿಂದ ದಾಸ್ತಾನಿನ ಬಗ್ಗೆ ನಿಯತ ಮಾಹಿತಿ, ಅವರ ಆಸ್ತಿ-ಜವಾಬ್ದಾರಿಗಳ ಬಗ್ಗೆ ಮಾಹಿತಿ ಸ್ವೀಕೃತಿ ಯಾಗುತ್ತಿರುವ ಬಗ್ಗೆ.<br><br>ಪಡೆಯಲಾಗುತ್ತಿದೆ. |
| 3 | ರೂ.10 ಲಕ್ಷಗಳಿಗಿಂತ ಹೆಚ್ಚಿನ ಸಾಲ ಪಡೆದ ಸಾಲಗಾರರಿಂದ ಪರಿಶೋಧನೆಯಾದ ಲೆಕ್ಕಗಳನ್ನು (Audited Accounts) ಪಡೆದಿರುವ ಬಗ್ಗೆ.<br><br>ಆರ್‌ಬಿಐ ಸುತ್ತೋಲೆ UBD.BPD.(PCB). MC.NO.1 /13.05.000/2013-14 DTD.01.07.2013- Master Circular – Exposure Norms and Statutory/ Other Restrictions – UCBs ರನ್ವಯ ರೂ. 10 ಲಕ್ಷಗಳಿಗಿಂತ ಮೇಲ್ಪಟ್ಟ ಸಾಲ ಪ್ರಕರಣಗಳಲ್ಲಿ ಸಾಲಗಾರರಿಂದ ಶಾಸನಬದ್ಧ ಸನ್ನದು ಲೆಕ್ಕಿಗರಿಂದ ಪರಿಶೋಧನೆಯಾದ ಆರ್ಥಿಕ ತ:ಖ್ತೆಗಳನ್ನು ಪಡೆಯಬೇಕಾಗಿರುತ್ತದೆ, ವರದಿ ಸಾಲಿನಲ್ಲಿ ಲೆಕ್ಕ ಪರಿಶೋಧನಾ ವೇಳೆಯಲ್ಲಿ ಗಮನಿಸಿದ ಕೆಲವು ಖಾತೆಗಳಲ್ಲಿ ನಿಗಧಿತ ಕಾಲಕಾಲಕ್ಕೆ ಪಡೆಯದೆ ಇರುವುದನ್ನು ಗಮನಿಸಿದ್ದು, ಮತ್ತು ಪರಿಶೋಧಿತ ಪತ್ರಗಳನ್ನು ಪಡೆಯಲು ಸೂಚಿಸಲಾಗಿದೆ.<br><br>**ಸಮಜಾಯಿಷಿ:**<br>ಬ್ಯಾಂಕಿನಲ್ಲಿ ರೂ. 10.00 ಲಕ್ಷಕ್ಕೂ ಮೇಲ್ಪಟ್ಟ ಸಾಲ ಸೌಲಭ್ಯ ನೀಡುವಾಗ ಸನ್ನದು ಲೆಕ್ಕಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಲೆಕ್ಕ ಪತ್ರಗಳನ್ನು ಕಡ್ಡಾಯವಾಗಿ ಪಡೆಯಲಾಗುತ್ತಿದ್ದು, ಕೆಲವು ಪ್ರಕರಣಗಳಲ್ಲಿ ತೆರಿಗೆ ಸಲಹೆಗಾರರಿಂದ ಪರಿಶೋಧಿಸಲ್ಪಟ್ಟ ಲೆಕ್ಕ ಪತ್ರಗಳನ್ನು ಪಡೆದಿದ್ದು, ಅದಾಗ್ಯೂ ಪರಿಶೋಧಕರ ಸಲಹೆಯಂತೆ ಕಾಲ ಕಾಲಕ್ಕೆ ಸನ್ನದು ಲೆಕ್ಕ ಪರಿಶೋಧಕರಿಂದ ದೃಢೀಕರಿಸಲಾದ ಲೆಕ್ಕ ಪತ್ರಗಳನ್ನು ಪಡೆಯಲು ಕ್ರಮವಿಡಲಾಗುವುದು. |
| 4 | ಈ ಮೇಲಿನ ಮಾಹಿತಿಗಳನ್ನು ಪಡೆಯುವ ಬಗ್ಗೆ ಅನುಸರಿಸಿರುವ ಪದ್ಧತಿ ಹಾಗೂ ಇದರ ಹಿಂಬಾಲಿಕೆ (Follow-up) ಮತ್ತು ಸಂರಕ್ಷಣೆ ಬಗ್ಗೆ. |

ಬ್ಯಾಂಕು ಸಾಲ ನೀತಿಯನ್ನು ರೂಪಿಸಿದ್ದು, ಬ್ಯಾಂಕಿನ ಉಪನಿಯಮ 67, 68 ಹಾಗೂ ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಗಳನ್ವಯ ಅಗತ್ಯ ಮಾಹಿತಿ, ದಾಖಲೆ ಪಡೆದು ಸಾಲಗಳನ್ನು ನೀಡಲಾಗುತ್ತದೆ.

5 ದಾಸ್ತಾನು, ಉಪಕರಣಗಳು, ಯಂತ್ರೋಪಕರಣ ಹಾಗೂ ಇತರೆ ಭದ್ರತೆಗಳ ಕಾಲಕಾಲದ ಭೌತಿಕ ಪರಿಶೀಲನೆ ಮತ್ತು ತನಿಖಾ ಪದ್ಧತಿಯ ಬಗ್ಗೆ.

ಅಡವು ಮಾಡಿಕೊಂಡ ದಾಸ್ತಾನು, ಉಪಕರಣಗಳು, ಯಂತ್ರೋಪಕರಣ ಹಾಗು ಇತರೆ ಭದ್ರತೆಗಳಿಗೆ ಸಂಬಂಧಿಸಿದಂತೆ ಭೌತಿಕ ಪರಿಶೀಲನೆ ಮತ್ತು ತನಿಖಾ ಪದ್ಧತಿ ನಿಯಮಿತವಾಗಿ ಮಾಡುತ್ತಿಲ್ಲ.

**ಸಮಜಾಯಿಷಿ:**
ಕಂಡಿಕೆ ಸಂಖ್ಯೆ 11(3) ರಲ್ಲಿ ವಿವರಣೆ ನೀಡಲಾಗಿದೆ.

6 ತನಿಖಾ ವರದಿಗಳು ಹಾಗೂ ಅವುಗಳ ಪಾಲನೆ ಬಗ್ಗೆ

ಸಾಲಗಳ ಅರ್ಜಿಗಳನ್ನು ಹೊಸದಾಗಿ ಪಡೆದು ಪರಿಶೀಲಿಸಿದಾಗ ಅಥವಾ ನವೀಕರಿಸಿದಾಗ ಮಾತ್ರ ತನಿಖಾ ವರದಿಗಳನ್ನು ಪಡೆದು ನಿರ್ವಹಿಸಲಾಗಿದೆ.

7 ರಿಸರ್ವ್ ಬ್ಯಾಂಕ್‌ನ ಮಾರ್ಗ ಸೂಚಿಗಳನ್ವಯ ಸಾಲಗಳ ಸ್ವಾಸ್ಥ್ಯದ ಸಂಹಿತೆಯ ನಿಗದಿಪಡಿಸುವಿಕೆಯ ಬಗ್ಗೆ (Allotment Health Code of RBI)

ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಯಂತೆ ದಿನಾಂಕ 31.03.2023 ಕ್ಕೆ ಬಾಕಿ ಇರುವ ಸಾಲಗಳನ್ನು ಉತ್ಪಾದಕ ಮತ್ತು ಅನುತ್ಪಾದಕ ಸಾಲಗಳೆಂದು ಗುರ್ತಿಸಿ ಆರ್ಥಿಕ ತಃಖ್ತೆಗಳಲ್ಲಿ ನಿಗಧಿ ಪಡಿಸಿದ ದರದಲ್ಲಿ ಅವಕಾಶ ಕಲ್ಪಿಸಲಾಗಿದೆ.

8 ಹೆಚ್ಚಿಸಿದ ಸಾಲದ ಮಿತಿಗಳ ವಿಸ್ತರಣೆಯನ್ನೊಳಗೊಂಡಂತೆ ಸಾಲಗಳ ವಿಮರ್ಶೆ, ಸಾಲದ ಸ್ವಾಸ್ಥ್ಯದ ಸಂಹಿತೆಯ ವರ್ಗೀಕರಣ ಇತ್ಯಾದಿ.

ಹೆಚ್ಚಿಸಿದ ಸಾಲದ ಮಿತಿಗಳು ವಿಸ್ತರಣೆಗೊಂಡಂತೆ ಅಗತ್ಯ ಪೂರಕ ದಾಖಲೆಗಳನ್ನು ಭದ್ರತೆಗಾಗಿ ಪಡೆದು ಪರಿಶೀಲಿಸಲಾಗಿದೆ.

9 ಸೌಲಭ್ಯಗಳ ನವೀಕರಣ
ಓ.ಡಿ.ಸಾಲಗಳನ್ನು ಮಾತ್ರ ನವೀಕರಿಸಲಾಗುತ್ತದೆ.

10 ಕೈಗಾರಿಕೆಗಳನ್ವಯ, ಸಾಲದ ಅವಧಿಯನ್ವಯ ಸಾಲದ ಪರಿಪಕ್ವತೆಯನ್ವಯ ಸಾಲಗಳ ಸಮಗ್ರ ಮೇಲ್ವಿಚಾರಣೆ ಬಗ್ಗೆ.
ಯಾವುದೇ ಕೈಗಾರಿಕೆಗೆ ಸಾಲ ನೀಡುತ್ತಿಲ್ಲ.

ಇ **ಕರಡು ಮತ್ತು ಸಂಶಯಾಸ್ಪದ ಸಾಲಗಳು:**

1 ಕರಡು ಮತ್ತು ಸಂಶಯಾಸ್ಪದ ಸಾಲಗಳ ಮಾಹಿತಿಗಳನ್ನು ಕಲೆ ಹಾಕುವಲ್ಲಿ ಅಳವಡಿಸಲಾದ ಪರಿಣಾಮಕಾರಿ ಪದ್ಧತಿ ಮತ್ತು ಅವಕಾಶ ಕಲ್ಪಿಸುವಲ್ಲಿನ ಕೊರತೆಯ ಬಗ್ಗೆ:

ಅನುತ್ಪಾದಕ ಆಸ್ತಿಗಳ ವರ್ಗೀಕರಣ ಮತ್ತು ಅಗತ್ಯ ಅವಕಾಶ ಕಲ್ಪಿಸಲಾಗಿದೆ.

2 ಕರಡು ಮತ್ತು ಸಂಶಯಾಸ್ಪದ ಸಾಲಗಳ ಗುರುತಿಸುವಿಕೆ, ಪ್ರಮಾಣ ಹಾಗೂ ಅವಶ್ಯಕ ಪ್ರಮಾಣದ ಅವಕಾಶ ಕಲ್ಪಿಸುವಿಕೆ?

ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಯ ಅನ್ವಯ ಅನುತ್ಪಾದಕ ಆಸ್ತಿಗಳನ್ನು ಗುರ್ತಿಸಲಾಗಿದೆ. 31/03/2023ಕ್ಕೆ ಹಿಂದಿನ ಸಾಲಗಳದ್ದೂ ಸೇರಿ ಬ್ಯಾಂಕ್ ಗಳಿಸಿದ ಲಾಭದಿಂದ ತೆಗೆದ ಕರಡು ನಿಧಿ ರೂ.1502.04 ಲಕ್ಷಗಳು ಹಾಗೂ ಅನುತ್ಪಾದಕ ಆಸ್ತಿಗಳ ಮೇಲಿನ ಅವಕಾಶ ರೂ.2097.96 ಲಕ್ಷಗಳು ಸೇರಿದಂತೆ ಒಟ್ಟು ರೂ.3600.00 ಲಕ್ಷಗಳು ಕರಡು ನಿಧಿಯನ್ನು ಬ್ಯಾಂಕ್ ಹೊಂದಿರುತ್ತದೆ.

3 ಸಾಲದ ಮೇಲಿನ ಬಡ್ಡಿಯನ್ನು ಸಾಲಕ್ಕೆ ಸೇರಿಸುವ ಕ್ರಮವನ್ನು ಕೈಬಿಡುವ ಹಾಗೂ ಅದರ ಪಾಲನೆ ಬಗ್ಗೆ.

ಮೀರೆಳೆತ ಸಾಲಗಳನ್ನು ಹೊರತುಪಡಿಸಿ, ಇನ್ನಾವುದೇ ಸಾಲಕ್ಕೆ ಆಕರಿಸಿದ ಬಡ್ಡಿಯನ್ನು ಸೇರಿಸುತ್ತಿಲ್ಲ.

4 ಭದ್ರತೆಗಳ ವಸೂಲಾಗಬಲ್ಲ ಮೌಲ್ಯಗಳನ್ನು ತಿಳಿದು ಕೊಳ್ಳುವುದು, ಜಾಮೀನುದಾರರಿಂದ ವಸೂಲಾಗತಕ್ಕ ಸಾಧ್ಯತೆಗಳು ಪುನ:ಸ್ವಷ್ಟೀಕರಣದ (Rehabilitation) ಕಾರ್ಯಕ್ರಮದ ಫಲಪ್ರದತೆಯ ಮೌಲ್ಯಮಾಪನ DICGC/ECGC ಯನ್ನೊಳಗೊಂಡಂತೆ.

ಬ್ಯಾಂಕಿನಲ್ಲಿ ಯಾವುದೇ ಸಾಲವನ್ನು ಕರಡು ಸಾಲವೆಂದು ಪರಿಗಣಿಸಿಲ್ಲ. ಆದ್ದರಿಂದ ಯಾವುದೇ Rehabilitation ಕಾರ್ಯಕ್ರಮ ಹೊಂದಿಲ್ಲ.

5 ಉಚಿತ ಪ್ರಾಧಿಕಾರದಡಿ ಮಾಡುವ ಮನ್ನಾ/ ಕಲ್ಪಿಸಲಾದ ಅವಕಾಶಗಳು

ಪ್ರಸಕ್ತ ಸಾಲಿಗೆ ಯಾವುದೂ ಇರುವುದಿಲ್ಲ.

6 ಸಾಲ ವಸೂಲಾತಿಯ ಕಾರ್ಯ ವಿಧಾನ, ದಾವಾ ಹಾಗೂ ಡಿಕ್ರಿ ಪ್ರಕರಣಗಳನ್ನೊಳಗೊಂಡಂತೆ

1) 2022–23ನೇ ಸಾಲಿನಲ್ಲಿ ಬ್ಯಾಂಕು ಸಾಲದ ನೀತಿಯನ್ನು ಪರಿಷ್ಕರಿಸಿ ಅನುಮೋದಿಸಿದೆ.

2) ಉಪನಿಯಮ 88ರಂತೆ ನೀಡಿದ ಸಾಲ ಸುಸ್ತಿಯಾದ 6 ತಿಂಗಳ ಅವಧಿಯೊಳಗೆ ಕಾನೂನು ಬದ್ಧ ಕ್ರಮ ತೆಗೆದುಕೊಳ್ಳಬೇಕು.

3) ಆಡಳಿತ ಮಂಡಳಿಯು ತನ್ನ ಪ್ರತಿ ಮಾಸಿಕ ಸಭೆಯಲ್ಲಿ ಎನ್.ಪಿ.ಎ ಆದ, ದೊಡ್ಡ ಪ್ರಮಾಣದ ಸಾಲಗಳ ಅನೇಕ ಪ್ರಕರಣಗಳನ್ನು ಪರಿಶೀಲಿಸುತ್ತಿದೆ. ಕೆಲವು ಪ್ರಕರಣಗಳ ವಿರುದ್ಧ SARFAESI ಕಾಯಿದೆಯಡಿ ಕ್ರಮವಿಡಲು, ಕೆಲವು ಪ್ರಕರಣಗಳಲ್ಲಿ ಸಾಲಗಾರರು ಮರುಪಾವತಿಸುವ ಬಗ್ಗೆ ಭರವಸೆ ನೀಡಿರುವ ಹಿನ್ನಲೆಯಲ್ಲಿ, ಕಾದುನೋಡಿ ಅನುಸರಣಾ ಕ್ರಮವಿಡುವ ಬಗ್ಗೆ ನಿರ್ಣಯಿಸಲಾಗಿದೆ.

ಎಫ್ **<u>ದೊಡ್ಡ ಪ್ರಮಾಣ ಸಾಲ/ ಮುಂಗಡಗಳು:</u>**

ಈ ಸಾಲಗಳಲ್ಲಿ ಆಡಳಿತ ಮಂಡಳಿಯ ಗಮನ ಸೆಳೆಯ ಬಹುದಾದ ಮಹತ್ವದ, ಪ್ರತಿಕೂಲ ಸ್ವರೂಪದ ಪರಿಣಾಮಗಳ ಬಗ್ಗೆ ವಿಮರ್ಶೆ.

ಮುಂದಿನ ಕಂಡಿಕೆಗಳಲ್ಲಿ ವಿವರಿಸಿದೆ.

ಜಿ **ಸದಸ್ಯರ ಸಾಲ ಮತ್ತು ಮುಂಗಡಗಳು**

ಬ್ಯಾಂಕಿನ ಉಪ ನಿಯಮಗಳ ಪ್ರಕಾರ ಸದಸ್ಯರಿಗೆ ನೀಡಬಹುದಾದ ವಿವಿಧ ರೀತಿಯ ಸಾಲ, ಸಾಲಗಳ ಮಿತಿ, ಸಾಲಗಳ ಅವಧಿ ಬಗ್ಗೆ ವಿಮರ್ಶೆ.

ಉಪನಿಯಮ 71ರಂತೆ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳಿಗೆ ಒಳಪಟ್ಟು ಸಂಘದ ಆಡಳಿತ ಮಂಡಳಿಯು ಒಬ್ಬ ಅರ್ಹ ಸದಸ್ಯರಿಗೆ ನೀಡಬಹುದಾದ ಎಲ್ಲಾ ರೀತಿಯ ಸಾಲಗಳ ಮಿತಿಯನ್ನು ನಿಗಧಿಪಡಿಸಲು ತಿಳಿಸಲಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕು ಸುತ್ತೋಲೆ ಸಂಖ್ಯೆ DOR(PCB)BPDCIRNO10/13.05.000/ 2019–20 ದಿನಾಂಕ: 13/03/2020 ರಂತೆ, ಬ್ಯಾಂಕಿನ Tier–1 ಬಂಡವಾಳ ನಿಧಿಯ ಆಧಾರದ ಮೇಲೆ ಒಬ್ಬ ವ್ಯಕ್ತಿಗೆ ಶೇ.15% ರಷ್ಟು ಹಾಗೂ ಗುಂಪುಸಾಲಗಾರರಿಗೆ ಬಂಡವಾಳ ನಿಧಿಯ ಶೇ.25%ಕ್ಕೆ ಮೀರದಂತೆ ಸಾಲದ ಮಿತಿಯನ್ನು ನಿಗಧಿಗೊಳಿಸಿದೆ.

ಭಾರತೀಯ ರಿಜರ್ವ್ ಬ್ಯಾಂಕಿನ ದಿ.22–07–2021ರ ಸೂಚನೆಗಳ ಹಿನ್ನಲೆಯಲ್ಲಿ (ಬ್ಯಾಂಕಿಂಗ್ ನಿಯಂತ್ರಣಕಾಯಿದೆ ಕಲಂ 36(1)ರಡಿ) ಸಾಲದ ನೀತಿಯನ್ನು ಪರಿಷ್ಕರಿಸಿ (ವ್ಯಕ್ತಿಗಳಿಗೆ ಸಾಲದ ಮಿತಿ ರೂ.2.40 ಕೋಟಿ, ಗುಂಪುಗಳಿಗೆ ರೂ.4.00 ಕೋಟಿ) ದಿ.01–09–2022 ರಂದು ಜಾರಿಗೊಳಿಸಿದೆ.

2 ವರದಿ ಸಾಲಿನಲ್ಲಿ ಆದ ಪ್ರತಿಯೊಂದು ಸಾಲದ ವ್ಯವಹಾರಗಳ ಬಗ್ಗೆ ಅಂಕಿ ಅಂಶಗಳ ವಿವರ ನೀಡುವುದು.

ಈ ಕೆಳಗಿನಂತೆ ಇರುತ್ತದೆ.

ರೂ. ಲಕ್ಷಗಳಲ್ಲಿ

| ಸಾಲಗಳ ಸ್ವರೂಪ | ಆರಂಭದ ಬಾಕಿ | ಪ್ರಸಕ್ತ ಸಾಲಿನಲ್ಲಿ ಸಾಲದ ವಿತರಣೆ | ಪ್ರಸಕ್ತ ಸಾಲಿನಲ್ಲಿ ಸಾಲ ವಸೂಲಾತಿ | ವರ್ಷಾಂತ್ಯಕ್ಕೆ ಬಾಕಿ | ಯಾದಿಯ ಮೊತ್ತ | ಅಂತರ ಶೇಕಡಾವಾರು ಪ್ರಮಾಣ + ಏರಿಕೆ/ – ಇಳಿಕೆ |
|---|---|---|---|---|---|---|
| ಜಾಮೀನು ಸಾಲ | 1718.53 | 0.03 | 606.07 | 1,112.49 | 1,112.49 | –35.26 |
| ಓವರ್ ಡ್ರಾಫ್ಟ್ | 780.47 | 545.09 | 454.61 | 870.95 | 870.95 | 11.59 |
| ಠೇವಣಿ ಆಧಾರ ಸಾಲ | 560.99 | 980.79 | 1095.30 | 446.48 | 446.48 | –20.41 |
| ಚಿನ್ನಾಭರಣ ಆಧಾರ ಸಾಲ | 312.80 | 439.11 | 454.93 | 296.98 | 296.98 | –5.06 |
| ಭದ್ರತಾ ಸಾಲ | 16786.56 | 3435.23 | 3366.25 | 16,855.54 | 16,855.54 | 0.41 |
| ವಾಹನಾಧಾರಿತ ಸಾಲ | 29.20 | 6.68 | 13.04 | 22.84 | 22.84 | –21.78 |
| ಯಂತ್ರೋಪಕರಣ ಸಾಲ | 41.65 | – | 32.52 | 9.13 | 9.13 | –78.07 |
| ಸಿಬ್ಬಂದಿ ಸಾಲ | 412.28 | 301.00 | 325.41 | 387.87 | 387.87 | –5.92 |
| ಬಡವರ ಬಂಧು ಸಾಲ | 0.06 | – | 0.02 | 0.04 | 0.04 | – |
| **ಒಟ್ಟು ರೂ** | **20642.54** | **5707.93** | **6348.15** | **20,002.32** | **20,002.32** | **–3.10** |

3 ವರ್ಷಾಂತ್ಯಕ್ಕೆ ಬಾಕಿ ಇದ್ದ ಸಾಲಗಳನ್ನು ಹಿಂದಿನ ಸಾಲಿನ ಅವಧಿಗೆ ಹೋಲಿಸಿ ಹೆಚ್ಚು / ಕಡಿಮೆ ಆದ ಬಗ್ಗೆ ವಿಮರ್ಶೆ.

ಪ್ರಸಕ್ತ ಸಾಲಿನಲ್ಲಿ ಒಟ್ಟಾರೆ ಶೇ3.10ರಷ್ಟು ಸಾಲದ ಬಾಕಿ ಕಡಿಮೆಯಾಗಿರುತ್ತದೆ.ಹಿಂದಿನ ಸಾಲಿಗೆ ಹೋಲಿಸಿದಾಗ ಸಾಲ ವಿತರಣೆಯಲ್ಲಿ ಶೇ 7.25% ರಷ್ಟು ಹೆಚ್ಚಾಗಿರುತ್ತದೆ. ಹಾಗೂ ಸಾಲ ವಸೂಲಾತಿ ಪ್ರಮಾಣದಲ್ಲಿ ಹಿಂದಿನ ಸಾಲಿಗೆ ಹೋಲಿಸಿದಾಗ ಶೇ28.60ರಷ್ಟು ಕಡಿಮೆಯಾಗಿರುತ್ತದೆ.

ರೂ ಲಕ್ಷಗಳಲ್ಲಿ

| 2020–21 | 2021–22 | 2022–23 |
|---|---|---|
| 24211.73 | 20642.54 | 20002.32 |

ಕಳೆದ ಸಾಲಿಗೆ ಹೋಲಿಸಿದಾಗ ಬ್ಯಾಂಕಿನ ಸಾಲದ ಪ್ರಮಾಣವು ಶೇ.3.10 ರಷ್ಟು ಇಳಿಕೆಯಾಗಿರುತ್ತದೆ. ದಿನಾಂಕ 31.03.2023ಕ್ಕೆ ಬ್ಯಾಂಕು ಹೊಂದಿರುವ ಠೇವಣಿಗಳು ಹಾಗು ಸಾಲಗಳ ಅನುಪಾತ ಶೇ. 49.30% ರಷ್ಟಿದೆ.

4 ಆಡಳಿತ ಮಂಡಳಿಯವರು ಪಡೆದಿರುವ ಸಾಲ ಸುಸ್ತಿ / ಚಾಲ್ತಿಯಲ್ಲಿರುವ ಬಗ್ಗೆ.

ದಿ.25.01.2020ರ ಚುನಾವಣೆಯಲ್ಲಿ ಚುನಾಯಿತರಾದ ಈ ಕೆಳಕಂಡ ನಿರ್ದೇಶಕರು, ಅವರು ಚುನಾಯಿತರಾಗುವ ಮೊದಲೇ ಬ್ಯಾಂಕಿನಿಂದ ಪಡೆದಿದ್ದ ಸಾಲ ಮತ್ತು ಸುಸ್ತಿ ವಿವರಗಳು ಈ ಕೆಳಕಂಡಂತಿದೆ.

**(ರೂ. ಲಕ್ಷಗಳಲ್ಲಿ)**

| **ಕ್ರ. ಸಂ.** | **ನಿರ್ದೇಶಕರ ಹೆಸರು** | **ಸಾಲದ ತರಹೆ** | **ಪಡೆದ ಸಾಲ** | **ದಿ.31.03.2023ಕ್ಕೆ ಬಾಕಿ** | **ಷರಾ** |
|---|---|---|---|---|---|
| 1 | ಶ್ರೀ. ನಂಜೇಗೌಡ ನಿರ್ದೇಶಕರು | ಆಧಾರ ಸಾಲ | 7.00 | 1.30 | ಸುಸ್ತಿ ಇಲ್ಲ |
| 2 | ಶ್ರೀಮತಿ ಮಹಾಲಕ್ಷ್ಮಿ ನಿರ್ದೇಶಕರು | ವೈಯಕ್ತಿಕ ಸಾಲ | 2.00 | 0.51 | ಸುಸ್ತಿ ಇಲ್ಲ |

ಸಾಲ ಸುಸ್ತಿಯಾಗಿರುವ ಆಡಳಿತ ಮಂಡಳಿ ಸದಸ್ಯನು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ಕಲಂ 29 ಸಿ(ಎ) ರನ್ವಯ ಆಡಳಿತ ಸದಸ್ಯರೆಂದು ಮುಂದುವರೆಯಲು ಅನರ್ಹರಾಗಿರುವ ಕಾರಣ ಇಂತಹ ಸದಸ್ಯರ ವಿರುದ್ಧ ಕ್ರಮ ಕೈಕೊಳ್ಳುವಂತೆ ಇಲಾಖಾ ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲು ವರದಿಯಲ್ಲಿ ಸೂಚಿಸಲಾಗಿದೆಯೇ?

ಯಾವ ನಿರ್ದೇಶಕರು ಸುಸ್ತಿದಾರರಾಗಿರುವುದಿಲ್ಲ.

5 ಸಾಲದ ಕುಳುವಾರು ತಃಖ್ತೆಗಳು ಆಸ್ತಿ ಜವಾಬ್ದಾರಿ ತಃಖ್ತೆಗೆ ತಾಳೆ ಇರುವ ಬಗ್ಗೆ.

ತಾಳೆ ಇದೆ.

6 ಮುದ್ದತ್ತ ಮೀರಿದ ಮತ್ತು ಮುದ್ದತ್ತ ಮೀರುವ ಅವಧಿ ಪೂರ್ವದಲ್ಲಿಯೇ ಸಾಲಗಳನ್ನು ನವೀಕರಿಸಲಾಗುತ್ತಿದೆಯೇ? ಈ ರೀತಿ ನವೀಕರಿಸುವುದಕ್ಕೆ ಬೈಲಾದಲ್ಲಿ ಅವಕಾಶ ವಿರುವುದೋ ?

ಇಂತಹ ಪ್ರಕರಣಗಳು ಇರುವುದಿಲ್ಲ.

7 ವರದಿ ಸಾಲಿನಲ್ಲಿ ಒಟ್ಟು ನವೀಕರಿಸಿದ ಸಾಲದ ಪ್ರಕರಣಗಳು ಮತ್ತು ಮೊತ್ತ.
ಅನ್ವಯಿಸುವುದಿಲ್ಲ.

8 ಹಿಂದಿನ ಸಾಲದ ಬಾಕಿ ಮತ್ತು ಬಡ್ಡಿಯನ್ನು ಜಮಾ ಹಿಡಿದ ಅಷ್ಟೇ ಮೊತ್ತಕ್ಕೆ ಹೊಸ ಸಾಲ ಎಂದು ಖರ್ಚು ಹಾಕಿರುವ ಪ್ರಕರಣಗಳಿರುತ್ತಿವೆಯೇ ವಿವರಿಸಿ.

ಯಾವುದೇ ಪ್ರಕರಣ ಕಂಡುಬಂದಿಲ್ಲ.

9 ಹಳೇ ಸಾಲದ ಬಾಕಿಗಿಂತ ಹೆಚ್ಚುವರಿ ಸಾಲ ಮಂಜೂರು ಮಾಡಿ ಹಳೇ ಸಾಲದ ಬಾಕಿ ಜಮೆ ಪಡೆದಿರುವ ಪ್ರಕರಣಗಳಿದ್ದಲ್ಲಿ ವಿಮರ್ಶಿಸಿ.

ಅಂತಹ ಪ್ರಕರಣಗಳು ಯಾವುದೂ ಗಮನಕ್ಕೆ ಬಂದಿಲ್ಲ

10 ಬಂಗಾರ ಅಡುವಿನ ಸಾಲ ನೀಡಿದಲ್ಲಿ ಸಂಸ್ಥೆಯಲ್ಲಿಯ ಅಡವಿನ ಬಂಗಾರದ ಆಭರಣದ ಬಗ್ಗೆ ಭದ್ರತೆ ಹಾಗೂ ವಿಮೆ ಮಾಡಿಸಿರುವ ಮೊತ್ತ.

ಬ್ಯಾಂಕಿನಲ್ಲಿ ಒತ್ತೆ ಇಟ್ಟ ಚಿನ್ನಾಭರಣಗಳನ್ನು ಶಾಖೆಗಳ ಶಾಖಾ ವ್ಯವಸ್ಥಾಪಕರು ಹಾಗು ಲೆಕ್ಕಿಗರ ಜಂಟಿ ಅಭಿರಕ್ಷೆಯಲ್ಲಿ ಇಟ್ಟುಕೊಳ್ಳಲಾಗಿರುತ್ತದೆ. ಪ್ರಸಕ್ತ ಸಾಲಿಗೆ ರೂ. 12.50 ಕೋಟಿಯಷ್ಟು ವಿಮೆ ಮಾಡಿಸಿದ್ದು, ವರ್ಷಾಂತ್ಯದವರೆಗು ಚಾಲ್ತಿಯಲ್ಲಿರುತ್ತದೆ.

11 ಆಧಾರ ಮತ್ತು ಆಧಾರ ರಹಿತ ಸಾಲಗಳ ಪ್ರಮಾಣವನ್ನು ವಿಶ್ಲೇಷಿಸುವುದು.
ದಿ.31.03.2023ರ ಅಂತ್ಯಕ್ಕೆ ರೂ.1,114.14ಲಕ್ಷ ಭದ್ರತೆ ಇಲ್ಲದ ಸಾಲ ಹಾಗೂ ರೂ.18,888.18 ಲಕ್ಷಗಳ ಭದ್ರತೆ ಇರುವ ಸಾಲಗಳು ಬಾಕಿ ಇರುತ್ತದೆ. ಭದ್ರತೆ ಇಲ್ಲದ ಸಾಲವು ಒಟ್ಟು ಸಾಲದ ಶೇ.5.57% ರಷ್ಟಿದೆ. ಹಿಂದಿನ ಸಾಲಿನ ಅಂತ್ಯಕ್ಕೆ ಇದ್ದ ಬ್ಯಾಂಕಿನ ನಿವ್ವಳ ಆಸ್ತಿಗಳ ಮೊತ್ತ ರೂ.56,627.97ಲಕ್ಷಗಳಿಗೆ ಭದ್ರತೆ ಇಲ್ಲದ ಸಾಲಗಳ ಪ್ರಮಾಣ ಶೇ.1.97%ರಷ್ಟಿದ್ದು ಭಾರತೀಯ ರಿಸರ್ವ್ ಬ್ಯಾಂಕಿನವರು ನಿಗಧಿಪಡಿಸಿದ ಶೇ.10%ರ ಮಿತಿಯೊಳಗೆ ಇರುತ್ತದೆ.

12 ವರದಿ ಸಾಲಿನಲ್ಲಿ ವಿತರಿಸಿದ ಸಾಲಗಳ ಅರ್ಜಿಗಳನ್ನು ಪರಿಶೀಲಿಸಿ ಗುರುತರ ನ್ಯೂನತೆಗಳನ್ನು ಪ್ರತ್ಯೇಕವಾಗಿ ವಿವರ ನಮೂದಿಸುವುದು. ಅದರಂತೆ ಸಂಘಸಂಸ್ಥೆಗಳಿಗೆ ನೀಡಿರುವ ಸಾಲಗಳ ಕುರಿತು ಪಡೆದಿರುವ ದಾಖಾಲಾತಿಗಳಲ್ಲಿರುವ ನ್ಯೂನತೆಗಳ ಬಗ್ಗೆ ವಿವರವಾಗಿ ವಿಮರ್ಷಿಸುವುದು.

ಮುಂದಿನ ಕಂಡಿಕೆಯಲ್ಲಿ ವಿವರಿಸಿದೆ.

13 ಆಯ್ದ ಪ್ರಕರಣಗಳಲ್ಲಿ ಸಾಲದ ಮೇಲಿನ ಬಡ್ಡಿ ಲೆಕ್ಕಾಚಾರ ಪರಿಶೀಲಿಸಿ ಸರಿ/ತಪ್ಪು ಇರುವ ಬಗ್ಗೆ ಉಲ್ಲೇಖಿಸುವುದು.

2022-23ನೇ ಸಾಲಿಗೆ ಸಂಬಂಧಿಸಿದಂತೆ, ಬಡ್ಡಿ ಲೆಕ್ಕಾಚಾರವನ್ನು ಪರಿಶೀಲಿಸಿದ್ದು, ಕ್ರಮಬದ್ಧವಾಗಿರುವುದು ಕಂಡುಬಂದಿದೆ.

14 ಒಟ್ಟು ಸದಸ್ಯರ ಸಂಖ್ಯೆಗೆ ಬ್ಯಾಂಕಿನ ಸಾಲದ ವ್ಯವಹಾರದಲ್ಲಿ ಪಾಲ್ಗೊಂಡಿರುವ ಸದಸ್ಯರ ಶೇಕಡಾವಾರು ಲೆಕ್ಕಾಚಾರ ಹಾಕಿ ವಿಮರ್ಶಿಸುವುದು.

ಒಟ್ಟು ಸದಸ್ಯರ ಸಂಖ್ಯೆ 36091 ಅದರಲ್ಲಿ ಸಾಲ ಪಡೆದವರು 2473 ಸಾಲ ಪಡೆದವರ ಶೇಕಡವಾರು ಪ್ರಮಾಣ 6.85%.

15 ರೂ.20,000ಕ್ಕಿಂತ ಹೆಚ್ಚಿನ ಸಾಲದ ಮೊತ್ತಗಳನ್ನು ನಗದು ಪಾವತಿಸಿದ್ದಲ್ಲಿ ಉದಾಹರಣೆಯೊಂದಿಗೆ ವಿವರಿಸುವುದು.

ಯಾವುದೇ ಪ್ರಕರಣಗಳು ಕಂಡು ಬಂದಿರುವುದಿಲ್ಲ.

16 ಬ್ಯಾಂಕಿನಲ್ಲಿ ಸಾಲಕ್ಕೆ ಅರ್ಜಿ ಸಲ್ಲಿಸಿದ ಸದಸ್ಯರ ರಿಜಿಸ್ಟರ್ ಇಡಲಾಗಿದೆಯೇ? ವರದಿ ಸಾಲಿನಲ್ಲಿ ಅರ್ಜಿ ಸಲ್ಲಿಸಿದ ಸದಸ್ಯ ಸಂಖ್ಯೆ ಹಾಗೂ ಸಾಲ ವಿತರಿಸಿದ ಸದಸ್ಯರ ಸಂಖ್ಯೆಯನ್ನು ಗಮನಿಸಿ ವಿಶ್ಲೇಶಿಸುವುದು.

ಹೌದು. ವರದಿ ಸಾಲಿನಲ್ಲಿ 945 ಅರ್ಜಿಗಳು ಸ್ವೀಕೃತವಾಗಿದ್ದು, ಇದರಲ್ಲಿ 4 ಅರ್ಜಿಗಳು ತಿರುಸ್ಕೃತಗೊಂಡು ಉಳಿದ ಎಲ್ಲಾ ಅರ್ಜಿಗಳ ಸಾಲ ಮಂಜೂರಾಗಿದೆ.

17 ಸಂಶಯಾತ್ಮಕ ಮತ್ತು ಮುಳುಗುವ ಸಾಲದ ಬಗ್ಗೆ ವಿವರಿಸುವುದು.

ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಗಳ ಅನ್ವಯ ಅನುತ್ಪಾದಕ ಆಸ್ತಿಗಳನ್ನು ಗುರ್ತಿಸಿದ್ದು, ಸದರಿ ಸಾಲಗಳ ಸಂಬಂಧ ಅಗತ್ಯ ಅವಕಾಶವನ್ನು ಕಲ್ಪಿಸಲಾಗಿದೆ.

18 ಸಂಶಯಾತ್ಮಕ ಮತ್ತು ಮುಳುಗುವ ಸಾಲದ ಮೊತ್ತದ ಅನುಗುಣವಾಗಿ ಸಂಶಯಾತ್ಮಕ ಮತ್ತು ಮುಳುಗುವ ಸಾಲದ ನಿಧಿ ಇರುವುದೋ?

ಬ್ಯಾಂಕು ದಿ.31.03.2023ಕ್ಕೆ ರೂ. 1502.04 ಲಕ್ಷಗಳ ಕರಡು ಸಾಲದ ನಿಧಿಯನ್ನು ಕಾಯ್ದಿರಿಸಿದೆ. ಅಂತೆಯೆ ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಯ ಅನ್ವಯ ಅನುತ್ಪಾದಕ ಆಸ್ತಿಗಳನ್ನು ಗುರ್ತಿಸಿದ್ದು ರೂ. 2097.96 ಲಕ್ಷಗಳನ್ನು ಅನುತ್ಪಾದಕ ಆಸ್ತಿಗಳಿಗಾಗಿ ಅವಕಾಶ ಕಲ್ಪಿಸಿರುವುದು ಸೇರಿದಂತೆ ಸಾಲಿನ ಅಂತ್ಯಕ್ಕೆ ಒಟ್ಟು ರೂ. 3600.00 ಲಕ್ಷಗಳ ಅವಕಾಶ ಕಲ್ಪಿಸಿದೆ.

19 ವರದಿ ಸಾಲಿನಲ್ಲಿ ವಿತರಿಸಿದ ಸಾಲಗಳ ಅರ್ಜಿಗಳನ್ನು ಪರಿಶೀಲಿಸಿ ಗುರುತರ ನ್ಯೂನತೆಗಳನ್ನು ಪ್ರತ್ಯೇಕವಾಗಿ ವಿವರ ನಮೂದಿಸುವುದು. ಅದರಂತೆ ಸಂಘಸಂಸ್ಥೆಗಳಿಗೆ ನೀಡಿರುವ ಸಾಲಗಳ ಕುರಿತು ಪಡೆದಿರುವ ದಾಖಲಾತಿಗಳಲ್ಲಿರುವ ನ್ಯೂನತೆಗಳ ಬಗ್ಗೆ ವಿವರವಾಗಿ ವಿಮರ್ಷಿಸುವುದು.

ಮುಂದಿನ ಕಂಡಿಕೆಯಲ್ಲಿ ವಿವರಿಸಿದೆ.

20 ಲೆಕ್ಕ ಪರಿಶೋಧನಾ ಸೂಚನೆ (Audit Instruction No 1) ಸಂಖ್ಯೆ ಸಿಎಡಿ/ಎಎಫ್ಆರ್–1/ಎ.1, 81–82 ದಿನಾಂಕ : 04–07–1981 ರನ್ವಯ ಆಯ್ದ ಪ್ರಕರಣಗಳಲ್ಲಿ ಲೆಕ್ಕ ಪರಿಶೋಧನಾ ಕಾಲಕ್ಕೆ ಸಾಲಗಾರರ ಸಾಲದ ಖಾತೆಯಲ್ಲಿರುವ ಬಾಕಿಯನ್ನು ಸಾಲಗಾರರಿಂದ ಖಚಿತ ಪಡಿಸಿಕೊಂಡಿರುವುದರ ಬಗ್ಗೆ ವಿಮರ್ಷಿಸಿ ಅದರ ಪಟ್ಟಿಯನ್ನು ವರದಿಗೆ ಪ್ರತ್ಯೇಕವಾಗಿ ಲಗತ್ತಿಸುವುದು.

ಪಟ್ಟಿ ಲಗತ್ತಿಸಿದೆ.

25 **ಸುಸ್ತಿ ಸಾಲಗಳ ವಿವರ**

1 ಸುಸ್ತಿ ಸಾಲದ ಮೊತ್ತ

ದಿ.31.03.2023ರ ಅಂತ್ಯಕ್ಕೆ ಬ್ಯಾಂಕಿಗೆ ಬಾಕಿ ಇರುವ ಒಟ್ಟು ಸಾಲದ ಪೈಕಿ ರೂ.2,531.79 ಲಕ್ಷಗಳು ಸುಸ್ತಿ ಸಾಲ ಇರುವುದಾಗಿ ತಿಳಿಸಲಾಗಿದೆ. ಇದು ಒಟ್ಟು ಬಾಕಿಗೆ ಶೇ.12.66% ರಷ್ಟಿದೆ. ಹಿಂದಿನ ಸಾಲುಗಳಲ್ಲಿ ಶೇ10%ರ ಅಂಚಿನಲ್ಲಿದ್ದ ಸುಸ್ತಿ ಪ್ರಮಾಣವು ಪ್ರಸಕ್ತ ಸಾಲಿನ ಅಂತ್ಯಕ್ಕೆ ಶೇ12.66ರಷ್ಟಾಗಿದ್ದು, ಬ್ಯಾಂಕಿನಲ್ಲಿ ಸಾಲಗಳ ನಿರ್ವಹಣೆಯಲ್ಲಾಗಿರುವ ಹಿನ್ನೆಡೆಯನ್ನು ಸೂಚಿಸುತ್ತದೆ. ಆಡಳಿತ ಮಂಡಳಿ ಇದನ್ನುಗಂಭೀರವಾಗಿ ಪರಿಗಣಿಸಬೇಕಾಗಿದೆ.

**ಸಮಜಾಯಿಷಿ:**
ಕಂಡಿಕೆ ಸಂಖ್ಯೆ 9 (3) (4) ರಲ್ಲಿ ವಿವರಣೆ ನೀಡಲಾಗಿದೆ.

2 ಡಿ.ಸಿ.ಬಿ. ರಿಜಿಸ್ಟರ್ ಇಟ್ಟ ಬಗ್ಗೆ ಒಟ್ಟು ಸಾಲಕ್ಕೆ ಸುಸ್ತಿ ಸಾಲದ ಶೇಕಡ

2022–23ನೇ ಸಾಲಿನಲ್ಲಿ ಬ್ಯಾಂಕು ಹೊಂದಿದ್ದ ಸಾಲಗಳ ತಗಾದೆ, ವಸೂಲಿ, ಮತ್ತು ಬಾಕಿ ವಿವರ ಕೆಳಕಂಡಂತಿದೆ.

1) ತಗಾದೆ ರೂ. 8,879.93 ಲಕ್ಷ

2) ವಸೂಲಿ ರೂ. 6,348.14 ಲಕ್ಷ

3) ಬಾಕಿ ರೂ. 2,531.79 ಲಕ್ಷ

ಪ್ರಸಕ್ತ ಸಾಲಿನಲ್ಲಿ ಒಟ್ಟು ತಗಾದೆಗೆ ವಸೂಲಾತಿಯು ಶೇ. 71.49 ರಷ್ಟಿದೆ.

3 ವರ್ಷಾವಾರು, ಸಾಲಾವಾರು ಸುಸ್ತಿ ಸಾಲದ ವಿವರ

ರೂ. ಲಕ್ಷಗಳಲ್ಲಿ

| ಕ್ರ ಸಂ | ಅವಧಿ | ವೈಯಕ್ತಿಕ ಸಾಲ | ಭದ್ರತಾ ಸಾಲ | ಓವರ್ ಡ್ರಾಫ್ಟ್ ಸಾಲ | ವಾಹನ ಸಾಲ | ಬಡವರ ಬಂಧು ಸಾಲ |
|---|---|---|---|---|---|---|
| 1 | ಒಂದು ವರ್ಷದೊಳಗೆ | 10.65 | 174.09 | 109.54 | – | – |
| 2 | 1 ರಿಂದ 2 ವರ್ಷದೊಳಗೆ | 14.23 | 52.95 | – | – | – |
| 3 | 2 ರಿಂದ 3 ವರ್ಷದೊಳಗೆ | 20.94 | 104.54 | 34.36 | – | – |
| 4 | 3 ರಿಂದ 4 ವರ್ಷದೊಳಗೆ | 24.28 | 177.47 | – | 3.35 | 0.04 |
| 5 | 4 ರಿಂದ 5 ವರ್ಷದೊಳಗೆ | 45.73 | 125.38 | 160.13 | 1.45 | – |
| 6 | 5 ರಿಂದ 6 ವರ್ಷದೊಳಗೆ | 44.05 | 288.04 | – | – | – |
| 7 | 6 ವರ್ಷ ಮೇಲ್ಪಟ್ಟ | 310.65 | 784.57 | 21.83 | 7.24 | – |
| | **ಒಟ್ಟು ರೂ.** | **470.53** | **1707.04** | **325.86** | **12.04** | **0.04** |

| ಕ್ರ ಸಂ | ಅವಧಿ | ಚಿನ್ನಾಭರಣ ಸಾಲ | ಠೇವಣಿ ಮೇಲಿನ ಸಾಲ | ಸಿಬ್ಬಂದಿ ಸಾಲ | ಎಂ.ಎಂ.ಪಿ. ಸಾಲ | ಒಟ್ಟು |
|---|---|---|---|---|---|---|
| 1 | ಒಂದು ವರ್ಷದೊಳಗೆ | 4.91 | – | 0.30 | – | 299.49 |
| 2 | 1 ರಿಂದ 2 ವರ್ಷದೊಳಗೆ | – | – | – | – | 67.18 |
| 3 | 2 ರಿಂದ 3 ವರ್ಷದೊಳಗೆ | – | – | – | 0.19 | 160.03 |
| 4 | 3 ರಿಂದ 4 ವರ್ಷದೊಳಗೆ | – | – | – | – | 205.14 |
| 5 | 4 ರಿಂದ 5 ವರ್ಷದೊಳಗೆ | – | – | – | – | 332.69 |
| 6 | 5 ರಿಂದ 6 ವರ್ಷದೊಳಗೆ | – | – | – | – | 332.09 |
| 7 | 6 ವರ್ಷ ಮೇಲ್ಪಟ್ಟ | 0.46 | – | 1.48 | 8.94 | 1135.17 |
| | **ಒಟ್ಟು ರೂ.** | **5.37** | **–** | **1.78** | **9.13** | **2531.79** |

4 ಸುಸ್ತಿ ಸಾಲದ ಪೈಕಿ ದಾವಾಕ್ಕೆ ಹಾಕಿದ ಪ್ರಕರಣಗಳ ಸಂಖ್ಯೆ ಮತ್ತು ಮೊತ್ತ.

ಬ್ಯಾಂಕು ಒದಗಿಸಿರುವ ವಿವರಗಳ ಅನ್ವಯ ಒಟ್ಟು ಸುಸ್ತಿ ಸಾಲ ರೂ. 2531.79 ಲಕ್ಷಗಳಿಗೆ 1124 ಪ್ರಕರಣಗಳಿದ್ದು, ಇವುಗಳ ಪೈಕಿ ಕೇವಲ 714 ಪ್ರಕರಣಗಳಿಗೆ ಮಾತ್ರ ಕಾನೂನು ಕ್ರಮವಿಡಲಾಗಿದೆ ಎಂದು ತಿಳಿಸಲಾಗಿದೆ. ವಿವರ ಕೆಳಕಂಡಂತಿದೆ :

| | | | |
|---|---|---|---|
| 1) | ದಾವ ಕ್ರಮ | – | 53 ಪ್ರಕರಣಗಳು ರೂ. 106.86 ಲಕ್ಷ |
| 2) | ಅಮಾಲ್ಜಾರಿ ಕ್ರಮ | – | 598 ಪ್ರಕರಣಗಳು ರೂ. 341.12 ಲಕ್ಷ |
| 3) | SARFAESI ಕಾಯಿದೆ ಅಡಿ | – | 63 ಪ್ರಕರಣಗಳು ರೂ. 4136.20 ಲಕ್ಷ |
| | **ಒಟ್ಟು** | – | **714 ಪ್ರಕರಣಗಳು ರೂ. 4584.18 ಲಕ್ಷ** |

ಬಾಕಿ ಇರುವ ಒಟ್ಟು 1124 ಪ್ರಕರಣಗಳ ಪೈಕಿ 714 ಪ್ರಕರಣಗಳ ಮೇಲೆ ಕಾನೂನು ಕ್ರಮವಿಟ್ಟಿರುವುದಾಗಿ ತಿಳಿಸಿದ್ದು, ಇದು ಒಟ್ಟು ಪ್ರಕರಣಗಳ ಶೇ. 63.52% ರಷ್ಟಿದೆ. ಸುಸ್ತಿ ಸಾಲಗಳ ಎಲ್ಲಾ ಪ್ರಕರಣಗಳ ಸಂಬಂಧ ಕಾನೂನಾತ್ಮಕ ಕ್ರಮವಿಡಲು ಸೂಚಿಸಿದೆ.

**ಸಮಜಾಯಿಷಿ:**

ಸುಸ್ತಿಯಾದ ಸಾಲಗಳನ್ನು ಕೂಡಲೇ ಹಿಂಬಾಲಿಕೆ ಕ್ರಮ ವಹಿಸಿ ವಸೂಲಾತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ. ವರದಿ ಸಾಲಿನಾಂತ್ಯಕ್ಕೆ ಒಟ್ಟು ಎನ್.ಪಿ.ಎ. ಮೊತ್ತಕ್ಕೆ ರೂ. 45.84 ಕೋಟಿಗಳಿಗೆ ಕಾನೂನು ಕ್ರಮವಿಡಲಾಗಿದೆ. (ಅಂದರೆ ಒಟ್ಟು ಎನ್.ಪಿ.ಎ. ಮೊತ್ತದ ಶೇ. 67 ರಷ್ಟು). ಪ್ರಸಕ್ತ ಸಾಲಿನಲ್ಲಿ 48 ಖಾತೆಗಳ ಮೊತ್ತ ರೂ. 24.38 ಕೋಟಿಗಳ ಅನುತ್ಪಾದಕ ಆಸ್ತಿಗಳ ಮೇಲೆ ಹರಾಜು ಪ್ರಕ್ರಿಯೆ ನಡೆದಿದ್ದು, ಅದರಲ್ಲಿ 5 ಖಾತೆಗಳ ಸುಸ್ತಿ ಸಾಲ ರೂ. 1.46 ಕೋಟಿಗಳನ್ನು ಪಾವತಿ ಮಾಡಿ, ಖಾತೆಗಳನ್ನು ತೀರುವಳಿ ಮಾಡಿರುತ್ತಾರೆ. 8 ಖಾತೆಗಳಲ್ಲಿ ಸುಸ್ತಿ ಸಾಲಗಳನ್ನು ಚುಕ್ತಾ ಮಾಡಿ ರೂ. 2.23 ಕೋಟಿಗಳು ಉತ್ತಮ ಆಸ್ತಿಗಳಾಗಿ ವರ್ಗೀಕರಣವಾಗಿರುತ್ತದೆ.

| | | |
|---|---|---|
| 5 | ಸಾಲ ಸುಸ್ತಿಯಾಗಿರುವ ಆಡಳಿತ ಮಂಡಳಿ ಸದಸ್ಯನು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ಕಲಂ 29 ಸಿ(ಎ) ರನ್ವಯ ಆಡಳಿತ ಸದಸ್ಯರೆಂದು ಮುಂದುವರೆಯಲು ಅನರ್ಹರಾಗಿರುವ ಕಾರಣ ಇಂತಹ ಸದಸ್ಯರ ವಿರುದ್ಧ ಕ್ರಮ ಕೈಕೊಳ್ಳುವಂತೆ ಇಲಾಖಾ ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲು ವರದಿಯಲ್ಲಿ ಸೂಚಿಸಲಾಗಿದೆಯೇ? | ಯಾರೂ ಸುಸ್ತಿದಾರರಾಗಿರುವುದಿಲ್ಲ. |
| 6 | ಅಮಲ್ಜಾರಿಯಲ್ಲಿ ಖರೀದಿಸಿದ ಆಸ್ತಿಗಳ ಬಗ್ಗೆ ವಿಮರ್ಶಿಸುವುದು | ಯಾವುದೇ ಆಸ್ತಿ ಖರೀದಿಸಿರುವುದಿಲ್ಲ. |

7 **1) ಎನ್.ಪಿ.ಎ ಬಗ್ಗೆ ವಿಮರ್ಶೆ (ನಿಗದಿಪಡಿಸಿದ ನಮೂನೆಯಲ್ಲಿ ಎನ್.ಪಿ.ಎ ತ:ಖ್ತೆಯನ್ನು ದೃಢೀಕರಿಸಿ ಲಗತ್ತಿಸುವುದು)**

| 2 | ವಿಶ್ವೇಶ್ವರಪುರಂ ಶಾಖೆ | ಯುಬಿಡಿ ಬಿ.ಜಿ. ಬಿಎಲ್. 633 ದಿನಾಂಕ 08.04.2013 | 13.06.1976 |
| 3 | ಅವೆನ್ಯೂ ರಸ್ತೆ ಶಾಖೆ | ಯುಬಿಡಿ ಕೆಎ 550 ಪಿ ದಿನಾಂಕ 11.09.1986 | 01.04.1971 |
| 4 | ವಿಜಯ ನಗರ ಶಾಖೆ | ಯುಬಿಡಿ ಬಿ.ಜಿ. ಬಿಎಲ್. 149 ದಿನಾಂಕ 28.06.1995 | 06.06.1996 |
| 5 | ಸುಬ್ರಮಣ್ಯ ನಗರ ಶಾಖೆ | ಯುಬಿಡಿ ಬಿ.ಜಿ. ಬಿಎಲ್. 222 ದಿನಾಂಕ 18.12.1996 | 20.06.1997 |
| 6 | ಪದ್ಮನಾಭನಗರ ಶಾಖೆ | ಯುಬಿಡಿ ಬಿ.ಜಿ. ಬಿಎಲ್. 223 ದಿನಾಂಕ 18.12.1996 | 14.12.1997 |
| 7 | ಕಾಚರಕನಹಳ್ಳಿ ಶಾಖೆ | ಯುಬಿಡಿ ಬಿ.ಜಿ. ಬಿಎಲ್. 557 ದಿನಾಂಕ 23.10.2009 | 24.06.2010 |
| 8 | ಯಶವಂತಪುರ ಶಾಖೆ | ಯುಬಿಡಿ ಬಿ.ಜಿ. ಬಿಎಲ್. 677 ದಿನಾಂಕ 03.06.2014 | 04.09.2014 |
| 9 | ನಾಗರ ಭಾವಿ ಶಾಖೆ | ಯುಬಿಡಿ ಬಿ.ಜಿ. ಬಿಎಲ್. 672 ದಿನಾಂಕ 20.05.2014 | 02.11.2014 |
| 10 | ಕೋಣನಕುಂಟೆ ಶಾಖೆ | ಯುಬಿಡಿ ಬಿ.ಜಿ. ಬಿಎಲ್. 673 ದಿನಾಂಕ 20.05.2014 | 01.12.2014 |

| | | |
|---|---|---|
| 3 | ಬ್ಯಾಂಕ್‌ನ ಪದಾಧಿಕಾರಿಗಳ ಹೆಸರು ಅಧ್ಯಕ್ಷರು ರಿಂದ ವರೆಗೆ | ಡಾ ॥ ಕೆ.ಎಂ.ರಂಗಧಾಮ ಶೆಟ್ಟಿ 01.04.2022 ರಿಂದ 31.03.2023 |
| | ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರದಲ್ಲಿರುವವರು) | ಕೆ.ಎನ್. ಕೃಷ್ಣಯ್ಯ ಶೆಟ್ಟಿ (ದಿನಾಂಕ 01.05.2022 ರಿಂದ) |

| | | |
|---|---|---|
| 4 | ಹಿಂದಿನ ಸಾಲಿಗೆ ಬ್ಯಾಂಕಿನ ಲೆಕ್ಕಪರಿಶೋಧನೆ ಮಾಡಿದ ಅಧಿಕಾರಿಯ ಹೆಸರು, ಹುದ್ದೆ ಹಾಗೂ ಅವಧಿ | ಸಿಎ ಶಿವಕುಮಾರ ಸಿ. ಪಾಲುದಾರರು<br>ಮೆ॥ ಸಿ.ಎಸ್.ಎಂ.ಆರ್. ಮತ್ತು ಅಸೋಸಿಯೇಟ್ಸ್<br>ಸನ್ನದ್ದು ಲೆಕ್ಕಪರಿಶೋಧಕರು,<br>ನಂ. 6, 2ನೇ ಮಹಡಿ, 80 ಅಡಿ ರಸ್ತೆ<br>ನಾಗರಭಾವಿ ಮುಖ್ಯರಸ್ತೆ, ಚಂದ್ರ ಲೇಔಟ್<br>ಬೆಂಗಳೂರು–560 040 |
| 5 | ಎ) ಪ್ರಸಕ್ತ ಸಾಲಿಗೆ ಬ್ಯಾಂಕಿನ ಲೆಕ್ಕಪರಿಶೋಧನೆ ಮಾಡಿದ ಅಧಿಕಾರಿಯ, ಹೆಸರು, ಹುದ್ದೆ ಹಾಗೂ ಅವಧಿ | ಸಿಎ ಶಿವಕುಮಾರ ಸಿ. ಪಾಲುದಾರರು<br>ಮೆ॥ ಸಿ.ಎಸ್.ಎಂ.ಆರ್. ಅಂಡ್ ಅಸೋಸಿಯೇಟ್ಸ್,<br>ಸನ್ನದ್ದು ಲೆಕ್ಕಪರಿಶೋಧಕರು,<br>ನಂ. 6, 2ನೇ ಮಹಡಿ, 80 ಅಡಿಯ ರಸ್ತೆ<br>ನಾಗರಭಾವಿ ಮುಖ್ಯರಸ್ತೆ, ಚಂದ್ರಲೇಔಟ್<br>ಬೆಂಗಳೂರು–560040. |
| | ಬಿ) ಲೆಕ್ಕಪರಿಶೋಧನೆ ಮಾಡಲು ನೀಡಿದ ಆದೇಶ ಸಂಖ್ಯೆ ಮತ್ತು ದಿನಾಂಕ | ಸಂಖ್ಯೆ : ಎಸ್.ಎಸ್.ಸಿ.ಬಿ : ಎಸ್.ಎ. : 373 : 2022–2023;<br>ದಿನಾಂಕ : 29.09.2022 |
| 6 | ಸಂಘದ ಲೆಕ್ಕಪುಸ್ತಕಗಳನ್ನು ಹಾಜರುಪಡಿಸಿದವರ ಹೆಸರು ಮತ್ತು ಹುದ್ದೆ.<br>ಅ) ಹೆಸರು :<br>ಆ) ಹುದ್ದೆ :<br>ಇ) ದಿನಾಂಕ : | ಶ್ರೀ. ಕೆ.ಎನ್. ಕೃಷ್ಣಯ್ಯ ಶೆಟ್ಟಿ<br>ಮುಖ್ಯಕಾರ್ಯನಿರ್ವಹಣಾಧಿಕಾರಿಗಳು<br>(ಪ್ರಭಾರದಲ್ಲಿರುವವರು) ಮತ್ತು ಅವರ ಸಿಬ್ಬಂದಿ<br>01.05.2022 ರಿಂದ |
| 7 | ಪ್ರಸಕ್ತ ಸಾಲಿನ ಲೆಕ್ಕಪರಿಶೋಧನಾ ಅವಧಿ, ಲೆಕ್ಕಪರಿಶೋಧನೆ ಪ್ರಾರಂಭಿಸಿದ ದಿನಾಂಕ ಲೆಕ್ಕಪರಿಶೋಧನೆ ಮುಕ್ತಾಯಗೊಳಿಸಿದ ದಿನಾಂಕ ಲೆಕ್ಕಪರಿಶೋಧನೆಗೆ ತೆಗೆದುಕೊಂಡ ದಿನಗಳು | 2022–23<br>03.05.2023 ರಿಂದ 28.06.2023<br>ಒಟ್ಟು 72 ದಿನಗಳು |
| 8 | ನ್ಯೂನತೆಗಳನ್ನು ಸರಿಪಡಿಸಿಕೊಂಡಿರುವ ಬಗ್ಗೆ:<br>ಎ) ಹಿಂದಿನ ಸಾಲು/ ಸಾಲುಗಳ ಲೆಕ್ಕಪರಿಶೋಧನೆಯಲ್ಲಿ ಕಾಣಿಸಿರುವ ನ್ಯೂನತೆಗಳನ್ನು ಸರಿಪಡಿಸಿಕೊಂಡ ಬಗ್ಗೆ ಬ್ಯಾಂಕ್ ಅನುಪಾಲನಾ ವರದಿ ಸಲ್ಲಿಸಿದೆಯೇ? | ಸಲ್ಲಿಸಿದೆ |

| | | |
|---|---|---|
| | ಬಿ) ಎಲ್ಲಾ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲಾಗಿದೆಯೇ? (ಉಳಿದ ಪ್ರಮುಖ ನ್ಯೂನತೆಗಳ ಬಗ್ಗೆ ವಿವರ ನೀಡುವುದು)<br>ಸಿ) ಗಂಭೀರ ಸ್ವರೂಪದ ಆಕ್ಷೇಪಣೆಗಳು ಹಿಂದಿನ ಸಾಲಿನಿಂದ ಮುಂದುವರೆದಿದ್ದರೆ ಕೆಳಗಿನ ನಮೂನೆಯಲ್ಲಿ ವಿವರಿಸುವುದು. | ಕೆಲವೊಂದು ನ್ಯೂನತೆಗಳು ಮುಂದುವರೆದಿದೆ. ಭಾಗ – 2, ಕಂಡಿಕೆ 11 (3)ರಲ್ಲಿ ವಿವರಿಸಿದೆ.<br>ಭಾಗ – 2, ಕಂಡಿಕೆ 11 (3)ರಲ್ಲಿ ವಿವರಿಸಿದೆ. |
| 9 | ಬ್ಯಾಂಕು ಅಧಿಕೃತ ಉಪನಿಯಮ, ಕಾಯಿದೆ, ನಿಯಮಗಳ ಪ್ರತಿಗಳನ್ನು ಹೊಂದಿದೆಯೇ? ಉಪನಿಯಮಗಳ ಅಥವಾ ಕಾಯಿದೆ ನಿಯಮಗಳ ಉಲ್ಲಂಘನೆಯಾಗಿದ್ದಲ್ಲಿ ಅವುಗಳ ವಿವರ ನೀಡುವುದು. | ಹೊಂದಿದೆ |
| 10 | ಆಂತರಿಕ ಲೆಕ್ಕಪರಿಶೋಧನೆ ಹಾಗೂ ಸದರಿ ವರದಿಯ ಪರಿಶೀಲನೆ ಹಾಗೂ ಅನುಸರಣೆ ಆಗಿದೆಯೇ? | ಆಗಿರುತ್ತದೆ |

**ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲಾದ ಪ್ರಮುಖ ಪುಸ್ತಕಗಳ ವಿವರ**

**ಭಾಗ–2**

| | | |
|---|---|---|
| 10 | ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲಾದ ಪ್ರಮುಖ ಲೆಕ್ಕಪುಸ್ತಕಗಳ ವಿವರ | ನಗದು ಪುಸ್ತಕ, ಬ್ಯಾಂಕ್ ಪುಸ್ತಕ, ಹೊಂದಾಣಿಕೆ ಪುಸ್ತಕ, ಗುಂತಾವಣಿಗಳ ಪುಸ್ತಕ, ಸ್ತಿರಾಸ್ತಿ ಮತ್ತು ಚರಾಸ್ತಿ ಪುಸ್ತಕ, ಆಡಳಿತ ಮಂಡಳಿ ಸಭೆ ನಡವಳಿಕೆಗಳು ಮತ್ತು ಇತರೆ. |

11 **ಸದಸ್ಯತ್ವ:**

| | ಸಾಮಾನ್ಯ ಸದಸ್ಯತ್ವ | | ನಾಮಮಾತ್ರ ಸದಸ್ಯತ್ವ | | ಸಹ ಸದಸ್ಯತ್ವ | |
|---|---|---|---|---|---|---|
| **ಸದಸ್ಯತ್ವ** | **ಪ್ರಸಕ್ತ ಸಾಲು** | **ಹಿಂದಿನ ಸಾಲು** | **ಪ್ರಸಕ್ತ ಸಾಲು** | **ಹಿಂದಿನ ಸಾಲು** | **ಪ್ರಸಕ್ತ ಸಾಲು** | **ಹಿಂದಿನ ಸಾಲು** |
| ವರ್ಷಾರಂಭದಲ್ಲಿ ಇದ್ದ ಸದಸ್ಯರು | 36622 | 37612 | 573 | 554 | – | – |
| ಹೊಸದಾಗಿ ಸದಸ್ಯತ್ವ ಪಡೆದವರು | 253 | 107 | 53 | 65 | – | – |
| ಸದಸ್ಯತ್ವದಿಂದ ಕಡಿಮೆ ಆದವರು | 784 | 1097 | 30 | 46 | – | – |
| ಸಾಲಾಖೈರಿಗೆ ಇರುವ ಸದಸ್ಯರು | 36091 | 36622 | 596 | 573 | – | – |

13 **ಷೇರು ಬಂಡವಾಳ:** ದಿನಾಂಕ 31–03–2023 ರ ಅಂತ್ಯಕ್ಕೆ ಪಾವತಿಯಾದ ಷೇರು ಬಂಡವಾಳ (ರೂ. ಲಕ್ಷಗಳಲ್ಲಿ)

| ಷೇರು ಬಂಡವಾಳ | ಸರಕಾರದ ಷೇರು | | ಸಾಮಾನ್ಯ ಷೇರು | | ನಾಮಾತ್ರ ಸದಸ್ಯರ ಷೇರು | | ಸಹ ಸದಸ್ಯರ ಷೇರು | |
|---|---|---|---|---|---|---|---|---|
| | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು |
| ವರ್ಷಾರಂಭ ದಲ್ಲಿದ್ದಂತೆ | – | – | 1627.55 | 1773.89 | – | – | – | – |
| ಪ್ರಸಕ್ತ ಸಾಲಿನಲ್ಲಿನ ಜಮಾ | – | – | 31.56 | 23.93 | – | – | – | – |
| ಪ್ರಸಕ್ತ ಸಾಲಿನಲ್ಲಿನ ಖರ್ಚು | – | – | 61.63 | 170.27 | – | – | – | – |
| ಸಾಲಾಖೈರಿಗೆ ಇದ್ದಂತೆ | – | – | 1597.48 | 1627.55 | – | – | – | – |

| | | |
|---|---|---|
| 14 | ಷೇರು ಬಂಡವಾಳದ ಮೇಲೆ ವಿಮರ್ಶೆ | ಪ್ರಸಕ್ತ ವರ್ಷಾಂತ್ಯದಲ್ಲಿರುವ ಷೇರು ಮೊಬಲಗು ಹಿಂದಿನ ಸಾಲಿನ ಅಂತ್ಯದ ಷೇರು ಮೊಬಲಗಿಗೆ ಹೋಲಿಸಿದಾಗ ಶೇ.1.85 ರಷ್ಟು ಇಳಿಕೆಯಾಗಿರುತ್ತದೆ. |
| 15 | ಆಸ್ತಿ–ಜವಾಬ್ದಾರಿ ತ:ಖ್ತೆಯಲ್ಲಿ ತೋರಿಸಿರುವ ಷೇರು ಬಂಡವಾಳವು ಬ್ಯಾಂಕು ನಿರ್ವಹಿಸಿರುವ ಷೇರು ಖಾತೆಗಳಲ್ಲಿನ ಪ್ರತಿಯೊಬ್ಬ ಸದಸ್ಯರ ಷೇರು ಬಂಡವಾಳದ ಮೊತ್ತಕ್ಕೆ ತಾಳೆ ಇರುವುದೇ? | ತಾಳೆ ಇದೆ. |
| 16 | ಹೊರಗಿನಿಂದ ಪಡೆದ ಸಾಲಗಳು: ಅವುಗಳ ಬಗ್ಗೆ ವಿಮರ್ಶೆ | ಯಾವುದೂ ಇಲ್ಲ. |
| 17 | **ಠೇವಣಿಗಳು:** ಬ್ಯಾಂಕ್ ಪಡೆದ ವಿವಿಧ ರೀತಿಯ ಠೇವಣಿಗಳ ಬಗ್ಗೆ ವಿವರಗಳು | |

ಬ್ಯಾಂಕು ಸಂಗ್ರಹಣೆ ಮಾಡಿರುವ ವಿವಿಧ ಠೇವಣಿಗಳ ವಿವರಗಳು (ಕಳೆದ ಸಾಲು ಹಾಗೂ ಪ್ರಸಕ್ತ ಸಾಲಿಗೆ ಸಂಗ್ರಹಿಸಿರುವ ಮೊಬಲಗು ಹೆಚ್ಚು/ಕಡಿಮೆ ಶೇಕಡ ಮಾಹಿತಿಯೊಂದಿಗೆ ವಿಮರ್ಶಿಸಿ)

ರೂ. ಲಕ್ಷಗಳಲ್ಲಿ

| ಠೇವಣಿ ವಿವರಗಳು | ಆರಂಭ ಬಾಕಿ | ಪ್ರಸಕ್ತ ಸಾಲಿನ ಜಮಾ | ಪ್ರಸಕ್ತ ಸಾಲಿನ ಖರ್ಚು | ವರ್ಷಾಂತ್ಯಕ್ಕೆ ಬಾಕಿ | ಯಾದಿಯ ಮೊತ್ತ | ಅಂತರ ಶೇಕಡಾವಾರು ಪ್ರಮಾಣ ಏರಿಕೆ/ಇಳಿಕೆ |
|---|---|---|---|---|---|---|
| 1) ಖಾಯಂಠೇವಣಿ | 17723.90 | 19056.84 | 23031.10 | 13749.64 | 13749.64 | –22.42 |
| 2) ಶ್ರೀನಿಧಿ ಠೇವಣಿ–1 | 19836.44 | 19143.40 | 21896.48 | 17083.36 | 17083.36 | –13.88 |
| 3) ಶ್ರೀವಾರಿಧಿ ಠೇವಣಿ | 24.33 | 3.72 | 5.06 | 22.99 | 22.99 | –5.51 |
| 4) ರೀಕರಿಂಗ್ಠೇವಣಿ | 657.04 | 553.08 | 623.19 | 586.93 | 586.93 | –10.67 |
| 5) ಪಿಗ್ಮಿಠೇವಣಿ | 874.59 | 3501.17 | 3383.33 | 992.43 | 992.43 | 13.47 |
| 6) ಭದ್ರತಾಠೇವಣಿ | 155.70 | 12.44 | 20.24 | 147.90 | 147.90 | –5.01 |
| 7) ಉಳಿತಾಯ ಖಾತೆಗಳು | 6834.29 | 38535.04 | 38480.45 | 6888.88 | 6888.88 | 0.80 |
| 8) ಚಾಲ್ತಿಖಾತೆಗಳು | 653.85 | 18002.88 | 17562.12 | 1094.61 | 1094.61 | 67.41 |
| 9) ಅವಧಿ ಮುಗಿದಠೇವಣಿ | 9.26 | 12653.77 | 12657.82 | 5.21 | 5.21 | –43.74 |
| 10) ಸಾಲಗಳ ಮೀರೆಳೆತ (ಕ್ರೆಡಿಟ್) | 13.78 | – | 10.47 | 3.31 | 3.31 | –75.98 |
| **ಒಟ್ಟು ಮೊತ್ತ** | **46783.18** | **1,11,462.34** | **1,17,659.79** | **40,575.26** | **40,575.26** | **–13.26** |

18 ಉಳಿತಾಯ ಠೇವಣಿ ಮತ್ತು ಇತರೆ ಠೇವಣಿಗಳ ಬಗ್ಗೆ ವಿಮರ್ಶೆ

ಪ್ರಸಕ್ತ ಸಾಲಿನ ಅಂತ್ಯಕ್ಕೆ ಬ್ಯಾಂಕು ರೂ. 62.08 ಕೋಟಿಗಳಷ್ಟು ಠೇವಣಿ ಸಂಗ್ರಹಣೆಯಲ್ಲಿ ಕಡಿಮೆಯಾಗಿರುತ್ತದೆ. ವರ್ಷಾಂತ್ಯಕ್ಕೆ ಬ್ಯಾಂಕು ಒಟ್ಟಾರೆ ಶೇ. 13.26 ರಷ್ಟು ಠೇವಣಿಗಳಲ್ಲಿ ಇಳಿಕೆಯಾಗಿರುತ್ತದೆ.

19 ಆಸ್ತಿ–ಜವಾಬ್ದಾರಿ ತ:ಖ್ತೆಯಲ್ಲಿ ತೋರಿಸಿರುವ ಠೇವಣಿಗಳ ಮತ್ತು ಹೊರಗಿನಿಂದ ಪಡೆದ ಸಾಲಗಳ ಬಾಕಿಯು ನಿರ್ವಹಿಸಿರುವ ಠೇವಣಿ ಮತ್ತು ಸಾಲಗಳ ಖಾತೆಗಳಲ್ಲಿರುವ ಒಟ್ಟು ಮೊತ್ತಗಳಿಗೆ ತಾಳೆ ಇರುತ್ತದೆಯೇ?

ತಾಳೆ ಇದೆ. ಹೊರಗಿನಿಂದ ಯಾವುದೇ ಸಾಲ ಪಡೆದಿರುವುದಿಲ್ಲ.

| | | |
|---|---|---|
| 20 | ಸರ್ಕಾರದ ಅನುದಾನಗಳು ಮತ್ತು ಸಾಲಗಳು ಯಾವುದೂ ಇಲ್ಲ. | |
| 21 | ಆನಿಶ್ಚಿತ (ಕಂಟಿಂಜೆಂಟ್) ಜವಾಬ್ದಾರಿಗಳು<br>ದಿನಾಂಕ 31.03.2023ಕ್ಕೆ ಈ ಕೆಳಕಂಡ ಅನಿಶ್ಚಿತ ಜವಾಬ್ದಾರಿಗಳನ್ನು ಬ್ಯಾಂಕು ಹೊಂದಿರುತ್ತದೆ.<br>ಅ) ಠೇವಣಿದಾರರ ಶಿಕ್ಷಣ ಮತ್ತು ಅರಿವು ನಿಧಿ (ಡಿ.ಇ.ಎ.ಎಫ್) – ರೂ. 2,10,48,819.45<br>ಆ) ಬ್ಯಾಂಕ್ ಖಾತರಿ – ರೂ. 2,10,000.00<br>1) ಕಳೆದ 10 ವರ್ಷಗಳಿಂದ ಸತತವಾಗಿ ವ್ಯವಹರಿಸದ 9435 ಠೇವಣಿ ಹಾಗೂ ಇತರೆ ಖಾತೆಗಳಲ್ಲಿನ ಮೊಬಲಗು ರೂ. 2,10,48,819.45 ಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಠೇವಣಿದಾರರ ಶಿಕ್ಷಣ ಮತ್ತು ಅರಿವು ನಿಧಿ (ಡಿ.ಇ.ಎ.ಎಫ್)ಗೆ ವರ್ಗಾಯಿಸಲಾಗಿದೆ. 31.03.2023ಕ್ಕೆ ಸದರಿ ಮೊಬಲಗನ್ನು ಧೃಡೀಕರಿಸಿಕೊಳ್ಳಬೇಕಾಗಿದೆ.<br>2) ದಿನಾಂಕ 31.3.2023 ಕ್ಕೆ ಬ್ಯಾಂಕು ನೀಡಿರುವ ಬ್ಯಾಂಕ್ ಖಾತರಿ ಮೊತ್ತ ರೂ. 2,10,000/– ಗಳಿಗೆ ಕುಳುವಾರು ಪಟ್ಟಿಯನ್ನು ತಯಾರಿಸಿದ್ದು ತಾಳೆ ಇರುತ್ತದೆ. ಸದರಿ ಪಟ್ಟಿಯನ್ನು ವರದಿಗೆ ಲಗತ್ತಿಸಿದೆ. | |
| 22 | ದ್ರವ್ಯಾಸ್ತಿಗಳ (ಫ್ಲುಯಿಡ್ ರಿಸೋರ್ಸ್‌ಸ್) ಬಗ್ಗೆ ವಿಮರ್ಶೆ SLR/ CRRಗಳ ನಿರ್ವಹಣೆ– ಶಾಖೆಗಳ ವಾರದ DTL ಸ್ಥಿತಿಯ ಬಗ್ಗೆ (ಡಿಮ್ಯಾಂಡ್ ಟೈಮ್ ಲಯಾಬಿಲಿಟೀಸ್) ಅನುಪಾಲನಾ ವರದಿಗಳನ್ನು ಸಲ್ಲಿಸುವ ಪದ್ಧತಿಯನ್ನು ಹೊಂದಿರುತ್ತದೆಯೇ? ಈ ಸಂಬಂಧದ ದಾಖಲೆಗಳನ್ನು ನಿರ್ವಹಿಸಲಾಗಿದೆಯೇ? | ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ 1949 (ಸಹಕಾರ ಸಂಘಗಳಿಗೆ ಅನ್ವಯಿಸುವಂತೆ) ಕಲಂ 18 ಮತ್ತು 24ರ ಅಡಿ ಬ್ಯಾಂಕು ಭಾರತೀಯ ರಿಸರ್ವ್ ಬ್ಯಾಂಕ್ ಆಗಿಂದಾಗ್ಗೆ ನೀಡುವ ಸೂಚನೆಗಳ ಅನ್ವಯ ನಗದು ಮೀಸಲು ಮತ್ತು ದ್ರವ್ಯಾಸ್ತಿಯನ್ನು ನಿರ್ವಹಿಸಬೇಕಾಗಿದೆ. ಪ್ರಸಕ್ತ 2022–23ನೇ ಸಾಲಿನಲ್ಲಿ ನಗದು ಮೀಸಲು ಮತ್ತು ದ್ರವ್ಯಾಸ್ಥಿಯನ್ನು (ಎಸ್.ಎಲ್.ಆರ್) ಈ ಕೆಳಕಂಡಂತೆ ನಿರ್ವಹಿಸಬೇಕಾಗಿದೆ. |
| | ಅ) ನಗದು ಮೀಸಲು<br>ದಿ.01.04.2022ರಿಂದ ದಿ. 20.05.2022ರ ವರೆಗೆ ಶೇ.4.00<br>ದಿ.21.05.2022ರಿಂದ ದಿ. 31.03.2023ರ ವರೆಗೆ ಶೇ.4.50<br>ಆ) ದ್ರವ್ಯಾಸ್ಥಿ<br>ದಿ.01.04.2022ರಿಂದ ದಿ. 31.3.2023 ರವರೆಗೆ ಶೇ.18<br>ಬ್ಯಾಂಕಿನಲ್ಲಿ ವರ್ಷಪೂರ್ತಿ ಭಾರತೀಯ ರಿಸರ್ವ್ ಬ್ಯಾಂಕು ನಿಗದಿ ಪಡಿಸಿದ ಕನಿಷ್ಟ ಮೊಬಲಿಗಿಂತ ಹೆಚ್ಚಾಗಿ ನಗದು ಮೀಸಲು ಮತ್ತು ದ್ರವ್ಯಾಸ್ತಿಯನ್ನು ನಿರ್ವಹಿಸುವುದನ್ನು ಗುರುತಿಸಲಾಗಿದೆ. | |

ಉದಾಹರಣೆಗೆ:

ನಗದು ಮೀಸಲು (ರೂ. ಸಾವಿರಗಳಲ್ಲಿ)

| ಕ್ರಸಂ | ದಿನಾಂಕ | ಡಿ.ಟಿ.ಎಲ್ ಮೊಬಲಗು | ಇರಬೇಕಾದ ಮೊಬಲಗು | ಇದ್ದ ಮೊಬಲಗು | ಶೇಕಡವಾರು ಪ್ರಮಾಣ | ಕನಿಷ್ಠ / ಗರಿಷ್ಠ |
|---|---|---|---|---|---|---|
| 1 | 12.04.2022 | 4596658 | 183866 | 204616 | 4.45 | ಕನಿಷ್ಠ |
| 2 | 10.01.2023 | 4269489 | 192127 | 312403 | 7.32 | ಗರಿಷ್ಠ |

ದ್ರವ್ಯಾಸ್ಥಿ (ರೂ. ಸಾವಿರಗಳಲ್ಲಿ)

| ಕ್ರಸಂ | ದಿನಾಂಕ | ಡಿ.ಟಿ.ಎಲ್ ಮೊಬಲಗು | ಇರಬೇಕಾದ ಮೊಬಲಗು | ಇದ್ದ ಮೊಬಲಗು | ಶೇಕಡವಾರು ಪ್ರಮಾಣ | ಕನಿಷ್ಠ / ಗರಿಷ್ಠ |
|---|---|---|---|---|---|---|
| 1 | 04.05.2022 | 4652492 | 837449 | 2071469 | 45.00 | ಕನಿಷ್ಠ |
| 2 | 10.01.2023 | 4269489 | 768508 | 2168712 | 51.00 | ಗರಿಷ್ಠ |

23 ನಗದು

| | | |
|---|---|---|
| i) | ಶಾಖೆಗಳಲ್ಲಿ ನಗದು ನಿರ್ವಹಣೆ ಮತ್ತು ಮೇಲ್ವಿಚಾರಣೆ ಬಗ್ಗೆ ಇರುವ ವ್ಯವಸ್ಥೆ | ನಗದು ಮತ್ತು ಶಾಖೆಯ ಇತರ ಆಸ್ತಿಗಳು ಶಾಖಾ ವ್ಯವಸ್ಥಾಪಕರ ಅಭಿರಕ್ಷೆಯಲ್ಲಿರುತ್ತದೆ. |
| ii) | ನಗದು ಶಿಲ್ಕಿಗೆ ವಿಮಾ ಸೌಲಭ್ಯ ಒದಗಿಸುವ ಬಗ್ಗೆ. (ಚಲಿಸುತ್ತಿರುವ ನಗದನ್ನು ಒಳಗೊಂಡು) | ಹೌದು. ದಿನಾಂಕ 01.07.2022ರಿಂದ 30.06.2023ರ ವರೆಗೆ ನಗದು ಮತ್ತು ಚಿನ್ನಾಭರಣಗಳ ಮೇಲೆ ರೂ.12.50/–ಕೋಟಿ, ನಗದು ಸಾಗಾಣಿಕೆ ಮೇಲೆ ರೂ.75/–ಲಕ್ಷಕ್ಕೆ ವಿಮೆ ಮಾಡಿಸಲಾಗಿದೆ. |
| iii) | ನಗದು ಶಿಲ್ಕಿನ ಭೌತಿಕ ಸ್ವಾಧೀನ – ನಗದು ಯಾರ ವಶದಲ್ಲಿರಬೇಕು ಎಂಬ ಬಗ್ಗೆ ರೂಪಿಸಲಾದ ನಿಯಮ. | ಉಪನಿಯಮ ಸಂಖ್ಯೆ 92ರಂತೆ ಬ್ಯಾಂಕಿನ ನಗದು ಹಣ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹಾಗು ಅವರಿಂದ ಅಧಿಕಾರ ಪಡೆದ ಶಾಖಾ ವ್ಯವಸ್ಥಾಪಕರು ನಗದು ಗುಮಾಸ್ತರು ಹಾಗು ಲೆಕ್ಕಿಗರ ಅಭಿರಕ್ಷೆಯಲ್ಲಿರುತ್ತದೆ. |

24 **Call money operations**

ಒಂದು ಬ್ಯಾಂಕಿನಿಂದ ಇನ್ನೊಂದು ಬ್ಯಾಂಕಿನ ನಡುವೆ ಕರೆ ಠೇವಣಿ ವ್ಯವಹಾರಗಳ ಬಗ್ಗೆ ಜಾರಿಯಲ್ಲಿರುವ ವ್ಯವಸ್ಥೆ. ದಿ.31.03.2023ಕ್ಕೆ ರೂ. 1,367.00 ಲಕ್ಷಗಳ ಕರೆ ಠೇವಣಿ ಇರುತ್ತದೆ.

25 ಮೀಸಲು ನಿಧಿ ಮತ್ತು ನಿಧಿಗಳು (ಫಂಡ್ಸ್ ಮ್ಯಾನೇಜ್‌ಮೆಂಟ್)

ದಿ.31.03.2023ಕ್ಕೆ ಬ್ಯಾಂಕ್ ರೂ.18,74,65,436.00/–ಗಳ ಆಪದ್ದನ ನಿದಿ ಹೊಂದಿರುತ್ತದೆ. ಸದರಿ ಮೊಬಲಗನ್ನು ಪೂರ್ಣವಾಗಿ ಸರ್ಕಾರಿ ಭದ್ರತೆಗಳಲ್ಲಿ ಹೂಡಿಕೆ ಮಾಡಲಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ ಸಂಖ್ಯೆ DCBR.CEO.BPD(PCM) MC NO.13/19.5.000/2015–16; DATED 01.07.2015ರಂತೆ, ಪ್ರತಿ ಬ್ಯಾಂಕಿನಲ್ಲಿ ಹೂಡಿರುವ ಹೂಡಿಕೆಯು ಹಿಂದಿನ ಸಾಲಾಂತ್ಯಕ್ಕೆ ಉಳಿದಿರುವ ತನ್ನ ಠೇವಣಿಗಳ ಶೇ.5% ರಷ್ಟನ್ನು ಮೀರಬಾರದು, ಹಾಗೂ ಬ್ಯಾಂಕು ಹೊಂದಿರುವ ಇತರೆ ಎಲ್ಲಾ ಬ್ಯಾಂಕುಗಳಲ್ಲಿನ ಹೂಡಿಕೆ ಮೊತ್ತ ಹಿಂದಿನ ಸಾಲಿನ ಅಂತ್ಯಕ್ಕೆ ಉಳಿದಿರುವ ತನ್ನ ಠೇವಣಿಗಳ ಶೇ.20% ರನ್ನು ಮೀರಬಾರದೆಂದು ತಿಳಿಸಲಾಗಿದೆ.

ಇದರ ಹಿನ್ನಲೆಯಲ್ಲಿ, ಸಹಕಾರಿ ಸಂಘಗಳ ನಿಬಂಧಕರ ಸುತ್ತೋಲೆ ಸಂಖ್ಯೆ: ಯುಬಿಸಿ /5/84/ಸಮಾಪನೆ/ಟ್ಯಾಫ್‌ಕಬ್/2016–17 ದಿನಾಂಕ 22.01.2018ರಂತೆ ಯಾವುದೇ ಸಹಕಾರ ಬ್ಯಾಂಕ್, ರಾಜ್ಯ ಅಪೆಕ್ಸ್ ಬ್ಯಾಂಕ್, ಜಿಲ್ಲಾ ಬ್ಯಾಂಕುಗಳಲ್ಲಿ ಆಪದ್ದನ ಹೂಡಿಕೆ ಸಂಬಂಧಕೋರಿಕೆ ಸಲ್ಲಿಸಿದಲ್ಲಿ, ಸದರಿ ಆಪದ್ದನ ಹೂಡಿಕೆಯನ್ನು ಸಾಮಾನ್ಯ ಹೂಡಿಕೆ ಎಂದು ಪರಿಗಣಿಸಲು ತಿಳಿಸಲಾಗಿದೆ.

ಪ್ರಸಕ್ತ ಸಾಲಿನಲ್ಲಿ ಎಲ್ಲಾ ಹೂಡಿಕೆಗಳಿಂದ ರೂ. 1,920.37 ಲಕ್ಷಗಳ ಬಡ್ಡಿ ಜಮಾ ಬಂದಿರುತ್ತದೆ.

ನಿಧಿಗಳ ನಿಯೋಜನೆ ಮಾಡುವಾಗ ಕಾಯ್ದೆ ಪ್ರಕರಣ 58 ರ ಅಂಶಗಳನ್ನು ಪಾಲಿಸಲಾಗಿದೆಯೆ?

ಬ್ಯಾಂಕು 2021–22ನೇ ಸಾಲಿನಲ್ಲಿ ನಷ್ಟ ಹೊಂದಿರುತ್ತದೆ. ನಿಧಿಗಳ ನಿಯೋಜನೆ ಕಾಯ್ದೆ 58 ರ ಅಂಶಗಳನ್ನು ಪಾಲಿಸಲಾಗಿದೆ.

ದಿ.23.08.2019ರ ಆಡಳಿತ ಮಂಡಳಿಯ ಸಭೆಯಲ್ಲಿ ಮರಣೋತ್ತರ ಪರಿಹಾರ ನಿಧಿಯಿಂದ ಮರಣ ಹೊಂದಿದ ಸದಸ್ಯರಿಗೆ ಅವರ ಸದಸ್ಯತ್ವ ಅವಧಿಗನುಸಾರ ಕನಿಷ್ಟ ರೂ.5,000/–, ಗರಿಷ್ಟ ರೂ. 10,000/–ಗಳ ವರೆಗೆ ಪರಿಹಾರ ನೀಡಲು ನಿರ್ಣಯಿಸಲಾಗಿದೆ.ಅದರಂತೆಕ್ರಮವಿಡಲಾಗಿದೆ.

| | |
|---|---|
| ಎ) ನಿಧಿಗಳ ವಿವರಗಳು | ಬ್ಯಾಂಕಿನಲ್ಲಿ ದಿ.31.03.2023ಕ್ಕೆ ಆಪದ್ದನ ಮತ್ತು ಇತರೆ ನಿಧಿಗಳಿಗೆ ಸಂಬಂಧಿಸಿದಂತೆ ಒಟ್ಟು ರೂ.8636.98 ಲಕ್ಷಗಳ ನಿಧಿಗಳ ಮೊಬಲಗು ಇರುತ್ತದೆ. |
| ಬಿ) ಹೂಡಿಕೆಗಳು | |
| i) ಆರ್.ಬಿ.ಐ. ಮಾರ್ಗಸೂಚಿಗಳಂತೆ ಬ್ಯಾಂಕಿನ ವಿವಿಧ ಹೂಡಿಕೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ನಿಯಮ ಮತ್ತು ಅವುಗಳ ಪಾಲನೆ ಕುರಿತು. | ಭಾರತೀಯ ರಿಸರ್ವ್ ಬ್ಯಾಂಕ್ ಹೂಡಿಕೆಗಳ ಸಂಬಂಧ ಆಗಿಂದಾಗ್ಗೆ ನೀಡುವ ಸೂಚನೆಗಳ ಅನುಸಾರ ಬ್ಯಾಂಕು ಹೆಚ್ಚುವರಿ ಹಣವನ್ನು ಹೂಡಿಕೆಗಳಲ್ಲಿ ತೊಡಗಿಸಿರುತ್ತದೆ. |
| ii) ಹೂಡಿಕೆಗಳ ಖರೀದಿ ಮತ್ತು ಮಾರಾಟದ ಬಗ್ಗೆ ಹೊಂದಿರುವ ಪದ್ಧತಿ, ಅಧಿಕಾರ ಪ್ರತ್ಯಾಯೋಜನೆ ಇತ್ಯಾದಿ ಬಗ್ಗೆ ವರದಿ ಮಾಡುವ ಕುರಿತು. | ಆಡಳಿತ ಮಂಡಳಿಯು ಹೂಡಿಕೆಗಳ ನೀತಿಯನ್ನು ಪರಾಮರ್ಶಿಸಿ ದಿ. 23.2.2023ರಂದು ಅನುಮೋದಿಸಿ ಜಾರಿಗೆ ತಂದಿದ್ದು, ಪ್ರಸಕ್ತ ಸಾಲಿನಲ್ಲಿ ಮುಂದುವರೆದಿದೆ. |

| | | |
|---|---|---|
| | | ಬ್ಯಾಂಕು ತನ್ನೆಲ್ಲಾ ಎಸ್.ಎಲ್.ಆರ್. ಹೂಡಿಕೆಗಳ ಖರೀದಿ ಮತ್ತು ಮಾರಾಟ ವ್ಯವಹಾರವನ್ನು ಎಸ್.ಬಿ.ಐ ನ ಡಿ.ಎಫ್.ಹೆಚ್.ಐ.ಲಿ., ಸಂಸ್ಥೆಯಲ್ಲಿನ ಎಸ್.ಜಿ.ಎಲ್. ಖಾತೆಯ ಮುಖಾಂತರ ನಡೆಸಲಾಗುತ್ತದೆ. ಪ್ರಧಾನವಾಗಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ಆಡಳಿತ ಮಂಡಳಿಯ ಪೂರ್ವಾನುಮತಿಯೊಂದಿಗೆ ಹೂಡಿಕೆಗಳ ವ್ಯವಹಾರವನ್ನು ನಿರ್ವಹಿಸುತ್ತಿದ್ದಾರೆ. |
| | iii) ಹೂಡಿಕೆಗಳ ಬಗ್ಗೆ ಹತೋಟಿ, ಕಾಲಕಾಲಕ್ಕೆ ಅವುಗಳ ಪರಿಶೀಲನೆ/ ಲೆಕ್ಕಪತ್ರದೊಂದಿಗೆ ಸಮನ್ವಯಗೊಳಿಸುವಿಕೆ | ಆಡಳಿತ ಮಂಡಳಿಯ ಉಸ್ತುವಾರಿಯಲ್ಲಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗು ಅವರ ಸಿಬ್ಬಂದಿ ಹೂಡಿಕೆ ವ್ಯವಹಾರದ ಪರಿಶೀಲನೆ ಮತ್ತು ಲೆಕ್ಕಪತ್ರಗಳೊಂದಿಗೆ ಸಮನ್ವಯಗೊಳಿಸುವ ಬಗ್ಗೆ ಕ್ರಮವಿಟ್ಟಿರುತ್ತಾರೆ. |
| | iv) ಮೌಲ್ಯ ಮಾಪನ ಮಾದರಿ, ಹಿಂದಿನ ಸಾಲಿಗೆ ಹೋಲಿಸಿದಲ್ಲಿ ಮೌಲ್ಯ ಮಾಪನದಲ್ಲಿ ಆಗಿರುವ ಬದಲಾವಣೆ, ಮೌಲ್ಯದಲ್ಲಿ ಕುಸಿತ ಮತ್ತು ಈ ಸಂಬಂಧ ಕಲ್ಪಿಸಿರುವ ಅವಕಾಶಗಳ ಬಗ್ಗೆ | ಕಾಲಕಾಲಕ್ಕೆ FIMMDAಯಿಂದ ಪ್ರಕಟಗೊಳ್ಳುವ ಹೂಡಿಕೆಗಳ ಮೌಲ್ಯವನ್ನು ಆಧರಿಸಿ ಹೂಡಿಕೆಗಳ ಮೌಲ್ಯಮಾಪನವನ್ನು ಮಾಡಲಾಗುತ್ತಿದೆ. |
| | v) ಆರ್‌ಬಿಐ ಮಾರ್ಗಸೂಚಿಗಳನ್ವಯ Investment portfolio ರಚಿಸಿರುವ ಬಗ್ಗೆ ಮತ್ತು ಹೂಡಿಕೆಗಳ ಏರಿಳಿತಗಳ ಮೇಲೆ ಸವಕಳಿ ಅವಕಾಶ ಕಲ್ಪಿಸಿರುವ ಬಗ್ಗೆ | ಬ್ಯಾಂಕಿನ ಆಡಳಿತ ಮಂಡಳಿ ನಿರ್ಣಯಿಸಿದಂತೆ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಯ ಮೇಲುಸ್ತುವಾರಿಯಲ್ಲಿ ಬ್ಯಾಂಕಿನ ಹೂಡಿಕೆ ಸಮಿತಿಯನ್ನು ಏರ್ಪಾಡು ಮಾಡಿದ್ದು, ಸದರಿ ಸಮಿತಿ ಬ್ಯಾಂಕಿನ ಆಡಳಿತ ಮಂಡಳಿ ಹಾಗು ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಸೂಚನೆಗಳ ಮೇರೆಗೆ ಕಾರ್ಯನಿರ್ವಹಿಸುತ್ತಿದೆ. ಬ್ಯಾಂಕಿನಲ್ಲಿ ಹೂಡಿಕೆಗಳಿಗೆ ಸಂಬಂಧಿಸಿದಂತೆ, ಹೂಡಿಕೆಗಳ ಸವಕಳಿ ನಿಧಿ ರೂ.642.84 ಲಕ್ಷ, ಏರಿಳಿತ ನಿಧಿ ರೂ. 642.90 ಲಕ್ಷಗಳನ್ನು ಕ್ರೋಢೀಕರಿಸಿದೆ. |
| | vi) Investment portfolio ದಲ್ಲಿ ಉಲ್ಲೇಖಿಸದೇ ಇರುವ ಹೂಡಿಕೆಗಳು ಮತ್ತು ಅವುಗಳ ನಗದೀಕರಣ ಬಗ್ಗೆ. | ಯಾವುದೂ ಇರುವುದಿಲ್ಲ. |
| | vii) SGL/BRs ಪದ್ಧತಿ, ಸಾಲಾಂತ್ಯಕ್ಕೆ ಇರುವ SGL/BRs ಮೇಲಿನ | ಬ್ಯಾಂಕು ಎಸ್.ಎಲ್.ಆರ್. ಹೂಡಿಕೆಗಳನ್ನು ಎಸ್.ಬಿ.ಐ– ಡಿ.ಎಫ್.ಹೆಚ್.ಐ. ಲಿ., ಮುಂಬೈ |

| | | |
|---|---|---|
| | ಹತೋಟಿ ಹಾಗೂ ನಂತರದಲ್ಲಿ ಅವುಗಳ ತೀರಿಕೆ. | ಇಲ್ಲಿನ ಎಸ್.ಜಿ.ಎಲ್. ಖಾತೆಯ ಮುಖಾಂತರ ವ್ಯವಹರಿಸಲಾಗುತ್ತಿದೆ. |
| | viii) ಹೂಡಿಕೆಗಳ ನಿರ್ವಹಣೆ ಬಗ್ಗೆ ಬ್ಯಾಂಕಿನವರು ನಿಯತಕಾಲಿಕವಾಗಿ ಸಮವರ್ತಿ / ಆಂತರಿಕ ಲೆಕ್ಕಪರಿಶೋಧನೆ ಮತ್ತು ಪರಿವೀಕ್ಷಣೆ ನಡೆಸುತ್ತಿರುವ ಬಗ್ಗೆ. | ಅಂತರಿಕ ಲೆಕ್ಕಪರಿಶೋಧನೆ ಹಾಗು ಪರಿವೀಕ್ಷಣೆ ಮಾಡಲಾಗುತ್ತಿದೆ. |
| | ix) ಹೂಡಿಕೆಗಳ ಮೇಲಿನ ಆದಾಯವನ್ನು ಲೆಕ್ಕಪತ್ರಗಳಲ್ಲಿ ದಾಖಲಿಸುವ ಬಗ್ಗೆ ಬ್ಯಾಂಕು ಅನುಸರಿಸುತ್ತಿರುವ ನಿಯಮಗಳು | ಹೂಡಿಕೆಗಳ ಮೇಲೆ ಬಂದ ಆದಾಯವನ್ನು, ಲಾಭ ನಷ್ಟ ಖಾತೆಗೆ ವರ್ಗಾಯಿಸಲಾಗುತ್ತಿದೆ. |
| | x) ಹೂಡಿಕೆಗಳ ಮೇಲೆ ಪ್ರಾಪ್ತವಾದ ಆದರೆ ಸ್ವೀಕೃತಿಯಾಗದೆ ಇರುವ ಆದಾಯವನ್ನು ಪರಿಗಣಿಸುವ ಬಗ್ಗೆ ಬ್ಯಾಂಕು ಅನುಸರಿಸುತ್ತಿರುವ ನಿಯಮ. | ಸರ್ಕಾರಿ ಪತ್ರಗಳ ಮೇಲಿನ ಸ್ವೀಕೃತಿಯಾಗದ ಬಡ್ಡಿಯನ್ನು ಮಾತ್ರ, ಬ್ಯಾಂಕಿನ ಲಾಭದ ಖಾತೆಗೆ ವರ್ಗಾಯಿಸಿ ಬರಬೇಕಾದ ಬಡ್ಡಿ ಎಂಬ ಲೆಕ್ಕಶೀರ್ಷಿಕೆಯಲ್ಲಿ ಆಸ್ತಿ–ಜವಾಬ್ದಾರಿ ತಃಖ್ತೆಯಲ್ಲಿ ತೋರಿಸಲಾಗುತ್ತಿದೆ. |
| | xi) ಅವಧಿ ಪೂರ್ಣ ಹೂಡಿಕೆಗಳು ಮತ್ತು ಅವುಗಳನ್ನು ಸಕಾಲದಲ್ಲಿ ನಗದೀಕರಿಸುವ ಬಗ್ಗೆ. | ಸಕಾಲದಲ್ಲಿ ನವೀಕರಿಸಲಾಗುತ್ತಿದೆ. |
| | xii) ಹೂಡಿಕೆಗಳ ಮೇಲೆ ಸರಾಸರಿ ಆದಾಯ | ಶೇ.7.24% |
| | xiii) REPOಗಳ ಮೇಲೆ ಅನುಸರಿಸುತ್ತಿರುವ ನಿಯಮಗಳು | ಈ ಬ್ಯಾಂಕಿಗೆ ಅನ್ವಯಿಸುವುದಿಲ್ಲ. |
| **26** | **ಮೀಸಲು ನಿಧಿಗಳು ಮತ್ತು ಹೂಡಿಕೆಗಳ ಬಗ್ಗೆ ವ್ಯಾಖ್ಯಾನ :**<br>I. ನಿಧಿಗಳ ಸಮಂಜಸತೆಯ ಮತ್ತು ಅವುಗಳ ಸಮರ್ಪಕ ಬಳಕೆಯ ಬಗ್ಗೆ.<br>ಬ್ಯಾಂಕಿನ ಉಪನಿಯಮ 105ರಲ್ಲಿ ಬ್ಯಾಂಕು ಗಳಿಸಿದ ಲಾಭವನ್ನು ವಿಭಜನೆ ಮಾಡುವ ಕ್ರಮವನ್ನು ತಿಳಿಸಲಾಗಿದೆ. | |
| | II. SLR ಹೂಡಿಕೆಗಳನ್ನು AFS, HTM ಮತ್ತು HFT ಗಳೆಂದು ಪ್ರತ್ಯೇಕಿಸಲಾಗಿದೆಯೇ? | ಹೌದು. ಮೇಲಿನ ಕಂಡಿಕೆಯಲ್ಲಿ ವಿವರಿಸಿದೆ. |
| | III. ರೂ.100 ಕೋಟಿ ಮೀರಿ ಠೇವಣಿ ಹೊಂದಿದ್ದಲ್ಲಿ, ಬ್ಯಾಂಕು ಹೂಡಿಕೆಗಳ ಏರಿಳಿತ ಮೀಸಲು ನಿಧಿಯನ್ನು ನಿರ್ವಹಿಸಿದೆಯೇ? | ಹೌದು. ದಿ.31.03.2023ಕ್ಕೆ ರೂ. 1285.74/– ಲಕ್ಷಗಳ ಹೂಡಿಕೆಗಳ ಏರಿಳಿತ ನಿಧಿ ಹಾಗೂ ಸವಕಳಿ ನಿಧಿ ಇದ್ದು, ಇದು ಬ್ಯಾಂಕು ಹೊಂದಿರುವ ವಿಕ್ರಯಕ್ಕಾಗಿ ಲಭ್ಯವಿರುವ (ಎ.ಎಫ್.ಎಸ್.) ಹೂಡಿಕೆಗಳ |

| | |
|---|---|
| | ಮೊತ್ತ ರೂ.12858.00 ಲಕ್ಷಗಳಿಗೆ<br>ಶೇ.5.00% ರಷ್ಟಿದೆ. |
| 27 | **ಸಾಲ ಮತ್ತು ಮುಂಗಡಗಳು:**<br>**ಮುಂಗಡಗಳು**<br>**ಎ) ಸಾಲ ವಿತರಣೆ ನಿಯಮ:**<br>ಸಾಲ ವಿತರಣೆ ಬಗ್ಗೆ ಬ್ಯಾಂಕ್‌ನಲ್ಲಿ ಅಸ್ತಿತ್ವದಲ್ಲಿರುವ ಮತ್ತು ಅನುಸರಣೆ ಯಲ್ಲಿರುವ ನಿಯಮಗಳು – ವಿವೇಕ ಪೂರ್ಣ ಮಾನದಂಡಗಳು, ಕೈಗಾರಿಕಾ ವಲಯಕ್ಕೆ ನಿಗದಿಪಡಿಸಿದ ಸಾಲದ ಮಿತಿ ಮತ್ತು ಕಾಲಕಾಲಕ್ಕೆ ಇವುಗಳನ್ನು ಪರಿಷ್ಕರಿಸುವ ಬಗ್ಗೆ, ಹತೋಟಿ ಮತ್ತು ಅನುಪಾಲನೆ ಬಗ್ಗೆ.<br>ಉಪನಿಯಮ 5(15) ಮತ್ತು 68ರಂತೆ ಭಾರತೀಯರಿಸರ್ವ್ ಬ್ಯಾಂಕಿನ ಸೂಚನೆಗಳಿಗೆ ಒಳಪಟ್ಟು ಬ್ಯಾಂಕಿನ ಆಡಳಿತ ಮಂಡಳಿ ಅಂಗೀಕರಿಸಿದ ಸೂಕ್ತ ಭದ್ರತೆಗಳ ಆಧಾರದ ಮೇಲೆ ಸಾಲಗಳು ಹಾಗೂ ಬ್ಯಾಂಕ್‌ಖಾತರಿಯನ್ನು ನೀಡಲು ಅವಕಾಶವಿರುತ್ತದೆ.<br>ಬ್ಯಾಂಕು ರೂಪಿಸಿರುವ ಸಾಲದ ನಿಯಮಗಳ ಪ್ರಕಾರ (ನಿಯಮ 26.1ರಂತೆ) ಪ್ರತಿ ವರ್ಷವು ಬ್ಯಾಂಕಿನ ಆಡಳಿತಮಂಡಳಿ ಭಾರತೀಯರಿಸರ್ವ್ ಬ್ಯಾಂಕು ನಿಗಧಿ ಪಡಿಸಿರುವ ಸಾಲದ ಮಿತಿಯಂತೆ, ಪ್ರತಿ ವ್ಯಕ್ತಿಯ ಹಾಗೂ ಗುಂಪಿನ ಗರಿಷ್ಟ ಸಾಲ ಪಡೆಯುವ ಅರ್ಹತೆಯನ್ನು ನಿಗಧಿಪಡಿಸಬೇಕೆಂದು ತಿಳಿಸಿದೆ. ಭಾರತೀಯರಿಸರ್ವ್ ಬ್ಯಾಂಕು ತನ್ನ ಸುತ್ತೋಲೆಯ ಸಂಖ್ಯೆDOR(PCB)BPD,CIR NO10/ 13.05.000/2019–20 ದಿನಾಂಕ 13/03/2020 ರಂತೆ ಬ್ಯಾಂಕು ಹೊಂದಿರುವ Tier–1 ಬಂಡವಾಳ ನಿಧಿಯ ಶೇ.15%ರಷ್ಟು ವ್ಯಕ್ತಿಗಳಿಗೆ, ಶೇ.25%ರಷ್ಟು ಗುಂಪುಗಳಿಗೆ ಸಾಲ ನೀಡಬಹುದೆಂದು ಮಿತಿಯನ್ನು ನಿಗಧಿಪಡಿಸಿದೆ. ಇದನ್ನು ಬ್ಯಾಂಕು ಪ್ರತಿ ವರ್ಷವು ಆಯಾ ಸಾಲಿನ ಲೆಕ್ಕಪರಿಶೋಧನೆ ಮುಕ್ತಾಯವಾದ ನಂತರ ಲೆಕ್ಕ ಹಾಕಬೇಕೆಂದು ತಿಳಿಸಲಾಗಿದೆ.<br>ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ಪತ್ರದ ಸಂಖ್ಯೆ DOS(UCB)(BG)(SAF)NO 75550/ 12.07.144 2021–22 ದಿ.22.07.2021 ರಂತೆ, ಬ್ಯಾಂಕು SAF ನಿಯಂತ್ರಣಕ್ಕೆ (Supervisory Action Frame) ಗೆ ಒಳಪಟ್ಟಿರುವುದರಿಂದ ಕೆಲವೊಂದು ನಿರ್ದೇಶನಗಳನ್ನು ನೀಡಿದೆ. ಅವುಗಳಲ್ಲಿ ವ್ಯಕ್ತಿಗಳ ಹಾಗು ಗುಂಪುಗಳಿಗೆ ಸಾಲ ನೀಡಿರುವ ಮಿತಿಯನ್ನು (Exposure) ಈಗಿರುವುದಕ್ಕಿಂತ ಶೇ. 50% ರಷ್ಟು ಕಡಿಮೆ ಮಾಡಲು ಸೂಚಿಸಿದೆ. ಇದರನ್ವಯ ಬ್ಯಾಂಕ್ ದಿ. 12–11–2021 ರ ಆಡಳಿತ ಮಂಡಳಿ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯ ಕೈಗೊಂಡಿದ್ದು, ಇದು ದಿ. 01–12–2021 ಜಾರಿಗೆ ಬಂದಿರುವುದೆಂದು ತಿಳಿಸಲಾಗಿದೆ.<br>**ಬಿ) ಸಾಲಗಳ ಮೌಲ್ಯಾಂಕನ (Credit Appraisal)**<br>ಸಾಲಗಳ ಮೌಲ್ಯಾಂಕನಕ್ಕಾಗಿ ಉತ್ತಮ ಪದ್ಧತಿಯನ್ನು ಹೊಂದಲಾಗಿದೆಯೇ? ಹಾಗೂ ಸಾಲಗಾರರು ಸಾಲ ಪಡೆಯುವ ಅರ್ಹತೆಯನ್ನು ಹೊಂದಿರುವುದನ್ನು ನಿರ್ಧರಿಸುವುದಕ್ಕೆ ಸಾಕಷ್ಟು ಅಂಕಿ ಅಂಶಗಳನ್ನು/ಮಾಹಿತಿಗಳನ್ನು ಹೊಂದಲಾಗಿದೆಯೇ ಮತ್ತು ಅವುಗಳನ್ನು ಪಾಲಿಸಲಾಗುತ್ತಿದೆಯೇ?<br>ವಿವರ ಈ ಕೆಳಗಿನಂತಿದೆ.<br>ಉಪನಿಯಮ 5(15) ಮತ್ತು 68ರಂತೆ ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಗಳಿಗೆ ಒಳಪಟ್ಟು ಬ್ಯಾಂಕಿನ ಆಡಳಿತ ಮಂಡಳಿ ಅಂಗೀಕರಿಸಿದ ಸೂಕ್ತ ಭದ್ರತೆಗಳ ಆಧಾರದ ಮೇಲೆ ಸಾಲಗಳು ಹಾಗು ಬ್ಯಾಂಕ್ ಖಾತರಿಯನ್ನು ನೀಡಲು ಅವಕಾಶವಿರುತ್ತದೆ. |

ಭಾರತೀಯ ರಿಜರ್ವ್ ಬ್ಯಾಂಕ್ ತನ್ನ ಪತ್ರದ ಸಂಖ್ಯೆ DOS(UCB)(BG)(SAF)NO 75550/ 12.07.144 2021–22 ದಿ.22.07.2021 ರಂತೆ, ಬ್ಯಾಂಕು SAF ನಿಯಂತ್ರಣಕ್ಕೆ (Supervisory Action Frame) ಗೆ ಒಳಪಟ್ಟಿರುವುದರಿಂದ ಕೆಲವೊಂದು ನಿರ್ದೇಶನಗಳನ್ನು ನೀಡಿದೆ. ಅವುಗಳಲ್ಲಿ ವ್ಯಕ್ತಿಗಳ ಹಾಗು ಗುಂಪುಗಳಿಗೆ ಸಾಲ ನೀಡಿರುವ ಮಿತಿಯನ್ನು (Exposure) ಈಗಿರುವುದಕ್ಕಿಂತ ಶೇ. 50% ರಷ್ಟು ಕಡಿಮೆ ಮಾಡಲು ಸೂಚಿಸಿದೆ. ಇದರನ್ವಯ ಬ್ಯಾಂಕ್ ದಿ.26.08.2022 ರ ಆಡಳಿತ ಮಂಡಳಿ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯಕೈಗೊಂಡಿದ್ದು, ಇದು ದಿ.01–09–2022 ಜಾರಿಗೆ ಬಂದಿರುವುದೆಂದು ತಿಳಿಸಲಾಗಿದೆ..

| ಕ್ರ. ಸಂ. | ವಿವರ | ಸಾಲ ನೀಡಿಕೆಯು ಬಂಡವಾಳ ನಿಧಿಯ ಶೇಕಡಾವಾರು ಪ್ರಮಾಣ | ಅರ್ಹತೆ ಹೊಂದಿರುವುದು | ನಿಗಧಿಗೊಳಿಸಿದ್ದು |
|---|---|---|---|---|
| 1 | ವ್ಯಕ್ತಿಗಳು | ಶೇ.15% | ರೂ. 2.49 ಕೋಟಿ | ರೂ. 2.40 ಕೋಟಿ |
| 2 | ಗುಂಪುಗಳು | ಶೇ.25% | ರೂ. 4.15 ಕೋಟಿ | ರೂ. 4.00 ಕೋಟಿ |

ಬ್ಯಾಂಕಿನ ಆಡಳಿತ ಮಂಡಳಿಯು ದಿ. 28.04.2022ರ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಸಾಲ ವಿತರಣೆ ಹಾಗು ವಸೂಲಾತಿಯ ಬಗ್ಗೆ ಈ ಕೆಳಕಂಡ ಗುರಿಗಳನ್ನು ನಿಗಧಿಪಡಿಸಿದೆ.

1) 2022–23ನೇ ಸಾಲಿಗೆ ಸಾಲ ವಿತರಣೆ ರೂ. 113.21 ಕೋಟಿ.

2) 2022–23ನೇ ಸಾಲಿಗೆ ಸಾಲ ವಸೂಲಾತಿ ರೂ. 64.64 ಕೋಟಿ.

ಪ್ರಸಕ್ತ ಸಾಲಿನಲ್ಲಿ ಸಾಧಿಸಿದ ಗುರಿ

1) ಸಾಲ ವಿತರಣೆ ರೂ. 57.08 ಕೋಟಿ.
2) ಸಾಲ ವಸೂಲಾತಿ ರೂ. 63.48 ಕೋಟಿ.

ಸಾಲ ವಿತರಣೆ ಮತ್ತು ಸಾಲ ವಸೂಲಾತಿ ಗುರಿಗಳನ್ನು ವಾಸ್ತವಿಕ ನೆಲೆಯ ಮೇಲೆ ಗುರುತಿಸಬೇಕಾಗಿದ್ದು, ಅದನ್ನು ಆಡಳಿತ ಮಂಡಳಿ ಮನಗಾಣಬೇಕಾಗಿದೆ.

ಕ್ಲಿಷ್ಟಕರವಾದ ದೀರ್ಘಾವಧಿಯ ಹಳೆ ಬಾಕಿಗಳ ವಸೂಲಾತಿಗೆ ಆದ್ಯ ಗಮನ ನೀಡಬೇಕಾಗಿದೆ.

ಉಪನಿಯಮ 68ರಂತೆ ಈ ಕೆಳಕಂಡ ಸಾಲಗಳನ್ನು ನೀಡಲು ಅವಕಾಶವಿರುತ್ತದೆ.
1) ಜಾಮೀನು ಸಾಲ
2) ಚರ ಮತ್ತು ಸ್ಥಿರ ಸ್ವತ್ತುಗಳ ಆಧಾರ ಸಾಲ
3) ಸರ್ಕಾರಿ / ಅರೆಸರ್ಕಾರಿ ಭದ್ರತೆ ಪತ್ರಗಳ, ಉಗ್ರಾಣ ರಸೀದಿಗಳ ಆಧಾರದ ಮೇಲೆ ಸಾಲ
4) ಚಿನ್ನಾಭರಣ ಆಧಾರ ಸಾಲ.

ಸಿ) **ಸಾಲ ಮಂಜೂರಾತಿ/ ವಿತರಣೆ**

ಅಧಿಕಾರ ಪ್ರತ್ಯಾಯೋಜನೆ/ ಪ್ರಾಧಿಕಾರದ ವಿವಿಧ ಹಂತಗಳು (authority at various levels) ಪ್ರಾಧಿಕಾರದ ಮಿತಿ ಹಾಗೂ ಸಾಲ ಮಂಜೂರಾತಿಯ ನಿಬಂಧನೆಗಳ ಪಾಲನೆಯ ನಂತರ ಸಾಲವನ್ನು ವಿತರಿಸಲಾಗಿದೆಯೇ?

ವಿವರ ಈ ಕೆಳಗಿನಂತಿದೆ.

ಉಪನಿಯಮ 67ರಂತೆ ಪ್ರತಿ ವರ್ಷವು ಸಾಲ ನೀಡಿಕೆಯ ಸಂಬಂಧ ಸಾಲದ ನೀತಿಗಳನ್ನು ರೂಪಿಸಲು ತಿಳಿಸಲಾಗಿದೆ. ಪ್ರಸಕ್ತ ಸಾಲಿಗೆ ಬ್ಯಾಂಕುದಿ.27–06–2022ರಂದುಸಾಲದ ನೀತಿಯನ್ನು ಅನುಮೋದಿಸಿದೆ. ಪ್ರಸಕ್ತ ಸಾಲಿನಲ್ಲಿ ಚಿನ್ನಾಭರಣ ಸಾಲಗಳ ಮೇಲೆ ರೂ.10.00 ಲಕ್ಷಗಳವರೆಗೆ ಶಾಖಾ ವ್ಯವಸ್ಥಾಪಕರು ಹಾಗೂ ಜಾಮೀನು ಸಾಲ, ಸರ್ಕಾರಿ / ಅರೆಸರ್ಕಾರಿ ಭದ್ರತೆ ಸಾಲ, ಚಿನ್ನಾಭರಣ ಸಾಲ ಇವುಗಳ ಸಂಬಂಧ ರೂ.1 ಲಕ್ಷಗಳ ವರೆಗೆ ಸಾಲವನ್ನು ಬ್ಯಾಂಕಿನ ಶಾಖಾ ವ್ಯವಸ್ಥಾಪಕರು. ರೂ.2 ಲಕ್ಷಗಳವರೆಗೆ ಸಾಲವನ್ನು ಉಪ ಪ್ರಧಾನ ವ್ಯವಸ್ಥಾಪಕರು ಹಾಗೂ ರೂ.3 ಲಕ್ಷಗಳವರೆಗೆ ಪ್ರಧಾನ ವ್ಯವಸ್ಥಾಪಕರು ನೀಡಿರುತ್ತಾರೆ.

ಈ ಮಿತಿಗಿಂತ ಮೇಲ್ಪಟ್ಟಎಲ್ಲಾ ಸಾಲಗಳನ್ನು ಸಾಲದಉಪಸಮಿತಿಯ ಪರಿಶೀಲನೆಗೆ ಒಳಪಡಿಸಿ ಅದರಅನುಮೋದನೆ ನಂತರ ಆಡಳಿತ ಮಂಡಳಿಯ ಸ್ಥಿರೀಕರಣ ಪಡೆಯಲಾಗಿರುತ್ತದೆ.

**ಡಿ) ದಾಖಲೀಕರಣ ಸಂಗ್ರಹಣೆ (Documentation)**

ಸಾಲ ಮಂಜೂರಾತಿ ಆದೇಶಗಳಲ್ಲಿನ ನಿಬಂಧನೆಗಳಂತೆ ದಾಖಲೆಗಳನ್ನು ಪಡೆದಿರುವುದನ್ನು ಖಚಿತಪಡಿಸಿಕೊಳ್ಳುವುದು, ದಾಖಲೆಗಳ ಸ್ವರೂಪ, ಈ ಸಂಬಂಧ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ನ್ಯೂನತೆಗಳು ಹಾಗೂ ಇವುಗಳ ನಿವಾರಣೆಗೆ ಸಲಹೆಗಳು, ಜಂಟಿ/ ಸಹಕಾರ ಕೂಟ ಸಾಲಗಳ ದಾಖಲೆಗಳ ಸಂಗ್ರಹಣೆಯ ಪದ್ಧತಿ. (documentation of consortium advances)

ಪಡೆಯಲಾಗಿದೆ.

**ಇ) ನವೀಕರಣ / ಪುನರ್ ಪರಿಶೀಲನೆ/ ಮುನ್ನೆಚ್ಚರಿಕೆ / ಮೇಲ್ವಿಚಾರಣೆ :**

i) ಸಾಲಗಳ ಬಾಕಿಗಳ ನಿಯತಕಾಲಿಕ ದೃಢೀಕರಣ ಹಾಗೂ ಅವುಗಳ ಒಪ್ಪಿಕೊಳ್ಳುವಿಕೆ.

ಸಾಲ ಮಂಜೂರಾತಿ / ವಿತರಣೆಗೆ ಮೊದಲು ಸಾಲಗಾರನ ಸಾಲ ಪಡೆಯುವ ಸಾಮರ್ಥ್ಯಹಾಗೂ ಮರುಪಾವತಿ ಸಾಮರ್ಥ್ಯದ ಅವಲೋಕನೆ, ಸಾಲ ವಿತರಣೆಯ ನಂತರ ಸೂಕ್ತ ಮೇಲುಸ್ತುವಾರಿಗೆ (Pre-sanction appraisal and Post-sanction supervision) ಸಂಬಂಧಿಸಿದ ಮಾನದಂಡಗಳನ್ನು ರಚಿಸಿಕೊಂಡು ಅದರಂತೆ ಬ್ಯಾಂಕು ಕಾರ್ಯ ನಿರ್ವಹಿಸಬೇಕಾಗಿದೆ.

ii) ಸಾಲಗಾರರಿಂದ ದಾಸ್ತಾನಿನ ಬಗ್ಗೆ ನಿಯತ ಮಾಹಿತಿ, ಅವರ ಆಸ್ತಿ–ಜವಾಬ್ದಾರಿಗಳ ಬಗ್ಗೆ ಮಾಹಿತಿ ಸ್ವೀಕೃತಿಯಾಗುತ್ತಿರುವ ಬಗ್ಗೆ.

ಪಡೆಯಲಾಗುತ್ತಿದೆ.

iii) ರೂ.10 ಲಕ್ಷಗಳಿಗಿಂತ ಹೆಚ್ಚಿನ ಸಾಲ ಪಡೆದ ಸಾಲಗಾರರಿಂದ ಪರಿಶೋಧನೆಯಾದ ಲೆಕ್ಕಗಳನ್ನು (Audited Accounts) ಪಡೆದಿರುವ ಬಗ್ಗೆ.

ಆರ್‌ಬಿಐ ಸುತ್ತೋಲೆ UBD.BPD.(PCB). MC.NO.1 /13.05.000/2013-14 DTD.01.07.2013- Master Circular – Exposure Norms and Statutory/ Other Restrictions – UCB ರನ್ವಯ ರೂ. 10 ಲಕ್ಷಗಳಿಗಿಂತ ಮೇಲ್ಪಟ್ಟ ಸಾಲ ಪ್ರಕರಣಗಳಲ್ಲಿ ಸಾಲಗಾರರಿಂದ ಶಾಸನಬದ್ದ ಸನ್ನದು ಲೆಕ್ಕಿಗರಿಂದ ಪರಿಶೋಧನೆಯಾದ ಆರ್ಥಿಕ ತ:ಖ್ತೆಗಳನ್ನು ಪಡೆಯಬೇಕಾಗಿರುತ್ತದೆ, ವರದಿ ಸಾಲಿನಲ್ಲಿ ಲೆಕ್ಕ ಪರಿಶೋಧನಾ ವೇಳೆಯಲ್ಲಿ ಗಮನಿಸಿದ ಕೆಲವು ಖಾತೆಗಳಲ್ಲಿ ನಿಗಧಿತ ಕಾಲಕಾಲಕ್ಕೆ ಪಡೆಯದೆಇರುವುದನ್ನು ಗಮನಿಸಿದ್ದು, ಮತ್ತು ಪರಿಶೋಧಿತ ಪತ್ರಗಳನ್ನು ಪಡೆಯಲು ಸೂಚಿಸಲಾಗಿದೆ.

iv) ಈ ಮೇಲಿನ ಮಾಹಿತಿಗಳನ್ನು ಪಡೆಯುವ ಬಗ್ಗೆ ಅನುಸರಿಸಿರುವ ಪದ್ಧತಿ ಹಾಗೂ ಇದರ ಹಿಂಬಾಲಿಕೆ (Follow-up) ಮತ್ತು ಸಂರಕ್ಷಣೆ ಬಗ್ಗೆ.

ಬ್ಯಾಂಕು ಸಾಲ ನೀತಿಯನ್ನು ರೂಪಿಸಿದ್ದು, ಬ್ಯಾಂಕಿನ ಉಪನಿಯಮ 67, 68 ಹಾಗೂ ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಗಳನ್ವಯ ಆಗತ್ಯ ಮಾಹಿತಿ, ದಾಖಲೆ ಪಡೆದು ಸಾಲಗಳನ್ನು ನೀಡಲಾಗುತ್ತದೆ.

v) ದಾಸ್ತಾನು, ಉಪಕರಣಗಳು, ಯಂತ್ರೋಪಕರಣ ಹಾಗೂ ಇತರೆ ಭದ್ರತೆಗಳ ಕಾಲಕಾಲದ ಭೌತಿಕ ಪರಿಶೀಲನೆ ಮತ್ತು ತನಿಖಾ ಪದ್ಧತಿಯ ಬಗ್ಗೆ.

ಅಡವು ಮಾಡಿಕೊಂಡ ದಾಸ್ತಾನು, ಉಪಕರಣಗಳು, ಯಂತ್ರೋಪಕರಣ ಹಾಗು ಇತರೆ ಭದ್ರತೆಗಳಿಗೆ ಸಂಬಂಧಿಸಿದಂತೆ ಭೌತಿಕ ಪರಿಶೀಲನೆ ಮತ್ತು ತನಿಖಾ ಪದ್ಧತಿ ನಿಯಮಿತವಾಗಿ ಮಾಡುತ್ತಿಲ್ಲ.

vi) ನಿಯತಕಾಲಿಕವಾಗಿ ದಾಸ್ತಾನು ಪರಿಶೋಧನೆ ನಿರ್ವಹಿಸುತ್ತಿರುವ ಬಗ್ಗೆ.

vii) ತನಿಖಾ ವರದಿಗಳು ಹಾಗೂ ಅವುಗಳ ಪಾಲನೆ ಬಗ್ಗೆ

ಸಾಲಗಳ ಅರ್ಜಿಗಳನ್ನು ಹೊಸದಾಗಿ ಪಡೆದು ಪರಿಶೀಲಿಸಿದಾಗ ಅಥವಾ ನವೀಕರಿಸಿದಾಗ ಮಾತ್ರ ತನಿಖಾ ವರದಿಗಳನ್ನು ಪಡೆದು ನಿರ್ವಹಿಸಲಾಗಿದೆ.

viii) ಕ್ರೆಡಿಟ್ ರೇಟಿಂಗ್ ನೀಡುವಾಗ ಪಾಲಿಸುತ್ತಿರುವ ಮಾನದಂಡಗಳು

2020–21ನೇ ಸಾಲಿನಿಂದ ಕ್ರಮಬದ್ದವಾಗಿ ಮಾಡಲಾಗುತ್ತಿದೆ.

ix) ರಿಸರ್ವ್ ಬ್ಯಾಂಕ್‌ನ ಮಾರ್ಗ ಸೂಚಿಗಳನ್ವಯ ಸಾಲಗಳ ಸ್ವಾಸ್ಥ್ಯದ ಸಂಹಿತೆಯ ನಿಗದಿಪಡಿಸುವಿಕೆಯ ಬಗ್ಗೆ (Allotment Health Code of RBI)

ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಯಂತೆ ದಿ.31.03.2023ಕ್ಕೆ ಬಾಕಿ ಇರುವ ಸಾಲಗಳನ್ನು ಉತ್ಪಾದಕ ಮತ್ತು ಅನುತ್ಪಾದಕ ಸಾಲಗಳೆಂದು ಗುರುತಿಸಿ ಆರ್ಥಿಕ ತಃಖ್ತೆಗಳಲ್ಲಿ ನಿಗಧಿ ಪಡಿಸಿದ ದರದಲ್ಲಿ ಅವಕಾಶ ಕಲ್ಪಿಸಲಾಗಿದೆ.

x) ಲೀಸಿಂಗ್, ಹೈಯರ್ ಪರ್ಚೇಸ್ ಮತ್ತು ಕ್ರೆಡಿಟ್ ಕಾರ್ಡ್ ವ್ಯವಹಾರಗಳ ಸುಸ್ತಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಬ್ಯಾಂಕಿನಲ್ಲಿ ಜಾರಿಯಲ್ಲಿರುವ ನಿಯಮಗಳು ಮತ್ತು ಮೇಲ್ವಿಚಾರಣಾ ವ್ಯವಸ್ಥೆ.

ಈ ವ್ಯವಸ್ಥೆ ಇರುವುದಿಲ್ಲ.

xi) ಹೆಚ್ಚಿಸಿದ ಸಾಲದ ಮಿತಿಗಳ ವಿಸ್ತರಣೆಯನ್ನೊಳಗೊಂಡಂತೆ ಸಾಲಗಳ ವಿಮರ್ಶೆ, ಸಾಲದ ಸ್ವಾಸ್ಥ್ಯದ ಸಂಹಿತೆಯ ವರ್ಗೀಕರಣ ಇತ್ಯಾದಿ.

ಹೆಚ್ಚಿಸಿದ ಸಾಲದ ಮಿತಿಗಳು ವಿಸ್ತರಣೆಗೊಂಡಂತೆ ಅಗತ್ಯ ಪೂರಕ ದಾಖಲೆಗಳನ್ನು ಭದ್ರತೆಗಾಗಿ ಪಡೆದು ಪರಿಶೀಲಿಸಲಾಗಿದೆ.

xii) ಸೌಲಭ್ಯಗಳ ನವೀಕರಣ

ಓ.ಡಿ.ಸಾಲಗಳನ್ನು ಮಾತ್ರ ನವೀಕರಿಸಲಾಗುತ್ತದೆ.

xiii) ಕೈಗಾರಿಕೆಗಳನ್ವಯ, ಸಾಲದ ಅವಧಿಯನ್ವಯ ಸಾಲದ ಪರಿಪಕ್ವತೆಯನ್ವಯ ಸಾಲಗಳ ಸಮಗ್ರ ಮೇಲ್ವಿಚಾರಣೆ ಬಗ್ಗೆ.

ಯಾವುದೇ ಕೈಗಾರಿಕೆಗೆ ಸಾಲ ನೀಡುತ್ತಿಲ್ಲ.

**ಎಫ್) ಕರಡು ಮತ್ತು ಸಂಶಯಾಸ್ಪದ ಸಾಲಗಳು:**

i) ಸಾಲ ವಸೂಲಾತಿಗೆ ಸಂಬಂಧಿಸಿದಂತೆ ಬ್ಯಾಂಕಿನಲ್ಲಿರುವ ವ್ಯವಸ್ಥೆಗಳು ಮತ್ತು ಕಾಲಕಾಲಕ್ಕೆ ಇವುಗಳನ್ನು ಪರಿಷ್ಕರಿಸಿ ಅನುಸರಿಸುತ್ತಿರುವ ಬಗ್ಗೆ ಹಾಗೂ ಈ ಕುರಿತು ಆರ್.ಬಿ.ಐ. ಮಾರ್ಗಸೂಚಿಗಳ ಪಾಲನೆ ಬಗ್ಗೆ.

ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಯ ಅನ್ವಯ ಅನುತ್ಪಾದಕ ಆಸ್ತಿಗಳನ್ನು ಗುರ್ತಿಸಲಾಗಿದೆ.

ii) ಬ್ಯಾಂಕ್ ವಿತರಿಸಿದ ಕ್ರೆಡಿಟ್ ಕಾರ್ಡ್‌ಗಳಲ್ಲಿ ಕ್ರೆಡಿಟ್ ಕಾರ್ಡ್ ಸಾಲ ವಸೂಲಾತಿ ಬಗ್ಗೆ.

ಈ ವ್ಯವಸ್ಥೆ ಇರುವುದಿಲ್ಲ.

iii) ಕರಡು ಮತ್ತು ಸಂಶಯಾಸ್ಪದ ಸಾಲಗಳ ಮಾಹಿತಿಗಳನ್ನು ಕಲೆ ಹಾಕುವಲ್ಲಿ ಅಳವಡಿಸಲಾದ ಪರಿಣಾಮಕಾರಿ ಪದ್ಧತಿ ಮತ್ತು ಅವಕಾಶ ಕಲ್ಪಿಸುವಲ್ಲಿನ ಕೊರತೆಯ ಬಗ್ಗೆ

ಅನುತ್ಪಾದಕ ಆಸ್ತಿಗಳ ವರ್ಗೀಕರಣ ಮತ್ತು ಅಗತ್ಯ ಅವಕಾಶ ಕಲ್ಪಿಸಲಾಗಿದೆ.

iv) ಕರಡು ಮತ್ತು ಸಂಶಯಾಸ್ಪದ ಸಾಲಗಳ ಗುರುತಿಸುವಿಕೆ, ಪ್ರಮಾಣ ಹಾಗೂ ಅವಶ್ಯಕ ಪ್ರಮಾಣದ ಅವಕಾಶ ಕಲ್ಪಿಸುವಿಕೆ

ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಯ ಅನ್ವಯ ಅನುತ್ಪಾದಕ ಆಸ್ತಿಗಳನ್ನು ಗುರುತಿಸಲಾಗಿದೆ. ದಿ.31.03.2023ಕ್ಕೆ ಬ್ಯಾಂಕು ತಾನು ಗಳಿಸಿದ ಲಾಭದಿಂದ ತೆಗೆದ ರೂ. 1502.04 ಲಕ್ಷ ಕರಡು ಸಾಲ ನಿಧಿ ಹಾಗು ರೂ. 2091.96 ಲಕ್ಷಗಳ ಅನುತ್ಪಾದಕ ಆಸ್ತಿಗಳ ಮೇಲಿನ ಅವಕಾಶ ಸೇರಿ, ಒಟ್ಟು ರೂ. 3600.00 ಲಕ್ಷಗಳ ಕರಡು ಮತ್ತು ಸಂಶಯಾಸ್ಪದ ಸಾಲಗಳ ನಿಧಿಯನ್ನು ಹೊಂದಿರುತ್ತದೆ.

v) ಸಾಲದ ಮೇಲಿನ ಬಡ್ಡಿಯನ್ನು ಸಾಲಕ್ಕೆ ಸೇರಿಸುವ ಕ್ರಮವನ್ನು ಕೈಬಿಡುವ ಹಾಗೂ ಅದರ ಪಾಲನೆ ಬಗ್ಗೆ.

ಮೀರೆಳೆತ ಸಾಲಗಳನ್ನು ಹೊರತುಪಡಿಸಿ, ಇನ್ನಾವುದೇ ಸಾಲಕ್ಕೆ ಆಕರಿಸಿದ ಬಡ್ಡಿಯನ್ನು ಸೇರಿಸುತ್ತಿಲ್ಲ.

vi) ಭದ್ರತೆಗಳ ವಸೂಲಾಗಬಲ್ಲ ಮೌಲ್ಯಗಳನ್ನು ತಿಳಿದು ಕೊಳ್ಳುವುದು, ಜಾಮೀನುದಾರರಿಂದ ವಸೂಲಾಗತಕ್ಕ ಸಾಧ್ಯತೆಗಳು DICGC/ECGC ಯನ್ನೊಳಗೊಂಡಂತೆ.

ಬ್ಯಾಂಕಿನಲ್ಲಿ ಯಾವುದೇ ಸಾಲವನ್ನು ಕರಡು ಸಾಲವೆಂದು ಪರಿಗಣಿಸಿಲ್ಲ. ಆದ್ದರಿಂದ ಯಾವುದೇ Rehabilitation ಕಾರ್ಯಕ್ರಮ ಹೊಂದಿಲ್ಲ.

vii) ಪುನ:ಸ್ಪಷ್ಟೀಕರಣದ (Rehabilitation) ಕಾರ್ಯಕ್ರಮದ ಫಲಪ್ರದತೆಯ ಮೌಲ್ಯಮಾಪನ

ಬ್ಯಾಂಕಿನಲ್ಲಿ ಯಾವುದೇ ಸಾಲವನ್ನು ಕರಡು ಸಾಲವೆಂದು ಪರಿಗಣಿಸಿಲ್ಲ. ಆದ್ದರಿಂದ ಯಾವುದೇ Rehabilitation ಕಾರ್ಯಕ್ರಮ ಹೊಂದಿಲ್ಲ.

viii) ಸಾಲ ವಸೂಲಾತಿ ಮೊಬಲಗನ್ನು ಸಾಲದ ಅಸಲಿಗೆ, ಬಡ್ಡಿಗೆ ಹೊಂದಾಣಿಕೆ ಮಾಡುವ ಬಗ್ಗೆ ಇರುವ ವ್ಯವಸ್ಥೆ.

ಮೀರೆಳೆತ ಸಾಲಗಳನ್ನು ಹೊರತುಪಡಿಸಿ, ಇನ್ನಾವುದೇ ಸಾಲಕ್ಕೆ ಆಕರಿಸಿದ ಬಡ್ಡಿಯನ್ನು ಸೇರಿಸುತ್ತಿಲ್ಲ.

ix) ರಾಜಿ ಸಂಧಾನದ ಮೂಲಕ ಏಕಕಾಲದಲ್ಲಿ ಸಾಲಗಳನ್ನು ಇತ್ಯರ್ಥಗೊಳಿಸಿರುವ ಪ್ರಕರಣಗಳು – ರೂ. 1.00 ಕೋಟಿಗೂ ಮೀರಿದ ಇಂತಹ ಪ್ರಕರಣಗಳು ಮತ್ತು ಆರ್.ಬಿ.ಐ. ನಿಗದಿಗೊಳಿಸಿರುವ ಮಿತಿಗಿಂತ ಹೆಚ್ಚಿನ ಮೊಬಲಗು ವಿನಾಯಿತಿ ನೀಡಿರುವ ಪ್ರಕರಣಗಳ ಬಗ್ಗೆ.

ಯಾವುದೂ ಇರುವುದಿಲ್ಲ.

x) ಸಕ್ಷಮ ಪ್ರಾಧಿಕಾರದಡಿ ಮಾಡುವ ಮನ್ನಾ/ ಕಲ್ಪಿಸಲಾದ ಅವಕಾಶಗಳು

ಪ್ರಸಕ್ತ ಸಾಲಿಗೆ ಯಾವುದೂ ಇರುವುದಿಲ್ಲ.

xi) ಸಾಲ ವಸೂಲಾತಿಯ ಕಾರ್ಯವಿಧಾನ, ದಾವಾ ಹಾಗೂ ಡಿಕ್ರಿ ಪ್ರಕರಣಗಳನ್ನೊಳಗೊಂಡಂತೆ.

1) 2022–23ನೇ ಸಾಲಿನಲ್ಲಿ ಬ್ಯಾಂಕು ಸಾಲದ ನೀತಿಯನ್ನು ಪರಿಷ್ಕರಿಸಿ ಅನುಮೋದಿಸಿದೆ.

2) ಉಪನಿಯಮ 88ರಂತೆ ನೀಡಿದ ಸಾಲ ಸುಸ್ತಿಯಾದ 6 ತಿಂಗಳ ಅವಧಿಯೊಳಗೆ ಕಾನೂನು ಬದ್ಧ ಕ್ರಮ ತೆಗೆದುಕೊಳ್ಳಬೇಕು.

3) ಆಡಳಿತ ಮಂಡಳಿಯು ತನ್ನ ಪ್ರತಿ ಮಾಸಿಕ ಸಭೆಯಲ್ಲಿ ಎನ್.ಪಿ.ಎ ಆದ, ದೊಡ್ಡ ಪ್ರಮಾಣದ ಸಾಲಗಳ ಅನೇಕ ಪ್ರಕರಣಗಳನ್ನು ಪರಿಶೀಲಿಸುತ್ತಿದೆ. ಕೆಲವು ಪ್ರಕರಣಗಳ ವಿರುದ್ಧ SARFAESI ಕಾಯಿದೆಯಡಿ ಕ್ರಮವಿಡಲು, ಕೆಲವು ಪ್ರಕರಣಗಳಲ್ಲಿ ಸಾಲಗಾರರು ಮರುಪಾವತಿಸುವ ಬಗ್ಗೆ ಭರವಸೆ ನೀಡಿರುವ ಹಿನ್ನಲೆಯಲ್ಲಿ, ಕಾದುನೋಡಿ ಅನುಸರಣಾ ಕ್ರಮವಿಡುವ ಬಗ್ಗೆ ನಿರ್ಣಯಿಸಲಾಗಿದೆ.

xii) ಉದ್ದೇಶಪೂರ್ವಕ ಸುಸ್ತಿದಾರರನ್ನು ಗುರುತಿಸುವ ಬಗ್ಗೆ ಮತ್ತು ಇಂತಹ ಪ್ರಕರಣಗಳನ್ನು ವರದಿ ಮಾಡುವ ಬಗ್ಗೆ ಬ್ಯಾಂಕಿನ ನಿಯಮಗಳು.

ಬ್ಯಾಂಕಿನ ಆಡಳಿತ ಮಂಡಳಿಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆ ಅನ್ವಯ ಮೊದಲ 70 ಅತಿ ಹೆಚ್ಚು ಮೊಬಲಗಿನ ಬಾಕಿ ಇರುವ ಸುಸ್ತಿದಾರರ ಖಾತೆಗಳನ್ನು ಪರಿಶೀಲಿಸಿ, ಅದರ ವಸೂಲಿಗಾಗಿ ಕ್ರಮವಿಡಲಾಗುತ್ತಿದೆ.

**ಜಿ) ದೊಡ್ಡ ಪ್ರಮಾಣ ಸಾಲ/ ಮುಂಗಡಗಳು:**

ಈ ಸಾಲಗಳಲ್ಲಿ ಆಡಳಿತ ಮಂಡಳಿಯ ಗಮನ ಸೆಳೆಯಬಹುದಾದ ಮಹತ್ವದ, ಪ್ರತಿಕೂಲ ಸ್ವರೂಪದ ಪರಿಣಾಮಗಳ ಬಗ್ಗೆ ವಿಮರ್ಶೆ.

ಮುಂದಿನ ಕಂಡಿಕೆಗಳಲ್ಲಿ ವಿವರಿಸಿದೆ.

**28 ಸುಸ್ತಿ ಸಾಲಗಳ ವಿವರ**

1) ಶೇಕಡಾವಾರು ಸುಸ್ತಿ ಸಾಲಗಳ ಬಗ್ಗೆ ವಿಮರ್ಶೆ

ದಿ.31.03.2023ಕ್ಕೆ ಒಟ್ಟು ವಸೂಲಾಗಬೇಕಾದ ಸಾಲದ ಪೈಕಿ ರೂ. 2531.79 ಲಕ್ಷಗಳು ಸುಸ್ತಿ ಸಾಲಗಳಿದ್ದು, ಇದು ಒಟ್ಟು ಸಾಲಕ್ಕೆ ಶೇ. 12.66% ರಷ್ಟಿದೆ.

ಪ್ರತಿ ವರ್ಷವು ಸದರಿ ಸುಸ್ತಿ ಸಾಲವು ಏರುಗತಿಯಲ್ಲಿದೆ. ಇದನ್ನು ತಡೆಗಟ್ಟಬೇಕಾಗಿದೆ.

1) ಎನ್.ಪಿ.ಎ ಬಗ್ಗೆ ವಿಮರ್ಶೆ (ನಿಗದಿಪಡಿಸಿದ ನಮೂನೆಯಲ್ಲಿ ಎನ್.ಪಿ.ಎ ತಃಖ್ತೆಯನ್ನು ದೃಢೀಕರಿಸಿ ಲಗತ್ತಿಸುವುದು)

ಲಗತ್ತಿಸಲಾಗಿದೆ.

ದಿ.31.03.2023ಕ್ಕೆ ಬ್ಯಾಂಕು ಹೊಂದಿರುವ ರೂ.20002.32 ಲಕ್ಷಗಳ ಸಾಲದ ಬಾಕಿಯಲ್ಲಿ ರೂ.6834.75 ಲಕ್ಷಗಳ ಅನುತ್ಪಾದಕ ಆಸ್ತಿಯನ್ನು ತೋರಿಸಲಾಗಿದೆ. ಸದರಿ ಅನುತ್ಪಾದಕ ಆಸ್ತಿಯು ಒಟ್ಟು ಸಾಲದ ಬಾಕಿಗೆ ಶೇ.34.17ಗಳಾಗಿರುತ್ತದೆ. 2021–22ರಲ್ಲಿ ಇದರ ಪ್ರಮಾಣ ಶೇ.33.82 ಆಗಿತ್ತು.

ಬ್ಯಾಂಕಿನಲ್ಲಿ ಅನುತ್ಪಾದಕ ಆಸ್ತಿಗಳಿಗಾಗಿ ಮಾಡಿರುವ ಅವಕಾಶ ಹಾಗು ಕರಡು ಸಾಲದ ನಿಧಿ ದಿ.31.03.2023ಕ್ಕೆ ರೂ.3600.00 ಲಕ್ಷಗಳಿದ್ದು, ಇದರಿಂದಾಗಿ ನಿವ್ವಳ ಅನುತ್ಪಾದಕ ಆಸ್ತಿಯ ಪ್ರಮಾಣ ಶೇ.19.72 ರಷ್ಟಿದೆ. 2021–22ನೇ ಸಾಲಿನಲ್ಲಿ ಇದರ ಪ್ರಮಾಣ ಶೇ.20.24ರಷ್ಟಿತ್ತು.

ಪ್ರಸಕ್ತ ಸಾಲಿಗೆ ಬ್ಯಾಂಕು ಅನುತ್ಪಾದಕ ಆಸ್ತಿಗಳ ಮೇಲೆ ಮಾಡಬೇಕಾಗಿದ್ದ ಅವಕಾಶ ರೂ.3594.85 ಲಕ್ಷಗಳು, ಆದರೆ ಮಾಡಿರುವ ಅವಕಾಶ ರೂ. 3600.00 ಲಕ್ಷಗಳು ಅಂದರೆ ಅಗತ್ಯವಾದ ಅವಕಾಶಕ್ಕಿಂತಲು ರೂ. 5.15 ಲಕ್ಷಗಳ ಹೆಚ್ಚುವರಿ ಅವಕಾಶವನ್ನು ಕಲ್ಪಿಸಲಾಗಿದೆ.

ಅನುತ್ಪಾದಕ ಆಸ್ತಿಗಳ ಪ್ರಮಾಣ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿದ್ದು, ಬ್ಯಾಂಕು ಸುಸ್ತಿದಾರರ ಮೇಲೆ ವಸೂಲಾತಿಗೆ ತೀವ್ರ ಕ್ರಮಕೈಗೊಂಡು ಅನುತ್ಪಾದಕ ಆಸ್ತಿಗಳನ್ನು ಕಡಿಮೆ ಮಾಡಲು ಕ್ರಮ ಕೈಗೊಳುವುದು.

29 ಆಸ್ತಿ– ಜವಾಬ್ದಾರಿ ತಃಖ್ತೆಯಲ್ಲಿ ತೋರಿಸಿರುವ ಸಾಲಗಳ ಬಾಕಿ ಮೊತ್ತಗಳು ಬ್ಯಾಂಕ್‌ನಲ್ಲಿ ನಿರ್ವಹಿಸಿರುವ ಸದಸ್ಯರ ಸಾಲಗಳ ರಿಜಿಸ್ಟರ್‌ಗಳಲ್ಲಿನ ಮೊತ್ತಗಳಿಗೆ ತಾಳೆ ಹೊಂದುತ್ತದೆಯೇ?

ತಾಳೆ ಹೊಂದುತ್ತವೆ.

30 ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಅವರ ಸಂಬಂಧಿಕರು ಪಡೆದ ಸಾಲಗಳು ಸುಸ್ತಿ ಇದ್ದಲ್ಲಿ, ಕೆಳಕಂಡಂತೆ ವಿವರಗಳನ್ನು ನೀಡುವುದು.

ಯಾರು ಸುಸ್ತಿದಾರರಾಗಿರುವುದಿಲ್ಲ.

31 a) (i) ಆದ್ಯತಾ ವಲಯದ ಬಾಕಿ ಸಾಲದ ಪ್ರಮಾಣದ ಬಗ್ಗೆ ವಿವರಣೆ

ದಿ.31.03.2023ಕ್ಕೆ ಆದ್ಯತಾ ವಲಯದ ಸಾಲದ ಬಾಕಿ ರೂ. 6890.69 ಲಕ್ಷಗಳು. ಇದು ಒಟ್ಟು ಎ.ಎನ್.ಬಿ.ಸಿ.ಯ ಶೇ. 25.86% ರಷ್ಟಾಗುತ್ತದೆ.

(ii) ಸಾಲಾಖೈರಿಗೆ ನೀಡಿರುವ ಒಟ್ಟು ಮುಂಗಡದ ಶೇಕಡಾವಾರು ಪ್ರಮಾಣ

ಆದ್ಯತಾ ವಲಯದವರಿಗೆ ನೀಡಿರುವ ಸಾಲದ ಬಾಕಿಯು 31.3.2023 ಕ್ಕೆ ಒಟ್ಟು ಸಾಲದ ಶೇ. 34.45 ರಷ್ಟಿದೆ.

(iii) ದುರ್ಬಲ ವರ್ಗದವರಿಗೆ ನೀಡಿರುವ ಸಾಲಗಳಲ್ಲಿ ಸಾಲಾಖೈರಿಗೆ ಬರಬೇಕಾದ ಬಾಕಿ ಮೊತ್ತದ ಪ್ರಮಾಣದ ಬಗ್ಗೆ.

ದಿ.31.03.2023ಕ್ಕೆ ದುರ್ಬಲ ವರ್ಗದವರಿಂದ ಬರಬೇಕಾದ ಸಾಲದ ಬಾಕಿ ರೂ. 1,205.27 ಲಕ್ಷಗಳು, ಬ್ಯಾಂಕಿನ ಎ.ಎನ್.ಬಿ.ಸಿ.ಯ ಮೊತ್ತಕ್ಕೆ ಶೇ.4.52ರಷ್ಟಿದೆ.

(iv) ಸಾಲಾಖೈರಿಗೆ ಆದ್ಯತಾ ವಲಯದ ಪೈಕಿ ದುರ್ಬಲ ವರ್ಗದವರಿಗೆ ನೀಡಿರುವ ಸಾಲಗಳ ಶೇಕಡಾವಾರು ಪ್ರಮಾಣ

ದಿ.31.03.2023ಕ್ಕೆ ದುರ್ಬಲ ವರ್ಗದವರಿಂದ ಬಾಕಿ ಇರುವ ಸಾಲಗಳು ಆದ್ಯತಾ ವಲಯದಿಂದ ಬಾಕಿ ಇರುವ ಸಾಲಗಳ ಶೇ. 17.49 ರಷ್ಟಿದೆ.

b) ಎಲ್ಲಾ ತರಹದ ಸಾಲ, ಮುಂಗಡ, ಕ್ಯಾಷ್ ಕ್ರೆಡಿಟ್, ಓವರ್ ಡ್ರಾಫ್ಟ್ ಇತ್ಯಾದಿಗಳ ಮೇಲೆ (ವ್ಯಾಖ್ಯಾನ) ವಿವರಣೆ

ಈ ಮೇಲ್ಕಂಡಂತೆ ಆದ್ಯತಾ ವಲಯ, ದುರ್ಬಲ ವರ್ಗ ಹಾಗೂ ಮೈಕ್ರೋಎಂಟರ್ ಪ್ರೈಸರ್‌ರವರಿಗೆ ನೀಡಿರುವ ಸಾಲ, ಬ್ಯಾಂಕಿನ ಹಿಂದಿನ ಸಾಲಿನ ಎ.ಎನ್.ಬಿ.ಸಿ. ಮೊಬಲಗಿಗೆ ಕ್ರಮವಾಗಿ ಶೇ.60. ಶೇ.11.50 ಮತ್ತು ಶೇ.7.50ಇರಬೇಕು. ಬ್ಯಾಂಕ್ ಸದರಿ ಮಿತಿಯನ್ನು ತಲುಪದ ಕಾರಣ ಭಾರತೀಯ ರಿಸರ್ವ್ ಬ್ಯಾಂಕಿನ ದಿ.10.05.2019ರ ಸೂಚನೆಯಂತೆ ದಿ.09–12–2022 ಮತ್ತು 09–03–2023 ರಂದು ರೂ.101 ಕೋಟಿಗಳ ಆದ್ಯತಾ ವಲಯ ಪ್ರಮಾಣ ಪತ್ರಗಳನ್ನು ಆರ್.ಬಿ.ಐ.ನ ಕುಬೇರ ಪೋರ್ಟಲ್‌ನಿಂದ, ಹೆಚ್.ಡಿ.ಎಫ್.ಸಿ. ಬ್ಯಾಂಕ್ ಮುಖಾಂತರ ಖರೀದಿಸಿದ್ದು, ತದನಂತರ ಬ್ಯಾಂಕಿನ ಆದ್ಯತಾ ವಲಯ ದುರ್ಬಲ ವರ್ಗ ಹಾಗೂ ಮೈಕ್ರೋ ಎಂಟರ್‌ಪ್ರೈಸಸ್‌ನ ಸಾಲದ ಪ್ರಮಾಣ ದಿ.31.03.2023ಕ್ಕೆ ಕ್ರಮವಾಗಿ ಎ.ಎನ್.ಬಿ.ಸಿ.ಯ ಶೇ.71.67, ಶೇ.13.68, ಶೇ.9.49 ಗಳಷ್ಟಾಗಿದ್ದು, ಭಾರತೀಯ ರಿಸರ್ವ್ ಬ್ಯಾಂಕ್ ನಿಗದಿಗೊಳಿಸಿದ ಮಿತಿಯಲ್ಲಿರುತ್ತದೆ.

**ಸಾಲಗಳಲ್ಲಿ ಗಮನಿಸಲಾದ ನ್ಯೂನತೆಗಳು:**
[ಸಾಲ ನೀಡಿಕೆಯಲ್ಲಿ ಗಮನಿಸಲಾದ ನ್ಯೂನ್ಯತೆ, ಉಪನಿಯಮಕ್ಕೆ ವಿರುದ್ಧವಾಗಿ ನೀಡಲಾಗಿರುವ ಸಾಲ, ಜೋಡಣೆ ಷೇರು ಪಡೆಯದೇ ಇರುವ ಬಗ್ಗೆ, ಬಡ್ಡಿ ಆಕರಣೆ ಸರಿ ಇಲ್ಲದ ಬಗ್ಗೆ ಪೂರ್ಣ ವಿಮರ್ಷೆ ನೀಡುವುದು].

1) ಬ್ಯಾಂಕಿನಲ್ಲಿ ಕಾಲಕಾಲಕ್ಕೆ ಸಾಲಗಳ ಬಾಕಿಗಳ ಬಗ್ಗೆ ಸಾಲಗಾರರ ಧೃಡೀಕರಣ ಪಡೆಯುವ ಪದ್ಧತಿ ಇರುವುದಿಲ್ಲ.

32. **ನಾನ್ ಬ್ಯಾಂಕಿಂಗ್ ಆಸ್ತಿಗಳು:**
ವರದಿ ಸಾಲಿನ ಅಂತ್ಯಕ್ಕೆ ಯಾವುದೇ ಬ್ಯಾಂಕೇತರ ಆಸ್ತಿಗಳನ್ನು ಹೊಂದಿರುವುದಿಲ್ಲ.

33. **ಆಸ್ತಿ ಜವಾಬ್ದಾರಿ ನಿರ್ವಹಣೆ**

i) ಈ ಸಂಬಂಧ ಜಾರಿಯಲ್ಲಿರುವ ಕಾರ್ಯನೀತಿ ಮತ್ತು ಆರ್.ಬಿ.ಐ. ಮಾರ್ಗಸೂಚಿಗಳನ್ನು ಪಾಲಿಸುತ್ತಿರುವ ಬಗ್ಗೆ.

ಬ್ಯಾಂಕಿನ ಆಡಳಿತ ಮಂಡಳಿಯು, ಬ್ಯಾಂಕಿನ ಉಪನಿಯಮ, ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ, ಹಾಗು ಆರ್.ಬಿ.ಐ.ನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದೆ.

ii) ಆಸ್ತಿ ಜವಾಬ್ದಾರಿ ನಿರ್ವಹಣಾ ಸಮಿತಿಯ ಕಾರ್ಯಚಟುವಟಿಕೆ ಕುರಿತು

ಬ್ಯಾಂಕು ಶೇ.100% ಗಣಕೀಕೃತವಾಗಿದ್ದು, ಲೆಕ್ಕಪತ್ರಗಳನ್ನು ಬಾಕಿ ಉಳಿಯುದಂತೆ ಸಿದ್ದಪಡಿಸಿಕೊಳ್ಳಲಾಗುತ್ತಿದೆ. ಇದರಿಂದಾಗಿ, ಯಾವುದೇ ಮಾಹಿತಿ ತಕ್ಷಣ ಲಭ್ಯವಾಗುತ್ತಿದೆ.

iii) ನಿಯತಕಾಲಿಕವಾಗಿ ದ್ರವ್ಯಾಸ್ಥಿ ನಿರ್ವಹಣೆಯಾಗುತ್ತಿರುವ ಬಗ್ಗೆ.
ಆರ್.ಬಿ.ಐ.ನ ಸೂಚನೆಗಳನ್ವಯ ದ್ರವ್ಯಾಸ್ಥಿಯನ್ನು ಯಾವುದೇ ಲೋಪಗಳಾಗದಂತೆ ನಿರ್ವಹಿಸಲಾಗುತ್ತಿದೆ.

| | |
|---|---|
| 34 | **ಡೆಡ್‌ಸ್ಟಾಕು : ವಿವರಣೆ**<br>ದಿ. 31.03.2023ಕ್ಕೆ ಬ್ಯಾಂಕಿನಲ್ಲಿ ಒಟ್ಟು ಚರಾಸ್ತಿಗಳ ವಿವರ (ಸವಕಳಿ ತೆಗೆದ ನಂತರ)<br>1) ಪೀಠೋಪಕರಣಗಳು – 1,14,67,735/–<br>2) ಗಣಕಯಂತ್ರಗಳು – 12,78,390/–<br>ಒಟ್ಟು – 1,27,46,125/–<br>ಪೀಠೋಪಕರಣಗಳ ಮೌಲ್ಯದಲ್ಲಿ ವಿದ್ಯುತ್ ಉಪಕರಣಗಳ ಮೌಲ್ಯ ರೂ.14,58,502/–ಗಳು ಇರುತ್ತದೆ. |
| 35 | **ಕಟ್ಟಡ– ವಿವರಣೆ :** |

| ಎ ಸ್ಥಿರಾಸ್ತಿ | ವಿವರ | ವಿಸ್ತೀರ್ಣ | ಮೊತ್ತ ರೂ. |
|---|---|---|---|
| **1 <u>ಸಂಘವು ಹೊಂದಿರುವ ಸ್ಥಿರಾಸ್ತಿಯ ವಿವರಗಳು</u>** | | | |
| ಅ) ನಂ.106. ಆರ್.ವಿ.ರಸ್ತೆ, ವಿ.ವಿ.ಪುರಂ ಬೆಂಗಳೂರು – 560 004 | ಕಟ್ಟಡ | 40*80 ಚ.ಅಡಿ | 95,51,393 |
| ಆ) ನಂ.188. ಆರ್.ವಿ.ರಸ್ತೆ, ಮಾವಳ್ಳಿ, ಬೆಂಗಳೂರು – 560 004 | ಕಟ್ಟಡ | 2381 ಚ.ಅಡಿ | 1,43,89,507 |
| ಒಟ್ಟು | | | 2,39,40,900 |

1) ಸ್ಥಿರಾಸ್ತಿಯಲ್ಲಿ 2 ನಿವೇಶನಗಳ ಮೂಲ ಬೆಲೆ ರೂ.1,77,02,166/–

2) ದಿನಾಂಕ 01.04.2023ರಲ್ಲಿ ಕಟ್ಟಡಗಳ ಪುಸ್ತಕ ಬೆಲೆ ರೂ. 66,99,074/–

3) 2022–23 ರಲ್ಲಿ ಕಟ್ಟಡ ಖಾತೆಗೆ ಜಮಾ ಆಗಿದ್ದು ರೂ. 66,273/–

4) 2022–23ಕ್ಕೆ ಶೇ.5%ರಂತೆ ಸವಕಳಿ <u>(–)ರೂ.3,26,613/–</u> <u>ರೂ.62,38,734/–</u>

**ದಿನಾಂಕ 31.03.2023ಕ್ಕೆ ಸ್ತಿರಾಸ್ತಿ ಬೆಲೆ** **ಒಟ್ಟು <u>ರೂ.2,39,40,900/–</u>**

ದಿನಾಂಕ 31.3.2023 ಕ್ಕೆ ವಾಹನಗಳ ವಿವರ ಕೆಳಕಂಡಂತೆ ಇರುತ್ತದೆ.

| **ಕ್ರಸಂ** | **ಖರೀದಿಸಿದ ದಿನಾಂಕ** | **ವಾಹನ ವಿಧ** | **ವಾಹನ ಸಂಖ್ಯೆ** | **ವಾಹನ ಮೌಲ್ಯ (ಸವಕಳಿ 20% ಕಳೆದು)** |
|---|---|---|---|---|
| 1 | 13.01.2017 | ಹೋಂಡಾ ಸಿಟಿ | KA 04 MU 7823 | 3,12,850.00 |
| | **ಒಟ್ಟು** | | | **3,12,850.00** |

ಬ್ಯಾಂಕಿನಲ್ಲಿ ಲಾಗ್ ಪುಸ್ತಕವನ್ನು ಬರೆದಿಡಲಾಗಿದೆ.

ವಾಹನಗಳ ವಿಮೆಯು ಚಾಲ್ತಿಯಲ್ಲಿದೆ. ಸದರಿ ವಾಹನಗಳು 1 ಲೀ. ಇಂಧನಕ್ಕೆ ಸರಾಸರಿ 8–9 ಕಿ.ಮಿ. ದೂರವನ್ನು ಚಲಿಸಿರುತ್ತದೆ.

| | | |
|---|---|---|
| 36 | ಬಿಲ್ಸ್, ಡಿಸ್ಕೌಂಟ್, ಕ್ಲಿಯರಿಂಗ್, ಡ್ರಾಫ್ಟ್ ಇತ್ಯಾದಿಗಳು | ವರ್ಷಾಂತ್ಯಕ್ಕೆ ಯಾವುದೇ ಬಾಕಿ ಇಲ್ಲ. |
| 37 | ಬಡ್ಡಿ, ಬ್ಯಾಂಕ್ ಚಾರ್ಜಸ್ ಇತ್ಯಾದಿಗಳು | ಪ್ರಸಕ್ತ ಸಾಲಿನಲ್ಲಿ ಬ್ಯಾಂಕು ಪಾವತಿಸಿದ ಬಡ್ಡಿ ಮತ್ತು ಗಳಿಸಿದ ಬಡ್ಡಿ ವಿವರಗಳು ಕೆಳಕಂಡಂತಿವೆ.<br>1) ಸರಾಸರಿ ಠೇವಣಿಗಳು ರೂ.44,152.11 ಲಕ್ಷ.<br>ಬಡ್ಡಿ ಪಾವತಿ ರೂ.2,804.86 ಲಕ್ಷ.<br>ಠೇವಣಿಗಳ ವೆಚ್ಚದ ಪ್ರಮಾಣ ಶೇ. 6.35<br>2) ಸಾಲಗಳ ಮತ್ತು ಹೂಡಿಕೆಗಳ ಸರಾಸರಿ ಮೊಬಲಗು ರೂ.50141.20 ಲಕ್ಷ<br>ಬಡ್ಡಿ ಗಳಿಕೆ ರೂ.4296.37 ಲಕ್ಷ.<br>ಗಳಿಕೆಯ ಪ್ರಮಾಣ ಶೇ. 8.57<br>ನಿವ್ವಳ ಗಳಿಕೆ ಶೇ.6.35 (–) 8.57 = ಶೇ.2.22 |
| 38 | ಹೊಂದಾಣಿಕೆ ಶೀರ್ಷಿಕೆಗಳಡಿಯಲ್ಲಿನ ಅಂಶಗಳಿಗೆ ವಿವರಗಳನ್ನು ಪರಿಶೀಲಿಸಿದ ಬಗ್ಗೆ ಅವುಗಳು ಖಾತೆಗಳ ಶಿಲ್ಕುಗಳಿಗೆ ತಾಳೆ ಹೊಂದುತ್ತವೆಯೇ? | ತಾಳೆ ಹೊಂದುತ್ತದೆ |
| 39 | ಆಂತರಿಕ ಹತೋಟಿ<br>a) ಲೆಕ್ಕಪತ್ರಗಳ ನಿರ್ವಹಣೆ ಬಗ್ಗೆ ನೀಡಿರುವ ಮಾರ್ಗ ಸೂಚಿಗಳು/ ಆದೇಶ/ ಕೈಪಿಡಿಗಳ ಬಗ್ಗೆ | ಪಾಲಿಸಲಾಗುತ್ತಿದೆ. |
| | b) ಲೆಕ್ಕಪುಸ್ತಕಗಳ ಸರಿದೂಗಿಸುವಿಕೆ (Balancing) / ಸಮನ್ವಯ ಉಪಪುಸ್ತಕಗಳ ಮೇಲೆ ಹತೋಟಿ | |
| | (i) ಲೆಕ್ಕಪುಸ್ತಕಗಳ ಸರಿದೂಗಿಸುವಿಕೆ. ಮೇಲ್ವಿಚಾರಣೆಗೆ ಅಳವಡಿಸಲಾದ ಪದ್ಧತಿ/ ಹತೋಟಿಗಳು, ಸಮನ್ವಯ ಮತ್ತು ಉಪಪುಸ್ತಕಗಳ ನಿರ್ವಹಣೆಯಲ್ಲಿ ಅನುಸರಿಸಿದ ಪದ್ಧತಿಯ ಬಗ್ಗೆ. | ಲೆಕ್ಕಪತ್ರಗಳನ್ನು ಶೇ.100% ರಷ್ಟು ಗಣಕೀಕೃತಗೊಳಿಸಿದ್ದು, ಲೆಕ್ಕಪತ್ರಗಳನ್ನು ಆಗಿಂದಾಗ್ಗೆ ಸಮನ್ವಯ ಮಾಡಿಕೊಳ್ಳಲಾಗುತ್ತಿದೆ. |
| | (ii) ಇವುಗಳ ಅನುಷ್ಠಾನದ ಕ್ರಮದ ಬಗ್ಗೆ ಹಿಂಬಾಲಿಕೆ ಕ್ರಮ | ಹಿಂಬಾಲಿಕೆ ಕ್ರಮ ಇಡಲಾಗಿದೆ. |

| | | |
|---|---|---|
| | c) **ಅಂತರ ಶಾಖೆಗಳ ಲೆಕ್ಕಗಳ ಸಮನ್ವಯತೆ** | |
| | i) ರಿಜಿಸ್ಟರ್‌ಗಳ ನಿರ್ವಹಣೆಯಲ್ಲಿ ಅನುಸರಿಸಲಾದ ಪದ್ಧತಿ/ ಕ್ರಮದ ಬಗ್ಗೆ ವಿವರಣೆ. | ಬ್ಯಾಂಕಿನ ಶಾಖೆಗಳಲ್ಲಿ ಲೆಕ್ಕಪತ್ರಗಳನ್ನು ಶೇ.100% ರಷ್ಟು ಗಣಕೀಕೃತಗೊಳಿಸಲಾಗಿದೆ. |
| | ii) ಶಾಖೆಗಳ ಹಾಗೂ ಕೇಂದ್ರದ ಲೆಕ್ಕಗಳಲ್ಲಿ ಅಸಮಾನ್ಯ ಎಂಟ್ರಿಗಳನ್ನು ಹಾಕಲಾಗಿದೆಯೇ ಎಂಬುದನ್ನು ಪರೀಕ್ಷಾರ್ಥವಾಗಿ ಪರಿಶೀಲಿಸುವುದು. | ಯಾವುದೇ ಅಸಾಮಾನ್ಯ ಎಂಟ್ರಿಗಳು ಇರುವುದಿಲ್ಲ. |
| | iii) ಹೆಚ್ಚಿನ ಮೊತ್ತದ ಹಾಗೂ ದೀರ್ಘಕಾಲದ ಬಾಕಿಯಿರುವ ನಮೂದುಗಳನ್ನು ಕಂಡುಕೊಳ್ಳಲು ಅನುಸರಿಸಲಾದ ಪದ್ಧತಿಯ ಬಗ್ಗೆ ಹಾಗೂ ಅವುಗಳ ಸ್ಥಿತಿ | ಬ್ಯಾಂಕಿನಲ್ಲಿ ಲೆಕ್ಕಪತ್ರಗಳನ್ನು ಸಮನ್ವಯ ಮಾಡಿಕೊಳ್ಳುವ ಪದ್ದತಿಯಿದ್ದು, ಅದರಂತೆ ಹೆಚ್ಚಿನ ಮೊತ್ತದ ಹಾಗು ಧೀರ್ಘಕಾಲದ ಬಾಕಿಗಳನ್ನು ಗುರುತಿಸಲಾಗುತ್ತಿದೆ. |
| | iv) ಸಮನ್ವಯಗಳನ್ನು ತಹಲ್‌ವರೆಗೆ ಮಾಡುತ್ತಿರುವ ವಿಚಾರದಲ್ಲಿ ತೆಗೆದುಕೊಳ್ಳಲಾದ ಕ್ರಮಗಳು | ಎಲ್ಲಾ ಬ್ಯಾಂಕ್ ಲೆಕ್ಕಗಳನ್ನು, ಹೊಂದಾಣಿಕೆ ಲೆಕ್ಕಗಳನ್ನು ಆಗಿಂದಾಗ್ಗೆ ಸಮನ್ವಯ ಮಾಡಿಕೊಳ್ಳಲಾಗುತ್ತಿದೆ. |
| | v) ಹಳೆಯ ಬಾಕಿಯಲ್ಲಿರುವ ನಮೂದುಗಳ ಬಗ್ಗೆ ಆರ್.ಬಿ.ಐ. ಸೂಚನೆಗಳನ್ನು ಪಾಲಿಸುತ್ತಿರುವ ಬಗ್ಗೆ. | ಬ್ಯಾಂಕು ಆರ್.ಬಿ.ಐ. ಸೂಚನೆಗಳನ್ನು ಪಾಲಿಸಲಾಗುತ್ತಿದೆ. |
| | d) **ಶಾಖೆಗಳ ಪರಿವೀಕ್ಷಣೆ:** | |
| | i) ಶಾಖೆಗಳ ಪರಿವೀಕ್ಷಣೆ ಆಗಿಂದಾಗ್ಗೆ ನಡೆಸುವ ಪದ್ಧತಿ ಬಗ್ಗೆ/ ಎಲ್ಲಾ ವಿಚಾರಗಳನ್ನು ಅಳವಡಿಸಿಕೊಳ್ಳಲಾಗಿದೆಯೇ? ಆಂತರಿಕ ತನಿಖೆ (ಪರಿವೀಕ್ಷಣೆ) ಸಮವರ್ತಿ ಲೆಕ್ಕಪರಿಶೋಧನೆ ಅಥವಾ ರೆವಿನ್ಯೂ ಆಡಿಟ್‌ಗಳ ಹಾಗೂ ವರದಿ ಮಾಡುವ ಬಗ್ಗೆ ವಿವರಣೆ | ಬ್ಯಾಂಕಿನಲ್ಲಿ ಅಂತರಿಕ ಲೆಕ್ಕಪರಿಶೋಧನೆ ವ್ಯವಸ್ಥೆಯಿದ್ದು, ಅಂತರಿಕ ಲೆಕ್ಕಪರಿಶೋಧನೆ ನಡೆಯುತ್ತಿದೆ. ಅಂತರಿಕ ಲೆಕ್ಕಪರಿಶೋಧನಾ ವರದಿಗಳನ್ನು ತ್ರೈಮಾಸಿಕವಾಗಿ ನೀಡುತ್ತಿದ್ದು, ಬ್ಯಾಂಕಿನ ಲೆಕ್ಕಪರಿಶೋಧನಾ ಸಮಿತಿಯು ತ್ರೈಮಾಸಿಕವಾಗಿ ಪರಿಶೀಲಿಸುತ್ತಿದ್ದು, ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲಾಗುತ್ತಿದೆ. |
| | ii) ಮೇಲಿನ ವರದಿಗಳ ಮೇಲೆ ಹಿಂಬಾಲಿಕೆ ಕ್ರಮ ಹಾಗೂ ಅನುಪಾಲನಾ ವರದಿ ಪಡೆಯುತ್ತಿರುವ ಬಗ್ಗೆ ಇರುವ ಪದ್ಧತಿ ಕುರಿತು ವಿವರಣೆ | ಅಂತರಿಕ ಲೆಕ್ಕಪರಿಶೋಧನಾ ವರದಿಗಳ ಮೇಲೆ ಹಿಂಬಾಲಿಕೆ ಮತ್ತು ಅನುಪಾಲನಾ ಕ್ರಮವಿಡಲಾಗುತ್ತಿದೆ. |

| | | |
|---|---|---|
| | e) **ಜಾಗರೂಕತೆ**<br>i. ವರದಿ ಸಾಲಿನಲ್ಲಿ ಲೆಕ್ಕಪರಿಶೋಧನೆಯಲ್ಲಿ ಪತ್ತೆ ಹಚ್ಚಲಾದ ಗುರುತರ ವಂಚನೆ ಪ್ರಕರಣಗಳ ಬಗ್ಗೆ. | ಬ್ಯಾಂಕಿನ ಪದ್ಮನಾಭನಗರ ಶಾಖೆಯಲ್ಲಿ ಖಾತೆ ಸಂಖ್ಯೆ 10065500209 ಸಾಲದ ಪ್ರಕರಣದಲ್ಲಿ ರೂ 50.00 ಲಕ್ಷದ ಸಾಲಗಾರರೊಬ್ಬರು ನಕಲಿ ದಾಖಲೆ ಪತ್ರ ಮತ್ತು ಇ.ಸಿ ದಾಖಲೆಗಳನ್ನು ಬ್ಯಾಂಕಿಗೆ ಸಲ್ಲಿಸಿ ಸಾಲ ಪಡೆದಿರುತ್ತಾರೆ. ಮುಂದುವರಿದು, ಈ ಮೇಲೆ ಸೂಚಿಸಿದ ಸಾಲಗಳ ದಾಖಲೆಗಳು ನಕಲಿಯೆಂದು ಫೆಬ್ರವರಿ ಮಾಹೆಯಲ್ಲಿ ಬ್ಯಾಂಕಿನ ಗಮನಕ್ಕೆ ಬಂದಿರುತ್ತದೆ. |
| | ii. ಜಾಗ್ರತಾ ವರದಿಗಳ ಮೇಲೆ ಕೈಗೊಂಡ ಅನುಸರಣಾ ಕ್ರಮ | ಆದಾಗ್ಯೂ ಲೆಕ್ಕಪರಿಶೋಧನ ವೇಳೆಯಲ್ಲಿ ಈ ಸಂಬಂದ ಪರಿಶೀಲಿಸಿ. ಬ್ಯಾಂಕು ಇದನ್ನು ಭದ್ರತೆ ಇಲ್ಲದ ಅನುತ್ಪಾದಕ ಸಾಲಗಳೆಂದು ಪರಿಗಣಿಸಿ ಸದರಿ ಸಾಲಗಳ ಮೇಲೆ ಶೇಕಡ 100ರಷ್ಟು ಅವಕಾಶ ಕಲ್ಪಿಸಿದೆ. ಮತ್ತು ದಿನಾಂಕ 01–03–2023 ರಂದು ಆರ್.ಬಿ.ಐಗೆ ಪತ್ರ ಮುಖೇನ ತಿಳಿಸಲಾಗಿದೆ. |
| | iii. ಅಮಾನತ್ತು ಲೆಕ್ಕಗಳು, ಸಂಡ್ರಿ ಡಿಪಾಜಿಟ್‌ಗಳು, ಇತ್ಯಾದಿಗಳ ಬಗ್ಗೆ | ಆಗಿಂದಾಗ್ಗೆ ಸಮನ್ವಯ ಮಾಡಿಕೊಳ್ಳಲಾಗುತ್ತಿದೆ ಮತ್ತು ಲೆಕ್ಕಗಳನ್ನು ಹೊಂದಾಣಿಕೆ ಮಾಡಿ ಕೊಳ್ಳಲು ಅಗತ್ಯ ಕ್ರಮವಿಡಲಾಗುತ್ತಿದೆ. |
| | iv. ಈ ಖಾತೆಗಳಲ್ಲಿನ ಜಮಾ ಹಾಗೂ ಖರ್ಚುಗಳನ್ನು ತೀರಿಸುವ (Clearance) ಪದ್ಧತಿ ಬಗ್ಗೆ. ಈ ಶೀರ್ಷಿಕೆಯಡಿಯಲ್ಲಿ ಅಸಮಾನ್ಯ ನಮೂದುಗಳ ಪರೀಕ್ಷಾರ್ಥ ಪರಿಶೀಲನೆ ಕೈಗೊಳ್ಳುವುದು. | ಮೇಲಿನಂತೆ |
| 40. | ಆಡಳಿತ /ಸಿಬ್ಬಂದಿ | ದಿ.25.01.2020 ರಂದು ನಡೆದ ಬ್ಯಾಂಕಿನ ಚುನಾವಣೆಯಲ್ಲಿ 13 ಜನ ನಿರ್ದೇಶಕರು ಚುನಾಯಿತರಾಗಿದ್ದು, ಇಬ್ಬರು ವೃತ್ತಿಪರ ನಿರ್ದೇಶಕರು ಸೇರಿ 15 ಜನ ನಿರ್ದೇಶಕರಿರುತ್ತಾರೆ.<br><br>ಬ್ಯಾಂಕಿಗೆ ಒಟ್ಟು 160 ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ 107 ಹುದ್ದೆಗಳು ಭರ್ತಿಯಾಗಿವೆ. ಖಾಲಿ ಹುದ್ದೆಗಳು 53. ಇದರಲ್ಲಿ 1 ಪ್ರಧಾನ ವ್ಯವಸ್ಥಾಪಕರ ಹುದ್ದೆ, 1 ಉಪ ಪ್ರಧಾನ ವ್ಯವಸ್ಥಾಪಕರ ಹುದ್ದೆ ಹಾಗು 6 ವ್ಯವಸ್ಥಾಪಕರ ಹುದ್ದೆಗಳು ಖಾಲಿ ಇರುತ್ತದೆ. |

| | | |
|---|---|---|
| 41. | ಆಕಸ್ಮಿಕ ವೆಚ್ಚಗಳು | ಯಾವುದು ಇರುವುದಿಲ್ಲ. |
| 42. | ಬೋನಸ್ಸು/ ಎಕ್ಸ್‌ಗ್ರೇಷಿಯಾ ಇತ್ಯಾದಿ | ಬೋನಸ್ ನೀಡಿರುವುದಿಲ್ಲ. |
| 43. | ಲಾಭ ವಿಲೇವಾರಿ | ಬ್ಯಾಂಕು 2021–22ರಲ್ಲಿ ನಷ್ಟ ಹೊಂದಿರುವುದರಿಂದ ಲಾಭ ವಿಲೇವಾರಿ ಅನ್ವಯಿಸುವುದಿಲ್ಲ. |
| 44. | **<u>ಡಿವಿಡೆಂಡ್:</u>**<br>ಬ್ಯಾಂಕಿನ ಆರ್ಥಿಕ ಸ್ಥಿತಿಗನುಗುಣವಾಗಿ ಶೇಕಡಾವಾರು ಡಿವಿಡೆಂಡ್‌ನ್ನು ಘೋಷಿಸಲಾಗಿದೆಯೇ? | ಹಿಂದಿನ ಸಾಲಿನಲ್ಲಿ ಬ್ಯಾಂಕು ನಷ್ಟದಲ್ಲಿದ್ದರಿಂದ ಡಿವಿಡೆಂಡ್‌ನ್ನು ನೀಡಿರುವುದಿಲ್ಲ. |
| 45. | **ಸಭೆಗಳು** | |
| | a) ಕೊನೆಯ ಸರ್ವ ಸದಸ್ಯರ ಮಹಾ ಸಭೆ ನಡೆದ ದಿನಾಂಕ ಹಾಗೂ ಅದು ಯಾವ ಸಾಲಿಗೆ ಸಂಬಂಧಿಸಿದ್ದು, ಎಂಬುದರ ಬಗ್ಗೆ | ದಿ. 23.09.2022 ರಂದು 2021–22ನೇ ಸಾಲಿಗೆ ವರ್ಚುಯಲ್ ಮಹಾಸಭೆ ನಡೆಸಲಾಗಿದೆ. |
| | b) ವರದಿ ಸಾಲಿನಲ್ಲಿ ಆಡಳಿತ ಮಂಡಳಿ ಮತ್ತು ಕಾರ್ಯನಿರ್ವಾಹಕರ ಮಂಡಳಿ ನಡೆಸಿದ ಸಭೆಗಳ ಸಂಖ್ಯೆ | 2022–23ನೇ ಸಾಲಿನಲ್ಲಿ 17 ಆಡಳಿತ ಮಂಡಳಿ ಸಭೆಗಳು ಮತ್ತು 46 ಉಪ ಸಮಿತಿ ಸಭೆಗಳು ನಡೆದಿರುತ್ತವೆ. |
| | c) ಆಡಳಿತ ಮಂಡಳಿ ಮತ್ತು ಪ್ರಧಾನ ಕಾರ್ಯ ನಿರ್ವಹಣಾಧಿಕಾರಿಯ ಕಾರ್ಯಕ್ಷಮತೆಯ ಬಗ್ಗೆ ಸಮಗ್ರ ವಿವರಣೆ. | ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಬ್ಯಾಂಕಿನ ಎಲ್ಲಾ ವಲಯಗಳ ಬಗ್ಗೆ ಸೂಕ್ತ ಜ್ಞಾನ ಹೊಂದಿದ್ದು, ಹೊಂದಾಣಿಕೆಯೊಂದಿಗೆ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. |
| 46 | **ತನಿಖೆ / ಹಿಂದಿನ ತನಿಖೆಯ ದಿನಾಂಕ** | |
| | a) ಆರ್.ಬಿ.ಐ ಯಿಂದ | ಭಾರತೀಯ ರಿಸರ್ವ್ ಬ್ಯಾಂಕ್ ದಿ.31.03.2022ರ ವರೆಗೆ ತನಿಖೆ ನಡೆದಿದ್ದು ತನಿಖೆಯ ವರದಿ ಲಭ್ಯವಿದ್ದು, ಬ್ಯಾಂಕು ದಿನಾಂಕ 21.10.2022 ರಂದು ಅನುಪಾಲನಾ ವರದಿ ಸಲ್ಲಿಸಿರುತ್ತದೆ. |

| | | |
|---|---|---|
| 47 | **ಶಾಖೆಗಳ ಬಗ್ಗೆ ವಿವರಣೆ:** | |
| | ಎ) ಆರ್ಥಿಕ ಸ್ಥಿತಿ ಮತ್ತು ಶಾಖೆಗಳ ಸ್ವಾವಲಂಬನೆ ಬಗ್ಗೆ | ಬ್ಯಾಂಕು 9 ಶಾಖೆಗಳನ್ನು ಹೊಂದಿದ್ದು, ಈ ಶಾಖೆಗಳ ಪೈಕಿ 5 ಶಾಖೆಗಳು ನಷ್ಟದಲ್ಲಿ ನಡೆಯುತ್ತಿದ್ದು, ಉಳಿದೆಲ್ಲಾ ಶಾಖೆಗಳು ಲಾಭದಲ್ಲಿ ನಡೆಯುತ್ತಿವೆ. |
| | ಬಿ) ಶಾಖೆಗಳು ನಿಯತಕಾಲಿಕೆಗಳನ್ನು ವಿಳಂಬವಿಲ್ಲದೆ ಸಲ್ಲಿಸುತ್ತಿವೆಯೇ? | ವಿಳಂಬವಿಲ್ಲದೆ ಸಲ್ಲಿಸಲಾಗುತ್ತಿದೆ. |
| | ಸಿ) ಹೊಂದಾಣಿಕೆ ಲೆಕ್ಕಗಳ ಬಗ್ಗೆ – "ಕೇಂದ್ರ ಕಛೇರಿಯ ಹೊಂದಾಣಿಕೆ ಲೆಕ್ಕ"– ಶಾಖೆಯ ಹೊಂದಾಣಿಕೆ ಲೆಕ್ಕ ಮತ್ತು ಇತರೆ ಅಮಾನತು ಲೆಕ್ಕಗಳ ಸ್ಥಿತಿಯ ಬಗ್ಗೆ | ಕೇಂದ್ರ ಮತ್ತು ಶಾಖೆಗಳ ಲೆಕ್ಕಗಳನ್ನು ಸಮನ್ವಯ ಮಾಡಿಕೊಂಡು ಹೊಂದಾಣಿಕೆ ಮಾಡಿಕೊಳ್ಳಲಾಗುತ್ತಿದೆ. |
| 48 | **ಸ್ವಯಂಚಾಲಿತ ಗಣಕೀಕರಣ ವ್ಯವಸ್ಥೆ (Automation & Computerisation)** | |
| | i) ಸ್ವಯಂಚಾಲಿತ ಗಣಕೀಕರಣ ವ್ಯವಸ್ಥೆ ಜಾರಿಯಲ್ಲಿರುವ ಬಗ್ಗೆ ಮತ್ತು ಪ್ರಸ್ತುತ ಸಾಲಿನಲ್ಲಿ ಈ ಕಾರ್ಯದಲ್ಲಿನ ಪ್ರಗತಿ. | ಬ್ಯಾಂಕು ಶೇ.100%ರಷ್ಟು ಗಣಕೀಕೃತಗೊಂಡಿದೆ. |
| | ii) ಸ್ವಯಂಚಾಲಿತ ವ್ಯವಸ್ಥೆಗೆ ಒಳಪಡದೇ ಇರುವ ಗಂಭೀರ ಅಂಶಗಳ ಕುರಿತು ವಿಮರ್ಶೆ | ಯಾವುದೂ ಇರುವುದಿಲ್ಲ. |
| | iii) ಗಣಕೀಕರಣಗೊಳಿಸಿರುವ ಶಾಖೆಗಳ ಸಂಖ್ಯೆ ಹಾಗೂ ಗಣಕೀಕರಣಗೊಂಡ ಪ್ರಮಾಣ | ಶೇ.100% |
| | iv) ತುರ್ತು ಪರಿಸ್ಥಿತಿಯಲ್ಲಿ ಗಣಕೀಕೃತ ಮಾಹಿತಿಗಳನ್ನು ಸಂರಕ್ಷಿಸುವ ಬಗ್ಗೆ ಪಾಲಿಸುತ್ತಿರುವ ನಿಯಮ (Backups/ Offsite storage) | ಬ್ಯಾಂಕಿನಲ್ಲಿ ತುರ್ತು ಪರಿಸ್ಥಿತಿಯನ್ನು ನಿರ್ವಹಿಸಲು ಬ್ಯಾಕ್‌ಅಪ್ ವ್ಯವಸ್ಥೆಯನ್ನು ಹೊಂದಿದೆ. |
| | v) E.D.P. ಲೆಕ್ಕಪರಿಶೋಧನೆ ಜಾರಿಯಲ್ಲಿರುವ ಬಗ್ಗೆ ಮತ್ತು ಅಳವಡಿಕೆ ಪ್ರಮಾಣ. | ಪ್ರಸಕ್ತ ಸಾಲಿನ ಅಂತ್ಯದ ವರೆಗೆ ಇ.ಡಿ.ಪಿ. ಲೆಕ್ಕಪರಿಶೊಧನೆ ಆಗಿರುತ್ತದೆ. |

| | | |
|---|---|---|
| | vi) ಇ–ಬ್ಯಾಂಕಿಂಗ್: ಜಾರಿಯಲ್ಲಿರುವ ಮಾರ್ಗಸೂಚಿಗಳು, ಈ ಕುರಿತು ಮೇಲ್ವಿಚಾರಣೆ ಮತ್ತು ಕಾಲಕಾಲಕ್ಕೆ ತಾಂತ್ರಿಕತೆಯನ್ನು ಅಪ್‌ಡೇಟ್ ಮಾಡುವ ಬಗ್ಗೆ, ವಿಮರ್ಶೆಯ ವಿಧಾನ ಮತ್ತು ಲೆಕ್ಕಪರಿಶೋಧನೆ ಬಗ್ಗೆ. | ಈ ವ್ಯವಸ್ಥೆ ಇರುವುದಿಲ್ಲ. |
| | vii) ಗಣಕೀಕರಣ ಮತ್ತು ಸ್ವಯಂ ಚಾಲಿತ ವ್ಯವಸ್ಥೆ ಬಗ್ಗೆ ಸಲಹೆ ಸೂಚನೆಗಳು, ಯಾವುದಾದರೂ ಇದ್ದಲ್ಲಿ. | ಪ್ರಸಕ್ತ ವರ್ಷದಲ್ಲಿ ಬ್ಯಾಂಕು ಹೊಸ ತಂತ್ರಾಂಶವನ್ನು ಅಳವಡಿಸಿದ್ದು. ಅದರಲ್ಲಿ ಕೆಲವೊಂದು ನ್ಯೂನತೆಗಳನ್ನು ಗಮನಿಸಲಾಗಿದ್ದು, ಅವುಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮವಿಡಬೇಕಾಗಿರುತ್ತದೆ<br><br>ಅ) ಹೊಸ ತಂತ್ರಾಂಶದಲ್ಲಿ ಕೆಲವು ಎಕ್ಸಪ್ಷನಲ್ (Exceptional) & MIS ವರದಿಗಳು ಲಭ್ಯವಾಗುವ ಅವಕಾಶವಿರುವುದಿಲ್ಲ. ಇಂತಹ ನ್ಯೂನ್ಯತೆಯನ್ನು ತ್ವರಿತವಾಗಿ ಸರಿಪಡಿಸಿಕೊಳ್ಳಬೇಕು<br><br>ಆ) ಬ್ಯಾಂಕಿನಲ್ಲಿ ಅಡವಿಟ್ಟ ಆಸ್ತಿಗಳ ಮೌಲ್ಯವು ಸಂಬಂಧಿಸಿದ ಸಾಲಗಳ ಖಾತೆಗಳಲ್ಲಿ ಅಳವಡಿಕೆಯಾಗಿಲ್ಲ. ಇಂತಹ ಮೌಲ್ಯಗಳು ಹಳೆಯ ತಂತ್ರಾಂಶದಿಂದ ಹೊಸ ತಂತ್ರಾಂಶಕ್ಕೆ ವರ್ಗಾವಣೆ ಯಾಗಿರದೇ ಇರುವುದರಿಂದ ಇಂತಹ ಸನ್ನಿವೇಶವು ನಿರ್ಮಾಣವಾಗಿರುತ್ತದೆ. ಆಡಳಿತ ಮಂಡಳಿಯು ಈ ನ್ಯೂನತೆಯನ್ನು ನಿವಾರಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು.<br><br>ಇ) ಆರ್.ಬಿ.ಐ. ಪ್ರಕಾರ ಕಡ್ಡಾಯವಾಗಿ ಸಿಸ್ಟಂನಲ್ಲಿ ದೈನಂದಿನ ಅಂತಿಮ ಕಾರ್ಯವಿಧಾನದ ಭಾಗವಾಗಿ ಅನುತ್ಪಾದಕ ಆಸ್ತಿ (NPA/SMA) ವರ್ಗಿಕರಿಸಬೇಕಾಗಿದ್ದು. ಆದರೆ ಆಯಾಯ ದಿನದ ಕೊನೆಯಲ್ಲಿ NPA/SMA ವರ್ಗಿಕರಣವು ಬ್ಯಾಂಕಿಗೆ ಲಭ್ಯವಾಗುತ್ತಿಲ್ಲ. ಇಂತಹ |

| | | |
|---|---|---|
| | | ದೋಷವನ್ನು ಅತ್ಯಂತ ಶೀಘ್ರವಾಗಿ ಸರಿಪಡಿಸಿಕೊಳ್ಳುವ ಅವಶ್ಯಕವಿದೆ.<br><br>ಈ) ಒಬ್ಬನೇ ಸಾಲಗಾರ ಒಂದಕ್ಕಿಂತ ಹೆಚ್ಚು ಸಾಲಗಳನ್ನು ಪಡೆದಿರುವ ಸಂದರ್ಭಗಳಲ್ಲಿ ಅನುತ್ಪಾದಕ ಆಸ್ತಿಯು ಗುರುತಿಸುವಿಕೆಯು ಸಿಸ್ಟಮ್‌ನಲ್ಲಿ (ಸಾಫ್ಟ್‌ವೇರ್) ತನ್ನಿಂತಾನೇಆಗುತ್ತಿಲ್ಲ. ಆದ್ದರಿಂದ ಅನುತ್ಪಾದಕ ಆಸ್ತಿಯನ್ನು ಗುರುತಿಸದೇ ಇರುವ ಸಂಭವವಿರುತ್ತದೆ ಹಾಗೂ ಮಾನವ ಹಸ್ತಕ್ಷೇಪದಿಂದ ತಪ್ಪುಗಳೂ ಸಹ ಸಂಭವಿಸಬಹುದು. |
| 49. | **ಲಾಭ-ನಷ್ಟ ಮತ್ತು ಆಸ್ತಿ-ಜವಾಬ್ದಾರಿ ಬಗ್ಗೆ ವಿಶ್ಲೇಷಣೆ** | |
| | (A) *ಲಾಭದಾಯಕತ್ವ:* | |
| | a. ಹಿಂದಿನ ಸಾಲಿಗಿಂತ ವರದಿ ಸಾಲಿನಲ್ಲಿ ಜಮಾ-ಖರ್ಚಿನ ಪ್ರಮುಖ ಅಂಶಗಳಲ್ಲಿ ಆಗಿರತಕ್ಕ ಏರಿಳಿತಗಳ ಬಗ್ಗೆ ಮುಖ್ಯ ಅನುಪಾತ ಗಳೊಂದಿಗೆ ವಿಶ್ಲೆಷಣೆ. | ಯಾವುದೇ ಗಮನಾರ್ಹವಾದ ಏರಿಳಿತಗಳು ಇರುವುದಿಲ್ಲ. |
| | b. ಲೆಕ್ಕಗಳ ನಿರ್ವಹಣೆಯಲ್ಲಿನ / ಕಾರ್ಯನೀತಿಯಲ್ಲಿನ ಬದಲಾವಣೆ ಯಿಂದಾಗಿ ವರದಿ ಸಾಲಿನ ಲಾಭ-ನಷ್ಟದ ಮೇಲಾದ ಪರಿಣಾಮಗಳ ಬಗ್ಗೆ | ಲೆಕ್ಕಪತ್ರಗಳ ನಿರ್ವಹಣೆಯಲ್ಲಿ, ಯಾವುದೇ ಬದಲಾವಣೆ ಇಲ್ಲ. |
| | (B) ಆಸ್ತಿ- ಜವಾಬ್ದಾರಿ ತ:ಖ್ತೆಯಲ್ಲಿ ಈ ಮೇಲೆ ವಿವರಿಸದೇ ಬಾಕಿ ಉಳಿದ ಎಲ್ಲಾ ಅಂಶಗಳ ಬಗ್ಗೆ ವಿಶ್ಲೇಷಣೆ. | ಯಾವುದೂ ಇಲ್ಲ. |
| 50 | **ಆಂತರಿಕ ವ್ಯವಸ್ಥೆ ಮತ್ತು ನಿಯಂತ್ರಣ (Systems & Control)** | |
| | i) ಸಮವರ್ತಿ / ಆಂತರಿಕ ಲೆಕ್ಕಪರಿಶೋಧನೆ / ಗಣಕಯಂತ್ರ ಮತ್ತು Software ಗಳ | ಬ್ಯಾಂಕು ನೇಮಿಸಿದ ಅಂತರಿಕ ಲೆಕ್ಕಪರಿಶೋಧಕರು, ಶಾಸನಬದ್ಧ ಲೆಕ್ಕಪರಿಶೋಧಕರು, ಇ.ಡಿ.ಪಿ. ಲೆಕ್ಕಪರಿಶೋಧಕರು ತಮ್ಮ ವ್ಯಾಪ್ತಿಯ |

| | | |
|---|---|---|
| | E.D.P. ಲೆಕ್ಕಪರಿಶೋಧನೆ ಹಾಗೂ ಪರಿವೀಕ್ಷಣೆ ಬಗ್ಗೆ ಬ್ಯಾಂಕು ಹೊಂದಿರುವ ವ್ಯವಸ್ಥೆ ಮತ್ತು ನಿಯಂತ್ರಣ. | ಕಾರ್ಯವನ್ನು ಪೂರೈಸಿ ವರದಿ ಸಲ್ಲಿಸಲಾಗುತ್ತಿದೆ. |
| | ii) ಎಂ.ಐ.ಎಸ್. ಅಸ್ಥಿತ್ವದಲ್ಲಿರುವ ಬಗ್ಗೆ. ಮಾಹಿತಿಗಳ ಕ್ರೋಢೀಕರಣ ಮತ್ತು ನಿಖರತೆ ಬಗ್ಗೆ. | ಬ್ಯಾಂಕಿನಲ್ಲಿ ಎಂ.ಐ.ಎಸ್. ಅಸ್ತಿತ್ವದಲ್ಲಿಲ್ಲ. ಆದರೂ ಮಾಹಿತಿಗಳ ಕ್ರೋಢೀಕರಣ ಮತ್ತು ಅವುಗಳ ನಿಖರತೆ ಬಗ್ಗೆ ಯಾವುದೇ ಕೊರತೆ ಇರುವುದಿಲ್ಲ. |
| | iii) ಆರ್.ಬಿ.ಐ. ಪರಿವೀಕ್ಷಣಾ ವ್ಯವಸ್ಥೆಗೆ ಹೊರತುಪಡಿಸಿದ ಮಾಹಿತಿಗಳ ನಂಬಲಾರ್ಹತೆ ಬಗ್ಗೆ ಜಾರಿಯಲ್ಲಿರುವ ನಿಯಮಗಳು. | ಬ್ಯಾಂಕಿನಲ್ಲಿ ಶಾಸನಬದ್ಧ ಲೆಕ್ಕಪರಿಶೋಧನೆ ಹಾಗು ಅಂತರಿಕ ಲೆಕ್ಕಪರಿಶೋಧನೆ ಸಂಬಂಧ ಕಾಲಕಾಲಕ್ಕೆ ಅಗತ್ಯ ಕ್ರಮವಿಡಲಾಗುತ್ತಿದೆ. |
| 51. | **ಇತರೆ ವಿಷಯಗಳು:** | |
| | i) ಹಿಂದಿನ ವರ್ಷಕ್ಕೆ ಹೋಲಿಸಿದಾಗ ಪ್ರಸಕ್ತ ಸಾಲಿನಲ್ಲಿ ಲೆಕ್ಕಪತ್ರ ನೀತಿ ನಿಯಮಗಳಲ್ಲಿ ಆಗಿರುವ ಬದಲಾವಣೆ ಬಗ್ಗೆ ಟಿಪ್ಪಣಿ. | ಪ್ರಸಕ್ತ ಸಾಲಿನಲ್ಲಿ ಬ್ಯಾಂಕು ಹಿಂದಿನಿಂದ ಮುಂದುವರೆಸಿದ್ದ ನೀತಿನಿಯಮಗಳನ್ನು ಅನುಸರಿಸಿದ್ದು, ಯಾವುದೇ ಬದಲಾವಣೆ ಇಲ್ಲ. |
| | ii) Under writing ಹಾಗೂ ನಿಷ್ಪನ್ನ (Derivatives) ಇವುಗಳ ನಿರ್ವಹಣೆ ಬಗ್ಗೆ ಬ್ಯಾಂಕು ಅನುಸರಿಸುತ್ತಿರುವ ನಿಯಮಗಳು. | ಬ್ಯಾಂಕು ಎಲ್ಲಾ ಲೆಕ್ಕಪತ್ರಗಳನ್ನು ಗಣಕೀಕರಣ ಗೊಳಿಸಿದ್ದು, ಇದು ಉದ್ಭವಿಸುತ್ತಿಲ್ಲ. |
| | iii) ಆದಾಯ ತೆರಿಗೆ, ಬಡ್ಡಿ ತೆರಿಗೆ, ಗ್ರಾಚ್ಯುಟಿ, ಪಿಂಚಣಿ ಮತ್ತು ಭವಿಷ್ಯ ನಿಧಿ ಇವುಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಅವಕಾಶ ಕಲ್ಪಿಸಿರುವ ಬಗ್ಗೆ. | ಸಾಕಷ್ಟು ಪ್ರಮಾಣದಲ್ಲಿ ಅವಕಾಶ ಕಲ್ಪಿಸಿದೆ. |
| | iv) ಬ್ಯಾಂಕಿನ ಆಸ್ತಿ–ಜವಾಬ್ದಾರಿ ತ:ಖ್ತೆ ಖಾತೆಗಳನ್ನು ಹೊರತುಪಡಿಸಿದ ಕ್ಲೇಮ್‌ಗಳ ಬಗ್ಗೆ ಸಾಕಷ್ಟು | ಎಲ್ಲಾ ರೀತಿಯ ಅಗತ್ಯ ಪ್ರಮಾಣದ ಅವಕಾಶಗಳನ್ನು ಕಲ್ಪಿಸಿದೆ. |

| | | |
|---|---|---|
| | ಪ್ರಮಾಣದಲ್ಲಿ ಅವಕಾಶ ಕಲ್ಪಿಸಿರುವ ಬಗ್ಗೆ. | |
| | v) ಶಾಖೆಗಳ ನಿಯತ ಕಾಲಿಕೆಗಳಲ್ಲಿ ಹಾಗೂ ಅವುಗಳ ಆರ್ಥಿಕ ತ:ಖ್ತೆಗಳ ಕ್ರೋಢೀಕರಣದ ಬಗ್ಗೆ ಅಂತಿಮವಾಗಿ ಕ್ರೋಢೀಕರಿಸುವಾಗ ಕಂಡು ಬಂದ ಗಮನಾರ್ಹ ಅಂಶಗಳು. | ಯಾವುದೇ ಗಮನಾರ್ಹವಾದ ಅಂಶಗಳು ಕಂಡುಬಂದಿಲ್ಲ. |
| | vi) ಬೇರೆ ಬ್ಯಾಂಕುಗಳ ಶಿಲ್ಕುಗಳ ತಾಳೆ ಹೊಂದಿರುವ ಬಗ್ಗೆ – ಸಮನ್ವಯಕ್ಕೊಳಪಟ್ಟಿರುವ ತ:ಖ್ತೆಗಳ ಬಗ್ಗೆ ವಿವರಣೆ. | ಬ್ಯಾಂಕು ಶಿಲ್ಕುಗಳು ಸಮನ್ವಯ ಪಟ್ಟಿಗೆ ಒಳಪಟ್ಟು, ಸದರಿ ಬ್ಯಾಂಕುಗಳು ನೀಡಿದ ದೃಢೀಕರಣಕ್ಕೆ ತಾಳೆ ಇರುತ್ತದೆ. |
| | vii) NOSTRO ಲೆಕ್ಕಗಳ ಮರು ಮೌಲ್ಯಮಾಪನ ಹಾಗೂ ಬಾಕಿ ಇರುವ ಫಾರ್ವರ್ಡ್ ಎಕ್ಸ್‌ಚೇಂಜ್ ಕರಾರುಗಳ ಪದ್ದತಿ ಬಗ್ಗೆ | ಈ ಬ್ಯಾಂಕಿಗೆ ಅನ್ವಯಿಸುವುದಿಲ್ಲ. |
| | viii) CRAR ನ ಬಗ್ಗೆ ವಿಶ್ಲೇಷಣೆ | ಬ್ಯಾಂಕು ಪ್ರಸಕ್ತ ಸಾಲಿಗೆ ಶೇ.21.94%ರಷ್ಟು ಸಿ.ಆರ್.ಎ.ಆರ್. ಹೊಂದಿದೆ. |
| | (i) ಹಿಂದಿನ ಸಾಲಿನ ಲಾಭದ ಶೇ.1% ಕ್ಕಿಂತ ಹೆಚ್ಚಿಗೆ ಕೊಡುಗೆ/ ದಾನ ಕೊಟ್ಟಿದ್ದರೆ ಅದರ ಬಗ್ಗೆ ವಿವರಣೆ | ವರದಿ ಸಾಲಿನಲ್ಲಿ ಯಾವುದೇ ಕೊಡುಗೆ ನೀಡಿರುವುದಿಲ್ಲ |
| | (ii) ಠೇವಣಿ ಮತ್ತು ಮುಂಗಡಗಳ ಮೇಲಿನ ಬಡ್ಡಿ ದರ–ಅದರ ಸಮರ್ಪಕತೆ ಇವುಗಳಿಂದಾಗಿ ಬ್ಯಾಂಕಿನ ಲಾಭದ ಮೇಲಿನ ಪರಿಣಾಮ | ಬ್ಯಾಂಕಿನ ಪ್ರಚಲಿತ ಆರ್ಥಿಕ ಪರಿಸ್ಥಿತಿಗೆ ಅನುಸಾರ ಆರ್.ಬಿ.ಐ. ಸೂಚನೆಗಳನ್ವಯ ಬಡ್ಡಿ ದರಗಳನ್ನು ನಿಗಧಿಗೊಳಿಸಿದೆ. |
| | ix) ಲೆಕ್ಕಪರಿಶೋಧಕರು ಆಡಳಿತ ಮಂಡಳಿಯ ಗಮನಕ್ಕೆ ತರಲಿಚ್ಚಿಸುವ ಇತರೆ ವಿಷಯಗಳ ಬಗ್ಗೆ. | ಯಾವುದೂ ಇಲ್ಲ. |

| | | |
|---|---|---|
| 52. | **ಬ್ಯಾಂಕಿನ ಅಧೀನ ಸಂಸ್ಥೆಗಳ ಕಾರ್ಯನಿರ್ವಹಣೆ ಬಗ್ಗೆ:** | |
| | i) ಅಧೀನ ಸಂಸ್ಥೆಗಳು ಬ್ಯಾಂಕಿಗೆ ವರದಿ ಮಾಡಲು ಜಾರಿಯಲ್ಲಿರುವ ವ್ಯವಸ್ಥೆ. | ಯಾವುದೇ ಅಧೀನ ಸಂಸ್ಥೆಗಳಿಲ್ಲ |
| | ii) ಅಧೀನ ಸಂಸ್ಥೆಗಳು ನಿವ್ವಳ ನಷ್ಟ ಅನುಭವಿಸುತ್ತಿದ್ದಲ್ಲಿ ವಿಮರ್ಶೆ | |
| 53. | D.E.A. Fund Scheme 2014 ಜಾರಿಯಲ್ಲಿರುವ ಬಗ್ಗೆ | |
| | i) ಬ್ಯಾಂಕು ಪ್ರಾರಂಭವಾದಾಗಿನಿಂದ ವಾರಸುದಾರರಿಲ್ಲದ ಠೇವಣಿಗಳನ್ನು DEA Fund ಗೆ ವರ್ಗಾಯಿಸಿರುವ ಬಗ್ಗೆ. | ದಿ.31.03.2023ಕ್ಕೆ ರೂ. 2,10,48,819.45ಗಳು ಡಿ.ಇ.ಎ.ಎಫ್. ಲೆಕ್ಕದಲ್ಲಿ ಇರುತ್ತದೆ. ಕಾಲಕಾಲಕ್ಕೆ ವರ್ಗಾಯಿಸಲಾಗುತ್ತಿದೆ. |
| | ii) ಈ ಕುರಿತು ನಿಗದಿಪಡಿಸಲಾಗಿರುವ ವಿವಿಧ ನಮೂನೆ ಹಾಗೂ ನಿಯತಕಾಲಿಕೆಗಳನ್ನು ಸಲ್ಲಿಸಿರುವ ಬಗ್ಗೆ. | ಎಲ್ಲಾ ನಿಯತಕಾಲಿಕೆಗಳನ್ನು ಸಲ್ಲಿಸಲಾಗುತ್ತಿದೆ. |
| | iii) ಈ ಕುರಿತು ಸಮನ್ವಯ ಪ್ರಮಾಣ ಪತ್ರ ಸಲ್ಲಿಸಿರುವ ಬಗ್ಗೆ. | ಸಮನ್ವಯ ಮಾಡಿಕೊಂಡಿರುವುದಿಲ್ಲ. |
| | iv) ಗ್ರಾಹಕರ ದೂರುಗಳನ್ನು ಪರಿಹರಿಸಲು ಬ್ಯಾಂಕು ಹೊಂದಿರುವ ವ್ಯವಸ್ಥೆ | ಬ್ಯಾಂಕಿನ ಸಿಬ್ಬಂದಿ ಹಾಗು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಅಗತ್ಯವಿದ್ದಲ್ಲಿ ಬ್ಯಾಂಕಿನ ಆಡಳಿತ ಮಂಡಳಿ ಅಧ್ಯಕ್ಷ / ಪದಾಧಿಕಾರಿಗಳು ಗ್ರಾಹಕರ ದೂರುಗಳನ್ನು ಪರಿಶೀಲಿಸಿ ಕ್ರಮವಿಡಲಾಗುತ್ತಿದೆ. |
| | v) ಗ್ರಾಹಕರ / ವಾರಸುದಾರರ ಠೇವಣಿಗಳನ್ನು ಹಿಂದಿರುಗಿಸುವ ಬಗ್ಗೆ | ನಿಯಮಾನುಸಾರ ಕ್ರಮವಿಡಲಾಗುತ್ತಿದೆ. |
| | vi) ಈ ಸಂಬಂಧ ಬ್ಯಾಂಕಿನ ದಾಖಲೆಗಳನ್ನು ಪರಿಶೋಧಿಸುವ ಬಗ್ಗೆ ಇರುವ ವ್ಯವಸ್ಥೆ. | ನಿಯಮಾನುಸಾರ ಕ್ರಮವಿಡಲಾಗುತ್ತಿದೆ. |

| | | |
|---|---|---|
| 54. | **ಆಡಳಿತ ಮಂಡಳಿ:** | |
| | i) ಚುನಾಯಿತ ಆಡಳಿತ ಮಂಡಳಿಯ ಕಾರ್ಯನಿರ್ವಹಣೆ, ರಚನೆ, ಸಮಿತಿಗಳು, ಸಮಿತಿಗಳ ರಚನೆ, ಕಾರ್ಪೊರೇಟ್ ಗೌವರ್ನೆನ್ಸ್, ಆಡಳಿತ ಮಂಡಳಿಯಲ್ಲಿನ ವೃತ್ತಿ ಪರತೆ, ನಿಯತ ಕಾಲಿಕವಾಗಿ ಸಭೆ ನಡೆಸುವ ಬಗ್ಗೆ, ಸಭೆಯಲ್ಲಿ ಚರ್ಚೆಯಾದ ವಿಷಯಗಳು, ಗೈರು ಹಾಜರಾದ ನಿರ್ದೇಶಕರು ನಿರ್ದೇಶಕರಿಂದ ಬೈಲಾ ಉಲ್ಲಂಘನೆ ನಿರ್ದೇಶಕರನ್ನು ವಜಾಗೊಳಿಸಿರುವ ವಿವರ ಯಾವುದಾದರೂ ಇದ್ದಲ್ಲಿ, ಇತ್ಯಾದಿ ಅಂಶಗಳ ಬಗ್ಗೆ (ಚುನಾಯಿತ ಆಡಳಿತ ಮಂಡಳಿ ಇಲ್ಲದೆ ಇದ್ದಲ್ಲಿ ಮೇಲಿನ ಅಂಶಗಳ ಬಗ್ಗೆ ಆಡಳಿತಾಧಿಕಾರಿಗಳ ಕಾರ್ಯನಿರ್ವಹಣೆ ಬಗ್ಗೆ ಟಿಪ್ಪಣಿ ನೀಡುವುದು.) | ಭಾಗ – 3, ಕಂಡಿಕೆ 30ರಲ್ಲಿ ವಿವರಣೆ ನೀಡಲಾಗಿದೆ. |
| | ii) ಬ್ಯಾಂಕಿನ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳ ನೇಮಕಾತಿ ವಿದ್ಯಾರ್ಹತೆ ಮತ್ತು ಬ್ಯಾಂಕು ನಡೆಸುವ ಸಾಮರ್ಥ್ಯ ಹೊಂದಿರುವ ಬಗ್ಗೆ. | ಬ್ಯಾಂಕಿನಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಹುದ್ದೆ ಖಾಲಿ ಇದ್ದು, ಪ್ರಭಾರ ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಹುದ್ದೆಯಲ್ಲಿ ಶ್ರೀ. ಕೆ.ಎನ್. ಕೃಷ್ಣಯ್ಯಶೆಟ್ಟಿ ಉಪ ಪ್ರಧಾನ ವ್ಯವಸ್ಥಾಪಕರು ಪ್ರಭಾರದಲ್ಲಿರುತ್ತಾರೆ. |
| | iii) 2ನೇ ಹಂತದ ಸಿಬ್ಬಂದಿಗಳ ಕಾರ್ಯನಿರ್ವಹಣೆ, ನೇಮಕಾತಿ ತರಬೇತಿ, ಜವಾಬ್ದಾರಿ ನಿಗದಿಪಡಿಸುವಿಕೆ ರೊಟೇಷನ್ ಬಗ್ಗೆ ವಿಮರ್ಶೆ. | ಭಾಗ – 3, ಕಂಡಿಕೆ 30ರಲ್ಲಿ ವಿವರಣೆ ನೀಡಲಾಗಿದೆ. |
| 55. | ಲೆಕ್ಕಪರಿಶೋಧಕರ ಸಲಹೆ / ಸೂಚನೆಗಳು | ಭಾಗ –3, ಕಂಡಿಕೆ 36ರಲ್ಲಿ ವಿವರಿಸಿದಂತೆ. |
| 56. | ಲೆಕ್ಕಪರಿಶೋಧನಾ ಫಲಿತಾಂಶ ಹಾಗೂ ಕ್ರಮವಿಡಬೇಕಾದ ಕಂಡಿಕೆಗಳು | ಭಾಗ –3, ಕಂಡಿಕೆ 37ರಲ್ಲಿ ವಿವರಿಸಿದಂತೆ. |

| | | |
|---|---|---|
| 57. | a) **ಲೆಕ್ಕಪರಿಶೋಧನಾ ವರ್ಗೀಕರಣ:**<br>ಎ) ಹಿಂದಿನ ಸಾಲಿಗೆ ಲೆಕ್ಕಪರಿಶೋಧನಾ ವರ್ಗೀಕರಣ<br><br>ಬಿ) ವರದಿ ಸಾಲಿಗೆ ಲೆಕ್ಕಪರಿಶೋಧನಾ ವರ್ಗೀಕರಣ<br>(ವರ್ಗೀಕರಣ ಪಟ್ಟಿ ಲಗತ್ತಿಸಿದೆ) | 'ಬಿ'<br><br><br><br>'ಬಿ' |

ಸಿ.ಎಸ್.ಎಂ.ಆರ್. ಅಂಡ್ ಅಸೋಸಿಯೇಟ್ಸ್
ಸನ್ನದು ಲೆಕ್ಕ ಪರಿಶೋಧಕರ ಪರವಾಗಿ
ಸಹಿ/–
**(ಸಿಎ ಶಿವಕುಮಾರ ಸಿ.)**
ಪಾಲುದಾರರು
ಸದಸ್ಯತ್ವ ಸಂಖ್ಯೆ–219076
UDIN : 23219076BGSWAW2421

ಸ್ಥಳ : ಬೆಂಗಳೂರು
ದಿನಾಂಕ : 28.06.2023

ಅಡಕಗಳು:

1. ಜಮಾ–ಖರ್ಚು ತಃಖ್ತೆ
2. ಲಾಭ–ನಷ್ಟ ತಃಖ್ತೆ
3. ಆಸ್ತಿ–ಜವಾಬ್ದಾರಿ ತಃಖ್ತೆ
4. ನಿಗದಿಪಡಿಸಿದ ನಮೂನೆಯಲ್ಲಿ ದೃಢೀಕರಣ
5. ಸಮಗ್ರ ಆರ್ಥಿಕ ವಿವರವುಳ್ಳ ತಃಖ್ತೆ (ನಿಗದಿತ ನಮೂನೆಯಲ್ಲಿ ಲಗತ್ತಿಸುವುದು)
6. ಎನ್.ಪಿ.ಎ. ತಃಖ್ತೆ.
7. ವರ್ಗೀಕರಣ ತಃಖ್ತೆ ಅನುಬಂಧ–2, ಲೆಕ್ಕ ಪರಿಶೋಧನಾ ವರ್ಗೀಕರಣ.
8. ಶಾಖೆಗಳಿದ್ದಲ್ಲಿ LFAR ನಮೂನೆಯಲ್ಲಿ ವರದಿ, ಅನುಬಂಧ–3, ಶಾಖೆಗಳ LFAR